ಶುಕ್ರವಾರ, ಜೂನ್ 14, 2024 | ₹ 7.00
www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಬೆಡಗು
ಮುಂಬೈನಲ್ಲಿ ನಡೆದ ಚಲನಚಿತ್ರವೊಂದರ ಟ್ರೈಲರ್ ಅನಾವರಣ ಕಾರ್ಯಕ್ರಮದಲ್ಲಿ ಬಾಲಿವುಡ್ ನಟಿ ಸಾಯಿ ಮಾಂಜ್ರೇಕರ್ ಅವರು ಕಾಣಿಸಿಕೊಂಡಿದ್ದು ಹೀಗೆ...



ಇದೇ 23ಕ್ಕೆ ಮರುಪರೀಕ್ಷೆ, 30ಕ್ಕೆ ಫಲಿತಾಂಶ • ಕೇಂದ್ರದ ಪ್ರಸ್ತಾವಕ್ಕೆ 'ಸುಪ್ರೀಂಕೋರ್ಟ್' ಸಮ್ಮತಿ

ನೀಟ್: 1,563 ಅಭ್ಯರ್ಥಿಗಳ ಕೃಪಾಂಕ ರದ್ದು

ಪ್ರಜಾವಾಣಿ ವಾರ್ತೆ/ಪಿಟಿಐ

ನವದೆಹಲಿ: ವೈದ್ಯಕೀಯ ಕೋರ್ಸ್ ಪ್ರವೇಶಕ್ಕೆ ಈ ವರ್ಷ ನಡೆದಿದ್ದ 'ನೀಟ್–ಯುಜಿ'ಯಲ್ಲಿ ಪರೀಕ್ಷಾ ಸಮಯ ನಷ್ಟಕ್ಕಾಗಿ 1,563 ಅಭ್ಯರ್ಥಿಗಳಿಗೆ ಪರಿಹಾರಾತ್ಮಕವಾಗಿ ನೀಡಲಾಗಿದ್ದ ಕೃಪಾಂಕವನ್ನು ಹಿಂಪಡೆಯುವುದಾಗಿ ಕೇಂದ್ರ ಸರ್ಕಾರ ಗುರುವಾರ ಸುಪ್ರೀಂ ಕೋರ್ಟ್‌ಗೆ ತಿಳಿಸಿದೆ.

ಈ ಅಭ್ಯರ್ಥಿಗಳಿಗೆ ಇದೇ 23ರಂದು ಮರುಪರೀಕ್ಷೆ ನಡೆಸಿ, ಇದೇ 30ರಂದು ಫಲಿತಾಂಶ ಪ್ರಕಟಿಸಲಾಗುವುದು. ನಿಗದಿಯಂತೆ ಜುಲೈ 6ರಿಂದ ಎಂಬಿಬಿಎಸ್, ಬಿಡಿಎಸ್ ಮತ್ತು ಇತರ ಕೋರ್ಸ್‌ಗಳ ಪ್ರವೇಶಕ್ಕೆ ಕೌನ್ಸೆಲಿಂಗ್ ಆರಂಭವಾಗಲಿದೆ ಎಂದು ಕೇಂದ್ರ ತಿಳಿಸಿದೆ.

ಮರು ಪರೀಕ್ಷೆ ತೆಗೆದುಕೊಳ್ಳಲು ಬಯಸದ ಅಭ್ಯರ್ಥಿಗಳಿಗೆ, ಅವರು ಮೇ 5ರ ಪರೀಕ್ಷೆಯಲ್ಲಿ ಪಡೆದಿರುವ ನೈಜ ಅಂಕಗಳನ್ನು (ಕೃಪಾಂಕ ಬಿಟ್ಟು) ಗಣನೆಗೆ ತೆಗೆದುಕೊಳ್ಳಲಾಗುವುದು ಎಂದು ಕೇಂದ್ರ ಸರ್ಕಾರ ಹೇಳಿದೆ.

ಮರು ಪರೀಕ್ಷೆಗೆ 'ಸುಪ್ರೀಂ' ಸಮ್ಮತಿ: ಸಾಮಾನ್ಯೀಕರಣ ಸೂತ್ರವನ್ನು ಆಧರಿಸಿ ಪರಿಹಾರಾತ್ಮಕ ಅಂಕಗಳನ್ನು ನೀಡಿದ್ದರ ಸಿಂಧುತ್ವವನ್ನು ಪ್ರಶ್ನಿಸಿ ಸಲ್ಲಿಕೆಯಾಗಿದ್ದ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ವಿಕ್ರಮ್ ನಾಥ್ ಮತ್ತು ಅಹ್ಸಾನುದ್ದೀನ್ ಅಮಾನುಲ್ಲಾ ಅವರಿದ್ದ ರಜಾಕಾಲದ ಪೀಠವು, 1,563 ಅಭ್ಯರ್ಥಿಗಳಿಗೆ ಮರು ಪರೀಕ್ಷೆ ನಡೆಸಲು ಎನ್‌ಟಿಎಗೆ ಅನುಮತಿ ನೀಡಿತು. ಅಲ್ಲದೆ, ಜುಲೈ 6ರಿಂದ ಆರಂಭವಾಗಲಿರುವ ನೀಟ್–ಯುಜಿ ಕೌನ್ಸೆಲಿಂಗ್ ಅನ್ನು ಸ್ಥಗಿತಗೊಳಿಸಲು ನಿರಾಕರಿಸಿತು.

ವೈದ್ಯಕೀಯ ಕಾಲೇಜು ಮತ್ತು ಇತರ ಸಂಸ್ಥೆಗಳಲ್ಲಿ ಸೀಟು ಪಡೆಯುವಲ್ಲಿ ಯಶಸ್ವಿಯಾದ ಅಭ್ಯರ್ಥಿಗಳ ಪ್ರವೇಶವು, ಕೋರ್ಟ್‌ನ ಅಂತಿಮ ತೀರ್ಪಿಗೆ ಬದ್ಧವಾಗಿರುತ್ತದೆ ಎಂದೂ ಹೇಳಿತು.

1,563 ಅಭ್ಯರ್ಥಿಗಳಿಗೆ ನೀಡಲಾಗಿದ್ದ ಕೃಪಾಂಕಗಳನ್ನು ತಜ್ಞರ ಸಮಿತಿಯ ಶಿಫಾರಸಿನ ಮೇರೆಗೆ ಹಿಂಪಡೆಯುವ ನಿರ್ಧಾರ ತೆಗೆದುಕೊಂಡಿರುವುದು ನ್ಯಾಯೋಚಿತ, ಸಮಂಜಸ ಮತ್ತು ಸಮರ್ಥನೀಯ ಎಂದು ಪೀಠ ಅಭಿಪ್ರಾಯಪಟ್ಟಿತು.

ಕೇಂದ್ರ ಮತ್ತು ರಾಷ್ಟ್ರೀಯ ಪರೀಕ್ಷಾ ಏಜೆನ್ಸಿ (ಎನ್‌ಟಿಎ) ಪರ ಹಾಜರಾದ ವಕೀಲ ಕನು ಅಗರ್‌ವಾಲ್, 'ಅರ್ಜಿದಾರರ ಕುಂದುಕೊರತೆಗಳನ್ನು ಪರಿಶೀಲಿಸಲು ರಚಿಸಲಾದ ಸಮಿತಿಯು, ಪರೀಕ್ಷಾ ಸಮಯ ನಷ್ಟಕ್ಕಾಗಿ ಅಭ್ಯರ್ಥಿಗಳಿಗೆ ನೀಡಿದ್ದ ಕೃಪಾಂಕವನ್ನು ಹಿಂಪಡೆಯಲು ಮತ್ತು ಆ ಅಭ್ಯರ್ಥಿಗಳಿಗೆ ಇದೇ 23ರಂದು ಮರು ಪರೀಕ್ಷೆ ನಡೆಸಲು ಸಲಹೆ ನೀಡಿದೆ. ಈ ಕುರಿತು ಅಧಿಸೂಚನೆ ಹೊರಡಿಸಲಾಗುವುದು' ಎಂದು ಹೇಳಿದರು.

1,563 ಅಭ್ಯರ್ಥಿಗಳ ಅಂಕಪಟ್ಟಿ ರದ್ದು: 'ಮರು ಪರೀಕ್ಷೆಗೆ ಹಾಜರಾಗಲು ಬಯಸದ ಸಂತ್ರಸ್ತ ಅಭ್ಯರ್ಥಿಗಳಿಗೆ ಮೇ 5ರ ಪರೀಕ್ಷೆಯಲ್ಲಿ ಅವರು ಪಡೆದಿದ್ದ ನೈಜ (ಕೃಪಾಂಕ ರಹಿತ) ಅಂಕಗಳನ್ನೇ ಅಂತಿಮಗೊಳಿಸಿ, ಅದನ್ನೇ ಪರಿಗಣನೆಗೆ ತೆಗೆದುಕೊಳ್ಳಬೇಕು. ಮರು ಪರೀಕ್ಷೆಗೆ ಹಾಜರಾಗುವ ಅಭ್ಯರ್ಥಿಗಳಿಗೆ ಮರು ಪರೀಕ್ಷಾ ಅಂಕಗಳನ್ನು ಪರಿಗಣನೆಗೆ ತೆಗೆದುಕೊಳ್ಳಬೇಕು' ಎಂದು ಪೀಠವು ಆದೇಶದಲ್ಲಿ ಉಲ್ಲೇಖಿಸಿದೆ.

ಪರೀಕ್ಷಾ ಸಮಯ ನಷ್ಟಕ್ಕೆ ಸಂಬಂಧಿಸಿದಂತೆ ನ್ಯಾಯಾಲಯದ ಮೊರೆ ಹೋಗಲು ಸಾಧ್ಯವಾಗದ ಎಲ್ಲ ಅಭ್ಯರ್ಥಿಗಳಿಗೂ ಮರು ಪರೀಕ್ಷೆ ನಡೆಸಲು ಸೂಚಿಸಬೇಕು ಎಂದು 'ಎಡ್‌ಟೆಕ್' ಸಂಸ್ಥೆಯ ಪರ ವಕೀಲ ಜೆ. ಸಾಯಿ ದೀಪಕ್ ಇದೇ ವೇಳೆ ಕೋರಿದರು. ಈ ಮನವಿಯನ್ನು ಪೀಠ ತಿರಸ್ಕರಿಸಿತು.

ಕೇಂದ್ರ, ಎನ್‌ಟಿಎಗೆ ನೋಟಿಸ್: ಮೇ 5ರಂದು ನಡೆದಿದ್ದ ನೀಟ್ ಪರೀಕ್ಷೆಯನ್ನು, ಪ್ರಶ್ನೆ ಪತ್ರಿಕೆ ಸೋರಿಕೆ ಸೇರಿದಂತೆ ಇತರ ಅಕ್ರಮಗಳ ಕಾರಣದಿಂದ ರದ್ದುಗೊಳಿಸುವಂತೆ ಕೋರಿ ಸಲ್ಲಿಕೆಯಾಗಿರುವ ಅರ್ಜಿಗಳಿಗೆ ಪ್ರತಿಕ್ರಿಯಿಸುವಂತೆ ಕೇಂದ್ರ ಸರ್ಕಾರ ಮತ್ತು ಎನ್‌ಟಿಎಗೆ ನೋಟಿಸ್ ಜಾರಿಗೊಳಿಸಿದ ಪೀಠವು, ವಿಚಾರಣೆಯನ್ನು ಜುಲೈ 8ಕ್ಕೆ ಮುಂದೂಡಿತು.

ಪ್ರಕರಣದ ಹಿನ್ನೆಲೆ: ಮೇ 5ರಂದು ದೇಶದ 4,750 ಕೇಂದ್ರಗಳಲ್ಲಿ ನೀಟ್ ಪರೀಕ್ಷೆ ನಡೆದಿತ್ತು. ಸುಮಾರು 24 ಲಕ್ಷ ಅಭ್ಯರ್ಥಿಗಳು ಪರೀಕ್ಷೆ ಬರೆದಿದ್ದರು. ಜೂನ್ 14ರಂದು ಫಲಿತಾಂಶ ಪ್ರಕಟಿಸುವ ಸಾಧ್ಯತೆ ಇತ್ತು. ಆದರೆ ಎನ್‌ಟಿಎ ಜೂನ್ 5ರಂದೇ ಫಲಿತಾಂಶ ಪ್ರಕಟಿಸಿತ್ತು.

ಹರಿಯಾಣದ ಫರೀದಾಬಾದ್‌ನ ಕೇಂದ್ರದ ಆರು ಮಂದಿ ಸೇರಿ, ದೇಶದಾದ್ಯಂತ 67 ಅಭ್ಯರ್ಥಿಗಳು 720ಕ್ಕೆ 720 ಅಂಕಗಳನ್ನು ಪಡೆದು ಅಗ್ರ ಸ್ಥಾನ ಹಂಚಿಕೊಂಡಿದ್ದರು. ಕೆಲ ಅಭ್ಯರ್ಥಿಗಳಿಗೆ ಕೃಪಾಂಕವನ್ನು ಎನ್‌ಟಿಎ ನೀಡಿದ್ದು ಮತ್ತು ಒಂದೇ ಕೇಂದ್ರದ ಕೆಲವರು ಗರಿಷ್ಠ ಅಂಕಗಳನ್ನು ಗಳಿಸಿದ್ದು ಅನುಮಾನಗಳಿಗೆ ಎಡೆಮಾಡಿಕೊಟ್ಟಿತ್ತು.

ಹೀಗಾಗಿ ನೀಟ್ ಪರೀಕ್ಷಾ ಅಕ್ರಮ ಮತ್ತು ಫಲಿತಾಂಶದಲ್ಲಿನ ದೋಷಗಳನ್ನು ವಿರೋಧಿಸಿ ದೇಶದ ವಿವಿಧೆಡೆ ವಿದ್ಯಾರ್ಥಿಗಳು ಮತ್ತು ಪೋಷಕರು ಪ್ರತಿಭಟನೆ ನಡೆಸಿದ್ದರು. ಅಲ್ಲದೆ ಈ ಕುರಿತು ಕೆಲವರು ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟ್ ಮೊರೆ ಹೋಗಿದ್ದಾರೆ.

ನೀಟ್ ರದ್ದುಪಡಿಸಲು ತಮಿಳುನಾಡು ಆಗ್ರಹ: 'ನೀಟ್–ಯುಜಿ'ಯಲ್ಲಿನ ಅಕ್ರಮಗಳ ಕುರಿತು ಕೇಂದ್ರ ಸರ್ಕಾರವನ್ನು ತರಾಟೆಗೆ ತೆಗೆದುಕೊಂಡಿರುವ ತಮಿಳುನಾಡು ಸರ್ಕಾರ, ನೀಟ್ ಪರೀಕ್ಷೆಯನ್ನು ರದ್ದುಗೊಳಿಸುವಂತೆ ಮತ್ತೆ ಆಗ್ರಹಿಸಿದೆ.



ನೀಟ್–ಯುಜಿ ಅಕ್ರಮಗಳನ್ನು ವಿರೋಧಿಸಿ ಕೋಲ್ಕತ್ತದ ಸಾಲ್ಟ್ ಲೇಕ್ ಪ್ರದೇಶದಲ್ಲಿ ಗುರುವಾರ ಪ್ರತಿಭಟನೆ ನಡೆಸಿದ ಆಲ್ ಇಂಡಿಯಾ ಡೆಮಾಕ್ರಟಿಕ್ ಸ್ಟೂಡೆಂಟ್ಸ್ ಆರ್ಗನೈಸೇಷನ್ ಸದಸ್ಯರನ್ನು ಪೊಲೀಸರು ಬಂಧಿಸಿ ಕರೆದೊಯ್ದರು

'ಪ್ರಶ್ನೆ ಪತ್ರಿಕೆ ಸೋರಿಕೆಯ ಪುರಾವೆಗಳಿಲ್ಲ'

ನವದೆಹಲಿ (ಪಿಟಿಐ): 'ನೀಟ್–ಯುಜಿ'ಯಲ್ಲಿನ ಪ್ರಶ್ನೆ ಪತ್ರಿಕೆ ಸೋರಿಕೆ ಕುರಿತ ಆರೋಪವನ್ನು ತಿರಸ್ಕರಿಸಿರುವ ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್, ಈ ಆರೋಪಗಳನ್ನು ದೃಢೀಕರಿಸಲು ಯಾವುದೇ ಪುರಾವೆಗಳಿಲ್ಲ ಎಂದು ಹೇಳಿದರು.

'ಎನ್‌ಟಿಎ ಅತ್ಯಂತ ವಿಶ್ವಾಸಾರ್ಹ ಸಂಸ್ಥೆಯಾಗಿದ್ದು, ಅದರಲ್ಲಿನ ಭ್ರಷ್ಟಾಚಾರದ ಆರೋಪಗಳು ಆಧಾರರಹಿತವಾಗಿವೆ. ಎನ್‌ಟಿಎ ವಾರ್ಷಿಕ 50 ಲಕ್ಷಕ್ಕೂ ಹೆಚ್ಚು ಅಭ್ಯರ್ಥಿಗಳಿಗೆ ಪರೀಕ್ಷೆಗಳನ್ನು ನಡೆಸುತ್ತದೆ' ಎಂದು ಸಚಿವರು ತಿಳಿಸಿದರು.


ಧರ್ಮೇಂದ್ರ ಪ್ರಧಾನ್

ಕೃಪಾಂಕ ವಾಪಸ್: ಅಗ್ರ ಸ್ಥಾನ ಕಳೆದುಕೊಳ್ಳುವ 6 ಅಭ್ಯರ್ಥಿಗಳು

ನವದೆಹಲಿ (ಪಿಟಿಐ): 'ನೀಟ್–ಯುಜಿ'ಯಲ್ಲಿ 1,563 ಅಭ್ಯರ್ಥಿಗಳಿಗೆ ನೀಡಲಾದ ಕೃಪಾಂಕವನ್ನು ಹಿಂಪಡೆದರೆ, ಮೊದಲ ರ‍್ಯಾಂಕ್ ಹಂಚಿಕೊಂಡಿರುವ ಅಭ್ಯರ್ಥಿಗಳ ಸಂಖ್ಯೆ 67ರಿಂದ 61ಕ್ಕೆ ಇಳಿಕೆಯಾಗಲಿದೆ ಎಂದು ಎನ್‌ಟಿಎ ಅಧಿಕಾರಿಯೊಬ್ಬರು ಗುರುವಾರ ತಿಳಿಸಿದ್ದಾರೆ.

ಹರಿಯಾಣದ ಕೇಂದ್ರವೊಂದರಲ್ಲಿ ಪರೀಕ್ಷೆ ಬರೆದಿದ್ದ ಆರು ಅಭ್ಯರ್ಥಿಗಳು ಕೃಪಾಂಕದ ನೆರವಿನಿಂದ ಗರಿಷ್ಠ 720 ಅಂಕಗಳನ್ನು ಪಡೆದು, ಇತರರೊಂದಿಗೆ ಅಗ್ರಸ್ಥಾನ ಹಂಚಿಕೊಂಡಿದ್ದರು. ಇದೀಗ ಕೃಪಾಂಕ ಹಿಂದಕ್ಕೆ ಪಡೆಯುವುದರಿಂದ ಈ ಅಭ್ಯರ್ಥಿಗಳು ಮೊದಲ ರ‍್ಯಾಂಕ್ ಕಳೆದುಕೊಳ್ಳಲಿದ್ದಾರೆ ಎಂದು ಅವರು ಮಾಹಿತಿ ನೀಡಿದ್ದಾರೆ.

ಉನ್ನತ ಮಟ್ಟದ ತನಿಖೆಗೆ ಒತ್ತಾಯ

ನವದೆಹಲಿ (ಪಿಟಿಐ): ನೀಟ್ ಪರೀಕ್ಷೆಯ ಅಕ್ರಮಗಳ ಕುರಿತು ಸಿಬಿಐ ಅಥವಾ ಸುಪ್ರೀಂ ಕೋರ್ಟ್ ಮೇಲ್ವಿಚಾರಣೆಯಲ್ಲಿ ಉನ್ನತ ಮಟ್ಟದ ತನಿಖೆ ನಡೆಸಬೇಕು ಎಂಬ ಬೇಡಿಕೆಯನ್ನು ಪುನರುಚ್ಚರಿಸಿರುವ ಕಾಂಗ್ರೆಸ್, ಈ ವಿಷಯದ ಕುರಿತು ಸಂಸತ್ತಿನಲ್ಲಿ ಧ್ವನಿಯೆತ್ತುವುದಾಗಿ ಪ್ರತಿಪಾದಿಸಿದೆ.

ತನಿಖೆಯ ಬೇಡಿಕೆ ಕುರಿತು ಬಿಜೆಪಿ ಸರ್ಕಾರವು ಬೇಜವಾಬ್ದಾರಿ ಮತ್ತು ಸಂವೇದನಾರಹಿತವಾಗಿ ವರ್ತಿಸುತ್ತಿದೆ ಎಂದು ಆರೋಪಿಸಿರುವ ಪಕ್ಷವು, ಎನ್‌ಟಿಎ ಮಹಾ ನಿರ್ದೇಶಕರನ್ನು ವಜಾಗೊಳಿಸುವಂತೆ ಆಗ್ರಹಿಸಿದೆ.

'ಮೋದಿ ಸರ್ಕಾರವು 10 ವರ್ಷಗಳಲ್ಲಿ ಪ್ರಶ್ನೆ ಪತ್ರಿಕೆ ಸೋರಿಕೆ, ಪರೀಕ್ಷಾ ಅಕ್ರಮಗಳ ಮೂಲಕ ಕೋಟ್ಯಂತರ ಯುವ ಜನರ ಭವಿಷ್ಯವನ್ನು ಹಾಳು ಮಾಡಿದೆ' ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ 'ಎಕ್ಸ್'ನಲ್ಲಿ ಆರೋಪಿಸಿದ್ದಾರೆ.

'ನೀಟ್ ಪರೀಕ್ಷೆಯಲ್ಲಿ ಕೃಪಾಂಕದ ಸಮಸ್ಯೆಯ ಜತೆಗೆ, ಪ್ರಶ್ನೆ ಪತ್ರಿಕೆ ಸೋರಿಕೆ, ಪರೀಕ್ಷಾ ಅಕ್ರಮ, ಭ್ರಷ್ಟಾಚಾರ ನಡೆದಿದೆ. ಇದರಿಂದ ಸುಮಾರು 24 ಲಕ್ಷ ಅಭ್ಯರ್ಥಿಗಳ ಭವಿಷ್ಯ ಅತಂತ್ರವಾಗಿದೆ' ಎಂದು ಅವರು ಬೇಸರ ವ್ಯಕ್ತಪಡಿಸಿದ್ದಾರೆ.

ಸುದ್ದಿ 2 ನಿಮಿಷ

'ಬಿತ್ತನೆ ಬೀಜ, ರಸಗೊಬ್ಬರ ಕೊರತೆ ಇಲ್ಲ'

ಬೆಂಗಳೂರು: 'ರಾಜ್ಯದ ಯಾವುದೇ ಜಿಲ್ಲೆಯಲ್ಲಿ ಬಿತ್ತನೆ ಬೀಜ, ರಸಗೊಬ್ಬರ ಕೊರತೆ ಇಲ್ಲ. ಅಧಿಕಾರಿಗಳು ರೈತರಿಗೆ ಸೂಕ್ತ ಮಾಹಿತಿ, ಮಾರ್ಗದರ್ಶನ ನೀಡಬೇಕು. ಅನಗತ್ಯ ಗೊಂದಲ ಸೃಷ್ಟಿಸಿದರೆ ಕಠಿಣ ಕ್ರಮ ತೆಗೆದುಕೊಳ್ಳಲಾಗುವುದು' ಎಂದು ಕೃಷಿ ಸಚಿವ ಎನ್. ಚಲುವರಾಯಸ್ವಾಮಿ ಎಚ್ಚರಿಕೆ ನೀಡಿದರು.

ಇಲಾಖೆಗೆ ಸಂಬಂಧಿಸಿದ, 2024-25ನೇ ಸಾಲಿನ ಬಜೆಟ್‌ನಲ್ಲಿ ಘೋಷಿಸಿರುವ ಹೊಸ ಯೋಜನೆಗಳ ಅನುಷ್ಠಾನ ಕುರಿತು ಗುರುವಾರ ಸಭೆ ನಡೆಸಿದ ಅವರು, ಹೊಸ ಯೋಜನೆಗಳನ್ನು ಇದೇ 20ರೊಳಗೆ ಅನುಷ್ಠಾನಕ್ಕೆ ತರಬೇಕು ಎಂದು ಕಟ್ಟುನಿಟ್ಟಿನ ಸೂಚನೆ ನೀಡಿದರು.



'ಅನುದಾನಕ್ಕೆ ಕೊರತೆ ಇಲ್ಲ. ಕೃಷಿ ಕ್ಷೇತ್ರವನ್ನು ಸುಸ್ಥಿರ ಹಾಗೂ ಲಾಭದಾಯಕಗೊಳಿಸಲು ರೈತ ಸಮೃದ್ಧಿ ಯೋಜನೆ ರೂಪಿಸಲಾಗಿದ್ದು, ಇದು ಸಮರ್ಪಕವಾಗಿ ತಲುಪಬೇಕು ಎನ್ನುವುದು ಸರ್ಕಾರದ ಆಶಯ. ಕೃಷಿ, ತೋಟಗಾರಿಕೆ, ಪಶು ಸಂಗೋಪನೆ ಒಳಗೊಂಡಂತೆ ವಿವಿಧ ಇಲಾಖೆಗಳ ಯೋಜನೆಗಳ ಸಂಯೋಜನೆ ಮೂಲಕ ಕಾರ್ಯಕ್ರಮ ಅನುಷ್ಠಾನ ಮಾಡಬೇಕು' ಎಂದು ಸಲಹೆ ಹೇಳಿದರು.

'ಪ್ರತ್ಯೇಕ ಆಹಾರ ಸಂಸ್ಕರಣೆ ಮತ್ತು ರಫ್ತು ಉತ್ತೇಜನ ಆಯುಕ್ತಾಲಯ ಸ್ಥಾಪನೆ ಮತ್ತು ಕೆಲವು ಸಂಸ್ಥೆಗಳನ್ನು ಅದರ ವ್ಯಾಪ್ತಿಗೆ ತರುವ ಬಗ್ಗೆ ಸಾಧಕ ಬಾಧಕಗಳ ಬಗ್ಗೆ ಪರಿಶೀಲಿಸಿ ಪ್ರಸ್ತಾವ ಸಿದ್ಧಪಡಿಸಬೇಕು. ಕರ್ನಾಟಕ ರೈತ ಸಮೃದ್ಧಿ ಯೋಜನೆ, ಕೃಷಿ ಅಭಿವೃದ್ಧಿ ಪ್ರಾಧಿಕಾರ, ಕೃಷಿ ಭಾಗ್ಯ ಯೋಜನೆ, ಸಮುದಾಯದ ಬೀಜ ಬ್ಯಾಂಕ್ ಸ್ಥಾಪನೆ, 'ನಮ್ಮ ಮಿಲೆಟ್' ಯೋಜನೆಗಳಿಗೆ ವ್ಯವಸ್ಥಿತವಾಗಿ ಚಾಲನೆ ನೀಡಬೇಕು. ಯೋಜನೆಗಳ ಅನುಷ್ಠಾನದ ಸಂದರ್ಭದಲ್ಲಿ ಉಂಟಾಗಬಹುದಾದ ಸಮಸ್ಯೆಗಳ ಬಗ್ಗೆ ಅಭಿಪ್ರಾಯ ತಿಳಿಸಬೇಕು' ಎಂದೂ ಸೂಚಿಸಿದರು.

ಎಸ್‌ಎಸ್‌ಎಲ್‌ಸಿ ಪರೀಕ್ಷೆ–2 ಇಂದಿನಿಂದ

ಬೆಂಗಳೂರು: ಎಸ್‌ಎಸ್‌ಎಲ್‌ಸಿ ಪರೀಕ್ಷೆ–2 ಜೂನ್ 14ರಿಂದ ರಾಜ್ಯದ 724 ಪರೀಕ್ಷಾ ಕೇಂದ್ರಗಳಲ್ಲಿ ಆರಂಭವಾಗುತ್ತಿದ್ದು, ಏಳು ಮಾಧ್ಯಮಗಳಲ್ಲಿ ಬರೆಯಲು ಅವಕಾಶ ನೀಡಲಾಗಿದೆ.]

ಜೂನ್ 22ರವರೆಗೆ ನಡೆಯಲಿರುವ ಪರೀಕ್ಷೆಗೆ 1.44 ಲಕ್ಷ ಬಾಲಕರು, 79,148 ಬಾಲಕಿಯರು ಸೇರಿದಂತೆ 2.23 ಲಕ್ಷ ವಿದ್ಯಾರ್ಥಿಗಳು ಹೆಸರು ನೋಂದಾಯಿಸಿಕೊಂಡಿದ್ದಾರೆ. ಅವರಲ್ಲಿ 13,085 ವಿದ್ಯಾರ್ಥಿಗಳು ಫಲಿತಾಂಶ ವೃದ್ಧಿಗಾಗಿ ಎರಡನೇ ಪರೀಕ್ಷೆಗೆ ಹಾಜರಾಗುತ್ತಿದ್ದಾರೆ.ಪ್ರತಿ ಕೇಂದ್ರದಲ್ಲೂ ಸಿ.ಸಿ. ಟಿವಿ ಕ್ಯಾಮೆರಾ ಅಳವಡಿಸಲಾಗಿದ್ದು, ಮೊದಲ ಪರೀಕ್ಷೆಯಂತೆಯೇ ಈಗಲೂ ವೆಬ್‌ಕಾಸ್ಟಿಂಗ್ ವ್ಯವಸ್ಥೆ ಇರಲಿದೆ. ಜಿಲ್ಲಾ ಹಾಗೂ ತಾಲ್ಲೂಕು ಹಂತಗಳ ವಿಚಕ್ಷಣ ದಳಗಳು ಕಾರ್ಯನಿರ್ವಹಿಸಲಿವೆ. ಭದ್ರತೆಗಾಗಿ ಪೊಲೀಸ್ ಸಿಬ್ಬಂದಿ ನಿಯೋಜಿಸಲಾಗಿದೆ ಎಂದು ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿ ಹೇಳಿದೆ.

8ನೇ ಆರೋಪಿ ಶರಣಾಗತಿ

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: ರೇಣುಕಸ್ವಾಮಿ ಕೊಲೆ ಪ್ರಕರಣದ 8ನೇ ಆರೋಪಿ, ವೃತ್ತಿಯಲ್ಲಿ ಚಾಲಕನಾಗಿರುವ, ತಾಲ್ಲೂಕಿನ ಕುರುಬರಹಟ್ಟಿ ನಿವಾಸಿ ರವಿ ಗುರುವಾರ ನಗರದಲ್ಲಿ ಪೊಲೀಸರಿಗೆ ಶರಣಾಗಿದ್ದಾನೆ.

ರೇಣುಕಸ್ವಾಮಿಯನ್ನು ಅಪಹರಿಸಿದ್ದ ತಂಡ ಈತ ಚಾಲನೆ ಮಾಡುತ್ತಿದ್ದ ಕಾರು ಬಾಡಿಗೆಗೆ ಪಡೆದು ಬೆಂಗಳೂರಿಗೆ ಕರೆದೊಯ್ದಿತ್ತು.

ಕೊಲೆ ಪ್ರಕರಣದ 4ನೇ ಆರೋಪಿಯಾಗಿರುವ ರಾಘವೇಂದ್ರ ಹಾಗೂ ಇತರರು ಜೂನ್ 8ರಂದು ಟ್ಯಾಕ್ಸಿ ಕಾಯ್ದಿರಿಸಿದ್ದರು. ಇಟಿಯೋಸ್ ಕಾರು ತಂದಿದ್ದ ರವಿ, ರೇಣುಕಸ್ವಾಮಿ ಹಾಗೂ ಇತರರನ್ನು ನಗರದ ಜಗಳೂರು ಮಹಾಲಿಂಗಪ್ಪ ಪೆಟ್ರೋಲ್ ಬಂಕ್ ಬಳಿ ಹತ್ತಿಸಿಕೊಂಡಿದ್ದ. ಎಲ್ಲರೂ ಸಂಜೆ ಬೆಂಗಳೂರು ತಲುಪಿದ್ದರು. ಮಧ್ಯ ರಾತ್ರಿವರೆಗೂ ಬಾಡಿಗೆ ಹಣಕ್ಕಾಗಿ ಕಾದಿದ್ದ ರವಿಗೆ, ನಂತರ ಕೊಲೆ ವಿಷಯ ಗೊತ್ತಾಗಿತ್ತಾದರೂ ಅಂದೇ ನಗರಕ್ಕೆ ವಾಪಸಾಗಿ ತಲೆಮರೆಸಿಕೊಂಡಿದ್ದ.

ಶರಣಾಗತಿಗೆ ಮನವೊಲಿಕೆ: ಪ್ರಕರಣ ಜಟಿಲವಾಗುತ್ತಿದ್ದಂತೆ ಟ್ಯಾಕ್ಸಿ ಮಾಲೀಕರ ಸಂಘದ ಪದಾಧಿಕಾರಿಗಳಿಗೆ ಕರೆ ಮಾಡಿದ್ದ ರವಿ, ತನ್ನದೇ ಕಾರಿನಲ್ಲಿ ರೇಣುಕಸ್ವಾಮಿಯನ್ನು ಕರೆದೊಯ್ದ ವಿಚಾರ ತಿಳಿಸಿದ್ದ. ಸಿಕ್ಕಿಬೀಳುವ ಭಯ ಕಾಡುತ್ತಿದ್ದು ಆತ್ಮಹತ್ಯೆ ಮಾಡಿಕೊಳ್ಳುವುದಾಗಿಯೂ ಹೇಳಿದ್ದ. ನಂತರ ರವಿಯನ್ನು ಭೇಟಿಯಾದ ಟ್ಯಾಕ್ಸಿ ಮಾಲೀಕರ ಸಂಘದ ಸದಸ್ಯರು, ಪೊಲೀಸರಿಗೆ ಶರಣಾಗಿ ಎಲ್ಲ ವಿವರವನ್ನು ತಿಳಿಸುವಂತೆ ಮನವೊಲಿಸಿದ್ದರು. ಆತ ಡಿವೈಎಸ್‌ಪಿ ಕಚೇರಿಗೆ ಬಂದು ಶರಣಾದ ಎಂದು ಮೂಲಗಳು ತಿಳಿಸಿವೆ.

'ಜೂನ್ 8ರಂದು ರಾತ್ರಿ ರೇಣುಕಸ್ವಾಮಿ ಹತ್ಯೆಯಾದ ಸುದ್ದಿ ರವಿಗೆ ತಿಳಿದಿತ್ತು. ಕೊಲೆ ಹೊಣೆಯನ್ನು ಹೊತ್ತುಕೊಳ್ಳುವಂತೆ ಇತರ ಆರೋಪಿಗಳು ಈತನಿಗೂ ಆಮಿಷವೊಡ್ಡಿದ್ದರು. ಅದಕ್ಕೆ ಒಪ್ಪದೆ ಕಾರಿನ ಬಾಡಿಗೆ ಮಾತ್ರ ಪಡೆದು ಚಿತ್ರದುರ್ಗಕ್ಕೆ ವಾಪಸ್ ಬಂದೆ. ಭಯದಿಂದಲೇ ತಲೆಮರೆಸಿಕೊಂಡಿದ್ದೆ. ಆತ್ಮಹತ್ಯೆ ಮಾಡಿಕೊಳ್ಳಬೇಕು ಎನ್ನಿಸುತ್ತಿದೆ' ಎಂದು ತಿಳಿಸಿದ. ನಾವು ಆತನ ಜೊತೆ ಮಾತನಾಡಿ ಪೊಲೀಸರಿಗೆ ಶರಣಾಗುವಂತೆ ಮನವೊಲಿಸಿದೆವು' ಎಂದು ಟ್ಯಾಕ್ಸಿ ಮಾಲೀಕರ ಸಂಘದ ಅಧ್ಯಕ್ಷ ಮೋಹನ್ ಕುಮಾರ್ 'ಪ್ರಜಾವಾಣಿ'ಗೆ ತಿಳಿಸಿದರು.

'ರೇಣುಕಸ್ವಾಮಿ ಕೊಲೆ ಪ್ರಕರಣದಲ್ಲಿ ತನಿಖಾಧಿಕಾರಿ ಎದುರು ಹಾಜರುಪಡಿಸಿ ಎಂದು ಕೇಳಿಕೊಂಡು ರವಿ ಎನ್ನುವ ವ್ಯಕ್ತಿ ಡಿವೈಎಸ್‌ಪಿ ಕಚೇರಿಗೆ ಬಂದಿದ್ದಾನೆ. ಆತನನ್ನು ನಾವು ತನಿಖಾಧಿಕಾರಿಗೆ ಒಪ್ಪಿಸುತ್ತೇವೆ. ನಾವು ಆತನ ವಿಚಾರಣೆ ನಡೆಸಿಲ್ಲ' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಧರ್ಮೇಂದ್ರ ಕುಮಾರ್ ಮೀನಾ ತಿಳಿಸಿದರು.

ದರ್ಶನ್‌ರನ್ನು ನೋಡಿದ ರವಿ

'ರವಿ ಪಟ್ಟಣಗೆರೆ ಶೆಡ್ ತಲುಪಿದಾಗ ನಟ ದರ್ಶನ್ ಕೆಂಪು ಕಾರಿನಲ್ಲಿ ಬಂದಿದ್ದನ್ನು ನೋಡಿದ್ದಾರೆ. ಆದರೆ ರವಿಯನ್ನು ಒಳಗೆ ಬಿಡದ ಕಾರಣ ಅಲ್ಲಿ ಏನು ನಡೆಯುತ್ತಿದೆ ಎಂಬುದು ಇವರಿಗೆ ಗೊತ್ತಾಗಿರಲಿಲ್ಲ. ಆರೋಪ ಒಪ್ಪಿಕೊಳ್ಳುವಂತೆ ಆಮಿಷ ಒಡ್ಡಿದಾಗಲೇ ರೇಣುಕಸ್ವಾಮಿ ಹತ್ಯೆಯಾದ ವಿಷಯ ರವಿಗೆ ಗೊತ್ತಾಗಿದೆ. ಈ ವಿಚಾರವನ್ನು ರವಿ ನಮಗೆ ತಿಳಿಸಿದ್ದರು' ಎಂದು ಟ್ಯಾಕ್ಸಿ ಮಾಲೀಕರ ಸಂಘದ ಪದಾಧಿಕಾರಿಗಳು ತಿಳಿಸಿದರು.

ರೇಣುಕಸ್ವಾಮಿ ಮರ್ಮಾಂಗಕ್ಕೆ ಒದ್ದಿದ್ದ ದರ್ಶನ್

ರಕ್ಷಣೆಗಾಗಿ ಪರಿಚಯಸ್ಥ ಪೊಲೀಸರು, ರಾಜಕಾರಣಿಗಳಿಗೆ ಕರೆ ಮಾಡಿದ್ದರು • ನಟನ ಪಾತ್ರವಿದೆ–ಆರೋಪಿ ದೀಪಕ್ ಹೇಳಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಚಿತ್ರದುರ್ಗದ ರೇಣುಕಸ್ವಾಮಿ ಅವರ ಮರ್ಮಾಂಗಕ್ಕೆ ನಟ ದರ್ಶನ್ ಅಲಿಯಾಸ್ ಡಿ ಬಾಸ್ ಹಾಗೂ ಸಹಚರರು ಎಲ್ಲರೂ ಸೇರಿಕೊಂಡು ಹಲವು ಬಾರಿ ಒದ್ದು ಹತ್ಯೆ ಮಾಡಿದ್ದಾರೆ. ಕೊಲೆಯ ನಂತರ ಪ್ರಕರಣದಿಂದ ಬಚಾವಾಗಲು ದರ್ಶನ್, ಕೆಲ ಪೊಲೀಸರು, ಕೆಲ ವೈದ್ಯರು ಹಾಗೂ ಇತರರಿಗೆ ಕೋಟಿ ಕೋಟಿ ಆಮಿಷವೊಡ್ಡಿ ನೆರವು ಪಡೆಯಲು ಯತ್ನಿಸಿದ್ದರು' ಎಂಬ ಸಂಗತಿ ತನಿಖೆಯಿಂದ ಹೊರಬಿದ್ದಿದೆ.

ರೇಣುಕಸ್ವಾಮಿ ಕೊಲೆ ಪ್ರಕರಣದ ತನಿಖೆ ನಡೆಸುತ್ತಿರುವ ಕಾಮಾಕ್ಷಿಪಾಳ್ಯ ಠಾಣೆ ಪೊಲೀಸರು, ಆರೋಪಿಗಳನ್ನು ಕಸ್ಟಡಿಗೆ ಪಡೆದು ಪ್ರತ್ಯೇಕವಾಗಿ ವಿಚಾರಣೆ ನಡೆಸುತ್ತಿದ್ದಾರೆ. ಇದೇ ಸಂದರ್ಭದಲ್ಲಿ ಆರೋಪಿಗಳು, ನಾನಾ ರೀತಿಯಲ್ಲಿ ಹೇಳಿಕೆ ನೀಡಿದ್ದು ಅವುಗಳ ಪರಿಶೀಲನೆ ನಡೆಯುತ್ತಿದೆ.

'ದರ್ಶನ ಹಾಗೂ ಪವಿತ್ರಾ ಗೌಡ ನಡುವೆ ಹಲವು ವರ್ಷಗಳಿಂದ ಸಲುಗೆ ಇದೆ. ಪವಿತ್ರಾ ಗೌಡಗೆ ರೇಣುಕಸ್ವಾಮಿ ಖಾಸಗಿ ಅಂಗಾಂಗದ ಫೋಟೊ ಸಮೇತ ಅಶ್ಲೀಲ ಸಂದೇಶ ಕಳುಹಿಸಿದ್ದ ಸಂಗತಿ, ಡಿ–ಗ್ಯಾಂಗ್ ಸದಸ್ಯನ ಮೂಲಕ ದರ್ಶನ್‌ಗೆ ಗೊತ್ತಾಗಿತ್ತು. ಇದೇ ಸಿಟ್ಟಿನಲ್ಲಿ ದರ್ಶನ್, ಗ್ಯಾಂಗ್ ಸದಸ್ಯರ ಜೊತೆ ಸೇರಿ ಸಂಚು ರೂಪಿಸಿದ್ದರು. ಪಟ್ಟಣಗೆರೆ ಶೆಡ್‌ನಲ್ಲಿ ರೇಣುಕಸ್ವಾಮಿ ಅವರನ್ನು ನೋಡಿದ್ದ ದರ್ಶನ್, ಬೆಲ್ಟ್‌ನಿಂದ ಥಳಿಸಿದ್ದರು. ನಂತರ, ಮರ್ಮಾಂಗಕ್ಕೆ ಮೂರು ಬಾರಿ ಒದ್ದಿದ್ದರು. ನಂತರ, ಗ್ಯಾಂಗ್‌ನ ಇತರರು ಸಹ ಮರ್ಮಾಂಗಕ್ಕೆ ಒದ್ದಿದ್ದರು. ಈ ಬಗ್ಗೆ ಆರೋಪಿ ದೀಪಕ್ ಹೇಳಿಕೆ ನೀಡಿದ್ದಾನೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

ಹಲವರಿಗೆ ಕರೆ, ಕೋಟಿ ಕೋಟಿ ಆಮಿಷ: 'ಮರ್ಮಾಂಗಕ್ಕೆ ಒದ್ದ ನಂತರ ಸ್ಥಳದಲ್ಲಿಯೇ ನರಳಾಡಿ ರೇಣುಕಸ್ವಾಮಿ ಮೃತಪಟ್ಟಿದ್ದರು. ಸ್ಥಳದಿಂದ ಪರಾರಿಯಾಗಿದ್ದ ದರ್ಶನ್, ರಾಜರಾಜೇಶ್ವರಿನಗರ ಠಾಣೆ ವ್ಯಾಪ್ತಿಗೆ ತಲುಪಿದ್ದರು. ಕೊಲೆ ವಿಷಯದಲ್ಲಿ ತಮ್ಮ ಹೆಸರು ಬಾರದಂತೆ ಮಾಡಲು, ಹಲವರಿಗೆ ಕರೆ ಮಾಡಿದ್ದರು. ಪ್ರಕರಣದಿಂದ ಪಾರು ಮಾಡಿದರೆ ಕೋಟಿ ನೀಡುವುದಾಗಿ ಆಮಿಷವೊಡ್ಡಿದ್ದರೆಂಬುದು ಸದ್ಯದ ಪುರಾವೆಗಳ ಮೂಲಕ ಗೊತ್ತಾಗಿದೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಪರಿಚಯಸ್ಥ ಕೆಲ ಪೊಲೀಸರು, ಕೆಲ ರಾಜಕಾರಣಿಗಳು, ಕೆಲ ವೈದ್ಯರು ಹಾಗೂ ಇತರರಿಗೆ ದರ್ಶನ್ ಕರೆ ಮಾಡಿದ್ದರು. ಆದರೆ, ಅವರಲ್ಲಿ ಬಹುತೇಕರು ದರ್ಶನ್‌ಗೆ ಸಹಾಯ ಮಾಡಲು ನಿರಾಕರಿಸಿದ್ದರು. ಕೆಲವರಷ್ಟೇ ಮೃತದೇಹ ಸಾಗಿಸುವ ಬಗ್ಗೆ ಸಲಹೆ ನೀಡಿದ್ದರೆಂಬುದು ತಿಳಿದುಬಂದಿದೆ. ಅವರ ಬಗ್ಗೆಯೂ ಮಾಹಿತಿ ಕಲೆಹಾಕಲಾಗಿದೆ' ಎಂದು ಮೂಲಗಳು ಹೇಳಿವೆ.

ಪವಿತ್ರಾ ಗೌಡ ಮೇಲೆ ಹಲ್ಲೆ: 'ಚಿತ್ರದುರ್ಗದ ರೇಣುಕಸ್ವಾಮಿ ಅಕ್ಕನಿಗೆ (ಪವಿತ್ರಾ ಗೌಡ) ಅಶ್ಲೀಲ ಫೋಟೊ ಕಳುಹಿಸಿದ್ದಾನೆ. ಇದನ್ನು ನೋಡಿಕೊಂಡು ನೀವು ಸುಮ್ಮನಿದ್ದಿರಾ?' ಎಂದು ಸಹಚರನೊಬ್ಬ ದರ್ಶನ್‌ಗೆ ಹೇಳಿದ್ದ. ಇದೇ ಮಾತಿನಿಂದಾಗಿ ದರ್ಶನ್, ರೇಣುಕಸ್ವಾಮಿಯನ್ನು ಎಳೆದು ತರಲು ಹೇಳಿದ್ದರು. ಸಹಚರರಿಗೆ ಸ್ಕಾರ್ಪಿಯೊ ಹಾಗೂ ಕಾರು ಸಹ ಕೊಟ್ಟು ಕಳುಹಿಸಿದ್ದರು. ಕೈಗೆ ಹಣವನ್ನೂ ನೀಡಿದ್ದರೆಂಬುದು ತನಿಖೆಯಲ್ಲಿ ಗೊತ್ತಾಗಿದೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಶೆಡ್‌ನಲ್ಲಿ ಪವಿತ್ರಾಗೌಡ ಎದುರೇ ರೇಣುಕಸ್ವಾಮಿಗೆ ದರ್ಶನ್ ಹೊಡೆದಿದ್ದರು. ಬಳಿಕ, ಪವಿತ್ರಾ ಗೌಡ ಮೇಲೂ ದರ್ಶನ್ ಹಲ್ಲೆ ಮಾಡಿದ್ದರು. ಇದರಿಂದ ಗಾಯಗೊಂಡಿದ್ದ ಪವಿತ್ರಾ ಗೌಡ, ರಾತ್ರಿಯೇ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದುಕೊಂಡಿದ್ದರು. ಈ ಬಗ್ಗೆ ವೈದ್ಯರಿಂದ ಮಾಹಿತಿ ಪಡೆಯಲಾಗಿದೆ' ಎಂದು ಮೂಲಗಳು ತಿಳಿಸಿವೆ.

ಮರಣೋತ್ತರ ಪರೀಕ್ಷೆ ವರದಿ ಶೀಘ್ರ: 'ರೇಣುಕಸ್ವಾಮಿ ಅವರ ದೇಹದ 16 ಕಡೆಗಳಲ್ಲಿ ಗಾಯಗಳಾಗಿವೆ. ಮರ್ಮಾಂಗಕ್ಕೆ ಹೆಚ್ಚು ಪೆಟ್ಟು ಬಿದ್ದಿದೆ. ಮರ್ಮಾಂಗದ ಬಳಿ ರಕ್ತ ಹೆಪ್ಪುಗಟ್ಟಿದ್ದರಿಂದಲೇ ಸಾವು ಸಂಭವಿಸಿದೆ. ಇದರಿಂದಾಗಿ ರೇಣುಕಸ್ವಾಮಿ ಮೃತಪಟ್ಟಿರುವುದಾಗಿ ವೈದ್ಯರು ಹೇಳಿದ್ದಾರೆ. ಸದ್ಯದಲ್ಲೇ ಮರಣೋತ್ತರ ಪರೀಕ್ಷೆ ವರದಿ ನೀಡುವುದಾಗಿ ತಿಳಿಸಿದ್ದಾರೆ' ಎಂದು ಮೂಲಗಳು ಮಾಹಿತಿ ನೀಡಿವೆ.

> ರೇಣುಕಸ್ವಾಮಿ ಕೊಲೆ ಪ್ರಕರಣ ಅಮಾನವೀಯವಾದದ್ದು. ಕಾನೂನಿನ ಎದುರು ಸೆಲೆಬ್ರಿಟಿಗಳು, ರಾಜಕಾರಣಿಗಳು ಎಲ್ಲರೂ ಒಂದೇ. ತನಿಖಾಧಿಕಾರಿಗಳು ಚುರುಕಾಗಿ ಕೆಲಸ ಮಾಡಿದ್ದಾರೆ.
> **ಬಸವರಾಜ ಬೊಮ್ಮಾಯಿ,** ಸಂಸದ

ತನಿಖಾಧಿಕಾರಿ ದಿಢೀರ್ ವರ್ಗಾವಣೆ

ರೇಣುಕಸ್ವಾಮಿ ಕೊಲೆ ಪ್ರಕರಣದ ತನಿಖಾಧಿಕಾರಿಯಾದ ಕಾಮಾಕ್ಷಿಪಾಳ್ಯ ಇನ್‌ಸ್ಪೆಕ್ಟರ್ ಗಿರೀಶ್ ನಾಯ್ಕ್ ಅವರನ್ನು ದಿಢೀರ್ ವರ್ಗಾವಣೆ ಮಾಡಲಾಗಿದೆ. ಹೀಗಾಗಿ, ಪ್ರಕರಣದ ತನಿಖೆ ಹೊಣೆಯನ್ನು ವಿಜಯನಗರ ಉಪವಿಭಾಗದ ಎಸಿಪಿ ಚಂದನ್ ವಹಿಸಿಕೊಂಡಿದ್ದಾರೆ.

ವರ್ಗಾವಣೆ ಬಗ್ಗೆ ಮಾಹಿತಿ ನೀಡಿದ ಪೊಲೀಸ್ ಅಧಿಕಾರಿಯೊಬ್ಬರು, 'ಚನ್ನಮ್ಮನಕೆರೆ ಅಚ್ಚುಕಟ್ಟು ಠಾಣೆಯ ಇನ್‌ಸ್ಪೆಕ್ಟರ್ ಆಗಿದ್ದ ಗಿರೀಶ್ ಅವರನ್ನು ಚುನಾವಣೆ ನಿಮಿತ್ತ ಕಾಮಾಕ್ಷಿಪಾಳ್ಯ ಠಾಣೆಗೆ ತಾತ್ಕಾಲಿಕವಾಗಿ ವರ್ಗಾಯಿಸಲಾಗಿತ್ತು. ಇದೀಗ, ಅವರನ್ನು ಪುನಃ ಚನ್ನಮ್ಮನಕೆರೆ ಅಚ್ಚುಕಟ್ಟು ಠಾಣೆಗೆ ವರ್ಗಾಯಿಸಲಾಗಿದೆ. ಇದು, ಸಹಜ ವರ್ಗಾವಣೆ ಹೊರತು ದಿಢೀರ್ ವರ್ಗಾವಣೆಯಲ್ಲ' ಎಂದರು.

ಇನ್ನೊಬ್ಬ ಅಧಿಕಾರಿ, 'ಕೊಲೆ ಪ್ರಕರಣದ ತನಿಖೆ ಅಂತಿಮ ಹಂತಕ್ಕೆ ತಲುಪುವವರೆಗೂ ಗಿರೀಶ್ ಅವರನ್ನು ಇನ್‌ಸ್ಪೆಕ್ಟರ್ ಹುದ್ದೆಯಲ್ಲಿ ಮುಂದುವರಿಸಲು ಸಾಕಷ್ಟು ಅವಕಾಶಗಳಿವೆ. ಇಂಥ ಸೂಕ್ಷ್ಮ ಪ್ರಕರಣದ ತನಿಖೆ ನಡೆಯುತ್ತಿರುವಾಗಲೇ ದಿಢೀರ್ ವರ್ಗಾವಣೆ ಅಗತ್ಯವಿರಲಿಲ್ಲ. ಹಿರಿಯ ಅಧಿಕಾರಿಗಳು ಹಾಗೂ ಗೃಹ ಸಚಿವರು, ವರ್ಗಾವಣೆ ರದ್ದುಪಡಿಸಲು ಕ್ರಮ ಕೈಗೊಳ್ಳಬೇಕು' ಎಂದು ಹೇಳಿದರು.

'ಮೇಕೆ ತರಲೆಂದು ಪಡೆದಿದ್ದ ಸ್ಕಾರ್ಪಿಯೊದಲ್ಲಿ ಮೃತದೇಹ'

ರೇಣುಕಸ್ವಾಮಿ ಮೃತದೇಹ ಸಾಗಿಸಿದ್ದ ಸ್ಕಾರ್ಪಿಯೊ ವಾಹನವನ್ನು ಪೊಲೀಸರು ಜಪ್ತಿ ಮಾಡಿದ್ದು, ಅದರ ಮಾಲೀಕ ಪುನೀತ್‌ನನ್ನು ಗುರುವಾರ ವಿಚಾರಣೆ ನಡೆಸಿದರು.

ಅನ್ನಪೂರ್ಣೇಶ್ವರಿ ನಗರ ಠಾಣೆಯಲ್ಲಿ ತನಿಖಾಧಿಕಾರಿ ಎದುರು ಹಾಜರಾದ ಪುನೀತ್, 'ದರ್ಶನ್ ಅವರದು ಹಲವು ವರ್ಷಗಳ ಪರಿಚಯ. ಅವರ ಸಾಮಾಜಿಕ ಮಾಧ್ಯಮಗಳ ಖಾತೆಗಳನ್ನು ನಾನೇ ನಿರ್ವಹಣೆ ಮಾಡುತ್ತಿದ್ದೆ. ಆಗಾಗ ನನ್ನ ವಾಹನಗಳನ್ನು ಕೊಂಡೊಯ್ಯುತ್ತಿದ್ದರು. ಇತ್ತೀಚೆಗೆ, ಚಿಕ್ಕಬಳ್ಳಾಪುರದಿಂದ ಮೇಕೆ ತರಬೇಕೆಂದು ಹೇಳಿ ನನ್ನ ಸ್ಕಾರ್ಪಿಯೊ ತೆಗೆದುಕೊಂಡು ಹೋಗಿದ್ದರು' ಎಂದು ಹೇಳಿಕೆ ನೀಡಿರುವುದಾಗಿ ಗೊತ್ತಾಗಿದೆ.

'ನನ್ನ ಸ್ಕಾರ್ಪಿಯೊದಲ್ಲಿ ಮೃತದೇಹ ಸಾಗಿಸಿದ್ದ ವಿಷಯ ಮಾಧ್ಯಮಗಳ ಮೂಲಕ ತಿಳಿಯಿತು. ಕೆಲಸ ನಿಮಿತ್ತ ಬೇರೆ ಊರಿನಲ್ಲಿದ್ದರಿಂದ ಆರಂಭದಲ್ಲಿ ವಿಚಾರಣೆಗೆ ಬರಲು ಆಗಿರಲಿಲ್ಲ. ಈಗ ಹಾಜರಾಗುತ್ತಿದ್ದೇನೆ. ತನಿಖೆಗೆ ಸಹಕರಿಸುತ್ತೇನೆ' ಎಂದು ಪುನೀತ್ ಹೇಳಿರುವುದಾಗಿ ತಿಳಿದುಬಂದಿದೆ.

ಮೃತದೇಹ ಎಸೆಯಲು ಹೇಳಿದ್ದ ಪಿಎಸ್‌ಐ?

ರೇಣುಕಸ್ವಾಮಿ ಅವರನ್ನು ಕೊಲೆ ಮಾಡಿದ ನಂತರ ಆರೋಪಿಗಳು, ನಗರದ ಪೊಲೀಸ್ ಸಬ್ ಇನ್‌ಸ್ಪೆಕ್ಟರ್ ಒಬ್ಬರಿಗೆ (ಪಿಎಸ್‌ಐ) ಕರೆ ಮಾಡಿದ್ದರು ಎಂಬುದು ಪೊಲೀಸರ ತನಿಖೆಯಿಂದ ತಿಳಿದುಬಂದಿದೆ. 'ಹಣಕಾಸು ವಿಚಾರವಾಗಿ ವ್ಯಕ್ತಿಯೊಬ್ಬನನ್ನು ನಮ್ಮ ಸ್ನೇಹಿತರು ಕೊಂದಿದ್ದಾರೆ. ಅವರು ಪೊಲೀಸರಿಗೆ ಶರಣಾಗಲು ಸಿದ್ಧರಾಗಿದ್ದಾರೆ. ಆದರೆ, ಮೃತದೇಹ ಎಲ್ಲಿ ಎಸೆಯುವುದೆಂಬ ಗೊಂದಲ ಇದೆ' ಎಂದು ಆರೋಪಿಗಳು ಹೇಳಿದ್ದರು. ಸಲಹೆ ನೀಡಿದ್ದ ಪಿಎಸ್‌ಐ, 'ಮೃತದೇಹವನ್ನು ನಮ್ಮ ಠಾಣೆ ವ್ಯಾಪ್ತಿಯಲ್ಲಿ ಎಸೆಯಬೇಡಿ. ಕಾಮಾಕ್ಷಿಪಾಳ್ಯದ ಬಳಿ ರಾಜಕಾಲುವೆಯಲ್ಲಿ ಎಸೆಯಿರಿ. ಅದು ತೇಲಿಕೊಂಡು ಹೋಗುತ್ತದೆ. ಮೃತದೇಹ ಸಿಕ್ಕರೆ, ಮುಂದೆ ನೋಡೋಣ' ಎಂದಿದ್ದರು. ಅದಾದ ನಂತರವೇ ಆರೋಪಿಗಳು, ಮೃತದೇಹವನ್ನು ಕಾಮಾಕ್ಷಿಪಾಳ್ಯ ಠಾಣೆ ವ್ಯಾಪ್ತಿಯಲ್ಲಿ ಬಿಸಾಕಿದ್ದರು. ಈ ಬಗ್ಗೆಯೂ ಆರೋಪಿಗಳು ಬಾಯ್ಬಿಟ್ಟಿರುವುದಾಗಿ ಮೂಲಗಳು ಹೇಳಿವೆ.

ಕುವೈತ್: ಮೃತರಲ್ಲಿ ಕೇರಳದವರ ಸಂಖ್ಯೆ 24, ಏಳು ಮಂದಿ ತಮಿಳರು

ಅಗ್ನಿದುರಂತ: ಮೃತ ಭಾರತೀಯರ ಸಂಖ್ಯೆ 45

ದುಬೈ/ಕುವೈತ್ ನಗರ (ಪಿಟಿಐ): ಕುವೈತ್‌ನಲ್ಲಿ ನಡೆದ ಅಗ್ನಿ ಅನಾಹುತದಲ್ಲಿ ಜೀವ ಕಳೆದುಕೊಂಡ ಭಾರತೀಯರ ಸಂಖ್ಯೆಯು 45ಕ್ಕೆ ಏರಿಕೆ ಆಗಿದೆ. ಅಷ್ಟೂ ಜನರ ಮೃತದೇಹಗಳನ್ನು ಕುವೈತ್‌ನ ಅಧಿಕಾರಿಗಳು ಗುರುತಿಸಿದ್ದಾರೆ. ಮೃತರಲ್ಲಿ ಫಿಲಿಪ್ಪೀನ್ಸ್‌ನ ಮೂವರು ಇದ್ದಾರೆ. ಅಗ್ನಿ ದುರಂತದಲ್ಲಿ ಕನಿಷ್ಠ 49 ಮಂದಿ ಮೃತಪಟ್ಟಿದ್ದಾರೆ.

ಕುವೈತ್‌ನ ಅಮೀರ್ ಆಗಿರುವ ಶೇಖ್ ಮಿಶಾಲ್ ಅಲ್–ಅಹ್ಮದ್ ಅಲ್–ಜಬೀರ್ ಅಲ್–ಸಬಾ ಅವರು ಮೃತರ ಕುಟುಂಬಗಳಿಗೆ ಹಣಕಾಸಿನ ನೆರವು ಒದಗಿಸಲು ಸೂಚಿಸಿದ್ದಾರೆ. ಅಲ್ಲದೆ, ಭಾರತೀಯರ ಮೃತದೇಹಗಳನ್ನು ಸ್ವದೇಶಕ್ಕೆ ಕಳುಹಿಸಲು ವಿಮಾನವನ್ನು ಸಜ್ಜುಗೊಳಿಸುವಂತೆಯೂ ಅವರು ಸೂಚಿಸಿದ್ದಾರೆ ಎಂದು ಸ್ಥಳೀಯ ಪತ್ರಿಕೆಯೊಂದು ವರದಿ ಮಾಡಿದೆ.

ಕೇರಳದವರ ಸಂಖ್ಯೆ 24 (ತಿರುವನಂತಪುರ ವರದಿ): ಕುವೈತ್ ಅಗ್ನಿ ಅನಾಹುತದಲ್ಲಿ ಮೃತಪಟ್ಟ ಕೇರಳದವರ ಸಂಖ್ಯೆ 24ಕ್ಕೆ ಏರಿಕೆಯಾಗಿದೆ. ದುರ್ಘಟನೆಯಲ್ಲಿ ಗಂಭೀರವಾಗಿ ಗಾಯಗೊಂಡಿರುವ ಏಳು ಮಂದಿಗೆ ಕುವೈತ್‌ನ ಬೇರೆ ಬೇರೆ ಆಸ್ಪತ್ರೆಗಳಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ.

ಅನಿವಾಸಿ ಕೇರಳೀಯರ ವ್ಯವಹಾರಗಳ ಇಲಾಖೆಯ ಹಿರಿಯ ಅಧಿಕಾರಿಯೊಬ್ಬರು ಈ ಮಾಹಿತಿ ನೀಡಿದ್ದಾರೆ. ಮೃತಪಟ್ಟಿರುವ ಕೇರಳದವರ ಸಂಖ್ಯೆ ಹೆಚ್ಚಾಗುತ್ತಿದೆ ಎಂದು ಕುವೈತ್‌ನಲ್ಲಿ ಆರಂಭಿಸಿರುವ ಸಹಾಯವಾಣಿ ನೀಡಿರುವ ಮಾಹಿತಿ ಆಧರಿಸಿ ಇಲಾಖೆಯ ಸಿಇಒ ಅಜಿತ್ ಕೊಲಶ್ಶೇರಿ ಅವರು ತಿಳಿಸಿದ್ದಾರೆ.

ಮೃತಪಟ್ಟ ಭಾರತೀಯರಲ್ಲಿ ತಮಿಳುನಾಡಿನ ಏಳು ಮಂದಿ ಇದ್ದಾರೆ. ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಅವರ ಸೂಚನೆ ಆಧರಿಸಿ, ಮೃತದೇಹಗಳನ್ನು ರಾಜ್ಯಕ್ಕೆ ತರಲು ಎಲ್ಲ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ಗಾಯಗೊಂಡವರ ಚಿಕಿತ್ಸೆಗೆ ನೆರವು ಒದಗಿಸಲಾಗುತ್ತಿದೆ ಎಂದು ಅನಿವಾಸಿ ತಮಿಳರ ಕಲ್ಯಾಣ ಸಚಿವ ಜಿಂಜೀ ಕೆ.ಎಸ್. ಮಸ್ತಾನ್ ತಿಳಿಸಿದ್ದಾರೆ.

₹5 ಲಕ್ಷ ಪರಿಹಾರ: ದುರಂತದಲ್ಲಿ ಮೃತಪಟ್ಟ ಕೇರಳದವರ ಕುಟುಂಬಗಳಿಗೆ ತಲಾ ₹5 ಲಕ್ಷ ಪರಿಹಾರ ನೀಡುವುದಾಗಿ ಕೇರಳ ಸರ್ಕಾರ ಹೇಳಿದೆ.


ವಿದೇಶಾಂಗ ವ್ಯವಹಾರಗಳ ರಾಜ್ಯ ಸಚಿವ ಕೀರ್ತಿವರ್ಧನ್ ಸಿಂಗ್ ಅವರು ಕುವೈತ್ ಅಗ್ನಿದುರಂತದಲ್ಲಿ ಗಾಯಗೊಂಡ ಭಾರತೀಯರ ಯೋಗಕ್ಷೇಮ ವಿಚಾರಿಸಿದರು

ಪರಿಸ್ಥಿತಿ ಅವಲೋಕಿಸಿದ ಪ್ರಧಾನಿ

ಅಗ್ನಿ ಅವಘಡದ ಪರಿಸ್ಥಿತಿಯ ಅವಲೋಕನ ನಡೆಸಿದ ಪ್ರಧಾನಿ ನರೇಂದ್ರ ಮೋದಿ ಅವರು, ಮೃತಪಟ್ಟ ಭಾರತೀಯರ ಕುಟುಂಬಗಳಿಗೆ ತಲಾ ₹2 ಲಕ್ಷ ಪರಿಹಾರ ಘೋಷಿಸಿದ್ದಾರೆ. ಅಲ್ಲದೆ, ಕೇಂದ್ರ ಸರ್ಕಾರದ ಕಡೆಯಿಂದ ಸಾಧ್ಯವಿರುವ ಎಲ್ಲ ಬಗೆಯ ನೆರವನ್ನೂ ಒದಗಿಸಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ಜೈಶಂಕರ್ ಅವರು ಕುವೈತ್‌ನ ವಿದೇಶಾಂಗ ಸಚಿವ ಅಬ್ದುಲ್ಲಾ ಅಲಿ ಅಲ್–ಯಾಹ್ಯಾ ಅವರ ಜೊತೆ ದೂರವಾಣಿ ಮೂಲಕ ಮಾತುಕತೆ ನಡೆಸಿದ್ದು, ಮೃತದೇಹಗಳನ್ನು ಭಾರತಕ್ಕೆ ತ್ವರಿತವಾಗಿ ಕಳುಹಿಸಲು ನೆರವಾಗಬೇಕು ಎಂದು ಕೋರಿದ್ದಾರೆ. ದುರಂತದ ಬಗ್ಗೆ ತನಿಖೆ ನಡೆಸಲಾಗುತ್ತದೆ, ಹೊಣೆಗಾರಿಕೆ ನಿಗದಿ ಮಾಡಲಾಗುತ್ತದೆ ಎಂದು ಕುವೈತ್ ವಿದೇಶಾಂಗ ಸಚಿವ ಅಲ್–ಯಾಹ್ಯಾ ಅವರು ಜೈಶಂಕರ್ ಅವರಿಗೆ ಭರವಸೆ ನೀಡಿದ್ದಾರೆ.

ಬೆಂಕಿ ಹೊತ್ತಿಕೊಳ್ಳಲು ಕಾರಣ ಏನು ಎಂಬ ಬಗ್ಗೆ ಅಧಿಕೃತ ಹೇಳಿಕೆ ಬಂದಿಲ್ಲ. ತಳಮಹಡಿಯಲ್ಲಿ ಅನಿಲ ಸೋರಿಕೆಯಾಗಿದ್ದರ ಪರಿಣಾಮವಾಗಿ ಬೆಂಕಿ ಹೊತ್ತಿಕೊಂಡಿರಬಹುದು ಎಂದು ಸ್ಥಳೀಯ ಮಾಧ್ಯಮಗಳು ವರದಿ ಮಾಡಿವೆ.

ಕುವೈತ್‌ಗೆ ಭಾರತ ಸೇನಾ ವಿಮಾನ: ಭಾರತವು 'ಸಿ–130 ಜೆ' ಸೇನಾ ಸಂಚಾರ ವಿಮಾನವನ್ನು ಗುರುವಾರ ರಾತ್ರಿಕುವೈತ್‌ಗೆ ಕಳುಹಿಸಿಕೊಡಲಿದೆ. ಅಲ್ಲಿ ಬೆಂಕಿ ಅವಘಡದಲ್ಲಿ ಮೃತಪಟ್ಟಿರುವವರ ಶವಗಳನ್ನು ಅದರಲ್ಲಿ ತರಲಾಗುವುದು ಎಂದು ನವದೆಹಲಿಯ ಅಧಿಕಾರಿಗಳು ತಿಳಿಸಿದರು.

ಶುಕ್ರವಾರ ಕುವೈತ್‌ನಿಂದ ಶವಗಳನ್ನು ತರಲಿರುವ ಸೇನಾ ವಿಮಾನವು ಮೊದಲು ಕೊಚ್ಚಿಯಲ್ಲಿ ಭೂಸ್ಪರ್ಶ ಮಾಡಲಿದೆ. ಕೇರಳಕ್ಕೆ ಸೇರಿದ ಕಾರ್ಮಿಕರ ಶವಗಳನ್ನು ಅಲ್ಲಿ ಇಳಿಸಲಿದೆ. ಆನಂತರ ದೆಹಲಿ ತಲುಪಿ, ಇನ್ನುಳಿದ ಶವಗಳನ್ನು ಅಲ್ಲಿ ಇಳಿಸಲಿದೆ ಎಂದು ಮಾಹಿತಿ ನೀಡಿದರು.

ಹಚ್ಚೆಯ ಮೂಲಕ ಮಗನ ಮೃತದೇಹ ಗುರುತಿಸಿದ ತಂದೆ

ಕೋಟಯಂ/ಕೊಲ್ಲಂ (ಪಿಟಿಐ): ಅಗ್ನಿದುರಂತದಲ್ಲಿ ಮೃತಪಟ್ಟ 27 ವರ್ಷ ವಯಸ್ಸಿನ ಶ್ರೀಹರಿ ಎನ್ನುವವರ ದೇಹವನ್ನು ಅವರ ತಂದೆ ಪ್ರದೀಪ್ ಅವರು ಗುರುತಿಸಲು ಸಾಧ್ಯವಾಗಿದ್ದು ಒಂದು ಹಚ್ಚೆಯ ಕಾರಣದಿಂದ.

ಆಸ್ಪತ್ರೆಯೊಂದರ ಶವಾಗಾರದಲ್ಲಿ ಶ್ರೀಹರಿ ಅವರ ಮೃತದೇಹ ಇರಿಸಲಾಗಿತ್ತು. ಅವರ ಮೃತದೇಹವನ್ನು ಗುರುತಿಸಲು ತಂದೆ ಪ್ರದೀಪ್ ಅವರನ್ನು ಅಧಿಕಾರಿಗಳು ಕರೆದಿದ್ದರು. 'ನಾನು ಅಲ್ಲಿಗೆ ಹೋದಾಗ ಮುಖ ಸಂಪೂರ್ಣವಾಗಿ ಊದಿಕೊಂಡಿತ್ತು, ಮೂಗು ಸಂಪೂರ್ಣವಾಗಿ ಕಪ್ಪಾಗಿತ್ತು. ನನಗೆ ಅವನನ್ನು ಗುರುತಿಸಲು ಆಗಲೇ ಇಲ್ಲ' ಎಂದು ಪ್ರದೀಪ್ ಅವರು ದುಃಖತಪ್ತರಾಗಿ ತಿಳಿಸಿದ್ದಾರೆ.

'ಮಗನ ಕೈ ಮೇಲೆ ಒಂದು ಹಚ್ಚೆ ಇದೆ ಎಂದು ನಾನು ಹೇಳಿದೆ. ಅದನ್ನು ಆಧರಿಸಿ ನಾನು ಅವನನ್ನು ಗುರುತಿಸಿದೆ' ಎಂದು ಅವರು ಮಲಯಾಳದ ಸುದ್ದಿವಾಹಿಯೊಂದಕ್ಕೆ ಹೇಳಿದ್ದಾರೆ. ಶ್ರೀಹರಿ ಅವರು ಜೂನ್ 5ರಂದು ಕುವೈತ್‌ಗೆ ವಾಪಸ್ಸಾಗಿದ್ದರು.ತಂದೆ ಮತ್ತು ಮಗ ಒಂದೇ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದರು. ಪ್ರದೀಪ್ ಅವರು ಕಳೆದ ಎಂಟು ವರ್ಷಗಳಿಂದ ಕುವೈತ್‌ನಲ್ಲಿ ಕೆಲಸ ಮಾಡುತ್ತಿದ್ದಾರೆ.

ಜಿಗಿದು ಜೀವ ಉಳಿಸಿಕೊಂಡ ನಳಿನಾಕ್ಷನ್

ಕಾಸರಗೋಡು (ಕೇರಳ) (ಪಿಟಿಐ): ಕುವೈತ್‌ನಲ್ಲಿ ಸಂಭವಿಸಿದ ಅಗ್ನಿ ದುರಂತದ ಸಂದರ್ಭದಲ್ಲಿ ಕೇರಳದ ಕಾಸರಗೋಡಿನ ತ್ರಿಕ್ಕರಿಪುರದ ನಳಿನಾಕ್ಷನ್ ಎನ್ನುವವರು ಹತ್ತಿರ ಇದ್ದ ನೀರಿನ ತೊಟ್ಟಿಗೆ ಜಿಗಿದು ಪ್ರಾಣ ಉಳಿಸಿಕೊಂಡಿದ್ದಾರೆ.

ಕಟ್ಟಡಕ್ಕೆ ಬೆಂಕಿ ಹೊತ್ತಿಕೊಂಡಾಗ ನಳಿನಾಕ್ಷನ್ ಅವರು ಮೂರನೆಯ ಮಹಡಿಯ ಅಪಾರ್ಟ್‌ಮೆಂಟ್ ಒಂದರಲ್ಲಿ ಸಿಲುಕಿಕೊಂಡಿದ್ದರು. ಬೆಂಕಿಯಿಂದ ತಪ್ಪಿಸಿಕೊಳ್ಳಲು ಅವರು ಹತ್ತಿರದ ನೀರಿನ ತೊಟ್ಟಿಗೆ ಜಿಗಿಯುವ ತೀರ್ಮಾನವನ್ನು ಕ್ಷಣಾರ್ಧದಲ್ಲಿ ಕೈಗೊಂಡರು.

ಜೀವ ಉಳಿಸಿಕೊಳ್ಳಲು ಜಿಗಿದ ಪರಿಣಾಮವಾಗಿ ಅವರ ಮೂಳೆಗಳು ಮುರಿದಿವೆ, ಅವರಿಗೆ ಗಾಯಗಳಾಗಿವೆ. ಸಮೀಪದಲ್ಲಿಯೇ ವಾಸಿಸುತ್ತಿದ್ದ ಅವರ ಸಂಬಂಧಿಕರು, ಅವರು ತೊಟ್ಟಿಯಲ್ಲಿ ಇರುವುದನ್ನು ಗಮನಿಸಿದರು. ಅವರನ್ನು ತಕ್ಷಣವೇ ಆಸ್ಪತ್ರೆಗೆ ದಾಖಲಿಸಿದರು.

ನಳಿನಾಕ್ಷನ್ ಅವರ ಬಾಯಿಯಿಂದ ರಕ್ತ ಸೋರುತ್ತಿದೆ. ಹೀಗಾಗಿ ಕುಟುಂಬದ ಸದಸ್ಯರಿಗೆ ಅವರ ಜೊತೆ ಹೆಚ್ಚು ಮಾತನಾಡಲು ಸಾಧ್ಯವಾಗಿಲ್ಲ. ಅವರಿಗೆ ಶಸ್ತ್ರಚಿಕಿತ್ಸೆ ನಡೆಸಲಾಗುತ್ತದೆ. ಅವರನ್ನು ಒಳ್ಳೆಯ ಆಸ್ಪತ್ರೆಗೆ ದಾಖಲಿಸಿರುವ ಕಾರಣಕ್ಕೆ ಒಂದಿಷ್ಟು ಸಮಾಧಾನ ಆಗಿದೆ ಎಂದು ಅವರ ಸಂಬಂಧಿ ಬಾಲಕೃಷ್ಣನ್ ಹೇಳಿದ್ದಾರೆ. ನಳಿನಾಕ್ಷನ್ ಅವರು ಮಾರ್ಚ್ ತಿಂಗಳಲ್ಲಿ ವಾರ್ಷಿಕ ಉತ್ಸವವೊಂದರಲ್ಲಿ ಪಾಲ್ಗೊಳ್ಳಲು ಊರಿಗೆ ಬಂದಿದ್ದರು.

ಕಾಸರಗೋಡಿನ ಇಬ್ಬರು ಸಾವು

ಕಾಸರಗೋಡು: ಕುವೈತ್‌ನಲ್ಲಿ ಕಟ್ಟಡಕ್ಕೆ ಬೆಂಕಿ ತಗುಲಿ ಸಂಭವಿಸಿದ ಅನಾಹುತದಲ್ಲಿ ಜಿಲ್ಲೆಯ ಇಬ್ಬರು ಮೃತಪಟ್ಟಿದ್ದಾರೆ.

ಚೆರ್ಕಳ ಕುಂಟಡ್ಕ ನಿವಾಸಿ ರಂಜಿತ್ (34) ಮತ್ತು ತ್ರಿಕರಿಪುರ ಎಳಂಬಚ್ಚಿ ನಿವಾಸಿ ಕೇಳು ಪೊನ್ಮಲೇರಿ (55) ಮೃತಪಟ್ಟವರು. ಈ ಸಂಬಂಧ ಜಿಲ್ಲಾ ಪೊಲೀಸ್ ಮಾಹಿತಿ ಕೇಂದ್ರಕ್ಕೆ ಮಾಹಿತಿ ಬಂದಿದೆ.

ರಂಜಿತ್ ಅವರು ಕುಂಟಡ್ಕದ ರವೀಂದ್ರನ್-ರಮಣಿ ದಂಪತಿ ಪುತ್ರ. 10 ವರ್ಷಗಳಿಂದ ಕುವೈತ್‌ನಲ್ಲಿ ನೌಕರಿಯಲ್ಲಿದ್ದರು. ಕೇಳು ಅವರೂ 10 ವರ್ಷಗಳಿಂದ ಕುವೈತ್‌ನ ಸಂಸ್ಥೆಯೊಂದರಲ್ಲಿ ಎಂಜಿನಿಯರ್ ಆಗಿದ್ದರು. ಅವರಿಗೆ ಪತ್ನಿ, ಇಬ್ಬರು ಪುತ್ರರು ಇದ್ದಾರೆ.

ಶುಕ್ರವಾರ, ಜೂನ್ 14, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 165 | ಪುಟ 20
www.prajavani.net
prajavani.net | prajavani | prajavani | prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸಿನಿಮಾ ಪುರವಣಿ
ನಟನೆ, ಸಿನಿಮಾ ನಿರ್ಮಾಣದ ಬಳಿಕ ನಿರ್ದೇಶನದ ಕನಸು ಹೊತ್ತ ನಟ ಧನಂಜಯ



CASAGRAND Presents ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ Powered by REACH ROOT
ಸಿನಿ ಸಮ್ಮಾನದ 2ನೇ ಆವೃತ್ತಿಗೆ ದಿನಗಣನೆ 9

ಎನ್‌ಎಸ್‌ಎ ಆಗಿ ಅಜಿತ್ ಡೊಭಾಲ್ ಮರುನೇಮಕ 6

ಮುಂದುವರಿದ ಗೂಳಿ ಓಟ 10

ಸೆನ್ಸೆಕ್ಸ್	ನಿಫ್ಟಿ	₹/$
76,810 ▲	23,398 ▲	83.54 ▼

ಬಾಲಕಿಗೆ ಲೈಂಗಿಕ ಕಿರುಕುಳ ಪ್ರಕರಣ: ಕೋರ್ಟ್‌ನಿಂದ ಜಾಮೀನುರಹಿತ ವಾರಂಟ್ ಆದೇಶ

ಬಿಎಸ್‌ವೈ ಸೆರೆಗೆ ಸಿಐಡಿ ಶೋಧ

ಪ್ರಜಾವಾಣಿ ವಾರ್ತೆ



ಬೆಂಗಳೂರು: ಹದಿನೇಳು ವರ್ಷದ ಬಾಲಕಿಗೆ ಲೈಂಗಿಕ ಕಿರುಕುಳ ನೀಡಿದ ಆರೋಪಕ್ಕೆ ಸಂಬಂಧಿಸಿದ ಪ್ರಕರಣದಲ್ಲಿ ಬಿಜೆಪಿ ಕೇಂದ್ರೀಯ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ ಬಂಧನಕ್ಕೆ ಜಾಮೀನುರಹಿತ ವಾರಂಟ್ ಹೊರಡಿಸಲು ನ್ಯಾಯಾಲಯ ಆದೇಶ ನೀಡಿದ ಬೆನ್ನಲ್ಲೇ, ಆರೋಪಿಯ ಬಂಧನಕ್ಕೆ ಸಿಐಡಿ ತೀವ್ರ ಶೋಧ ನಡೆಸಿದೆ.

ಯಡಿಯೂರಪ್ಪ ಅವರಿಗೆ ಈ ಪ್ರಕರಣದಲ್ಲಿ ಬಂಧನದ ನೋಟಿಸ್ ನೀಡಿದ್ದ ಸಿಐಡಿ, ಬುಧವಾರ (ಜೂ.12) ಹಾಜರಾಗುವಂತೆ ಸೂಚಿಸಿತ್ತು. ಜೂನ್ 17ರಂದು ಹಾಜರಾಗುವುದಾಗಿ ಸಿಐಡಿ ಅಧಿಕಾರಿಗಳಿಗೆ ತಿಳಿಸಿದ್ದ ಯಡಿಯೂರಪ್ಪ ಗೈರಾಗಿದ್ದರು.

'ದೆಹಲಿಯತ್ತ ಯಡಿಯೂರಪ್ಪ ಪ್ರಯಾಣ ಬೆಳೆಸಿದ್ದು ಗೊತ್ತಾಗುತ್ತಿದ್ದಂತೆಯೇ ಸಿಐಡಿ ಅಧಿಕಾರಿಗಳ ತಂಡ ಅವರ ಚಲನವಲನಗಳ ಮೇಲೆ ಕಣ್ಣಿಟ್ಟಿತ್ತು. ದೆಹಲಿಯಲ್ಲಿರುವ ತಮ್ಮ ಮಗ, ಸಂಸದ ಬಿ.ವೈ. ರಾಘವೇಂದ್ರ ಮನೆಯಲ್ಲಿದ್ದ ಯಡಿಯೂರಪ್ಪ, ಗುರುವಾರ ಬೆಳಿಗ್ಗೆಯೇ ಅಲ್ಲಿಂದ ಹೊರಟು ಅಜ್ಞಾತ ಸ್ಥಳಕ್ಕೆ ತೆರಳಿದ್ದಾರೆ. ಅಲ್ಲಿಂದ ಹೊರಟವರು ನೆರೆ ರಾಜ್ಯಗಳಿಗೆ ಹೋಗಿದ್ದಾರೆ ಎಂಬ ಮಾಹಿತಿ ಇದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಯಡಿಯೂರಪ್ಪ ವಿರುದ್ಧ ಜಾಮೀನುರಹಿತ ಬಂಧನದ ವಾರಂಟ್ ಹೊರಬೀಳುತ್ತಿದ್ದಂತೆಯೇ ಎಸ್‌ಪಿ ಶ್ರೇಣಿಯ ಅಧಿಕಾರಿಯೊಬ್ಬರ ನೇತೃತ್ವದ ಪೊಲೀಸರ ತಂಡ ಚುರುಕಾಗಿದೆ. ಕರ್ನಾಟಕ, ದೆಹಲಿ ಮಾತ್ರವಲ್ಲದೇ ಯಡಿಯೂರಪ್ಪ ಹೋಗಿರಬಹುದಾದ ಸ್ಥಳಗಳ ಕುರಿತು ಮಾಹಿತಿಗಳನ್ನು ಕಲೆ ಹಾಕುತ್ತಿರುವ ತಂಡ, ಬಂಧನಕ್ಕೆ ಶೋಧ ನಡೆಸಿದೆ' ಎಂದೂ ಮೂಲಗಳು ತಿಳಿಸಿವೆ.

6ನೇ ಪುಟ ನೋಡಿ

ಜಾಮೀನು ಅರ್ಜಿ: ಇಂದು ಹೈಕೋರ್ಟ್‌ನಲ್ಲಿ

ಯಡಿಯೂರಪ್ಪ ಅವರು ನಿರೀಕ್ಷಣಾ ಜಾಮೀನು ಕೋರಿ ಹೈಕೋರ್ಟ್‌ಗೆ ರಿಟ್ ಅರ್ಜಿ ಸಲ್ಲಿಸಿದ್ದು, ಈ ಅರ್ಜಿ ಶುಕ್ರವಾರ (ಜೂನ್ 14) ಮಧ್ಯಾಹ್ನ, 'ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ'ಯ ವಿಶೇಷ ನ್ಯಾಯಪೀಠದಲ್ಲಿರುವ ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರ ಮುಂದೆ ವಿಚಾರಣೆಗೆ ನಿಗದಿಯಾಗಿದೆ.

ಅಂತೆಯೇ, ತಮ್ಮ ವಿರುದ್ಧ ಸದಾಶಿವ ನಗರ ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವ ಪೋಕ್ಸೊ ಪ್ರಕರಣ ರದ್ದುಕೋರಿ ಯಡಿಯೂರಪ್ಪ ಸಲ್ಲಿಸಿರುವ ಮತ್ತೊಂದು ಅರ್ಜಿಯೂ ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರ ಏಕಸದಸ್ಯ ನ್ಯಾಯಪೀಠದ ಮುಂದೆ ವಿಚಾರಣೆಗೆ ನಿಗದಿಯಾಗಿದೆ.

'ಬಿಎಸ್‌ವೈ ಡೆಲ್ಲಿ ಲೊಕೇಶನ್ ಪತ್ತೆ ಆಗ್ತಿಲ್ಲ'

'ಸಿಐಡಿ ಕೊಟ್ಟಿರುವ ನೋಟಿಸ್‌ಗೆ ಇದೇ 17ರವರೆಗೆ ಕಾಲಾವಕಾಶ ಕೇಳಿರುವ ಆರೋಪಿ ಯಡಿಯೂರಪ್ಪನವರ ಕೋರಿಕೆ ಪ್ರಾಮಾಣಿಕವಾಗಿಲ್ಲ. ಅವರು ಸಾಕ್ಷ್ಯ ನಾಶ ಮಾಡಲು ಸಮಯ ಪಡೆಯುತ್ತಿರುವ ಹವಣಿಕೆ ಇದು' ಎಂದು ವಿಶೇಷ ಪ್ರಾಸಿಕ್ಯೂಟರ್ ಅಶೋಕ್ ನಾಯಕ್ ಅವರು ನ್ಯಾಯಾಧೀಶರಿಗೆ ವಿವರಿಸಿದರು.

'ಅವರೀಗ ದೆಹಲಿಗೆ ಹೋಗಿದ್ದಾರೆ. ದೆಹಲಿಯಲ್ಲಿ ಇದ್ದಾರೆ ಎನ್ನಲಾಗುತ್ತಿದೆ. ಆದರೆ ದೆಹಲಿಯ ಲೊಕೇಶನ್ ಪತ್ತೆ ಆಗ್ತಾ ಇಲ್ಲ. ಕೂಡಲೇ ಅವರನ್ನು ಬಂಧಿಸಿ ವಿಚಾರಣೆ ನಡೆಸಬೇಕಿದೆ. ಇಲ್ಲವಾದಲ್ಲಿ ಸಾಕ್ಷ್ಯ ನಾಶವಾಗುವ ಎಲ್ಲ ಅವಕಾಶಗಳಿವೆ. ಆದ್ದರಿಂದ ಬಂಧನಕ್ಕೆ ಅನುಮತಿ ನೀಡಬೇಕು' ಎಂದು ಕೋರಿದರು.

ಒಟ್ಟು ನಾಲ್ವರು ಆರೋಪಿಗಳು

- ಎ–1 ಬಿ.ಎಸ್.ಯಡಿಯೂರಪ್ಪ
- ಎ–2 ವೈ.ಎಂ. ಅರುಣ, ಪೈಪ್‌ಲೈನ್ ರೋಡ್, ಟಿ.ದಾಸರಹಳ್ಳಿ
- ಎ–3 ಎಂ.ರುದ್ರೇಶ್ ಬಿನ್ ಲೇಟ್ ಮರುಳಸಿದ್ದಯ್ಯ, ಸೋಂಪುರ ಕೆಂಗೇರಿ ಹೋಬಳಿ, ಬೆಂಗಳೂರು
- ಎ–4 ಜಿ.ಮರಿಸ್ವಾಮಿ ಬಿನ್ ಲೇಟ್ ಗಂಗಾಧರಯ್ಯ ಕೆರೆಗುಡ್ಡದ ಹಳ್ಳಿ, ಚಿಕ್ಕಬಾಣಾವರ, ಬೆಂಗಳೂರು

ಚಿನಕುರುಳಿ

ಪ್ರಕಾಶ್ ಶೆಟ್ಟಿ



ದರ್ಶನ್ ಕೋಟಿ ಕೋಟಿ ಆಮಿಷ?

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಚಿತ್ರದುರ್ಗದ ರೇಣುಕಸ್ವಾಮಿ ಮರ್ಮಾಂಗಕ್ಕೆ ಹಲವು ಬಾರಿ ಒದ್ದು ಕೊಲೆ ಮಾಡಿದ್ದ ಆರೋಪ ಹೊತ್ತಿರುವ ನಟ ದರ್ಶನ್ ಮತ್ತು ಆತನ ಸಹಚರರು ಕೊಲೆ ಪ್ರಕರಣದಿಂದ ಪಾರಾಗಲು ಹಲವರಿಗೆ ಕೋಟಿ ಕೋಟಿ ರೂಪಾಯಿ ಆಮಿಷ ಒಡ್ಡಿದ್ದರು' ಎಂಬುದು ಪೊಲೀಸರ ತನಿಖೆಯಿಂದ ಗೊತ್ತಾಗಿದೆ.

ರೇಣುಕಸ್ವಾಮಿ ಕೊಲೆ ಪ್ರಕರಣದ ತನಿಖೆ ನಡೆಸುತ್ತಿರುವ ಕಾಮಾಕ್ಷಿಪಾಳ್ಯ ಠಾಣೆ ಪೊಲೀಸರು, ಆರೋಪಿಗಳನ್ನು ಕಸ್ಟಡಿಗೆ ಪಡೆದು ಪ್ರತ್ಯೇಕವಾಗಿ ವಿಚಾರಣೆ ನಡೆಸುತ್ತಿದ್ದಾರೆ. ಆರೋಪಿಗಳು ನಾನಾ ರೀತಿಯ ಹೇಳಿಕೆ ನೀಡುತ್ತಿದ್ದಾರೆ. ಈ ವಿಚಾರಣೆ ವೇಳೆ ಅನೇಕ ಮಾಹಿತಿಗಳು ಬಯಲಿಗೆ ಬಂದಿವೆ ಎಂದು ಪೊಲೀಸ್ ಮೂಲಗಳು ಹೇಳಿವೆ.

'ದರ್ಶನ್ ಆಪ್ತೆ ಪವಿತ್ರಾ ಗೌಡಗೆ ರೇಣುಕಸ್ವಾಮಿ ಅಶ್ಲೀಲ ಸಂದೇಶ ಕಳುಹಿಸಿದ್ದರು. ಇದು ತಮ್ಮ ಸಹಚರನ ಮೂಲಕ ದರ್ಶನ್‌ಗೆ ಗೊತ್ತಾಗಿತ್ತು. ಸಿಟ್ಟಿನಲ್ಲಿದ್ದ ದರ್ಶನ್, ತಮ್ಮ ಗುಂಪಿನ ಸದಸ್ಯರ ಜೊತೆ ಸೇರಿ ಸಂಚು ರೂಪಿಸಿದ್ದರು. ಪಟ್ಟಣಗೆರೆ ಶೆಡ್‌ನಲ್ಲಿ ರೇಣುಕಸ್ವಾಮಿ ಅವರನ್ನು ನೋಡಿದ್ದ ದರ್ಶನ್, ಬೆಲ್ಟ್‌ನಿಂದ ಥಳಿಸಿದ್ದಲ್ಲದೇ ಮರ್ಮಾಂಗಕ್ಕೆ ಮೂರು ಬಾರಿ ಒದ್ದಿದ್ದರು. ಅವರ ಸಹಚರರೂ ಮರ್ಮಾಂಗಕ್ಕೆ ಒದ್ದಿದ್ದರು. ಈ ಬಗ್ಗೆ ಆರೋಪಿ ದೀಪಕ್ ಹೇಳಿಕೆ ನೀಡಿದ್ದಾರೆ' ಎಂದು ಮೂಲಗಳು ತಿಳಿಸಿವೆ. 'ಪ್ರಕರಣದಲ್ಲಿ ತನ್ನ ಹೆಸರು ಬಾರದಂತೆ ಮಾಡಲು, ಹಲವರಿಗೆ ಕರೆ ಮಾಡಿದ್ದ ದರ್ಶನ್, ತನ್ನನ್ನು ಪಾರು ಮಾಡಿದರೆ ಕೋಟಿ ರೂಪಾಯಿ ನೀಡುವುದಾಗಿ ಆಮಿಷವೊಡ್ಡಿದ್ದಕ್ಕೆ ಪುರಾವೆಗಳಿವೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ರಕ್ಷಣೆಗೆ 'ಕೈ–ಕಮಲ' ನಾಯಕರ ಕರೆ

ನಟ ದರ್ಶನ್‌ಗೆ ರಕ್ಷಣೆ ನೀಡುವಂತೆ ಅವರ ಜತೆಗೆ ನಿಕಟ ಬಾಂಧವ್ಯ ಹೊಂದಿರುವ ಹಲವು ರಾಜಕಾರಣಿಗಳು ಪೊಲೀಸರ ಮೇಲೆ ಒತ್ತಡ ಹಾಕಿದ್ದರು ಎಂಬುದು ಗೊತ್ತಾಗಿದೆ.

'ರೇಣುಕಸ್ವಾಮಿ ಕೊಲೆಯಾದ ಬಳಿಕ ದರ್ಶನ್, ಹಲವು ರಾಜಕಾರಣಿಗಳಿಗೆ ಕರೆ ಮಾಡಿದ್ದರು. ಈ ಪೈಕಿ ಕಾಂಗ್ರೆಸ್‌ನ ಇಬ್ಬರು ಪ್ರಭಾವಿ ಮುಖಂಡರು ಹಾಗೂ ಬಿಜೆಪಿಯ ಒಬ್ಬರು, ಹಿರಿಯ ಪೊಲೀಸ್ ಅಧಿಕಾರಿಗಳ ಮೊಬೈಲ್‌ಗೆ ವಾಟ್ಸ್‌ಆ್ಯಪ್ ಮೂಲಕ 100ಕ್ಕೂ ಹೆಚ್ಚು ಬಾರಿ ಕರೆ ಮಾಡಿದ್ದಾರೆ. ಆದರೆ, ಹಿರಿಯ ಅಧಿಕಾರಿ ಕರೆ ಸ್ವೀಕರಿಸಿಲ್ಲ. ಇದರಿಂದ ಸಿಟ್ಟಾದ ಮುಖಂಡರು, ಗೃಹ ಸಚಿವರಿಗೆ ಕರೆ ಮಾಡಿರುವುದಾಗಿ ಗೊತ್ತಾಗಿದೆ' ಎಂದು ಮೂಲಗಳು ಹೇಳಿವೆ.

ರೇಣುಕಸ್ವಾಮಿ ಕೊಲೆ ಪ್ರಕರಣ: ಠಾಣೆಯಲ್ಲಿರುವ ನಟ ದರ್ಶನ್‌ಗೆ ಐಷಾರಾಮಿ ಸೇವೆ–ಸಾರ್ವಜನಿಕರ ಆರೋಪ

ಅನ್ನಪೂರ್ಣೇಶ್ವರಿ ನಗರ ಠಾಣೆ ಸುತ್ತ ಶಾಮಿಯಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿತ್ರದುರ್ಗದ ರೇಣುಕಸ್ವಾಮಿ ಕೊಲೆ ಪ್ರಕರಣದ ಆರೋಪಿಗಳಾಗಿರುವ ನಟ ದರ್ಶನ್ ಹಾಗೂ ಇತರರನ್ನು ಅನ್ನಪೂರ್ಣೇಶ್ವರಿ ನಗರ ಠಾಣೆಯ ಕಟ್ಟಡದಲ್ಲಿ ಇರಿಸಲಾಗಿದ್ದು, ಠಾಣೆ ಸುತ್ತಮುತ್ತ ನಿಷೇಧಾಜ್ಞೆ ಸಹ ಜಾರಿ ಮಾಡಲಾಗಿದೆ. ಜತೆಗೆ, ಠಾಣೆಯ ಕಾಂಪೌಂಡ್ ಹಾಗೂ ಪ್ರವೇಶ ದ್ವಾರವನ್ನು ಶಾಮಿಯಾನ ಬಟ್ಟೆಯಿಂದ ಮುಚ್ಚಲಾಗಿದೆ.

'ಠಾಣೆಯಲ್ಲಿರುವ ದರ್ಶನ್ ಅವರಿಗೆ ಐಷಾರಾಮಿ ಸೇವೆ ಒದಗಿಸಲಾಗುತ್ತಿದೆ. ಅವರು ಕೇಳುವ ಊಟವನ್ನೆಲ್ಲ ಪೊಲೀಸರು ತಂದುಕೊಡುತ್ತಿದ್ದಾರೆ. ಜೊತೆಗೆ, ಸೇದಲು ಸಿಗರೇಟ್ ನೀಡುತ್ತಿದ್ದಾರೆ. ಇದನ್ನು ಮರೆಮಾಚಲು ಠಾಣೆಯ ಸುತ್ತಲೂ ಶಾಮಿಯಾನ ಬಟ್ಟೆ ಕಟ್ಟಿದ್ದಾರೆ' ಎಂದು ಸ್ಥಳೀಯರು ದೂರಿದರು.

ಮಹಜರು ನಡೆಸಲು ಕರೆದೊಯ್ದಿದ್ದ ಸಂದರ್ಭದಲ್ಲಿ ಕೆಲ ಆರೋಪಿಗಳು, ಮೊಬೈಲ್ ಬಳಕೆ ಮಾಡಿದ್ದಾರೆ. ಈ ದೃಶ್ಯ ಸಿ.ಸಿ.ಟಿ.ವಿ ಕ್ಯಾಮೆರಾದಲ್ಲಿ ಸೆರೆಯಾಗಿದೆ. ಕೊಲೆ ಪ್ರಕರಣದ ಆರೋಪಿಗಳಿಗೆ ಮೊಬೈಲ್ ನೀಡಿದ್ದವರ ಬಗ್ಗೆ ಕ್ರಮ ಕೈಗೊಳ್ಳಬೇಕೆಂದೂ ಸ್ಥಳೀಯರು ಆಗ್ರಹಿಸುತ್ತಿದ್ದಾರೆ.

ಈ ಪ್ರಕರಣದ ಬಗ್ಗೆ ಪ್ರತಿಕ್ರಿಯೆ ನೀಡಿರುವ ವಿರೋಧ ಪಕ್ಷದ ನಾಯಕ ಆರ್. ಅಶೋಕ, 'ರೇಣುಕಸ್ವಾಮಿ ಹತ್ಯೆ ಮಾಡಿದ್ದ ಆರೋಪಿಗಳಿಗೆ ಪೊಲೀಸರಿಂದ ರಕ್ಷಣೆ ನೀಡಲಾಗುತ್ತಿದೆ. ಅದನ್ನು ಬಿಟ್ಟು ಕಾನೂನು ಕೈಗೆತ್ತಿಕೊಂಡಿರುವುದು ದೊಡ್ಡ ತಪ್ಪು. ಕಾನೂನಿಗಿಂತ ಯಾರೂ ದೊಡ್ಡವರಲ್ಲ. ಈ ಘಟನೆಯನ್ನು ಖಂಡಿಸುತ್ತೇವೆ. ಪೊಲೀಸರು ಸೂಕ್ತ ತನಿಖೆ ನಡೆಸಿ ತಪ್ಪಿತಸ್ಥರಿಗೆ ಶಿಕ್ಷೆ ಆಗುವಂತೆ ನೋಡಿಕೊಳ್ಳಬೇಕು' ಒತ್ತಾಯಿಸಿದರು.

'ದರ್ಶನ್ ಇರಿಸಿರುವ ಪೊಲೀಸ್ ಠಾಣೆಗೆ ಶಾಮಿಯಾನ ಹಾಕಿ ಮುಚ್ಚಿರುವುದು ಖಂಡನೀಯ. ಅಲ್ಲಿ ಮಾಧ್ಯಮಗಳು ಚಿತ್ರೀಕರಣ ಮಾಡದಂತೆ ನಿರ್ಬಂಧ ವಿಧಿಸಿರುವುದು ಸರಿಯಲ್ಲ. ಚಲನಚಿತ್ರ ವಾಣಿಜ್ಯ ಮಂಡಳಿ ಈ ಕುರಿತು ನಿರ್ಧಾರ ತೆಗೆದುಕೊಳ್ಳಬೇಕು. ಮೃತ ವ್ಯಕ್ತಿಯ ಕುಟುಂಬಕ್ಕೆ ಮಾನವೀಯತೆ ನೆಲೆಯಲ್ಲಿ ಸರ್ಕಾರ ಪರಿಹಾರ ನೀಡಬೇಕು' ಎಂದರು.

ಸಂಸದೀಯ ಮತ್ತು ಕಾನೂನು ಸಚಿವ ಎಚ್.ಕೆ. ಪಾಟೀಲ, 'ಪೊಲೀಸ್ ಠಾಣೆಯಲ್ಲಿ ಯಾರೇ ಇದ್ದರೂ ಆರೋಪಿಗಳೇ. ನಟ ದರ್ಶನ್ ಅವರಿಗೆ ವಿಶೇಷ ಸೌಲಭ್ಯಗಳನ್ನು ನೀಡಿಲ್ಲ. ಆರೋಪಿಯನ್ನು ವಿಚಾರಣೆ ಮಾಡಲಾಗುತ್ತಿರುವ ಪೊಲೀಸ್ ಠಾಣೆಯನ್ನು ಟೆಂಟ್ ಅಥವಾ ಶಾಮಿಯಾನ ಹಾಕಿ ಮುಚ್ಚುವುದಕ್ಕೆ ಕಾನೂನಿನಲ್ಲಿ ಅವಕಾಶವಿಲ್ಲ' ಎಂದರು.



ಅನ್ನಪೂರ್ಣೇಶ್ವರಿನಗರ ಪೊಲೀಸ್ ಠಾಣೆಯನ್ನು ಶಾಮಿಯಾನ ಹಾಗೂ ಪರದೆಯಿಂದ ಮುಚ್ಚಲಾಗಿರುವುದು –ಪ್ರಜಾವಾಣಿ ಚಿತ್ರ/ ಎಂ.ಎಸ್.ಮಂಜುನಾಥ್

ಠಾಣೆ ಮುಚ್ಚಲು ಶಾಮಿಯಾನ ಬಳಕೆ: ಬಿಜೆಪಿ ಟೀಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಐಪಿ ಆರೋಪಿಯನ್ನು ಕರೆದುಕೊಂಡು ಬಂದ ತಕ್ಷಣ ಇಡೀ ಠಾಣೆಗೆ ಶಾಮಿಯಾನ ಹಾಕಿ ಮುಚ್ಚಿದ್ದು ಮತ್ತು ಮಾಧ್ಯಮದವರ ಮೇಲೆ ಹಲ್ಲೆ ಮಾಡಿ, ಠಾಣೆ ಆವರಣದಲ್ಲಿ ದಿಗ್ಬಂಧನ ಹಾಕಿರುವುದು ಖಂಡನೀಯ ಎಂದು ಬಿಜೆಪಿ ಪ್ರಧಾನ ಕಾರ್ಯದರ್ಶಿ ಪಿ.ರಾಜೀವ್ ಹೇಳಿದ್ದಾರೆ.

'ಇದು ಕಾಂಗ್ರೆಸ್ ಸರ್ಕಾರ ಆಡಳಿತಕ್ಕೆ ಕೈಗನ್ನಡಿ ಎಂದು ಅವರು ಗುರುವಾರ ಸುದ್ದಿಗೋಷ್ಠಿಯಲ್ಲಿ ಕಿಡಿಕಾರಿದರು.

'ಪೊಲೀಸ್ ಠಾಣೆಗೆ 144ನೇ ಸೆಕ್ಷನ್ ಹಾಕುವುದು ಎಂದರೆ ಪೊಲೀಸ್ ಠಾಣೆ ರಕ್ಷಣೆಯ ಹೊಣೆಯನ್ನು ಖಾಸಗಿಯವರಿಗೆ ಕೊಟ್ಟಂತೆ. ಕಾನೂನು ಮತ್ತು ಸುವ್ಯವಸ್ಥೆ ಸಂಪೂರ್ಣವಾಗಿ ಕುಸಿದು ಹೋಗಿದೆ ಎಂಬುದಕ್ಕೆ ಇದು ನಿದರ್ಶನ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು. ಜನರಿಗೆ ತನಿಖಾ ಸಂಸ್ಥೆ ಮತ್ತು ಪೊಲೀಸ್ ಇಲಾಖೆ ಬಗ್ಗೆ ವಿಶ್ವಾಸ ಕಡಿಮೆ ಆಗಬಾರದು. ಇದು ಪೊಲೀಸ್ ಇಲಾಖೆಯ ಗುರುತರ ಜವಾಬ್ದಾರಿ ಎಂದರು.

ಅಂತಿಮ ವರದಿ ಆಧರಿಸಿ ಕ್ರಮ: ಸುರೇಶ್



ಬೆಂಗಳೂರು: 'ಚಿತ್ರದುರ್ಗದ ರೇಣುಕಸ್ವಾಮಿ ಕೊಲೆ ಪ್ರಕರಣದಲ್ಲಿ ನಟ ದರ್ಶನ್ ಪಾತ್ರದ ಕುರಿತು ಪೊಲೀಸರು ತನಿಖೆ ನಡೆಸುತ್ತಿದ್ದಾರೆ. ತಪ್ಪಿತಸ್ಥರಿಗೆ ಶಿಕ್ಷೆ ಕೊಡುವ ಕೆಲಸವನ್ನು ಅವರು ಮಾಡುತ್ತಾರೆ. ಪ್ರಕರಣದ ಅಂತಿಮ ವರದಿ ಬಂದಾಕ್ಷಣ ಕಲಾವಿದರ ಸಂಘ ಸೇರಿ ಚಿತ್ರರಂಗದ ಅಂಗ ಸಂಸ್ಥೆಗಳ ಪದಾಧಿಕಾರಿಗಳ ಸಭೆ ಕರೆದು ದರ್ಶನ್ ವಿಚಾರದಲ್ಲಿ ಗಟ್ಟಿ ನಿರ್ಧಾರ ತೆಗೆದುಕೊಳ್ಳುತ್ತೇವೆ' ಎಂದು ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ (ಕೆಎಫ್‌ಸಿಸಿ) ಅಧ್ಯಕ್ಷ ಎನ್.ಎಂ.ಸುರೇಶ್ ಹೇಳಿದರು.

ಗುರುವಾರ ನಡೆದ ಕೆಎಫ್‌ಸಿಸಿ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಗಿದೆ. '2011ರಲ್ಲಿ ಸಂಧಾನದ ಮೂಲಕ ದರ್ಶನ್–ವಿಜಯಲಕ್ಷ್ಮಿ ಪ್ರಕರಣವನ್ನು ಸರಿದೂಗಿಸಿದ್ದೆವು. ಆದರೆ ಈಗ ನಡೆದಿರುವುದು ಸಂಧಾನ ನಡೆಸುವಂತಹ ವಿಚಾರವಲ್ಲ. ಆಗಿರುವುದು ಕೊಲೆ. ಹೀಗಾಗಿ ನಾವು ರಾಜಿ ಮಾಡಿಕೊಳ್ಳುವುದಿಲ್ಲ, ಯಾರನ್ನೂ ರಕ್ಷಿಸುವ ಕೆಲಸ ಮಾಡುವುದಿಲ್ಲ. ನಮ್ಮ ನಿರ್ಧಾರವನ್ನು ಕೆಲ ದಿನಗಳ ಕಾಲ ಮುಂದೂಡಿದ್ದೇವೆ. ಶೀಘ್ರದಲ್ಲೇ ಮಂಡಳಿಯ ಪದಾಧಿಕಾರಿಗಳೆಲ್ಲರೂ ರೇಣುಕಸ್ವಾಮಿ ಕುಟುಂಬವನ್ನು ಭೇಟಿಯಾಗಿ ಸಾಂತ್ವನ ಹೇಳಲಿದ್ದೇವೆ. ದರ್ಶನ್ ಅವರ ಒಂದು ಸಿನಿಮಾ ಮುಕ್ಕಾಲು ಭಾಗ ಶೂಟಿಂಗ್ ಮುಗಿದಿದೆ, ಇನ್ನೂ ಮೂರ್ನಾಲ್ಕು ನಿರ್ಮಾಪಕರು ಸಿನಿಮಾ ನಿರ್ಮಾಣಕ್ಕೆ ಸಜ್ಜಾಗಿದ್ದರು. ಇನ್ನೂ ನಾಲ್ಕೈದು ತಿಂಗಳು ದರ್ಶನ್ ಹೊರಗಡೆ ಬರಲು ಸಾಧ್ಯವಿಲ್ಲ. ಕೆಲವರು ಮುಂಗಡ ಹಣ ಕೊಟ್ಟಿದ್ದಾರೆ. ಈ ಹಿನ್ನೆಲೆಯಲ್ಲಿ ಆ ನಿರ್ಮಾಪಕರನ್ನೂ ಕರೆದು ಮಾತುಕತೆ ನಡೆಸುತ್ತೇವೆ' ಎಂದರು.

'ಮೃತ ರೇಣುಕಸ್ವಾಮಿ ಕುಟುಂಬಕ್ಕೆ ಮಾನವೀಯತೆ ನೆಲೆಯಲ್ಲಿ ಆರ್ಥಿಕ ಸಹಾಯ ನೀಡುವ ಕುರಿತು ಆಲೋಚಿಸಿದ್ದೇವೆ. ದರ್ಶನ್ ಅವರನ್ನು ಚಿತ್ರರಂಗದಿಂದ ಬ್ಯಾನ್ ಮಾಡುತ್ತಾರೆ ಎಂಬುದರಲ್ಲಿ ಹುರುಳಿಲ್ಲ. ಆರೋಪ ಸಾಬೀತಾಗಿ, ಶಿಕ್ಷೆಯಾದರೆ ಮತ್ತೊಮ್ಮೆ ಕಾರ್ಯಕಾರಿ ಸಮಿತಿ ಸಭೆ ಸೇರಿ ಚಿತ್ರರಂಗ ಒಗ್ಗಟ್ಟಾಗಿ ಅವರ ಚಿತ್ರಗಳಿಗೆ ಸಹಕಾರ ನೀಡದಿರುವ ಕುರಿತು ನಿರ್ಧಾರ ತೆಗೆದುಕೊಳ್ಳುತ್ತೇವೆ' ಎಂದು ವಾಣಿಜ್ಯ ಮಂಡಳಿ ಗೌರವ ಕಾರ್ಯದರ್ಶಿ ಭಾ.ಮ.ಗಿರೀಶ್ ತಿಳಿಸಿದ್ದಾರೆ.

ಮಗಳನ್ನು ಕೊಂದ ತಾಯಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸುಬ್ರಹ್ಮಣ್ಯಪುರ ಪೊಲೀಸ್ ಠಾಣೆ ವ್ಯಾಪ್ತಿಯ ಮಂಜುನಾಥನಗರದಲ್ಲಿ ಗುರುವಾರ ಮಗುವನ್ನು ತಾಯಿಯೇ ಕತ್ತು ಹಿಸುಕಿ ಕೊಲೆ ಮಾಡಿದ್ದು, ಮಗುವಿನ ಆರೋಗ್ಯದ ಸಮಸ್ಯೆಯಿಂದ ಬೇಸತ್ತು ಈ ಕೃತ್ಯ ಎಸಗಿರುವುದು ಪ್ರಾಥಮಿಕ ತನಿಖೆಯಲ್ಲಿ ಗೊತ್ತಾಗಿದೆ.

ಪ್ರಿತಿಕಾ (3) ಎಂಬ ಮಗು ಮೃತಪಟ್ಟಿದ್ದು, ತಾಯಿ ರಮ್ಯಾ (31) ಅವರನ್ನು ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದರು.

'ಆರೋಪಿ ರಮ್ಯಾ ಅವರ ಪತಿ ವಿದೇಶದ ಖಾಸಗಿ ಕಂಪನಿಯೊಂದರಲ್ಲಿ ಕೆಲಸ ಮಾಡುತ್ತಿದ್ದು, ಅಲ್ಲಿಯೇ ವಾಸವಾಗಿದ್ದಾರೆ. ರಮ್ಯಾ ಮಗಳೊಂದಿಗೆ ಮಂಜುನಾಥ ನಗರದ ಮನೆಯಲ್ಲಿ ವಾಸವಾಗಿದ್ದರು. ಗುರುವಾರ ಮಧ್ಯಾಹ್ನ 12.30ಕ್ಕೆ ಪ್ರಿತಿಕಾಳನ್ನು ದುಪ್ಪಟ್ಟ ಬಳಸಿ, ಕತ್ತು ಹಿಸುಕಿ ಕೊಲೆ ಮಾಡಿದ್ದಾರೆ. ಮಗು ಮೃತಪಟ್ಟ ನಂತರ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದರು. ಮಗು ಮನೆಯಲ್ಲಿಯೇ ಮೃತಪಟ್ಟಿರುವುದನ್ನು ವೈದ್ಯರು ಖಚಿತಪಡಿಸಿದ್ದರು' ಎಂದು ಪೊಲೀಸರು ಹೇಳಿದರು.

'ರಮ್ಯಾ ಅವರು ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದರು. ಆದರೆ, ಇತ್ತೀಚೆಗೆ ಕೆಲಸ ಬಿಟ್ಟಿದ್ದರು. ಮಗಳಿಗೆ ಆರೋಗ್ಯ ಸಮಸ್ಯೆ ಇದ್ದ ಕಾರಣ, ಮಗುವಿನ ಬೆಳವಣಿಗೆಯಾದಂತೆಲ್ಲ ಸಮಸ್ಯೆ ಹೆಚ್ಚಾಗುತ್ತದೆ ಎಂಬ ಕಾರಣಕ್ಕೆ ಸಾಯಿಸಿದ್ದಾರೆ' ಎಂದು ಮೂಲಗಳು ತಿಳಿಸಿವೆ.

ಕಳವು: ಆರೋಪಿಗಳಿಗೆ ಥಳಿತ, ಒಬ್ಬ ಸಾವು

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ನಿರ್ಮಾಣ ಹಂತದ ಕಟ್ಟಡದಲ್ಲಿ ಕಬ್ಬಿಣ ಕಳ್ಳತನ ಮಾಡಲು ಬಂದಿದ್ದ ಇಬ್ಬರನ್ನು ಕೆಲಸಗಾರರೇ ಹಿಡಿದು ಥಳಿಸಿದ್ದು, ಒಬ್ಬ ಸ್ಥಳದಲ್ಲಿಯೇ ಮೃತಪಟ್ಟಿದ್ದಾನೆ. ಮತ್ತೊಬ್ಬನ ಮೇಲೆ ತೀವ್ರವಾಗಿ ಹಲ್ಲೆ ನಡೆದಿರುವ ಘಟನೆ ಕೋಣನಕುಂಟೆ ಪೊಲೀಸ್ ಠಾಣೆಯ ವ್ಯಾಪ್ತಿಯಲ್ಲಿ ಗುರುವಾರ ನಡೆದಿದೆ.

ಮೃತಪಟ್ಟವನು ಅಂಜನಾಪುರದ ನಿವಾಸಿ ಸಲ್ಮಾನ್. ಗಾಯಗೊಂಡ ಸಲೀಂ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾನೆ' ಎಂದು ಪೊಲೀಸರು ತಿಳಿಸಿದ್ದಾರೆ.

'ಕೋಣನಕುಂಟೆಯ ಆರ್‌ಬಿಐ ಲೇಔಟ್‌ನಲ್ಲಿ ಕಟ್ಟಡ ಕಾಮಗಾರಿ ನಡೆಯುತ್ತಿತ್ತು. ಸ್ನೇಹಿತರಾಗಿದ್ದ ಸಲ್ಮಾನ್ ಹಾಗೂ ಸಲೀಂ ಗುರುವಾರ ನಸುಕಿನಲ್ಲಿ ನಿರ್ಮಾಣ ಹಂತದ ಕಟ್ಟದಲ್ಲಿದ್ದ ಕಬ್ಬಿಣ ಹಾಗೂ ಕಟ್ಟಡ ಸಾಮಗ್ರಿಗಳನ್ನು ಕಳ್ಳತನ ಮಾಡುತ್ತಿದ್ದರು. ಅದೇ ಕಟ್ಟಡದ ಐವರು ಕೆಲಸಗಾರರು ಸಲೀಂ ಹಾಗೂ ಸಲ್ಮಾನ್‌ರನ್ನು ಹಿಡಿದು ಕಟ್ಟಿ ಹಾಕಿ, ದೊಣ್ಣೆಯಿಂದ ಹಲ್ಲೆ ಮಾಡಿದ್ದಾರೆ.

ಈ ಬಗ್ಗೆ ಕೊಲೆ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಳ್ಳಲಾಗಿದೆ' ಎಂದು ಪೊಲೀಸರು ತಿಳಿಸಿದ್ದಾರೆ.

ಸುಸ್ಥಿರ ವಿಧಾನದಲ್ಲಿ ಅಣಬೆ ಕೃಷಿ ಮಾಡಿ

ರಾಷ್ಟ್ರೀಯ ಕಾರ್ಯಾಗಾರದಲ್ಲಿ ಸಂಜಯ್ ಕುಮಾರ್ ಸಿಂಗ್

ಪ್ರಜಾವಾಣಿ ವಾರ್ತೆ



ಐಐಎಚ್‌ಆರ್‌ನಲ್ಲಿ ಗುರುವಾರದಿಂದ ಆರಂಭವಾದ ಅಣಬೆ ಕುರಿತ ಎರಡು ದಿನಗಳ ರಾಷ್ಟ್ರೀಯ ಕಾರ್ಯಾಗಾರದಲ್ಲಿ ಐಸಿಎಆರ್‌ನ ತೋಟಗಾರಿಕೆ ವಿಭಾಗದ ಉಪ ಮಹಾ ನಿರ್ದೇಶಕ ಸಂಜಯ್ ಕುಮಾರ್ ಸಿಂಗ್ ಮಾತನಾಡಿದರು. ಐಐಎಚ್‌ಆರ್‌ನ ಬೆಳೆ ಸಂರಕ್ಷಣಾ ವಿಭಾಗದ ಮುಖ್ಯಸ್ಥ ಎಸ್‌.ಶ್ರೀರಾಮ್, ಅಣಬೆ ವಿಜ್ಞಾನಿ ಆರ್‌.ಪಿ. ತಿವಾರಿ, ಐಐಎಚ್‌ಆರ್ ನಿರ್ದೇಶಕ ಟಿ.ಕೆ. ಬೆಹರಾ, ಸೋಲಾನ್‌ನ ಅಣಬೆ ಸಂಶೋಧನಾ ನಿರ್ದೇಶನಾಲಯದ ನಿರ್ದೇಶಕ ಶರ್ಮಾ, ಹಣ್ಣಿನ ಬೆಳೆಗಳ ರಾಷ್ಟ್ರೀಯ ಸಂಯೋಜಕ ಪ್ರಕಾಶ್ ಪಾಟೀಲ್, ಐಐಎಚ್‌ಆರ್ ವಿಜ್ಞಾನಿ ಚಂದ್ರಶೇಖರ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಬೆಂಗಳೂರು: ದೇಶದಲ್ಲಿ ಅಣಬೆ ಬೇಡಿಕೆ ಮತ್ತು ಪೂರೈಕೆಯಲ್ಲಿ ಭಾರಿ ಅಂತರವಿದ್ದು, ಇದನ್ನು ಸರಿದೂಗಿಸಲು ಅಣಬೆ ಉತ್ಪಾದನೆಗೆ ಹೆಚ್ಚು ಒತ್ತು ನೀಡುವ ಅಗತ್ಯವಿದೆ ಎಂದು ನವದೆಹಲಿಯ ಭಾರತೀಯ ಕೃಷಿ ಸಂಶೋಧನಾ ಪರಿಷತ್ತಿನ (ಐಸಿಎಆರ್) ತೋಟಗಾರಿಕೆ ವಿಭಾಗದ ಉಪ ಮಹಾ ನಿರ್ದೇಶಕ ಸಂಜಯ್ ಕುಮಾರ್ ಸಿಂಗ್ ಅಭಿಪ್ರಾಯಪಟ್ಟರು.

ಹೆಸರಘಟ್ಟದ ಭಾರತೀಯ ತೋಟಗಾರಿಕೆ ಸಂಶೋಧನಾ ಸಂಸ್ಥೆಯಲ್ಲಿ (ಐಐಎಚ್‌ಆರ್) ಗುರುವಾರ ಆರಂಭವಾದ ಎರಡು ದಿನಗಳ ಅಣಬೆ ಕುರಿತ ಅಖಿಲ ಭಾರತ ಸಂಯೋಜಿತ ಸಂಶೋಧನಾ ಯೋಜನೆಯ 26ನೇ ವಾರ್ಷಿಕ ಕಾರ್ಯಾಗಾರ ಉದ್ಘಾಟಿಸಿ ಅವರು ಮಾತನಾಡಿದರು.

'ಸುಸ್ಥಿರ ವಿಧಾನದ ಮೂಲಕ ಅಣಬೆ ಕೃಷಿ ಕೈಗೊಳ್ಳಲು ಉತ್ತೇಜಿಸಬೇಕು. ಅಣಬೆ ಉತ್ಪಾದನೆಗೆ ಕೃಷಿ ತ್ಯಾಜ್ಯಗಳನ್ನು ಮಾಧ್ಯಮವಾಗಿ ಬಳಸಿಕೊಳ್ಳಬೇಕು' ಎಂದು ಸಲಹೆ ನೀಡಿದರು.

ಐಐಎಚ್‌ಆರ್ ನಿರ್ದೇಶಕ ಟಿ.ಕೆ. ಬೆಹೆರಾ, 'ಅಣಬೆ ಉತ್ಪಾದನೆಯಲ್ಲಿ ಸುಧಾರಣೆ ತರಲು ನೂತನ ತಂತ್ರಜ್ಞಾನ ಹಾಗೂ ಸಾಧನಗಳನ್ನು ಬಳಸಿಕೊಳ್ಳಬೇಕು. ಈ ತಂತ್ರಜ್ಞಾನಗಳನ್ನು ಕೃಷಿ ವಿಜ್ಞಾನ ಕೇಂದ್ರಗಳ ಜಾಲದ ಮೂಲಕ ಹಳ್ಳಿಗಳಿಗೆ ತಲುಪಿಸಿ, ಗ್ರಾಮೀಣ ಯುವಕರ ಆದಾಯ ಹೆಚ್ಚಿಸಲು ಸಾಧ್ಯವಿದೆ' ಎಂದು ಅಭಿಪ್ರಾಯಪಟ್ಟರು.

ಎರಡು ದಿನಗಳ ಕಾರ್ಯಾಗಾರದಲ್ಲಿ ದೇಶದ ವಿವಿಧ ಭಾಗಗಳಿಂದ 40 ಅಣಬೆ ಸಂಶೋಧಕರು ಪಾಲ್ಗೊಂಡಿದ್ದಾರೆ.

ಹೊಸ ಅಣಬೆಯ ಜರ್ಮ್‌ಪ್ಲಾಸಂ, ಅಣಬೆ ಬೆಳೆ ಉತ್ಪಾದನೆ, ಸುಧಾರಣೆ, ಕೃಷಿ ವಿಸ್ತರಣೆಯಲ್ಲಿನ ಇತ್ತೀಚೆಗಿನ ಬೆಳವಣಿಗೆಯ ಕುರಿತು ಚರ್ಚೆ ನಡೆಯಲಿದೆ. ವಿಜ್ಞಾನಿಗಳು ಮತ್ತು ರೈತರೊಂದಿಗೆ ಸಂವಾದ ನಡೆಯಲಿದೆ. 50 ಯಶಸ್ವಿ ಅಣಬೆ ಕೃಷಿಕರು ಮತ್ತು ಅಣಬೆ ಉದ್ಯಮಿಗಳು ವಿಜ್ಞಾನಿಗಳೊಂದಿಗೆ ಚರ್ಚಿಸಲಿದ್ದಾರೆ.

ಯಡಿಯೂರಪ್ಪ ಬಂಧನಕ್ಕೆ ಆಗ್ರಹ

ಪ್ರಜಾವಾಣಿ ವಾರ್ತೆ


ಬೆಂಗಳೂರು: ಪೋಕ್ಸೊ ಪ್ರಕರಣ ದಾಖಲಾಗಿ ಮೂರು ತಿಂಗಳಾದರೂ ಬಿಜೆಪಿ ಕೇಂದ್ರ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ ಅವರನ್ನು ಬಂಧಿಸದ ರಾಜ್ಯ ಸರ್ಕಾರ ಹಾಗೂ ಪೊಲೀಸರ ನಡೆಯನ್ನು ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ ಖಂಡಿಸಿದೆ.

ಲೈಂಗಿಕ ಕಿರುಕುಳದ ವಿರುದ್ಧ ಹೋರಾಟ ನಡೆಸಲು ತಾಯಿಯೊಂದಿಗೆ ನೆರವು ಕೇಳಿಕೊಂಡು ಬಂದ ಬಾಲಕಿ ಜತೆ ಯಡಿಯೂರಪ್ಪ ಅನುಚಿತವಾಗಿ ವರ್ತಿಸಿದ್ದಾರೆ. ಮಾರ್ಚ್ 4ರಂದೇ ಸದಾಶಿವನಗರ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ. ಸಂತ್ರಸ್ತ ಬಾಲಕಿ ನ್ಯಾಯಾಲಯದಲ್ಲಿ ಸ್ವಯಂಪ್ರೇರಿತ ಹೇಳಿಕೆ ನೀಡಿದ್ದಾಳೆ. ಸಂಬಂಧಿಸಿದ ದಾಖಲೆಗಳನ್ನೂ ಸಿಐಡಿಗೆ ನೀಡಲಾಗಿದೆ. ಆದರೂ ಆರೋಪಿಯನ್ನು ಬಂಧಿಸಲಿಲ್ಲ ಎಂದು ಸಂಘಟನೆ ಅಧ್ಯಕ್ಷೆ ಮೀನಾಕ್ಷಿ ಬಾಳಿ, ಪ್ರಧಾನ ಕಾರ್ಯದರ್ಶಿ ದೇವಿ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಮಗಳಿಗೆ ನ್ಯಾಯ ಕೊಡಿಸುವ ಸಲುವಾಗಿ ಅಲೆದಾಡಿದ ಮಹಿಳೆ ಅನುಮಾನಾಸ್ಪದವಾಗಿ ಮೃತಪಟ್ಟಿದ್ದಾರೆ. ಈ ಕುರಿತು ತನಿಖೆಗೆ ಒತ್ತಾಯಿಸಿ ಹುಳಿಮಾವು ಠಾಣೆಗೆ ಸಂಘಟನೆ ದೂರು ನೀಡಿದೆ ಎಂದು ಹೇಳಿದ್ದಾರೆ.

ಸಂಕ್ಷಿಪ್ತ ಸುದ್ದಿ

ಕೇಶವ್ ವೆಂಕಟರಾಘವನ್‌ಗೆ 'ಬಾರ್ಟನ್ ಪ್ರಶಸ್ತಿ'



ಬೆಂಗಳೂರು: ಭಾರತೀಯ ವ್ಯಂಗ್ಯ ಚಿತ್ರಕಾರರ ಸಂಸ್ಥೆ ನೀಡುವ 2024ನೇ ಸಾಲಿನ 'ಬಾರ್ಟನ್ ಜೀವಮಾನ ಸಾಧನೆ ಪ್ರಶಸ್ತಿ'ಗೆ ವ್ಯಂಗ್ಯಚಿತ್ರಕಾರ ಕೇಶವ್ ವೆಂಕಟರಾಘವನ್ ಅವರು ಆಯ್ಕೆಯಾಗಿದ್ದಾರೆ.

ಪ್ರಶಸ್ತಿಯು ಬೆಳ್ಳಿ ಸ್ಮರಣಿಕೆಯನ್ನು ಒಳಗೊಂಡಿದೆ. ಜುಲೈ 6ರಂದು ನಡೆಯಲಿರುವ ಭಾರತೀಯ ವ್ಯಂಗ್ಯಚಿತ್ರ ಗ್ಯಾಲರಿಯ 17ನೇ ವಾರ್ಷಿಕೋತ್ಸವದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು. ವಾರ್ಷಿಕೋತ್ಸವದಲ್ಲಿ ಕೇಶವ್ ವೆಂಕಟರಾಘವನ್ ಅವರ ವ್ಯಂಗ್ಯ ಚಿತ್ರ ಪ್ರದರ್ಶನವನ್ನು ಏರ್ಪಡಿಸಲಾಗಿದೆ ಎಂದು ಸಂಸ್ಥೆ ಪ್ರಕಟಣೆಯಲ್ಲಿ ತಿಳಿಸಿದೆ.

1961ರಲ್ಲಿ ಬೆಂಗಳೂರಿನಲ್ಲಿ ಜನಿಸಿದ ಕೇಶವ್ ವೆಂಕಟರಾಘವನ್ ಅವರು, ಹೈದರಾಬಾದ್, ಚೆನ್ನೈನಲ್ಲಿ ವಿದ್ಯಾಭ್ಯಾಸ ಮಾಡಿದ್ದಾರೆ. 1982ರಲ್ಲಿ ತಮಿಳು ಪತ್ರಿಕೆ 'ಆನಂದ್ ವಿಕಟನ್'ಗಾಗಿ ಸಂಗೀತ ಸಾಧಕರ ಚಿತ್ರಗಳನ್ನು ಬರೆಯಲು ಆರಂಭಿಸಿದರು. ಮುಂದೆ ರಾಷ್ಟ್ರೀಯ, ಅಂತರರಾಷ್ಟ್ರೀಯ ವ್ಯಂಗ್ಯ ಚಿತ್ರಕಾರರಿಂದ ಪ್ರೇರಣೆಗೊಂಡು 'ರಾಜಕೀಯ ವ್ಯಂಗ್ಯಚಿತ್ರ' ಬರೆಯಲು ಆರಂಭಿಸಿದರು. 1987ರಿಂದ 2019 ರ ವರೆಗೆ 'ದಿ ಹಿಂದೂ' ಪತ್ರಿಕೆಯಲ್ಲಿ ವ್ಯಂಗ್ಯ ಚಿತ್ರಕಾರರಾಗಿ ಕಾರ್ಯನಿರ್ವಹಿಸಿದ್ದಾರೆ.

ಉದ್ಯಾನ, ರಸ್ತೆ, ವೃತ್ತ ದತ್ತು: ಅವಕಾಶ

ಬೆಂಗಳೂರು: ನಗರ ಉದ್ಯಾನಗಳು, ರಸ್ತೆ ವಿಭಜಕಗಳು ಮತ್ತು ವೃತ್ತಗಳನ್ನು ಖಾಸಗಿ ವ್ಯಕ್ತಿಗಳು, ಸಂಘ ಸಂಸ್ಥೆಗಳು ದತ್ತು ಪಡೆದುಕೊಂಡು, ನಿರ್ವಹಣೆ ಮಾಡಲು ಬಿಬಿಎಂಪಿ ಮತ್ತೆ ಅವಕಾಶ ಮಾಡಿಕೊಟ್ಟಿದೆ. ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆ (ಸಿಎಸ್‌ಆರ್) ಮತ್ತು ದತ್ತು ನಿಯಮಗಳಡಿ 'ನಮ್ಮ ಬೆಂಗಳೂರು-ನನ್ನ ಕೊಡುಗೆ' ಯಡಿ ಪಾಲಿಕೆಯ ಅಧಿಕೃತ ವೆಬ್‌ಸೈಟ್ https://www. bbmp.gov.in ನಲ್ಲಿ ಜೂನ್ 18ರಿಂದ ನೋಂದಾಯಿಸಿಕೊಳ್ಳಬಹುದು ಎಂದು ಅರಣ್ಯ, ಪರಿಸರ ಮತ್ತು ಹವಾಮಾನ ವೈಪರೀತ್ಯ ನಿರ್ವಹಣೆಯ ವಿಶೇಷ ಆಯುಕ್ತೆ ಪ್ರೀತಿ ಗೆಹಲೋತ್ ತಿಳಿಸಿದ್ದಾರೆ.

254 'ನಮ್ಮ ಕ್ಲಿನಿಕ್'ಗೆ ಸ್ಥಳ ಗುರುತಿಸಿ: ದಿನೇಶ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಹೊಸದಾಗಿ 254 'ನಮ್ಮ ಕ್ಲಿನಿಕ್' ಆರಂಭಿಸಲು ಆರೋಗ್ಯ ಇಲಾಖೆ ತೀರ್ಮಾನಿಸಿದ್ದು, ಅಗತ್ಯ ಸ್ಥಳ ಗುರುತಿಸುವಂತೆ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಅಧಿಕಾರಿಗಳಿಗೆ ಸೂಚಿಸಿದರು.

ಆರೋಗ್ಯ ಇಲಾಖೆ ಅಧಿಕಾರಿಗಳೊಂದಿಗೆ ವಿವಿಧ ಆರೋಗ್ಯ ಯೋಜನೆಗಳ ಪ್ರಗತಿ ಪರಿಶೀಲನೆ ಸಭೆ ನಡೆಸಿದ ಸಚಿವರು, ಹೊಸದಾಗಿ 'ನಮ್ಮ ಕ್ಲಿನಿಕ್'ಗಳನ್ನು ಆರಂಭಿಸಲು ಸ್ಥಳ ಗುರುತಿಸಿ, 15 ದಿನಗಳೊಳಗೆ ವರದಿ ಸಲ್ಲಿಸುವಂತೆ ಆದೇಶಿಸಿದರು.

ಸ್ಥಳ ಗುರುತಿಸುವ ಕಾರ್ಯವನ್ನು ಶೀಘ್ರ ಪೂರ್ಣಗೊಳಿಸಿ, ಸಚಿವ ಸಂಪುಟದ ಒಪ್ಪಿಗೆ ಪಡೆಯುವ ನಿಟ್ಟಿನಲ್ಲಿ ಕಾರ್ಯಪ್ರವೃತ್ತರಾಗಬೇಕು. ಸ್ಥಳ ಗುರುತಿಸುವಾಗ ಜೈಲು, ಬಸ್ ನಿಲ್ದಾಣಗಳಂತಹ ಸಾರ್ವಜನಿಕ ಸ್ಥಳಗಳಿಗೆ ಆದ್ಯತೆ ನೀಡುವಂತೆ ನಿರ್ದೇಶನ ನೀಡಿದರು.



ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಅವರು ಇಲಾಖೆಯ ಅಧಿಕಾರಿಗಳೊಂದಿಗೆ ಗುರುವಾರ ವಿವಿಧ ಯೋಜನೆಗಳ ಪ್ರಗತಿ ಪರಿಶೀಲನೆ ನಡೆಸಿದರು

ಜುಲೈ 26ಕ್ಕೆ ಇಎಲ್‌ಸಿಐಎ ಟೆಕ್ ಶೃಂಗಸಭೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಲೆಕ್ಟ್ರಾನಿಕ್ಸ್ ಸಿಟಿ ಇಂಡಸ್ಟ್ರಿಯಲ್ ಅಸೋಸಿಯೇಷನ್‌ನಿಂದ (ಇಎಲ್‌ಸಿಐಎ) ಜುಲೈ 26ರಂದು 'ಇಎಲ್‌ಸಿಐಎ ಟೆಕ್ ಶೃಂಗಸಭೆ' ಆಯೋಜಿಸಲಾಗಿದೆ.

ಎಲೆಕ್ಟ್ರಾನಿಕ್ಸ್ ಸಿಟಿಯ ದಿ ಒಟೆರಾ ಹೋಟೆಲ್‌ನಲ್ಲಿ ಸಭೆ ನಡೆಯಲಿದೆ. ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ, ವಾಣಿಜ್ಯ ಮತ್ತು ಕೈಗಾರಿಕೆ ಸೇರಿ ವಿವಿಧ ಕ್ಷೇತ್ರಗಳಲ್ಲಿ ಅಭೂತಪೂರ್ವ ಸಾಧನೆ ಮಾಡಿರುವ ಬಗ್ಗೆ ಉದ್ದಿಮೆದಾರರು ತಮ್ಮ ಅನುಭವ ಹಂಚಿಕೊಳ್ಳಲು ಈ ಶೃಂಗಸಭೆಯು ವೇದಿಕೆ ಕಲ್ಪಿಸಲಿದೆ ಎಂದು ಅಸೋಸಿಯೇಷನ್ ತಿಳಿಸಿದೆ.

ಜಗತ್ತಿನಲ್ಲಿರುವ ಹೊಸ ತಂತ್ರಜ್ಞಾನಕ್ಕೆ ಸಂಬಂಧಿಸಿದಂತೆಯೂ ಉದ್ದಿಮೆದಾರರು ಅನುಭವಗಳನ್ನು ವಿನಿಮಯ ಮಾಡಿಕೊಳ್ಳಬಹುದಾಗಿದೆ. ನಾವೀನ್ಯ ಹಾಗೂ ಉದ್ಯಮಶೀಲತೆಗೆ ಉತ್ತೇಜನ ನೀಡಲು ಇದು ವೇದಿಕೆಯಾಗಿದೆ ಎಂದು ಹೇಳಿದೆ.

'ಉದ್ಯಮ ವಲಯದಲ್ಲಿನ ಹೊಸ ಅನ್ವೇಷಣೆ, ಸಹಭಾಗಿತ್ವ ಹಾಗೂ ಸಹಕಾರಕ್ಕೆ ಈ ಶೃಂಗಸಭೆಯು ವೇದಿಕೆ ಕಲ್ಪಿಸಲಿದ್ದು, ಟೆಕ್ ವಲಯದಲ್ಲಿ ಹೊಸ ಹೆಗ್ಗುರುತು ಮೂಡಿಸಲಿದೆ' ಎಂದು ಇಎಲ್‌ಸಿಐಎ ಅಧ್ಯಕ್ಷ ಶ್ರೀರಾಮ್ ಕುಮಾರ್ ತಿಳಿಸಿದ್ದಾರೆ.

ಎಲೆಕ್ಟ್ರಾನಿಕ್ಸ್ ಸಿಟಿಯಲ್ಲಿ ಮೂಲ ಸೌಕರ್ಯ ನಿರ್ವಹಣೆಗೆ ಸಂಬಂಧಿಸಿದ ಕಳೆದ ಎರಡು ದಶಕದಿಂದಲೂ ಈ ಅಸೋಸಿಯೇಷನ್ ಕಾರ್ಯ ನಿರ್ವಹಿಸುತ್ತಿದೆ.

ಆಸಕ್ತರು ಶೃಂಗಸಭೆಯ ಬಗ್ಗೆ ಹೆಚ್ಚಿನ ಮಾಹಿತಿಗೆ ವೆಬ್‌ಸೈಟ್ www.elciatechsummit.in ಸಂಪರ್ಕಿಸಬಹುದು.

ಸಿನಿಮಾ ಪುರವಣಿ ಓದಿರಿ

ಸಚಿವ ಸಂಪುಟ ಸಭೆಯಲ್ಲಿ ವಿವಿಧ ಇಲಾಖೆಗಳ ಟೆಂಡರ್‌ಗಳ ಪ್ರಕ್ರಿಯೆ ಸ್ಥಿತಿಗತಿ ಅವಲೋಕನ

ಜನಸ್ನೇಹಿ ಆಡಳಿತ: ಸಿದ್ದರಾಮಯ್ಯ ತಾಕೀತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಡಳಿತದಲ್ಲಿ ಬಿಗಿ ತಂದು ಸರ್ಕಾರವನ್ನು ಇನ್ನಷ್ಟು ಜನಸ್ನೇಹಿಯಾಗಿಸಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಗುರುವಾರ ನಡೆದ ಸಚಿವ ಸಂಪುಟ ಸಭೆಯಲ್ಲಿ ಸಚಿವ ಸಹೋದ್ಯೋಗಿಗಳಿಗೆ ಮತ್ತು ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು.

ಲೋಕಸಭಾ ಚುನಾವಣೆ ಬಳಿಕ ನಡೆದ ಮೊದಲ ಸಚಿವ ಸಂಪುಟ ಸಭೆಯ ಕಾರ್ಯಸೂಚಿಯಲ್ಲಿ ಹೆಚ್ಚು ವಿಷಯಗಳಿಲ್ಲದಿದ್ದರೂ ಆಡಳಿತ ಸುಧಾರಣೆ ಕುರಿತು ವಿಸ್ತೃತ ಚರ್ಚೆ ನಡೆಯಿತು ಎಂದು ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್‌.ಕೆ.ಪಾಟೀಲ ಹೇಳಿದರು.

ಆಡಳಿತವನ್ನು ಚುರುಕುಗೊಳಿಬೇಕು. ಜನರಿಗೆ ಅನಗತ್ಯ ತೊಂದರೆ ಆಗುವುದನ್ನು ತಪ್ಪಿಸಲು ಎಲ್ಲ ಕೆಲಸಗಳನ್ನು ತ್ವರಿತಗತಿಯಲ್ಲಿ ನಿರ್ವಹಿಸಬೇಕು ಎಂದು ಹೇಳಿದ ಸಿದ್ದರಾಮಯ್ಯ ಅವರು ಅದಕ್ಕೆ ಅಗತ್ಯ ಮಾರ್ಗದರ್ಶನ


ಸಿದ್ದರಾಮಯ್ಯ

ಮತ್ತು ನಿರ್ದೇಶನವನ್ನೂ ನೀಡಿದರು. ಜನತಾದರ್ಶನವನ್ನು ನಿಯಮಿತವಾಗಿ ನಡೆಸಬೇಕು. ಜನರ ಅಹವಾಲುಗಳು ಮತ್ತು ಬೇಡಿಕೆಗಳನ್ನು ನಿರ್ಲಕ್ಷಿಸದೇ ಗಂಭೀರವಾಗಿ ತೆಗೆದುಕೊಂಡು ಅವುಗಳನ್ನು ಈಡೇರಿಸುವ ಪ್ರಯತ್ನ ಮಾಡಬೇಕು ಎಂದು ಅವರು ಸಲಹೆ ನೀಡಿದ್ದಾಗಿ ಪಾಟೀಲ ಹೇಳಿದರು.

‘ಈ ಹಂತದಲ್ಲಿ ಆಡಳಿತ ಬಿಗಿ ಮಾಡುವ ಬಗ್ಗೆ ಸುದೀರ್ಘ ಚರ್ಚೆಯ ಅಗತ್ಯವೇನು’ ಎಂದು ಸುದ್ದಿಗಾರರು ಪ್ರಶ್ನಿಸಿದಾಗ, ಒಂದು ಚುನಾವಣೆಯಿಂದ ಮತ್ತೊಂದು ಚುನಾವಣೆ ಮಧ್ಯೆ ಆಡಳಿತ ಹೇಗೆ ನಡೆದಿದೆ ಎಂಬುದು ಫಲಿತಾಂಶದಲ್ಲಿ ವ್ಯಕ್ತವಾಗುತ್ತದೆ. ಈ ಹಿನ್ನೆಲೆಯಲ್ಲಿ ವಿಷಯ ಪ್ರಸ್ತಾಪ ಆಯಿತು ಎಂದು ಪಾಟೀಲ ಹೇಳಿದರು.

ಟೆಂಡರ್‌ಗಳ ಅವಲೋಕನ: 2023ರ ನವೆಂಬರ್ 23ರಿಂದ 2024ರ ಮಾರ್ಚ್ 14ರವರೆಗೆ ವಿವಿಧ ಇಲಾಖೆಗಳಲ್ಲಿ ಒಟ್ಟು 147 ಆಡಳಿತಾತ್ಮಕ ಮಂಜೂರಾತಿ ನೀಡಲಾಗಿತ್ತು. ಇವುಗಳ ಸ್ಥಿತಿಗತಿಯನ್ನು ಸಂಪುಟ ಸಭೆಯಲ್ಲಿ ಅವಲೋಕಿಸಲಾಯಿತು ಎಂದು ಅವರು ಹೇಳಿದರು.

ಈ ಪೈಕಿ 94 ಪ್ರಸ್ತಾವಗಳಿಗೆ ಟೆಂಡರ್ ಆಹ್ವಾನಿಸಲಾಗಿದ್ದು, 19 ಟೆಂಡರ್ ಪ್ರಸ್ತಾವಗಳು ಪರಿಶೀಲನೆ ಹಂತದಲ್ಲಿವೆ. 18 ಪ್ರಸ್ತಾವಗಳಿಗೆ ಕಾರ್ಯಾದೇಶ ನೀಡಲಾಗಿದೆ. 7 ಕಾಮಗಾರಿಗಳು ಮುಕ್ತಾಯಗೊಂಡಿವೆ. 53 ಪ್ರಸ್ತಾಪಗಳಿಗೆ ಟೆಂಡರ್ ಕರೆಯಲು ಬಾಕಿ ಇವೆ ಎಂದು ಪಾಟೀಲ ಅವರು ತಿಳಿಸಿದರು.

2025ರ ಫೆ.12ರಿಂದ ‘ಇನ್ವೆಸ್ಟ್ ಕರ್ನಾಟಕ’

- 2025ರ ಫೆಬ್ರುವರಿ 12ರಿಂದ 14ರವರೆಗೆ ಬೆಂಗಳೂರು ಅರಮನೆ ಮೈದಾನದಲ್ಲಿ ‘ಇನ್ವೆಸ್ಟ್ ಕರ್ನಾಟಕ 2025’ ಜಾಗತಿಕ ಬಂಡವಾಳ ಹೂಡಿಕೆದಾರರ ಸಮಾವೇಶ ಆಯೋಜಿಸುವ ಸಂಬಂಧ ಸಭೆಯಲ್ಲಿ ನಿರ್ಣಯ ತೆಗೆದುಕೊಳ್ಳಲಾಗಿದೆ. ಈಗಾಗಲೇ ₹75 ಕೋಟಿ ಒದಗಿಸಲಾಗಿದ್ದು, ₹15 ಕೋಟಿ ಹೆಚ್ಚುವರಿ ಅನುದಾನ ಒದಗಿಸಲು ಅನುಮೋದನೆ ನೀಡಲಾಗಿದೆ.
- ಬಂಡವಾಳ ಹೂಡಿಕೆ ಆಕರ್ಷಣೆಗಾಗಿ ನಾಲೆಜ್ ಪಾರ್ಟ್‌ನರ್ ನೇಮಕ ಮಾಡಲು ಟೆಂಡರ್ ಕರೆದಿದ್ದು, ಮೆ. ಬೋಸ್ಟನ್ ಕನ್ಸಲ್ಟಂಟ್ ಅವರಿಗೆ ಅನುಮೋದನೆ ನೀಡಲಾಗಿದೆ.
- ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ ಮತ್ತು ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಗಳಿಗೆ ಒಟ್ಟು 112 ಹೊಸ ಪೂರ್ಣ ಕವಚ ನಿರ್ಮಿತ ಬಿಎಸ್‌–4 ವೇಗದೂತ ಬಸ್‌ಗಳನ್ನು ₹46.48 ಕೋಟಿ ಅಂದಾಜು ಮೊತ್ತದಲ್ಲಿ ಖರೀದಿಸಲು ಅನುಮೋದನೆ ನೀಡಲಾಗಿದೆ. 62 ಹೊಸ ಬಸ್‌ಗಳನ್ನು ಖರೀದಿಸಲು 50 ಬಸ್‌ಗಳನ್ನು ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ನಿಗಮದಿಂದ ಕಲ್ಯಾಣ ಕರ್ನಾಟಕ ಸಾರಿಗೆ ನಿಗಮಕ್ಕೆ ವರ್ಗಾಯಿಸಲು ಒಪ್ಪಿಗೆ ಕೊಡಲಾಗಿದೆ.
- ಉತ್ತರ ಕನ್ನಡ ಜಿಲ್ಲೆ ಭಟ್ಕಳದಲ್ಲಿ ₹12 ಕೋಟಿ ವೆಚ್ಚದಲ್ಲಿ ನಾಲ್ಕು ಕೋರ್ಟ್ ಹಾಲ್‌ಗಳ ನಿರ್ಮಾಣಕ್ಕೆ ಒಪ್ಪಿಗೆ ನೀಡಲಾಗಿದೆ.

ವೇತನ ಪರಿಷ್ಕರಣೆ: ನಿರ್ಣಯವಿಲ್ಲ

ಏಳನೇ ವೇತನ ಆಯೋಗದ ಶಿಫಾರಸಿನ ಅನುಸಾರ ರಾಜ್ಯ ಸರ್ಕಾರಿ ನೌಕರರ ವೇತನ ಪರಿಷ್ಕರಣೆ ವಿಷಯದ ಬಗ್ಗೆ ಸಭೆಯಲ್ಲಿ ಚರ್ಚೆ ಆಯಿತು. ಆದರೆ, ಯಾವುದೇ ನಿರ್ಣಯವನ್ನು ತೆಗೆದುಕೊಳ್ಳಲಿಲ್ಲ ಎಂದು ಸಚಿವ ಎಚ್‌.ಕೆ. ಪಾಟೀಲ ಹೇಳಿದರು.

ವಿಧಾನಮಂಡಲ ಅಧಿವೇಶನ ನಡೆಸಲು ಸಭೆಯಲ್ಲಿ ಒಲವು ವ್ಯಕ್ತವಾಗಿದ್ದು, ಮುಂದಿನ ಸಚಿವ ಸಂಪುಟ ಸಭೆಯಲ್ಲಿ ಈ ಕುರಿತು ತೀರ್ಮಾನ ತೆಗೆದುಕೊಳ್ಳಲು ತೀರ್ಮಾನಿಸಲಾಯಿತು ಎಂದು ಅವರು ಹೇಳಿದರು.

‘ಮುಖ್ಯವಾಹಿನಿಗೆ ಬಾರದ ಅಲ್ಪಸಂಖ್ಯಾತರು’

ಕಾರವಾರ: ‘ಕಾಂಗ್ರೆಸ್‌ನ ತುಷ್ಟೀಕರಣದ ಫಲವಾಗಿ ಇಂದಿಗೂ ಅಲ್ಪಸಂಖ್ಯಾತರು ರಾಷ್ಟ್ರೀಯ ಮುಖ್ಯವಾಹಿನಿಗೆ ಬಂದಿಲ್ಲ. ಅವರು ಮುಂಚೂಣಿಗೆ ಬಂದು ರಾಷ್ಟ್ರೀಯ ವಿಚಾರಧಾರೆಗಳ ಬಗ್ಗೆ ಚರ್ಚಿಸಬೇಕು ಎಂಬುದನ್ನು ಪ್ರತಿಪಾದಿಸುತ್ತಲೇ ಇದ್ದೇನೆ’ ಎಂದು ಉತ್ತರ ಕನ್ನಡ ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ ತಿಳಿಸಿದರು.

. ಕಾಂಗ್ರೆಸ್‌ನಿಂದ ಅಲ್ಪಸಂಖ್ಯಾತರ ಅಭಿವೃದ್ಧಿ ಸಾಧ್ಯವಿಲ್ಲ. ಅವರನ್ನು ಕೇವಲ ಮತಬ್ಯಾಂಕ್ ಆಗಿ ಬಳಸುತ್ತದೆ’ ಎಂದು ಅವರು ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಆರೋಪಿಸಿದರು.

ವಿಶ್ವವಿದ್ಯಾಲಯದ ಬೋಧನಾ ಗುಣಮಟ್ಟಕ್ಕೆ ಜಾಗತಿಕ ಮನ್ನಣೆ

ಜೆಎಸ್‌ಎಸ್ ಅಕಾಡೆಮಿಗೆ ಮೊದಲ ರ‍್ಯಾಂಕ್

ಪ್ರಜಾವಾಣಿ ವಾರ್ತೆ

ಮೈಸೂರು: ‘ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿಯು, ಟೈಮ್ಸ್ ಹೈಯರ್ ಎಜ್ಯುಕೇಷನ್ ಇಂಪ್ಯಾಕ್ಟ್ ರ‍್ಯಾಂಕಿಂಗ್–2024ರ, ಸುಸ್ಥಿರ ಅಭಿವೃದ್ಧಿಯ ಗುರಿಗಳು ವಿಭಾಗದಲ್ಲಿ ಜಾಗತಿಕವಾಗಿ ಮೊದಲ ರ‍್ಯಾಂಕ್ ಪಡೆದಿದೆ’ ಎಂದು ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯನಿರ್ವಾಹಕ ಕಾರ್ಯದರ್ಶಿ ಸಿ.ಜಿ. ಬೆಟಸೂರಮಠ ತಿಳಿಸಿದರು.

‘ಥಾಯ್ಲೆಂಡ್‌ನ ಬ್ಯಾಂಕಾಕ್‌ನಲ್ಲಿ ಬುಧವಾರ ಈ ಪ್ರಶಸ್ತಿಗಳ ಘೋಷಣೆ ಮಾಡಲಾಗಿದೆ. ಪ್ರಶಸ್ತಿಗಾಗಿ 115 ದೇಶಗಳ 498 ವಿಶ್ವವಿದ್ಯಾಲಯಗಳು ಸ್ಪರ್ಧಿಸಿದ್ದವು. ಕರ್ನಾಟಕದ 12 ಸೇರಿದಂತೆ ಭಾರತದಿಂದ 115 ವಿಶ್ವವಿದ್ಯಾಲಯಗಳು ಭಾಗಿಯಾಗಿದ್ದವು. ಜೆಎಸ್‌ಎಸ್ ಅಕಾಡೆಮಿಯು ಒಟ್ಟು 9 ವಿಭಾಗಗಳಲ್ಲಿ ಸ್ಪರ್ಧಿಸಿದ್ದು, 7 ವಿಭಾಗದಲ್ಲಿ ಜಾಗತಿಕ ರ‍್ಯಾಂಕ್ ಪಡೆದಿದೆ’ ಎಂದು ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು.

‘ಜೆಎಸ್‌ಎಸ್ ಅಕಾಡೆಮಿಯ ಬೋಧನಾ ಗುಣಮಟ್ಟ, ಬುಡಕಟ್ಟು ಜನಾಂಗದ ಆರೋಗ್ಯದ ಬಗ್ಗೆ ನಡೆಸಿರುವ ಸಂಶೋಧನೆ ಮತ್ತು ಆರೋಗ್ಯದ ಅರಿವು ಮತ್ತು ಸೇವೆಯ ಅಂಶಗಳು ಜಾಗತಿಕ ಮಟ್ಟದಲ್ಲಿ ಪ್ರಥಮ ಸ್ಥಾನ ಪಡೆಯಲು ಕಾರಣವಾಗಿವೆ. ಇದಲ್ಲದೆ, ಕೈಗೆಟುಕುವ ಮತ್ತು ಶುದ್ಧ ಶಕ್ತಿ ವಿಭಾಗದಲ್ಲಿ ಜಾಗತಿಕವಾಗಿ 12ನೇ ಸ್ಥಾನ, ಬಡತನ ನಿರ್ಮೂಲನೆ ವಿಷಯದಲ್ಲಿ 21ನೇ ಸ್ಥಾನ, ಭೂಮಿಯ ಮೇಲಿನ ಜೀವನ ವಿಷಯದಲ್ಲಿ 49ನೇ ಸ್ಥಾನ, ಶುದ್ಧ ಜಲ ಮತ್ತು ನೈರ್ಮಲ್ಯ ವಿಷಯದಲ್ಲಿ 60ನೇ ಸ್ಥಾನ ಹಾಗೂ ಜವಾಬ್ದಾರಿಯುತ ಉತ್ಪಾದನೆ ಮತ್ತು ಬಳಕೆ ವಿಷಯದಲ್ಲಿ 78ನೇ ಸ್ಥಾನ ಗಳಿಸಿದೆ’ ಎಂದು ತಿಳಿಸಿದರು.

ಜೆಎಸ್‌ಎಸ್ ವಿಶ್ವವಿದ್ಯಾಲಯದ ಸಮಕುಲಾಧಿಪತಿ ಡಾ. ಬಿ. ಸುರೇಶ್ ಅಮೆರಿಕದಿಂದ ಆನ್‌ಲೈನ್ ಮೂಲಕ ಮಾತನಾಡಿ ಸಂಸ್ಥೆಯ ಸಾಧನೆಗೆ ಹರ್ಷ ವ್ಯಕ್ತಪಡಿಸಿದರು.

ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯದರ್ಶಿ ಎಸ್‌.ಪಿ. ಮಂಜುನಾಥ್, ಕುಲಸಚಿವ ಬಿ.ಮಂಜುನಾಥ್, ಜೆಎಸ್‌ಎಸ್ ಮೆಡಿಕಲ್ ಕಾಲೇಜಿನ ಪ್ರಾಂಶುಪಾಲ ಡಾ. ಬಸವನಗೌಡಪ್ಪ, ವೈದ್ಯಕೀಯ ಅಧೀಕ್ಷಕ ಡಾ.ಎಸ್‌.ಪಿ.ಮಧು ಇದ್ದರು.

ಮುಖ್ಯಾಂಶಗಳು

- ಬ್ಯಾಂಕಾಕ್‌ನಲ್ಲಿ ಪ್ರಶಸ್ತಿಗಳ ಘೋಷಣೆ
- ಪ್ರಶಸ್ತಿಗಾಗಿ 115 ದೇಶಗಳ 498 ವಿಶ್ವವಿದ್ಯಾಲಯಗಳು ಸ್ಪರ್ಧೆಯಲ್ಲಿ ಭಾಗಿ
- ಏಳು ವಿಭಾಗಗಳಲ್ಲಿ ಜಾಗತಿಕ ರ‍್ಯಾಂಕ್ ಪಡೆದ ಜೆಎಸ್‌ಎಸ್



ಜೆಎಸ್‌ಎಸ್ ಅಕಾಡೆಮಿಯ ಈ ಸಾಧನೆ ಎಲ್ಲರಿಗೂ ಪ್ರೇರಣೆ. ಸಮಾಜಕ್ಕೆ ಅಗತ್ಯ ಇರುವ ಸೇವಾ ಶ್ರೇಷ್ಠತೆಗಾಗಿ ಶ್ರಮಿಸಲು ಯುವ ಜನಾಂಗವನ್ನು ಉತ್ತೇಜಿಸಲು ಇದು ಸಹಕಾರಿ ಆಗಲಿದೆ

ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ
ಜೆಎಸ್‌ಎಸ್ ಅಕಾಡೆಮಿ ಕುಲಾಧಿಪತಿ

ವರುಣ ಕ್ಯಾಂಪಸ್ 2027ಕ್ಕೆ ಕಾರ್ಯಾರಂಭ

‘ಮೈಸೂರು ತಾಲ್ಲೂಕಿನ ವರುಣ ಬಳಿ ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿಯ ನೂತನ ಕ್ಯಾಂಪಸ್ ನಿರ್ಮಾಣವಾಗುತ್ತಿದ್ದು, 2027ಕ್ಕೆ ಕಾರ್ಯಾರಂಭ ಮಾಡಲಿದೆ’ ಎಂದು ಅಕಾಡೆಮಿಯ ಕುಲಪತಿ ಡಾ. ಸುರೀಂದರ್ ಸಿಂಗ್ ತಿಳಿಸಿದರು.

‘ಪ್ರಸ್ತುತ ಕ್ಯಾಂಪಸ್‌ನಲ್ಲಿ 600 ಬೋಧಕ ಸಿಬ್ಬಂದಿ ಇದ್ದು, ವಾರ್ಷಿಕ ₹600 ಕೋಟಿ ಬಜೆಟ್ ಹೊಂದಿದೆ. ಹೊಸ ಕ್ಯಾಂಪಸ್‌ನಲ್ಲಿ 15 ಸಾವಿರ ವಿದ್ಯಾರ್ಥಿಗಳು, 2 ಸಾವಿರ ಬೋಧಕರು, 4 ಸಾವಿರ ಸಂಶೋಧನಾ ವಿದ್ಯಾರ್ಥಿಗಳಿಗೆ ಅಧ್ಯಯನ ಮಾಡಲು ಅವಕಾಶ ಸಿಗುತ್ತದೆ. ವಿಶ್ವದ ಯಾವುದೇ ರಾಷ್ಟ್ರದ ಉತ್ತಮ ಶಿಕ್ಷಣ ಸಂಸ್ಥೆಗಳು ಅಲ್ಲಿಗೆ ಬಂದು ತಮ್ಮ ಕೇಂದ್ರವನ್ನು ತೆರೆಯಬಹುದು. ಆರೋಗ್ಯ, ಶಿಕ್ಷಣ, ಸಂಶೋಧನೆಗೆ ಸಂಬಂಧಪಟ್ಟ ಉದ್ಯಮಗಳು ಅಲ್ಲಿ ತಮ್ಮ ಕಾರ್ಯ ಚಟುವಟಿಕೆ ಆರಂಭಿಸಬಹುದು’ ಎಂದು ಮಾಹಿತಿ ನೀಡಿದರು.

ಸುದ್ದಿ 2 ನಿಮಿಷ

ಗ್ಯಾರಂಟಿ ಕೈಬಿಡಲು ಕಾಂಗ್ರೆಸ್‌ನಲ್ಲೇ ಒತ್ತಡ: ಜಗದೀಶ ಶೆಟ್ಟರ್

ಬೆಳಗಾವಿ: ‘ಲೋಕಸಭಾ ಚುನಾವಣೆಯಲ್ಲಿ ಪಂಚ ಗ್ಯಾರಂಟಿ ಯೋಜನೆಗಳು ಫಲ ಕೊಡಲಿಲ್ಲ ಎಂಬುದು ಕಾಂಗ್ರೆಸ್ ಶಾಸಕರಿಗೆ ಖಾತ್ರಿಯಾಗಿದೆ. ಅದಕ್ಕೇ ಅವುಗಳನ್ನು ಮುಂದುವರಿಸದಂತೆ ಸ್ವತಃ ಅವರೇ ಕಾಂಗ್ರೆಸ್ ಸರ್ಕಾರಕ್ಕೆ ಒತ್ತಡ ತರತೊಡಗಿದ್ದಾರೆ’ ಎಂದು ಬೆಳಗಾವಿ ಸಂಸದ ಜಗದೀಶ ಶೆಟ್ಟರ್ ತಿಳಿಸಿದರು.

‘ಗ್ಯಾರಂಟಿ ಯೋಜನೆಗಳ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಏನೇ ಹೇಳಬಹುದು. ಆದರೆ, ಅವುಗಳಿಂದ ರಾಜ್ಯದ ಅಭಿವೃದ್ಧಿ ಕುಂಠಿತಗೊಂಡಿದೆ. ಯಾವ ಕಾಮಗಾರಿಗೂ ಅನುದಾನ ಸಿಗುತ್ತಿಲ್ಲ. ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್‌ಗೆ ಮತದಾರರು ತಕ್ಕ ಪಾಠ ಕಲಿಸಿದ್ದಾರೆ’ ಎಂದು ಅವರು ಗುರುವಾರ ಸುದ್ದಿಗಾರರಿಗೆ ತಿಳಿಸಿದರು.

‘ಕಾಂಗ್ರೆಸ್‌ನ ಒಳಜಗಳ ಬಗ್ಗೆ ನಾವೇಕೆ ಚಿಂತಿಸಬೇಕು. ಬಿಜೆಪಿಯ ಎಲ್ಲ ನಾಯಕರು ಮತ್ತು ಕಾರ್ಯಕರ್ತರ ಸಂಘಟಿತ ಪ್ರಯತ್ನದ ಜತೆಗೆ, ಕಾಂಗ್ರೆಸ್‌ನ ಒಳಹೊಡೆತ ನನ್ನ ಗೆಲುವಿಗೆ ಅನುಕೂಲವಾಯಿತು’ ಎಂದು ಶೆಟ್ಟರ್ ಅವರು ತಿಳಿಸಿದರು.

ಯೋಜನೆ ಅನುಷ್ಠಾನಕ್ಕೆ ಪ್ರಯತ್ನ: ‘ಕಳಸಾ–ಬಂಡೂರಿ ಯೋಜನೆಯಡಿ ರಾಜ್ಯಕ್ಕೆ 13 ಟಿಎಂಸಿ ಅಡಿ ನೀರು ಹಂಚಿಕೆಯಾಗಿದ್ದು, ಅಧಿಸೂಚನೆ ಹೊರಬಿದ್ದಿದೆ. ಕಾಮಗಾರಿಗೆ ಅರಣ್ಯ ಮತ್ತು ಪರಿಸರ ಇಲಾಖೆಯಿಂದ ಅನುಮತಿ ಸಿಗಬೇಕಿದೆ. ಯೋಜನೆ ಅನುಷ್ಠಾನಕ್ಕೆ ಪ್ರಾಮಾಣಿಕವಾಗಿ ಪ್ರಯತ್ನಿಸುವೆ’ ಎಂದರು.

‘ಯೋಜನೆಗೆ ಗೋವಾ ಆಕ್ಷೇಪಿಸಿದರೂ ಆ ರಾಜ್ಯದ ಮುಖ್ಯಮಂತ್ರಿ ಜೊತೆ ಚರ್ಚಿಸುವೆ. ಅದು ಫಲಪ್ರದ ಆಗದಿದ್ದರೆ, ಕಾನೂನು ವ್ಯಾಪ್ತಿಯಲ್ಲೇ ಕೇಂದ್ರ ಸರ್ಕಾರದ ಮೇಲೆ ಒತ್ತಡ ತರಲು ಯತ್ನಿಸುವೆ’ ಎಂದು ಅವರು ಹೇಳಿದರು.



ಬಸ್ ಜೊತೆ ಓಡಿ ಆತಂಕ ಸೃಷ್ಟಿಸಿದ ಆನೆ

ಯಳಂದೂರು (ಚಾಮರಾಜನಗರ ಜಿಲ್ಲೆ): ತಾಲ್ಲೂಕಿನ ಬಿಳಿಗಿರಿರಂಗನ ಬೆಟ್ಟದಲ್ಲಿ ಗುರುವಾರ ಮುಂಜಾನೆ ಗಂಡಾನೆಯು ಬಸ್ ಜೊತೆ ಓಡಿ ಆತಂಕ ಸೃಷ್ಟಿಸಿದ ವಿಡಿಯೊ ಸಾಮಾಜಿಕ ಮಾಧ್ಯಮಗಳಲ್ಲಿಹರಿದಾಡಿತು.

ಕೆಎಸ್‌ಆರ್‌ಟಿಸಿ ಬಸ್ ಬೆಟ್ಟಕ್ಕೆ ತೆರಳುವಾಗ ಅಡ್ಡ ದಾರಿಯಲ್ಲಿ ಬಂದ ಆನೆ ಘೀಳಿಟ್ಟು ರಂಪ ಮಾಡಿ, ಬಸ್ ಜೊತೆ ಸಮಾನಾಂತರವಾಗಿ ಓಡಿ ಪ್ರಯಾಣಿಕರಲ್ಲಿ ಆತಂಕ ಮೂಡಿಸಿತ್ತು. ಸ್ಥಳೀಯರು ಆನೆ ಬರುತ್ತಿರುವ ಬಗ್ಗೆ ಎಚ್ಚರಿಸಿ ಸುತ್ತಮುತ್ತಲ ನಿವಾಸಿಗಳನ್ನು ಅಪಾಯದಿಂದ ಪಾರು ಮಾಡಿದರು.

‘ಜನರ ಕೂಗಾಟ ಮತ್ತು ಬಸ್ ಶಬ್ದಕ್ಕೆ ಬೆಚ್ಚಿದ ಆನೆಯು ನಂತರ ವಾಪಸ್ ಕಾಡಿನತ್ತ ತೆರಳಿತು’ ಎಂದು ಪ್ರತ್ಯಕ್ಷದರ್ಶಿಗಳು ಹೇಳಿದರು.



ಕಲುಷಿತ ನೀರು ಸೇವನೆ: ಸಾವಿನ ಸಂಖ್ಯೆ ಆರಕ್ಕೆ ಏರಿಕೆ

ಪ್ರಜಾವಾಣಿ ವಾರ್ತೆ

ತುಮಕೂರು: ಮಧುಗಿರಿ ತಾಲ್ಲೂಕಿನ ಚಿನ್ನೇನಹಳ್ಳಿ ಗ್ರಾಮದಲ್ಲಿ ಕಲುಷಿತ ನೀರು ಸೇವಿಸಿ ವಾಂತಿ, ಬೇಧಿಯಿಂದ ಮೃತಪಟ್ಟವರ ಸಂಖ್ಯೆ ಆರಕ್ಕೆ ಏರಿಕೆಯಾಗಿದೆ.

ವಾಂತಿ, ಬೇಧಿಯಿಂದ ಅಸ್ವಸ್ಥರಾಗಿದ್ದ ಮೂವರು ಬುಧವಾರ ಒಂದೇ ದಿನ ಸಾವನ್ನಪ್ಪಿದ್ದರು. ಆದರೆ, ಅದಕ್ಕೂ ಮೊದಲೇ ವಾಂತಿ, ಬೇಧಿಯಿಂದ ಗ್ರಾಮದಲ್ಲಿಯೇ ಮೂವರು ವೃದ್ಧರು ಮೃತಪಟ್ಟಿರುವ ವಿಷಯ ಗುರುವಾರ ಸಚಿವ ಜಿ.ಪರಮೇಶ್ವರ ಜಿಲ್ಲಾ ಆಸ್ಪತ್ರೆಗೆ ಭೇಟಿ ನೀಡಿದ ಸಂದರ್ಭದಲ್ಲಿ ಬೆಳಕಿಗೆ ಬಂದಿದೆ.

ಚಿಕ್ಕದಾಸಪ್ಪ(76) ಮತ್ತು ಪೆದ್ದಣ್ಣ (74) ಹಾಗೂ ಮೀನಾಕ್ಷಿ ಎಂಬ ಮೂರು ವರ್ಷದ ಮಗು ಬುಧವಾರ ಮೃತಪಟ್ಟಿದ್ದರು. ಇನ್ನೂ ಚಿಕಿತ್ಸೆ ಪಡೆಯುತ್ತಿರುವ ಗ್ರಾಮಸ್ಥರ ಆರೋಗ್ಯ ವಿಚಾರಿಸಲು ಪರಮೇಶ್ವರ ಅವರು ಜಿಲ್ಲಾ ಆಸ್ಪತ್ರೆಗೆ ಬಂದಿದ್ದರು. ಆಗ ಅಲ್ಲಿದ್ದ ಗ್ರಾಮಸ್ಥರು, ಕಲುಷಿತ ನೀರಿನಿಂದ ಇನ್ನೂ ಮೂವರು ಗ್ರಾಮದಲ್ಲಿಯೇ ಮೃತಪಟ್ಟಿದ್ದಾರೆ ಮಾಹಿತಿಯನ್ನು ಸಚಿವರ ಗಮನಕ್ಕೆ ತಂದರು.

ಜೂನ್ 10ರಂದು ಹನುಮಕ್ಕ (85), ಜೂನ್ 11ರಂದು ನಾಗಪ್ಪ (85) ಹಾಗೂ ನಿಂಗಮ್ಮ (90) ಎಂಬುವರು ಮೃತಪಟ್ಟಿದ್ದಾರೆ. ಆದರೆ, ಈ ಮೂವರ ಸಾವಿಗೆ ಆರೋಗ್ಯ ಇಲಾಖೆಯ ಅಧಿಕಾರಿಗಳು ಬೇರೆ ಕಾರಣ ಹೇಳುತ್ತಿದ್ದಾರೆ.

‘ಇಬ್ಬರು ವಯೋಸಹಜ ಕಾಯಿಲೆಯಿಂದ ಬಳಲುತ್ತಿದ್ದರು. ಹಾಗಾಗಿ ಅವರು ಸಾವನ್ನಪ್ಪಿದ್ದಾರೆ’ ಎಂಬುವುದು ಅಧಿಕಾರಿಗಳ ವಾದ. ಆದರೆ ‘ಮೂರು ಜನ ಸಾವಿಗೂ ಮುನ್ನ ವಾಂತಿ, ಬೇಧಿಯಿಂದ ಬಳಲುತ್ತಿದ್ದರು’ ಎಂದು ಗ್ರಾಮಸ್ಥರು ಮತ್ತು ಕುಟುಂಬದವರು ಹೇಳುತ್ತಿದ್ದಾರೆ.

ಸೇನೆ ಆಧುನೀಕರಣಕ್ಕೆ ಆದ್ಯತೆ: ರಾಜನಾಥ್

ನವದೆಹಲಿ(ಪಿಟಿಐ): ನರೇಂದ್ರ ಮೋದಿ ನೇತೃತ್ವದ ಹೊಸ ಸರ್ಕಾರವು ಸಶಸ್ತ್ರ ಪಡೆಗಳನ್ನು ಆಧುನೀಕರಿಸುವ ಮತ್ತು ದೇಶೀಯ ರಕ್ಷಣಾ ಉತ್ಪಾದನೆಯನ್ನು ಉತ್ತೇಜಿಸುವ ಮೂಲಕ ರಾಷ್ಟ್ರೀಯ ಭದ್ರತೆಯನ್ನು ಮತ್ತಷ್ಟು ಬಲಪಡಿಸುವತ್ತ ಗಮನ ಹರಿಸಲಿದೆ ಎಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಹೇಳಿದರು.

ಮುಂದಿನ ಐದು ವರ್ಷಗಳ ತಮ್ಮ ಗುರಿ ಮತ್ತು ದೃಷ್ಟಿಕೋನದ ಬಗ್ಗೆ ಮಾತನಾಡಿದ ಅವರು, 2028–29ರ ವೇಳೆಗೆ ದೇಶದ ರಕ್ಷಣಾ ರಫ್ತುಗಳನ್ನು ₹50,000 ಕೋಟಿಗೆ ಹೆಚ್ಚಿಸಲು ಸರ್ಕಾರವು ಕೆಲಸ ಮಾಡಲಿದೆ ಎಂದರು.

ಸಿನಿಮಾ ಪುರವಣಿ

ನಿರ್ದೇಶನದ ಕನಸು ಹೊತ್ತ ಡಾಲಿ



ಧನಂಜಯ

ವೈದೇಹಿ ಬಾಟಿ

● ಯಾರೀ 'ಕೋಟಿ'?

'ಕೋಟಿ' ಹೊಸ ಕಥೆಯನ್ನು ಹೊತ್ತುತಂದಿದೆ. ಟೀಸರ್, ಟ್ರೇಲರ್‌ಗಿಂತ ಹೆಚ್ಚಿನ ವಿಷಯ ಸಿನಿಮಾದಲ್ಲಿದೆ. ಸಾಮಾನ್ಯ ವ್ಯಕ್ತಿ ತನ್ನ ಕುಟುಂಬವನ್ನು ಕಾಪಾಡಿಕೊಳ್ಳಲು ದಿನನಿತ್ಯ ಇರುವ ಜಂಜಾಟ, ಪಡುವ ಪರದಾಟವಿದೆಯಲ್ಲವೇ ಅದುವೇ ಕೋಟಿ. ರೋಡಿನಲ್ಲಿ ಕಾಣಸಿಗುವ, ನಮ್ಮ ಸುತ್ತಮುತ್ತ ಕಾಣಸಿಗುವ ಎಲ್ಲರೂ 'ಕೋಟಿ'ಯೇ. ಮಧ್ಯಮ ವರ್ಗದ ಜೀವನದಲ್ಲಿ ಬದುಕು ಕಟ್ಟಿಕೊಳ್ಳಲು ಇರುವ ಒದ್ದಾಟವಿದೆಯಲ್ಲಾ, ಅದು ಈ ಸಿನಿಮಾದ ಜೀವಾಳ. ಒಂದು ಕೋಟಿ ದುಡಿಯುವ ಕನಸು ಹೊತ್ತವನ ಕಥೆ ಇದು. 'ಕೋಟಿ' ನಿಯತ್ತಿನಿಂದ ಬದುಕುವಾತ, ಯಾರಿಗೂ ಮೋಸ ಮಾಡಲ್ಲ, ಕಳ್ಳತನದ ದಾರಿ ಹಿಡಿಯುವುದಿಲ್ಲ. ನಮ್ಮೆಲ್ಲರ ಬದುಕಿನಲ್ಲಿ ಇರುವಂತಹ ಎಲ್ಲ ಸಮಸ್ಯೆಗಳೂ 'ಕೋಟಿ'ಗೆ ಇದೆ. ಹೀಗಿದ್ದರೂ ಅಷ್ಟು ನಿಯತ್ತಾಗಿ ಬದುಕಲು ಸಾಧ್ಯವೇ? ಎನ್ನುವ ಪ್ರಶ್ನೆಯನ್ನೂ ಈ ಸಿನಿಮಾ ಮೂಡಿಸುತ್ತದೆ.

> 'ರತ್ನಾಕರ', 'ಶಂಕರ' ಎಂಬ ಕಾಮನ್‌ಮ್ಯಾನ್ ಪಾತ್ರಗಳಲ್ಲಿ ತೆರೆ ಮೇಲೆ ಈಗಾಗಲೇ ಮಿಂಚಿರುವ ಧನಂಜಯ, 'ಕೋಟಿ' ಸಿನಿಮಾ ಮೂಲಕ ಮತ್ತೊಮ್ಮೆ ಸಾಮಾನ್ಯ ವ್ಯಕ್ತಿಯೊಬ್ಬನ ಕಥೆ ಹೇಳಲು ತೆರೆಗೆ ಬಂದಿದ್ದಾರೆ. ಈ ಸಂದರ್ಭದಲ್ಲಿ ಅವರ ಜತೆಗೆ ಮಾತುಕತೆ.

● ಸಾಮಾನ್ಯ ವ್ಯಕ್ತಿಯ ಪಾತ್ರಗಳನ್ನು ಹೆಚ್ಚು ಒಪ್ಪಿಕೊಳ್ಳಲು ಕಾರಣ?

ನನಗೆ ಸಾಮಾನ್ಯ ವ್ಯಕ್ತಿಯ ಗುಣಲಕ್ಷಣಗಳುಳ್ಳ ಪಾತ್ರಗಳನ್ನು ಮಾಡುವುದು ಇಷ್ಟ. ಅದು ಸವಾಲು ಕೂಡಾ. ಏಕೆಂದರೆ ಹೀರೊ ಆಗಿ ಅಥವಾ ಖಳನಟನಾಗಿ ಮಾಡುವಾಗ ನನ್ನದೇ ಆದ ಸ್ಟೈಲ್ ಇರುತ್ತದೆ. ಆದರೆ ಒಬ್ಬ ಸಾಮಾನ್ಯನಂತೆ ಕ್ಯಾಮೆರಾ ಮುಂದೆ ಬರಬೇಕು ಎಂದಾಗ ಅದನ್ನೆಲ್ಲಾ ಬದಿಗಿಟ್ಟು, ಬಹಳ ಸರಳವಾಗಿ ಕಾಣಿಸಿಕೊಳ್ಳಬೇಕಾಗುತ್ತದೆ. ಅಲ್ಲಿ ಆ್ಯಕ್ಟ್ ಮಾಡಲು ಸ್ಪೇಸ್ ಇರುವುದಿಲ್ಲ, ಕೇವಲ ಪ್ರತಿಕ್ರಿಯೆಗಳಿಗಷ್ಟೇ ಅಲ್ಲಿ ಜಾಗ. ಇಂತಹ ಪಾತ್ರಗಳು ನನಗೆ ಸವಾಲುಗಳನ್ನು ಎಸೆಯುತ್ತವೆ. ನನ್ನ ಬದುಕಿನ ಹಿಂದಿನ ಹಂತಗಳನ್ನು ನಾನು ಪುನರ್ ಭೇಟಿಯಾದಂತೆ ಈ ಪಾತ್ರಗಳು ಭಾಸವಾಗುತ್ತವೆ. ಹಾಗಾಗಿ 'ಬಡವ ರಾಸ್ಕಲ್', 'ರತ್ನನ್ ಪ್ರಪಂಚ', 'ಕೋಟಿ'ಯಂತಹ ಸಿನಿಮಾಗಳಲ್ಲಿನ ಪಾತ್ರಗಳ ನನಗೆ ಬೇಗ ಕನೆಕ್ಟ್ ಆಗುತ್ತವೆ. ಈ ಕಾರಣಗಳಿಂದ ಈ ಪಾತ್ರಗಳು ಜನರಿಗೂ ಇಷ್ಟವಾಗುತ್ತದೆ. ಕೆಲವೊಮ್ಮೆ ಅವರ ಜೀವನವೇ ತೆರೆ ಮೇಲೆ ಬಂದಂತಹ ಅನುಭವ ಅವರಿಗೆ ಆಗುತ್ತದೆ. ಈ ಸಿನಿಮಾದ ಸ್ಕ್ರಿಪ್ಟ್ ಕೇಳಿದಾಗಲೇ ನಾನು ಆ ಪಾತ್ರವನ್ನು ಇಷ್ಟಪಟ್ಟೆ. ಹೇಳಬೇಕಾಗಿರುವ ಕಥೆ ಎಂದೆನಿಸಿತು. ಹೀಗಾಗಿ ತಕ್ಷಣ 'ಯೆಸ್' ಎಂದುಬಿಟ್ಟಿದ್ದೆ.

'ರತ್ನನ್ ಪ್ರಪಂಚ'ದಲ್ಲಿ 'ರತ್ನಾಕರ'ನ ಒದ್ದಾಟ ಗೊತ್ತಿದೆಯಲ್ಲಾ? ಅದೇ ರೀತಿ ಒದ್ದಾಟ 'ಕೋಟಿ'ಯದ್ದೂ. ಇಬ್ಬರೂ ಸಾಮಾನ್ಯ ವ್ಯಕ್ತಿಯೇ ಆಗಿದ್ದರೂ ಇವರಿಬ್ಬರೂ ಬೇರೆಯೇ. ಅವರ ಇತಿಹಾಸ ಬೇರೆಯೇ ಇದೆ. ಎಲ್ಲೂ 'ರತ್ನಾಕರ' ಮತ್ತೆ ತೆರೆ ಮೇಲೆ ಕಾಣಿಸಿಕೊಳ್ಳಬಾರದು. 'ಬಡವ ರಾಸ್ಕಲ್'ನ 'ಶಂಕರ'ನ ಗುಣಲಕ್ಷಣಗಳು 'ಕೋಟಿ'ಗೆ ಬರಬಾರದು. ಈ ಎಲ್ಲ ಪಾತ್ರಗಳನ್ನೂ ಮಾಡಿರುವುದು ಧನಂಜಯನೇ. ಆದರೆ ಈ ಭಿನ್ನ ಭಿನ್ನ ಪಾತ್ರಗಳನ್ನು ಅದೇ ಮುಖ, ಅದೇ ನಗು ಇಟ್ಟುಕೊಂಡು ಡಿಫೈನ್ ಮಾಡುವುದು ಸವಾಲಿನ ವಿಷಯ. ಇಂತಹ ಹಂತದಲ್ಲಿ ಪಾತ್ರದ ಬರವಣಿಗೆ ಮುಖ್ಯವಾಗುತ್ತದೆ. ಅದನ್ನು ನಮ್ಮೊಳಗೆ ತುಂಬುವ ರೀತಿಯಲ್ಲಿ ಪಾತ್ರ ಭಿನ್ನವಾಗುತ್ತಾ ಹೋಗುತ್ತದೆ. ಇಡೀ ಪಯಣ ನೋಡಿದಾಗಲೇ ಒಂದು ಪಾತ್ರ ಸೂಕ್ಷ್ಮವಾಗಿ ಕಾಣಿಸಿಕೊಳ್ಳುತ್ತದೆ.

● ಪರಮ್ ನಿರ್ದೇಶನದ ಬಗ್ಗೆ...

ಹೊಸ ನಿರ್ದೇಶಕರನ್ನು, ಅವರ ಬರವಣಿಗೆಯನ್ನು ನಾವು ನಂಬಲೇಬೇಕು. ಇಲ್ಲದೇ ಹೋದರೆ ಹೊಸದೇನೂ ಹುಟ್ಟಿಕೊಳ್ಳಲು ಸಾಧ್ಯವಿಲ್ಲ. ಗೆದ್ದಿರುವವರ ಜೊತೆ ಸಿನಿಮಾ ಮಾಡುತ್ತೇನೆ ಎಂದರೆ ಎಷ್ಟು ಜನ ಸಿಗುತ್ತಾರೆ. ಹೊಸ ಪ್ರತಿಭೆಗಳು ಬಂದಾಗ ಅವರ ಜೊತೆ ಕೆಲಸ ಮಾಡುವುದು ಬಹಳ ಮುಖ್ಯ. ಹೀಗಾಗಿಯೇ ನನ್ನ ನಿರ್ಮಾಣ ಸಂಸ್ಥೆಯಲ್ಲಿ ಬಂದ 'ಬಡವ ರಾಸ್ಕಲ್', 'ಹೆಡ್‌ಬುಷ್', 'ಟಗರು ಪಲ್ಯ' ಸಿನಿಮಾಗಳಲ್ಲಿ ಹೊಸ ನಿರ್ದೇಶಕರ ಜೊತೆಯೇ ಕೆಲಸ ಮಾಡಿದ್ದೇನೆ. ಪರಮ್ ಸಿನಿಮಾಗೆ ಹೊಸತಿರಬಹುದು. ಆದರೆ ಬಣ್ಣದ ಲೋಕಕ್ಕೆ ಅಲ್ಲ. ಟಿ.ವಿ ಜಗತ್ತಿನಲ್ಲಿ ಅವರದು ದೊಡ್ಡ ಹೆಸರು. ಪರಮ್ ಲಕ್ಷಾಂತರ ರೂಪಾಯಿ ಸಂಬಳವನ್ನು ಬಿಟ್ಟು, ಸಿನಿಮಾ ನಿರ್ದೇಶನ ಮಾಡಬೇಕು ಎನ್ನುವ ಕನಸು ಹೊತ್ತು ಬಂದವರು. ಒಂದು ಕಾಲದಲ್ಲಿ ನಾನೂ ಹೀಗೆ ಎಲ್ಲವನ್ನು ಬಿಟ್ಟು ಬಂದಿದ್ದೆ. ಕಥೆ ಹೇಳಬೇಕು ಎನ್ನುವ ಹುಮ್ಮಸ್ಸು, ಒಳಗಿನ ಒದ್ದಾಟವನ್ನು ಒಬ್ಬ ನಿಜವಾದ ಕಥೆಗಾರನಿಗೆ ತಡೆಹಿಡಿದುಕೊಳ್ಳಲು ಆಗುವುದಿಲ್ಲ. ಇವರ ಉತ್ಸಾಹವೇ ನನ್ನನ್ನು ಕಥೆ ಕೇಳಲು ಪ್ರೇರೇಪಿಸಿತು. ಹಲವು ಪ್ರಶ್ನೆಗಳನ್ನು 'ಕೋಟಿ' ಕೇಳುತ್ತದೆ. ಉತ್ತರ ಕಂಡುಕೊಳ್ಳುವ ಪ್ರಕ್ರಿಯೆಯೂ ಸಿನಿಮಾದಲ್ಲಿದೆ. ಈ ಹಂತದಲ್ಲಿ ಒಳ್ಳೊಳ್ಳೆಯ ಸಂಭಾಷಣೆಗಳನ್ನು ಪರಮ್ ಬರೆದಿದ್ದಾರೆ. ಸಿನಿಮಾ ಬಿಡುಗಡೆಯಾದ ಬಳಿಕ ಚರ್ಚೆಗಳಿಗೆ ಇದು ಅನುವು ಮಾಡಿಕೊಡಲಿದೆ.

● ಧನಂಜಯ 'ಕೋಟಿ' ಹಿಂದೆ ಬಿದ್ದವರೇ?

ಕೆಲಸದ ಹಿಂದೆ ಹೋಗಬೇಕು, ಆಗ ದುಡ್ಡು ತನ್ನಿಂದ ತಾನೇ ಬರುತ್ತದೆ. ನಿಯತ್ತಿನಲ್ಲಿ ಕೆಲಸ ಮಾಡಿದರೆ, ದುಡ್ಡಿನ ಬಗ್ಗೆ ಗೌರವ ಹೊಂದಿದ್ದರೆ, ಕನಸು ಕಂಡರೆ, ಕೊಂಚ ರಿಸ್ಕ್ ತೆಗೆದುಕೊಂಡು ಬಂಡವಾಳ ಹೂಡಿದರೆ ಖಂಡಿತವಾಗಿಯೂ ದುಡ್ಡು ನಿಮ್ಮನ್ನು ಹುಡುಕಿಕೊಂಡು ಬರಲಿದೆ. ನನಗೇನಾದರೂ ರಾತ್ರೋರಾತ್ರಿ ಕೋಟಿ ರೂಪಾಯಿ ಸಿಕ್ಕರೆ, 'ವಿದ್ಯಾಪತಿ', 'ಜೆಸಿ' ಎಂಬ ಸಿನಿಮಾ ನಿರ್ಮಾಣ ಮಾಡುತ್ತಿದ್ದೇನೆ. ಅದರ ಶೂಟಿಂಗ್ ಬೇಗನೇ ಮುಗಿಸುತ್ತೇನೆ.

● ರಮೇಶ್ ಇಂದಿರಾ, ತಾರಾ ಅವರ ಜೊತೆಗಿನ ನಟನೆಯ ಅನುಭವ...

ರಮೇಶ್ ಇಂದಿರಾ ಅವರ ಜೊತೆಗಿನ ನಟನೆ ಬಹಳ ಮಜಾ ಕೊಡುತ್ತಿತ್ತು. ಅವರದ್ದೇ ಆದ ಒಂದು ಸ್ಟೈಲ್ ಇದೆ. ಅದು ಎಲ್ಲ ಸಿನಿಮಾಗಳಲ್ಲಿ ಸಖತ್ ಆಗಿ ಕೆಲಸ ಮಾಡುತ್ತಿದೆ. ತಾರಮ್ಮ ಅವರಿಂದ ಕಲಿಯುವುದು ಬಹಳಷ್ಟಿದೆ. ತಾಯಿಯ ಪಾತ್ರದಲ್ಲಿ ಅವರು ಮಾಡುವ ಮ್ಯಾಜಿಕ್ ಅನ್ನು ಬೇರೆಯವರಿಂದ ಮಾಡಲು ಸಾಧ್ಯವಿಲ್ಲ. 'ಬಡವ ರಾಸ್ಕಲ್'ನಿಂದ ಅವರೊಂದಿಗೆ ಶುರುವಾದ ಪಯಣವೀಗ ಹ್ಯಾಟ್ರಿಕ್ ಬಾರಿಸಿದೆ.

● ನಿರ್ಮಾಣವಾಯ್ತು, ನಿರ್ದೇಶನದ ಕನಸು ಇದೆಯೇ?

ನಿರ್ದೇಶನದ ಕನಸು ಇದೆ, ಖಂಡಿತಾ ನಿರ್ದೇಶನ ಮಾಡುತ್ತೇನೆ. ಸದ್ಯ ಮೈಮೇಲೆ ಕೆಲಸ ಎಳೆದುಕೊಂಡಿದ್ದೇನೆ. ಸಿನಿಮಾ ನಿರ್ಮಾಣ ಮಾಡುತ್ತಿದ್ದೇನೆ. ನಿರ್ದೇಶಕರು ನನಗಾಗಿ ಪಾತ್ರಗಳನ್ನು ಬರೆಯುತ್ತಿದ್ದಾರೆ. ಒಂದು ಬ್ರೇಕ್ ತೆಗೆದುಕೊಳ್ಳಲು ಆಗುತ್ತಿಲ್ಲ. ಜೀವನದ ಕೊನೆಯವರೆಗೂ ಸಿನಿಮಾದಲ್ಲಿ ಇರುತ್ತೇನೆ. ಸಮಯ ಬಂದಾಗ ನಿರ್ದೇಶನಕ್ಕೆ ಇಳಿಯುತ್ತೇನೆ. ಕೆಲವೊಮ್ಮೆ ನಿರ್ಮಾಣ ಸಾಕು ಎನಿಸುತ್ತದೆ. ಆದರೆ ಒಳ್ಳೆಯ ಕಥೆಗಳು ಬಂದಾಗ, ಕಥೆಯ ಜೊತೆ ನಿಲ್ಲಬೇಕು ಎಂದು ಎನಿಸುತ್ತದೆ. ಇದರಲ್ಲಿ ರಿಸ್ಕ್, ಸ್ಟ್ರೆಸ್ ಜಾಸ್ತಿ. ಎಲ್ಲೋ ಒಂದು ಮ್ಯಾಜಿಕ್ ಮಾಡುತ್ತಿದ್ದೇನೆ. ಪುಣ್ಯಕ್ಕೆ ನಮ್ಮ ಪ್ರೊಡಕ್ಷನ್‌ನ ಪ್ರತಿ ಕಥೆಯನ್ನು ಜನ ಮೆಚ್ಚಿಕೊಂಡಿದ್ದಾರೆ.

● ಮುಂದಿನ ಪ್ರಾಜೆಕ್ಟ್‌ಗಳ ಬಗ್ಗೆ...

'ಪುಷ್ಪ–2' ತಂಡ ಒಂದು ಅದ್ಭುತವಾದ ಸಿನಿಮಾದೊಂದಿಗೆ ಬರುತ್ತಿದೆ. 'ಉತ್ತರಕಾಂಡ', 'ಅಣ್ಣ ಫ್ರಂ ಮೆಕ್ಸಿಕೊ' ಸಿನಿಮಾದ ಶೂಟಿಂಗ್ ನಡೆಯುತ್ತಿದೆ. 'ಹಲಗಲಿ ಬೇಡರ ದಂಗೆ' ಸ್ಕ್ರಿಪ್ಟ್ ಓದಿದ್ದೇನೆ, ಇದರ ನಿರ್ದೇಶಕರ ಕೆಲಸ ಇಷ್ಟವಾಗಿದೆ. ಈ ಸಿನಿಮಾದ ಮಾತುಕತೆ ನಡೆಯುತ್ತಿದೆ. ಜೊತೆಗೆ ಟಿ.ಎಸ್. ನಾಗಾಭರಣ ಅವರ ಜೊತೆ ನಾಡಪ್ರಭು ಕೆಂಪೇಗೌಡ ಸಿನಿಮಾ ಕೆಲಸ ನಡೆಯುತ್ತಿದೆ. ನಿರ್ಮಾಣ ವಿಷಯದಲ್ಲಿ ಮತ್ತೊಬ್ಬ ಹೊಸ ನಿರ್ದೇಶಕರ ಸ್ಕ್ರಿಪ್ಟ್ ಓಕೆ ಮಾಡಿದ್ದೇನೆ. ❖

ಮತ್ತೆ ಸಿನಿಮಾ ಹಬ್ಬ ಶುರು



ಸ್ಟೆಫಿ ಪಟೇಲ್

ಐಪಿಎಲ್, ಲೋಕಸಭೆ ಚುನಾವಣೆ, ಅದರ ಫಲಿತಾಂಶದ ಭರಾಟೆಯಲ್ಲಿ ಮಂಕಾಗಿದ್ದ ಕನ್ನಡ ಚಿತ್ರರಂಗ ಮೈಕೊಡವಿ ಎದ್ದೇಳುತ್ತಿದೆ. ಇದರ ಪರಿಣಾಮವಾಗಿ ಶುಕ್ರವಾರ(ಜೂನ್ 14) ಸಾಲು ಸಾಲು ಸಿನಿಮಾಗಳು ತೆರೆಕಂಡಿವೆ.



ಶರಣಮ್ಮ



ಜೈಶಂಕರ್ ಆರ್ಯರ್

ಶಿವಮ್ಮ: ಬೂಸಾನ್ ಅಂತರರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ 'ನ್ಯೂ ಕರೆಂಟ್ಸ್' ವಿಭಾಗದಲ್ಲಿ ಪ್ರಶಸ್ತಿ ಪಡೆದ, ರಿಷಬ್ ಶೆಟ್ಟಿ ನಿರ್ಮಾಣದ 'ಶಿವಮ್ಮ' ತೆರೆಕಂಡಿದೆ. ಜೈಶಂಕರ್ ಆರ್ಯರ್ ನಿರ್ದೇಶನದ ಈ ಚಿತ್ರದಲ್ಲಿ ಯರೇಹಂಚಿನಹಾಳದ ಶರಣಮ್ಮ ಮುಖ್ಯಭೂಮಿಕೆಯಲ್ಲಿ ನಟಿಸಿದ್ದಾರೆ.

ಯರೇಹಂಚಿನಹಾಳದಲ್ಲೇ ಈ ಸಿನಿಮಾದ ಶೂಟಿಂಗ್ ನಡೆದಿದ್ದು, ಗ್ರಾಮಸ್ಥರೇ ಇಲ್ಲಿನ ಬಹುತೇಕ ಪಾತ್ರಗಳಿಗೆ ಬಣ್ಣಹಚ್ಚಿರುವುದು ವಿಶೇಷ. ಬೆಂಗಳೂರಿನಲ್ಲಿ ದೊಡ್ಡ ಮಟ್ಟದಲ್ಲಿ ಈ ಸಿನಿಮಾವನ್ನು ಬಿಡುಗಡೆ ಮಾಡುತ್ತಿಲ್ಲ. ನಿಗದಿತ ಪ್ರದರ್ಶನಗಳಷ್ಟೇ ಇವೆ. ಉತ್ತರ ಕರ್ನಾಟಕದಲ್ಲಿ ಹೆಚ್ಚಿನ ಕಡೆ ಏಕಪರದೆ ಚಿತ್ರಮಂದಿರಗಳಲ್ಲಿ ಸಿನಿಮಾ ಬಿಡುಗಡೆಯಾಗಿದೆ. ಕೆಆರ್‌ಜಿ ಈ ಸಿನಿಮಾವನ್ನು ವಿತರಣೆ ಮಾಡಿದೆ.



ಅನಿರುದ್ಧ

chef ಚಿದಂಬರ: ಎಂ.ಆನಂದರಾಜ್ ನಿರ್ದೇಶನದ 'Chef ಚಿದಂಬರ' ಸಿನಿಮಾದಲ್ಲಿ ಅನಿರುದ್ಧ ಮುಖ್ಯಭೂಮಿಕೆಯಲ್ಲಿದ್ದಾರೆ. ದಮ್ತಿ ಪಿಕ್ಚರ್ಸ್ ಲಾಂಛನದಲ್ಲಿ ರೂಪ ಡಿ.ಎನ್ ನಿರ್ಮಿಸಿರುವ ಈ ಚಿತ್ರಕ್ಕೆ ನಿರ್ದೇಶಕರೇ ಕಥೆ ಬರೆದಿದ್ದು, ಚಿತ್ರಕಥೆ ಹಾಗೂ ಸಂಭಾಷಣೆ ಗಣೇಶ್ ಪರಶುರಾಮ್ ಅವರದ್ದು. 'ಇದೊಂದು ಭಿನ್ನವಾದ ಸಿನಿಮಾ. ಡಾರ್ಕ್ ಕಾಮಿಡಿ ಸಿನಿಮಾ. ಕ್ರೈಂ ಥ್ರಿಲ್ಲರ್ ಸಿನಿಮಾವಾದರೂ ಹಾಸ್ಯ ಇಲ್ಲಿ ಪ್ರಧಾನ' ಎನ್ನುತ್ತಾರೆ ಆನಂದರಾಜ್. ಅನಿರುದ್ಧ ಅವರಿಗೆ ಜೋಡಿಯಾಗಿ ನಿಧಿ ಸುಬ್ಬಯ್ಯ ಹಾಗೂ 'ಲವ್ ಮಾಕ್ಟೇಲ್' ಖ್ಯಾತಿಯ ರೇಚೆಲ್ ಡೇವಿಡ್ ಅಭಿನಯಿಸಿದ್ದಾರೆ. ಶರತ್ ಲೋಹಿತಾಶ್ವ, ಕೆ.ಎಸ್. ಶ್ರೀಧರ್, ಶಿವಮಣಿ ಮುಂತಾದವರು ತಾರಾಬಳಗದಲ್ಲಿದ್ದಾರೆ.

68.	M/s Kalpak Realty Private ltd Rep by its Director Sri.Nishaya JayaShankar Rep by his Spa Holder Mr.Chikkaswamy S.T ಬಿನ್ Mr.Thimmegowda–ಭೂ.ಪ	206/10	1–10	–	1–10
69.	ಬಿ.ವೈ.ನಾಗರಾಜು ಬಿನ್ ಯಲ್ಲಾರೆಡ್ಡಿ	206/11	0–20	–	0–20
70.	ಮೆ॥ ಕಲ್ಪಕ್ ರಿಯಾಲಿಟಿ ಪ್ರೈ.ಲಿ ಪರವಾಗಿ ಕುರುನೇಶ್ ಬಿನ್ ಬಿ.ಎಂ.ಮಾದಯ್ಯ–ಭೂ.ಪ	206/12	0–08	–	0–08
71.	ಮೆ। ಪುರವಂಕರ ಲಿ ಪರವಾಗಿ ವೈಸ್‌ಚೇರ್‌ಮೇನ್ ಶ್ರೀ ನಾನಿ ಆರ್.ಚೋಕ್ಸಿ ಭೂ.ಪ	207/1	0–23	–	0–23
72.	ಮೆ। ಪುರವಂಕರ ಲಿ ಪರವಾಗಿ ವೈಸ್‌ಚೇರ್‌ಮೇನ್ ನಾನಿ ಆರ್.ಚೋಕ್ಸಿ ಇವರ ಪರವಾಗಿ ಎಸ್.ಪಿ.ಎ ಅಧಿಕಾರವನ್ನು ಪಡೆದಿರುವ ಅನಿತಾ ಹೆಚ್.ಎಂ. ಕೋಂ ರಾಜುಹೆಗ್ಡೆ–ಭೂ.ಪ	207/2	0–14.04	–	0–14.04
73.	ಮೆ। ಪುರವಂಕರ ಲಿ ಪರವಾಗಿ ವೈಸ್‌ಚೇರ್‌ಮೇನ್ ಶ್ರೀ ನಾನಿ ಆರ್.ಚೋಕ್ಸಿ ಭೂ.ಪ	207/3	0–17	–	0–17
74.	ಮೆ। ಪುರವಂಕರ ಲಿ ಪರವಾಗಿ ವೈಸ್‌ಚೇರ್‌ಮೇನ್ ಶ್ರೀ ನಾನಿ ಆರ್.ಚೋಕ್ಸಿ ಭೂ.ಪ	207/4	0–02.12	–	0–02.12
75.	M/s Kalpak Realty Private ltd Rep by its Authorised Signatory Sri.B.M JayaShankar ಬಿನ್ Mr.Thimmegowda	207/5	0–30	–	0–30
76.	M/s Kalpak Realty Private ltd Rep by its Authorised Signatory Sri.B.M JayaShankar ಬಿನ್ Mr.Thimmegowda	207/6	0–30	–	0–30
77.	ಮೆ। ಪುರವಂಕರ ಲಿ ಪರವಾಗಿ ವೈಸ್‌ಚೇರ್‌ಮೇನ್ ಶ್ರೀ ನಾನಿ ಆರ್.ಚೋಕ್ಸಿ ಭೂ.ಪ	207/7	1–22	–	1–22
78.	M/s Puravankara Ltd Formerly known as puravankara Projects Ltd) Rep by its vice chairman Nani R Choksey Rep by S- ಭೂ.ಪ	208/1	1–26	–	1–26
79.	M/s Puravankara Ltd Formerly known as puravankara Projects Ltd) Rep by its vice chairman Nani R Choksey Rep by S- ಭೂ.ಪ	208/2	0–30	–	0–30
80.	M/s Puravankara Ltd Formerly known as puravankara Projects Ltd) Rep by its vice chairman Nani R Choksey Rep by S- ಭೂ.ಪ	208/3	0–38	0–01	0–37
81.	M/s Kalpak Realty Private ltd Rep by its Authorised Signatory Sri.B.M JayaShankar ಬಿನ್ Mr.Thimmegowda	208/4	0–34	0–01	0–33
82.	M/s Puravankara Ltd Formerly known as puravankara Projects Ltd) Rep by its vice chairman Nani R Choksey Rep by S- ಭೂ.ಪ	208/5	0–31	–	0–31
83.	ಮೆ॥ ಪುರವಂಕರ ಲಿಮಿಟೆಡ್ ಪರವಾಗಿ ನಾನಿ ಆರ್ ಚೋಕ್ಸ್– ಭೂ.ಪ	209/1	1–10	–	1–10
84.	M/s Puravankara Ltd Formerly known as puravankara Projects Ltd) Rep by its vice chairman Nani R Choksey Rep by S- ಭೂ.ಪ	209/2	2–00	–	2–00
85.	M/s Puravankara Ltd Formerly known as puravankara Projects Ltd) Rep by its vice chairman Nani R Choksey Rep by S- ಭೂ.ಪ	209/3	0–22	0–02	0–20
86.	M/s Puravankara Ltd Formerly known as puravankara Projects Ltd) Rep by its vice chairman Nani R Choksey Rep by S- ಭೂ.ಪ	209/4	1–02	0–02	1–00
87.	M/s Puravankara Ltd Formerly known as puravankara Projects Ltd) Rep by its vice chairman Nani R Choksey Rep by S- ಭೂ.ಪ	209/5	0–10	–	0–10
88.	ಎಂ.ಶ್ರೀನಿವಾಸರೆಡ್ಡಿ ಬಿನ್ ಲೇ। ಮುನಿಸ್ವಾಮಿರೆಡ್ಡಿ	210/1	2–33	0–10	2–23
89.	ಮೆ। ಪುರವಂಕರ ಲಿ ಪರವಾಗಿ ವೈಸ್‌ಚೇರ್‌ಮೇನ್ ನಾನಿ ಆರ್.ಚೋಕ್ಸಿ ಇವರ ಪರವಾಗಿ ಎಸ್.ಪಿ.ಎ ಅಧಿಕಾರವನ್ನು ಪಡ ಕೋಂ ರಾಜುಹೆಗ್ಡೆ	210/2	2–34	0–07	2–27
90.	ಮೆ। ಪುರವಂಕರ ಲಿ ಪರವಾಗಿ ವೈಸ್‌ಚೇರ್‌ಮೇನ್ ನಾನಿ ಆರ್.ಚೋಕ್ಸಿ ಇವರ ಪರವಾಗಿ ಎಸ್.ಪಿ.ಎ ಅಧಿಕಾರವನ್ನು ಪಡ ಕೋಂ ರಾಜುಹೆಗ್ಡೆ	211/1	2–35	0–03	2–32
91.	ಎಂ.ಶ್ರೀನಿವಾಸರೆಡ್ಡಿ ಬಿನ್ ಲೇ। ಮುನಿಸ್ವಾಮಿರೆಡ್ಡಿ	211/2	1–15	0–01	1–14
92.	ಎಂ.ಶ್ರೀನಿವಾಸರೆಡ್ಡಿ ಬಿನ್ ಲೇ। ಮುನಿಸ್ವಾಮಿರೆಡ್ಡಿ	211/3	1–11	0–01	1–10
93.	ಎನ್‌ಎ–ಕೆ	212/1	2–29	0–03	2–26
94.	ಎನ್‌ಎಕೆ	212/2	1–30	0–02	1–28
95.	ಎನ್‌ಎ–ಕೆ	212/3	0–20	–	0–20
96.	ಎನ್‌ಎ–ಕೆ	212/4	0–20	–	0–20
97.	M/s Puravankara Ltd Formerly known as puravankara Projects Ltd) Rep by its vice chairman Nani R Choksey Rep by SPA Holder ಬಿನ್ B. Rajanna	213/1	2–30.08	0–02.08	2–28
98.	ಇಂದ್ರಮ್ಮ ಕೋಂ ಚಂದ್ರಶೇಖರ್	213/2	0–15.04	0–01.04	0–14
99.	ರಾಮರೆಡ್ಡಿ ಬಿನ್ ಲೇ। ರೆಡ್ಡಪ್ಪ	213/3	0–27.12	0–00.12	0–27
100.	ವೆಂಕಟರೆಡ್ಡಿ ಜೆ ಬಿನ್ ವಿ ಜಯರಾಮರೆಡ್ಡಿ, ಗೀತಾ ಕೋಂ ವೆಂಕಟರೆಡ್ಡಿ ಮೇಲಿನ ಜಂಟಿ	213/4	0–27.08	0–00.08	0–27
101.	ಮುನಿರಾಜು ಬಿನ್ ಶಿವರಾಮರೆಡ್ಡಿ	213/5	1–00	–	1–00
102.	ಶ್ರೀನಿವಾಸ ಬಿನ್ ಎಂ.ನಾರಾಯಣರೆಡ್ಡಿ	233	2–00	–	2–00
		ಒಟ್ಟು	**209-16.08**	**84-25.08**	**124-31**
	ಗ್ರಾಮ: ಅಡಿಗಾರಕಲ್ಲಹಳ್ಳಿ ಹೋಬಳಿ: ಸರ್ಜಾಪುರ–1 ತಾಲ್ಲೂಕು: ಆನೇಕಲ್ ಜಿಲ್ಲೆ: ಬೆಂಗಳೂರು ನಗರ				
1.	ಹೈದರ್ ಖಾನ್ ಬಿನ್ ತೋ.ಇಬ್ರಾಹೀಂ ಖಾನ್, ಸಲಾರ್ ಖಾನ್ ಅಹಮದ್ ಉಲ್ಲಾ ಖಾನ್ ಪರ್ಹತ್ ತಾಜ್ ಅಶ್ವಪ್ ಖಾತೂನ್ ಸಿರಕಿಂದರ್ ಖಾನ್ ಕಲಂದರ್ ಖಾನ್ ಉಮಾಯುನ್ ಖಾನ್–ಅಸ್ಕರ್ ಉಲ್ಲಾ ಖಾನ್ ಗುಲ್ನಜ್ ಬೇಗಂ	78/1	5–11	0–02	5–09
2.	ರೋಷನ್ ಖಾನ್ ಬಿನ್ ಹೈದರ್ ಖಾನ್	78/2	0–39	–	0–39
3.	ಸ.ಗೋಮಾಳ, ಮೆ। ಕೃಷಿ ಪ್ರಾಜೆಕ್ಟ್ ಪ್ರೈ.ಲಿ	79	5–13	–	5–13
4.	ಎನ್ ಎ ಕೆ	106/1	2–18	0–04	2–14
5.	ಅಬ್ದುಲ್ ರಜಾಕ್ ಖಾನ್ ಬಿನ್ ಅಬ್ದುಲ್ ಗಫಾರ್ ಖಾನ್	106/2	2–24	0–06	2–18
6.	ಗೌಸ್ ಖಾನ್ ಬಿನ್ ಹುಸೇನ್ ಖಾನ್ ಭೂ.ಪ	108/1	3–03	0–07	2–36
7.	ಕೆ.ಹೆಚ್ ಮಹಮ್ಮದ್ ಖಾನ್ ಬಿನ್ ಹುಸೇನ್ ಖಾನ್–ಭೂ.ಪ	109	7–10	0–06	7–04
8.	ಶಿವಶಂಕರ್ ಬಿನ್ ಲೇ॥ ಹುಚ್ಚೀರಯ್ಯ	110/1	2–23.08	0–01.08	2–22
9.	ಜಾನ್ ಪಾಷ ಬಿನ್ ಲೇ। ಅಬ್ದುಲ್ ರಹೀಂ ಭೂ.ಪ	110/2	1–01	0–01	1–00
10.	ಗೌಸ್‌ಖಾನ್–ಭೂ.ಪ	110/3	1–12	0–01	1–11
11.	ಅಮೀರ್ ಖಾನ್–ಭೂ.ಪ ಖೈಸರ್ ಖಾನ್ ಅನ್ಸಾರ್ ಖಾನ್ ಅಪ್ಸರ್ ಖಾನ್ ಅಖಿಲಾ ಖಾತೂನ್ ಸವರ್ ಖಾನ್ ಜೋಹರ್ ಖಾನ್ ಫಾಜಿಲಾ ಖಾತೂನ್ – ಭೂ.ಪ	110/4	1–23.08	0–00.08	1–23
12.	ಹಮ್ಮರ್ ಖಾನ್ ಬಿನ್ ಲೇ॥ ಖಾದರ್ ಖಾನ್	111	4–20	0–03	4–17
13.	ಕೆ.ಚಂದ್ರಮ್ಮ ಬಿನ್ ಎಸ್.ಚೌಡರೆಡ್ಡಿ, ವೆಂಕಟಮ್ಮ ಕೋಂ ಲೇ॥ ಚೌಡರೆಡ್ಡಿ, ಲೋಕೇಶ್ ರೆಡ್ಡಿ ಬಿನ್ ಲೇ। ಕೃಷ್ಣಾರೆಡ್ಡಿ, ಪುರವಂಕರ ಲಿ ಪರವಾಗಿ ವೈಸ್ ಚೇರ್ ಮೆನ್ ನಾನಿ ಆರ್ ಚೋಕ್ಸಿ	115	6–27	0–10	6–17
14.	ಮೆ। ಪುರವಕರ ಲಿ ಪರವಾಗಿ ಚೇರ್ ಮೆನ್ ಪರವಾಗಿ ನಾನಿ ಆರ್ ಜೋಕ್ಸಿ ಇವರ ಪರವಾಗಿ ಎಸ್.ಪಿ.ಎ ಅಧಿಕಾರವನ್ನು ಪಡೆದಿ ಕೋಂ ರಾಜು ಹೆಗ್ಡೆ–ಭೂ.ಪ	116	2–11	0–02	2–09
15.	ಮೆ। ಪುರವಕರ ಲಿ ಪರವಾಗಿ ಚೇರ್ ಮೆನ್ ಪರವಾಗಿ ನಾನಿ ಆರ್ ಜೋಕ್ಸಿ ಇವರ ಪರವಾಗಿ ಎಸ್.ಪಿ.ಎ ಅಧಿಕಾರವನ್ನು ಪಡ ಕೋಂ ರಾಜು ಹೆಗ್ಡೆ	117	2–04	0–06	1–38
16.	ನಾರಾಯಣಸ್ವಾಮಿ ರಾಜಣ್ಣ ಬಿನ್ ಗುಳ್ಳಪ್ಪ	118	2–25	0–18	2–07
17.	ಸಿದ್ದಾರೆಡ್ಡಿ ಬಿನ್ ಮುನಿರೆಡ್ಡಿ	119/1	2–18	–	2–18
18.	M/s Puravankara Ltd Rep by its vice chairman Nani R Choksey ಭೂ.ಪ	119/2	0–22	–	0–22
19.	M/s Puravankara Ltd Rep by its vice chairman Nani R Choksey by his SPA Holder Mr.R.Veerabhadraswamy S/o ಭೂ.ಪ	119/3	0–25	–	0–25
20.	M/s Puravankara Ltd Rep by its vice chairman Nani R Choksey by his SPA Holder Mr.R.Veerabhadraswamy S/o ಭೂ.ಪ	119/4	0–25	–	0–25
21.	M/s Puravankara Ltd Rep by its vice chairman Nani R Choksey ಭೂ.ಪ	119/5	0–33	0–03	0–30
22.	ಪಾರ್ವತಮ್ಮ ಕೋಂ ಲೇ। ರಾಮಯ್ಯ ಭೂ.ಪ, ಪಿಲ್ಲಾರೆಡ್ಡಿ ಬಿನ್ ಕೃಷ್ಣಾರೆಡ್ಡಿ	120/1	1–18.12	0–02.04	1–16.08
23.	ಎನ್.ಚಂದ್ರರೆಡ್ಡಿ ಬಿನ್ ಲೇ। ನಂಜಾರೆಡ್ಡಿ ಭೂ.ಪ	120/2	1–13	0–06	1–07
24.	ಎನ್ ಶ್ರೀನಿವಾಸ ಬಿನ್ ಲೇ। ನಂಜಾರೆಡ್ಡಿ – ಭೂ.ಪ	120/3	1–13	0–13	1–00
25.	ಎಸ್.ರಾಹಲ್‌ರೆಡ್ಡಿ ಬಿನ್ ಲೇ॥ ಶಂಕರ್‌ರೆಡ್ಡಿ, ಎಸ್.ಯಶವಂತ್ ಬಿನ್ ಶಂಕರ್‌ರೆಡ್ಡಿ, ಶಿಲ್ಪ ಆರ್ ಕೋಂ ಲೇ॥ ಶಂಕರ್ ರೆಡ್ಡಿ ಮೇಲಿನ ಜಂಟಿ	120/4	0–27.08	0–01	0–26.08
26.	ಕೃಷ್ಣಾರೆಡ್ಡಿ ಬಿನ್ ಲೇ। ರಾಮಯ್ಯ	120/5	0–20.12	0–00.12	0–20
27.	ಶಿವಶಂಕರ್ ಬಿನ್ ಲೇ॥ ಹುಚ್ಚೀರಯ್ಯ	121	6–00	0–11	5–29
28.	ರೆಡ್ಡಪ್ಪ ಬಿನ್ ರಾಮಯ್ಯ, ರಾಮರೆಡ್ಡಿ ಬಿನ್ ರೆಡ್ಡಿಪ್ಪ, ತೋಟಿಮುನಿಯಪ್ಪ ಬಿನ್ ಮುನೆಲ್ಲಪ್ಪ, ರಹೀಂಖಾನ್ ಬಿನ್ ಖಾಜಾದ್ದೀನ್ ಎಂ.ಎಸ್ ಶ್ರೀನಿವಾಸ್ ರೆಡ್ಡಿ, ಎಂ.ಎಸ್ ಕಾಂತರೆಡ್ಡಿ ಬಿನ್ ಲೇ॥ ಶಂಕರಪ್ಪ, ಹೆಚ್.ಎಂ.ವಿಜಯರೆಡ್ಡಿ ಬಿನ್ ಹೆಚ್.ವಿ.ಮುನಿಶಾಮಿ ರೆಡ್ಡಿ	123	2–06	–	2–06
29.	ವೆಂಕಟರಮಣರೆಡ್ಡಿ ಬಿನ್ ಕೊಂಡಾರೆಡ್ಡಿ, ಅಶೋಕ್ ಬಿನ್ ಲೇ। ಕೊಂಡಾರೆಡ್ಡಿ, ಸಾವಿತ್ರಮ್ಮ ಕೋಂ ಲೇ। ಮುನಿರೆಡ್ಡಿ	124	2–01	–	2–01
30.	ನಾರಾಯಣರೆಡ್ಡಿ ಬಿನ್ ಮುನಿರೆಡ್ಡಿ, ವೆಂಕಟರಮಣಪ್ಪ ಬಿನ್ ಚನ್ನಪ್ಪ, ಸಿ.ಆರ್ ಮನೋಹರ್ ಬಿನ್ ಪಿ.ರಂಗಸ್ವಾಮಿ	125/1	2–19	–	2–19
31.	ಶಿಲ್ಪ ಆರ್ ಕೋಂ ಲೇ। ಶಂಕರ್ ರೆಡ್ಡಿ, ಎಸ್ ಯಶವಂತ್ ಬಿನ್ ಶಂಕರ್ ರೆಡ್ಡಿ, ಎಸ್ ರಾಹುಲ್ ರೆಡ್ಡಿ ಬಿನ್ ಲೇ। ಶಂಕರ್ ರೆಡ್ಡಿ ಮೇಲಿನ ಜಂಟಿ	125/2	1–01.08	0–07	0–34.08
32.	ಕೃಷ್ಣಾರೆಡ್ಡಿ ಬಿನ್ ರಾಮಯ್ಯ, ಆರ್ ಮಮತ ಕೋಂ ನಟರಾಜ್, ಆರ್.ಪ್ರತಿಭಾ ಕೋಂ ಸಂತೋಷ್, ಆರ್.ದೀಪಾ ಕೋಂ ಗಿರೀಶ್,	125/3	1–24.08	–	1–24.08
33.	ಸಿದ್ದಾರೆಡ್ಡಿ ಬಿನ್ ಮುನಿರೆಡ್ಡಿ	126/1	0–26.04	–	0–26.04
34.	ನಾರಾಯಣರೆಡ್ಡಿ ಬಿನ್ ವೆಂಕಟರೆಡ್ಡಿ, ವೆಂಕಟಮ್ಮ ಕೋಂ ಲೇ॥ ವಿ.ಶಿವರಾಮರೆಡ್ಡಿ ಮುನಿರಾಜು ಎಸ್ ನಾಗೇಶ್ ರೆಡ್ಡಿ ಎಂ.ಎಸ್ ಬಿನ್ ಲೇ॥ ವಿ.ಶಿವರಾಮರೆಡ್ಡಿ, ಲೋಕೇಶ್ ರೆಡ್ಡಿ ಎಂ.ಕೆ ವೆಂಕಟರೆಡ್ಡಿ ಬಿನ್ ಲೇ॥ ಕೃಷ್ಣಾರೆಡ್ಡಿ	126/2	2–29	0–04	2–25
35.	ಮುನಿರೆಡ್ಡಿ ಬಿನ್ ಮುನಿರೆಡ್ಡಿ	126/3	0–28.04	0–02	0–26.04
36.	ಎಂ.ಶಶಿಕುಮಾರ್ ಬಿನ್ ಲೇ॥ ಮುನಿರೆಡ್ಡಿ	126/4	0–26.04	–	0–26.04
37.	ವೆಂಕಟರಮಣರೆಡ್ಡಿ ಬಿನ್ ಲೇ॥ ಕೊಂಡಾರೆಡ್ಡಿ	126/5	0–29.04	0–03	0–26.04
38.	ರಾಮಯ್ಯ ಆರ್.ನಂಜಾರೆಡ್ಡೆ ಮೇಲಿನ ಜಂಟಿ	127/1	1–28	–	1–28
39.	ಅಶೋಕ್ ರೆಡ್ಡಿ ಬಿನ್ ಲೇ॥ ಕೊಂಡಾರೆಡ್ಡಿ,	127/2	0–08	–	0–08
40.	ಎನ್ ರವೀಂದ್ರ ಬಿನ್ ಲೇ। ನಂಜಾರೆಡ್ಡಿ	127/3	2–37	0–06	2–31
41.	ಸತೀಶ್ ರೆಡ್ಡಿ ಬಿನ್ ನಾರಾಯಣರೆಡ್ಡಿ, ಎನ್.ಶ್ರೀನಿವಾಸರೆಡ್ಡಿ ಬಿನ್ ನಾರಾಯಣರೆಡ್ಡಿ	127/4	1–08	–	1–08
42.	ಎನ್.ನಂಜಾರೆಡ್ಡಿ ಬಿನ್ ನಾರಾಯಣರೆಡ್ಡಿ	127/5	0–27	0–04	0–23
		ಒಟ್ಟು	**89-20**	**3-11**	**86-09**

ಘೋಷ್ವಾರೆ

ಕ್ರ. ಸಂ.	ತಾಲ್ಲೂಕು	ಗ್ರಾಮ	ವಿಸ್ತೀರ್ಣ ಎ–ಗು		
			ಐನು	ಖರಾಬು	ಬಾಕಿ
1	ಆನೇಕಲ್	ಬಿಕ್ಕನಹಳ್ಳಿ,	57–00	53–00	4–00
2		ಮುತ್ತನಲ್ಲೂರು ಅಮಾನಿಕರೆ	184–36.04	8–39.12	175–36.08
3		ಸೊಳ್ಳೇಪುರ	49–28	1–29	47–39
4		ಹಂದೇನಹಳ್ಳಿ	57–08	0–08	56–30
5		ಎಸ್.ಮೇಡಹಳ್ಳಿ	209–16.08	84–25.08	124–31
6		ಅಡಿಗಾರಕಲ್ಲಹಳ್ಳಿ	89–20	3–11	86–09
		ಒಟ್ಟು	**647–28.12**	**151–33.08**	**495–25.08**

ಈ ಮೇಲ್ಕಂಡ ಜಮೀನಿನ ಖಾತೆದಾರರು/ಅನುಭವದಾರರು/ಹಿತಾಸಕ್ತರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಕರ್ನಾಟಕ ಪ್ರದೇಶಾಭಿವೃದ್ಧಿ ಕಾಯ್ದೆ 1966ರ ವಿಧಿ 28(2)ರ ಮೇರೆಗೆ ಅಧಿಸೂಚಿತ ಖಾತೆದಾರರಿಗೆ/ಅನುಭವದಾರರಿಗೆ ತಿಳುವಳಿಕೆ ನೋಟೀಸುಗಳನ್ನು ಹೊರಡಿಸಿ ಜಾರಿ ಮಾಡಲಾಗಿದೆ ಹಾಗೂ ನೋಂದಾಯಿತಿ ಅಂಚೆ ಮೂಲಕ ರವಾನಿಸಲಾಗಿತ್ತು. ಕೆಲವು ಭೂಮಾಲೀಕರ ವಿಳಾಸ ತಿಳಿದು ಬಂದಿಲ್ಲವಾದ್ದರಿಂದ ಅಂಚೆ ಲಕೋಟೆಗಳ ಮೇಲೆ ಅಂಚೆ ಇಲಾಖೆಯವರು ಷರಾ ಬರೆದು ಈ ಕಛೇರಿಗೆ ಹಿಂದಿರುಗಿಸಿರುತ್ತಾರೆ. ಮೇಲ್ಕಂಡ ಜಮೀನಿನ ಖಾತೆದಾರರು/ಹಕ್ಕದಾರರುಗಳು ಈ ಪ್ರಕಟಣೆಯನ್ನು ಕೆ.ಐ.ಎ.ಡಿ. ಕಾಯ್ದೆ 1966ರ ವಿಧಿ 28(2)ರ ಮೇರೆಗೆ ತಿಳುವಳಿಕೆ ನೋಟೀಸು ಎಂದು ಪರಿಗಣಿಸತಕ್ಕದ್ದು.

ಪ್ರಸ್ತುತ ಭೂಸ್ವಾಧೀನ ಪ್ರಕ್ರಿಯೆಗೆ ಆಕ್ಷೇಪಣೆಗಳೇನಾದರೂ ಇದ್ದಲ್ಲಿ ಭೂಮಾಲೀಕರು/ಹಿತಾಸಕ್ತಿ ಉಳ್ಳವರು ತಮ್ಮ ಆಕ್ಷೇಪಣೆಗಳನ್ನು ರಾಜ್ಯಪತ್ರದಲ್ಲಿ ಈ ಪ್ರಕಟಣೆಗೊಂಡ ನಂತರ ಅಗತ್ಯ ದಾಖಲೆಗಳೊಂದಿಗೆ ಖುದ್ದಾಗಿ ಅಥವಾ ಅವರ ಪರವಾಗಿ ಅಧಿಕಾರ ಪಡೆದವರು ಈ ಕಛೇರಿಗೆ ಸಲ್ಲಿಸಲು ತಿಳಿಸಿದೆ. ಅವಧಿ ಮೀರಿ ಬರುವ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ ಎಂಬುದಾಗಿ ಈ ಮೂಲಕ ಸಾರ್ವಜನಿಕ ಗಮನಕ್ಕೆ ತರಲಾಗಿದೆ.

ವಾಸಾಸಂಇ/ಉನಿ-ಸಿ.ಪಿ/323/ಕೆಎಸ್‌ಎಂಸಿಎ/2024-25 **ಸಹಿ/- ವಿಶೇಷ ಭೂಸ್ವಾಧೀನಾಧಿಕಾರಿ–2, ಕೆಐಎಡಿಬಿ, ಬೆಂಗಳೂರು**

ಮರ ಕಡಿಯಲು ನಿರ್ಬಂಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆನ್ನಿಗಾನಹಳ್ಳಿ–ಚಿಕ್ಕಬಾಣಾವರ ಮಾರ್ಗ ಮಧ್ಯದಲ್ಲಿನ ನಿಲ್ದಾಣಗಳ ನಿರ್ಮಾಣಕ್ಕಾಗಿ ಉಪನಗರ ರೈಲ್ವೆ (ಬಿಎಸ್‌ಆರ್‌ಪಿ) ಕಾರಿಡಾರ್-2ರ ಯೋಜನೆಯಡಿ 788 ಮರಗಳನ್ನು ಕತ್ತರಿಸಲು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ನೀಡಿದ್ದ ಅನುಮತಿಗೆ ಹೈಕೋರ್ಟ್‌ ನಿರ್ಬಂಧ ವಿಧಿಸಿದೆ. ಜುಲೈ 12ರವರೆಗೆ ಮರಗಳನ್ನು ಕತ್ತರಿಸಬಾರದು ಎಂದು ಆದೇಶಿಸಿದೆ.

ಮರಗಳನ್ನು ಕಡಿಯುವುದಕ್ಕೆ ಕೆ-ರೈಡ್‌ಗೆ ನೀಡಲಾಗಿದ್ದ ಅನುಮತಿಯನ್ನು ಪ್ರಶ್ನಿಸಿ ಪರಿಸರವಾದಿ ದತ್ತಾತ್ರೇಯ ದೇವರೆ ಮತ್ತು 'ಬೆಂಗಳೂರು ಎನ್ವಿರಾನ್ಮೆಂಟಲ್ ಟ್ರಸ್ಟ್' ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಎನ್.ವಿ.ಅಂಜಾರಿಯಾ ನೇತೃತ್ವದ ವಿಭಾಗೀಯ ನ್ಯಾಯಪೀಠ ಈ ಕುರಿತಂತೆ ಮಧ್ಯಂತರ ಆದೇಶ ಹೊರಡಿಸಿದೆ.

'ಅತ್ಯಗತ್ಯ ಎನಿಸಿದರಷ್ಟೇ ಮರಗಳನ್ನು ಕಡಿಯಬೇಕು' ಎಂದು ಮೌಖಿಕವಾಗಿ ಹೇಳಿದ ನ್ಯಾಯಪೀಠ 'ಮಧ್ಯಂತರ ಅರ್ಜಿಗೆ ಸಂಬಂಧಿಸಿದಂತೆ ಆಕ್ಷೇಪಣೆ ಸಲ್ಲಿಸಿ' ಎಂದು ಬಿಬಿಎಂಪಿ ಪರ ವಕೀಲರಿಗೆ ಸೂಚಿಸಿ ವಿಚಾರಣೆಯನ್ನು ಜುಲೈ 8ಕ್ಕೆ ಮುಂದೂಡಿದೆ.

ಚನ್ನಪಟ್ಟಣ ಅಭ್ಯರ್ಥಿ ಆಯ್ಕೆ ವರಿಷ್ಠರ ನಿರ್ಧಾರ: ನಿಖಿಲ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಚನ್ನಪಟ್ಟಣ ಉಪ ಚುನಾವಣೆಯಲ್ಲಿ ಅಭ್ಯರ್ಥಿ ಯಾರಾಗಬೇಕು ಎನ್ನುವುದನ್ನು ಎರಡೂ ಪಕ್ಷಗಳ ನಾಯಕರು ನಿರ್ಧರಿಸಲಿದ್ದಾರೆ. ಯಾರೇ ಅಭ್ಯರ್ಥಿಯಾದರೂ ಕಾಂಗ್ರೆಸ್ ಮಣಿಸಲು ಶ್ರಮಿಸುತ್ತೇವೆ' ಎಂದು ಜೆಡಿಎಸ್ ರಾಜ್ಯ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಹೇಳಿದರು.

'ಮಾಜಿ ಸಚಿವ ಸಿ.ಪಿ. ಯೋಗೇಶ್ವರ್ ಸಹ ಆಕಾಂಕ್ಷಿ. ಹಲವು ವರ್ಷಗಳಿಂದ ಕ್ಷೇತ್ರದ ಅಭಿವೃದ್ಧಿಗೆ ಶ್ರಮಿಸುತ್ತಿದ್ದಾರೆ. ಎರಡೂ ಪಕ್ಷಗಳ ಮುಖಂಡರು, ಕಾರ್ಯಕರ್ತರ ಅಭಿಪ್ರಾಯ ಸಂಗ್ರಹಿಸಿ ವರಿಷ್ಠರಿಗೆ ಸಲ್ಲಿಸಲಾಗುವುದು. ನಂತರ ಮೈತ್ರಿ ಅಭ್ಯರ್ಥಿ ಆಯ್ಕೆಯನ್ನು ಅಂತಿಮಗೊಳಿಸಲಾಗುವುದು. ಸದ್ಯಕ್ಕೆ ನನ್ನ ಸ್ಪರ್ಧೆಯ ಬಗ್ಗೆ ಚರ್ಚೆ ಅಪ್ರಸ್ತುತ' ಎಂದು ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಹೇಳಿದರು.

'ಸಿನಿಮಾ ಕ್ಷೇತ್ರದ ಚಟುವಟಿಕೆಗಳಿಗೆ ಸದ್ಯಕ್ಕೆ ವಿರಾಮ ನೀಡಿ, ಪಕ್ಷದ ಸಂಘಟನೆಯತ್ತ ಗಮನ ಹರಿಸುವೆ. ಕಾರ್ಯಕರ್ತರಲ್ಲಿ ಆತ್ಮವಿಶ್ವಾಸ ತುಂಬಿ ಜಿಲ್ಲೆಯಲ್ಲಿ ಪಕ್ಷವನ್ನು ಮತ್ತೆ ಬಲಗೊಳಿಸಲು ಶ್ರಮಿಸುತ್ತೇವೆ' ಎಂದರು.

'ರಾಜ್ಯ ಸರ್ಕಾರದ ಭ್ರಷ್ಟಾಚಾರದ ವಿರುದ್ಧ ಹೋರಾಟ ಮುಂದುವರಿಸುತ್ತೇವೆ. ಲೋಕಸಭೆ ಚುನಾವಣೆ ಮುಗಿದ ಬಳಿಕ ಗ್ಯಾರಂಟಿ ಯೋಜನೆಗಳನ್ನು ರದ್ದು ಮಾಡುವ ಕುರಿತು ಕಾಂಗ್ರೆಸ್ ನಾಯಕರೇ ಮಾತನಾಡುತ್ತಿದ್ದಾರೆ. ರದ್ದು ಮಾಡಿದರೆ ಕಾಂಗ್ರೆಸ್ ವಿರುದ್ಧ ಪ್ರತಿಭಟನೆ ನಡೆಸುತ್ತೇವೆ' ಎಂದು ಹೇಳಿದರು.

ಹಳದಿ ಮಾರ್ಗ: ಪರೀಕ್ಷೆ ಪ್ರಾರಂಭ

3–4 ತಿಂಗಳು ನಡೆಯಲಿದೆ ಪರೀಕ್ಷೆ • ವರ್ಷಾಂತ್ಯಕ್ಕೆ ವಾಣಿಜ್ಯ ಸಂಚಾರ ಆರಂಭದ ನಿರೀಕ್ಷೆ

ಪ್ರಜಾವಾಣಿ ವಾರ್ತೆ


'ನಮ್ಮ ಮೆಟ್ರೊ' ಹಳದಿ ಮಾರ್ಗದಲ್ಲಿ ಗುರುವಾರ ಚಾಲಕ ರಹಿತ ಎಂಜಿನ್ ಹೊಂದಿರುವ ರೈಲು ಸಂಚರಿಸಿ ಪರೀಕ್ಷೆ ಆರಂಭಿಸಿತು

ಬೆಂಗಳೂರು: 'ನಮ್ಮ ಮೆಟ್ರೊ' ಹಳದಿ ಮಾರ್ಗದಲ್ಲಿ ಪ್ರಮುಖ ಪರೀಕ್ಷೆಗಳು ಗುರುವಾರ ಆರಂಭಗೊಂಡಿವೆ. ಚಾಲಕ ರಹಿತ ಎಂಜಿನ್ ಹೊಂದಿರುವ ರೈಲು ಸಂಚರಿಸಿತು.

ಬೊಮ್ಮಸಂದ್ರ–ಆರ್‌.ವಿ. ರಸ್ತೆ ನಡುವಿನ 18.82 ಕಿ.ಮೀ. ಹಳಿಯಲ್ಲಿ ಚಾಲಕ ರಹಿತ ಎಂಜಿನ್ ಕೋಚ್‌ನಲ್ಲಿ ತಂತ್ರಜ್ಞರು ಗುರುವಾರ ಸಂಚರಿಸಿ ಟ್ರ್ಯಾಕ್ಷನ್ ಮತ್ತು ಬ್ರೇಕಿಂಗ್ ಟೆಸ್ಟ್ ಮಾಡಿದರು. ಇನ್ನು ಮೂರ್ನಾಲ್ಕು ತಿಂಗಳು ವಿವಿಧ ಪರೀಕ್ಷೆಗಳು ನಡೆಯಲಿವೆ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದ್ದಾರೆ.

ಬೊಮ್ಮಸಂದ್ರ, ಹೆಬ್ಬಗೋಡಿ, ಹುಸ್ಕೂರ್ ರಸ್ತೆ, ಇನ್ಫೋಸಿಸ್ ಫೌಂಡೇಶನ್ (ಕೋಣಪ್ಪನ ಅಗ್ರಹಾರ), ಎಲೆಕ್ಟ್ರಾನಿಕ್ ಸಿಟಿ, ಬಿರಿಟೆನ ಅಗ್ರಹಾರ, ಹೊಸರಸ್ತೆ, ಸಿಂಗಸಂದ್ರ, ಕೂಡ್ಲು ಗೇಟ್, ಹೊಂಗಸಂದ್ರ, ಬೊಮ್ಮನಹಳ್ಳಿ, ಸೆಂಟ್ರಲ್ ಸಿಲ್ಕ್ ಬೋರ್ಡ್, ಬಿಟಿಎಂ ಲೇಔಟ್, ಜಯದೇವ ಆಸ್ಪತ್ರೆ, ರಾಗಿಗುಡ್ಡ, ಆರ್‌ವಿ. ರಸ್ತೆ ನಿಲ್ದಾಣಗಳವರೆಗೆ ಪ್ರೊಟೊ ಟೈಪ್ (ಮೂಲ ಮಾದರಿ) ಕೋಚ್ ರೈಲು ಸಂಚರಿಸಿ ವಿವಿಧ ಪರೀಕ್ಷೆಗಳನ್ನು ನಡೆಸಿತು.

ಈ ಪರೀಕ್ಷೆಗಳು ಯಶಸ್ವಿಯಾದ ಬಳಿಕ ಸಿಗ್ನಲಿಂಗ್, ದೂರಸಂಪರ್ಕ, ವಿದ್ಯುತ್ ಸರಬರಾಜು ವ್ಯವಸ್ಥೆಗಳೊಂದಿಗೆ ಸಿಸ್ಟಂ ಸಂಯೋಜನೆ ನಡೆಯಲಿದೆ. ಈ ಎಲ್ಲ ಪರೀಕ್ಷೆಗಳು ಪೂರ್ಣಗೊಂಡ ಬಳಿಕ ಗುಣಮಟ್ಟ ತಪಾಸಣಾ ಸಂಸ್ಥೆಗಳು ಸುರಕ್ಷತಾ ಪರೀಕ್ಷೆ ನಡೆಸಿ ವರದಿ ನೀಡಲಿವೆ. ಈ ವರದಿ ಸಕಾರಾತ್ಮಕವಾಗಿದ್ದರೆ ರೈಲ್ವೆ ಮಂಡಳಿಯು ಮೆಟ್ರೊ ರೈಲು ಆರಂಭಿಸಲು ಅನುಮತಿ ನೀಡಲಿದೆ ಎಂದು ಬಿಎಂಆರ್‌ಸಿಎಲ್ ರೋಲಿಂಗ್ ಸ್ಟಾಕ್ ತಜ್ಞರು ವಿವರ ನೀಡಿದ್ದಾರೆ.

ಆರ್.ವಿ.ರಸ್ತೆ ನಿಲ್ದಾಣದಿಂದ ಬೊಮ್ಮಸಂದ್ರ ಮಾರ್ಗದ (ಹಳದಿಮಾರ್ಗ) ಕಾಮಗಾರಿ 2017ರಲ್ಲಿ ಆರಂಭಗೊಂಡಿತ್ತು. ಮೆಟ್ರೊ ಹಸಿರು, ಗುಲಾಬಿ ಮತ್ತು ನೀಲಿ ಮಾರ್ಗಗಳೊಂದಿಗೆ ಸಂಪರ್ಕಿಸುವ ಈ ಮಾರ್ಗದಲ್ಲಿ ಡಬಲ್ ಡೆಕ್ಕರ್ ಸೇತುವೆ ಕೂಡ ಇದೆ. ರಾಗಿಗುಡ್ಡದಿಂದ ಸೆಂಟ್ರಲ್ ಸಿಲ್ಕ್ ಬೋರ್ಡ್ ಜಂಕ್ಷನ್‌ವರೆಗೆ 3.3 ಕಿ.ಮೀ. ಉದ್ದ ಒಂದೇ ಪಿಲ್ಲರ್‌ನ ರೋಡ್ ಕಂ ರೇಲ್ (ಡಬಲ್ ಡೆಕ್ಕರ್) ಸೇತುವೆ ನಿರ್ಮಿಸಲಾಗಿದೆ. ಅದರ ಕಾಮಗಾರಿ ಬಹುತೇಕ ಪೂರ್ಣಗೊಂಡಿದೆ. ಮೆಟ್ರೊ ರೈಲು ಈ ವರ್ಷದ ಕೊನೆಗೆ ಆರಂಭಗೊಳ್ಳಲಿದ್ದು, ಅದೇ ಸಮಯದಲ್ಲಿ ವಾಹನ ಸಂಚಾರಕ್ಕೆ ಡಬಲ್ ಡೆಕ್ಕರ್ ಸೇತುವೆ ಮುಕ್ತಗೊಳ್ಳಲಿದೆ ಎಂದು ಮಾಹಿತಿ ನೀಡಿದ್ದಾರೆ.

ತೆರೆಯದ ಮೆಟ್ರೊ ರೈಲು ಬಾಗಿಲು

ಬೆಂಗಳೂರು: 'ನಮ್ಮ ಮೆಟ್ರೊ' ನೇರಳೆ ಮಾರ್ಗದ ಟ್ರಿನಿಟಿ ನಿಲ್ದಾಣದಲ್ಲಿ ಗುರುವಾರ ಮೆಟ್ರೊ ರೈಲಿನ ಬಾಗಿಲುಗಳು ತೆರೆದುಕೊಳ್ಳದ ಕಾರಣ ಪ್ರಯಾಣಿಕರು ಆತಂಕಕ್ಕೀಡಾದರು.

ವೈಟ್‌ಫೀಲ್ಡ್ ಕಡೆಯಿಂದ ಮೆಜೆಸ್ಟಿಕ್ ಕಡೆಗೆ ಸಂಚರಿಸುತ್ತಿದ್ದ ರೈಲು ಬೆಳಿಗ್ಗೆ 9.58ಕ್ಕೆ ಟ್ರಿನಿಟಿ ನಿಲ್ದಾಣ ತಲುಪಿದಾಗ ತಾಂತ್ರಿಕ ತೊಂದರೆಯಿಂದಾಗಿ ಬಾಗಿಲು ತೆರೆದುಕೊಳ್ಳಲಿಲ್ಲ. ಟ್ರಿನಿಟಿಯಲ್ಲಿ ಇಳಿಯುವ– ಹತ್ತುವ ಪ್ರಯಾಣಿಕರು ತೊಂದರೆ ಅನುಭವಿಸಿದರು. ಬಾಗಿಲು ತೆರೆಯುತ್ತಿಲ್ಲ ಎಂದು ಗೊತ್ತಾಗುತ್ತಿದ್ದಂತೆ ರೈಲಿನ ಒಳಗಿದ್ದ ಎಲ್ಲ ಪ್ರಯಾಣಿಕರು ಗಾಬರಿಗೊಂಡರು. ಮೆಜೆಸ್ಟಿಕ್‌ನಿಂದ ಟ್ರಿನಿಟಿ ಕಡೆಗೆ ಮೆಟ್ರೊ ಸಂಚಾರ ಸ್ಥಗಿತಗೊಳಿಸಲಾಯಿತು.

ತಂತ್ರಜ್ಞರು ಬಂದು ಬಾಗಿಲು ತೆರೆದು ಪ್ರಯಾಣಿಕರನ್ನು ಸುರಕ್ಷಿತವಾಗಿ ಇಳಿಸಿದರು. ಮೆಟ್ರೊ ಒಳಗೆ 15 ನಿಮಿಷಕ್ಕೂ ಹೆಚ್ಚು ಸಮಯ ಉಸಿರು ಬಿಗಿ ಹಿಡಿದು ಕುಳಿತಿದ್ದ ಪ್ರಯಾಣಿಕರು ನೆಮ್ಮದಿಯ ನಿಟ್ಟುಸಿರು ಬಿಟ್ಟರು. ಟ್ರಿನಿಟಿಯಲ್ಲಿ ಎಲ್ಲ ಪ್ರಯಾಣಿಕರನ್ನು ಇಳಿಸಿದ ಕಾರಣ ರಸ್ತೆಯಲ್ಲಿ ಒಮ್ಮೆಲೆ ಜನದಟ್ಟಣೆ ಉಂಟಾಯಿತು. ಕೆಲಸಕ್ಕೆ ತೆರಳುವವರು ಬಸ್, ಕ್ಯಾಬ್‌ಗಳಿಗೆ ಕಾಯುವಂತಾಯಿತು. ಕೆಲಸಕ್ಕೆ ತೆರಳುವ ಉದ್ಯೋಗಿಗಳು ಸಮಯಕ್ಕೆ ಸರಿಯಾಗಿ ತಲುಪಲಾರದೆ ಪರದಾಡಿದರು.

ಆನಂತರ ದೋಷಪೂರಿತ ಮೆಟ್ರೊವನ್ನು ಮೆಜೆಸ್ಟಿಕ್ ನಲ್ಲಿರುವ ನಾಡಪ್ರಭು ಕೆಂಪೇಗೌಡ ನಿಲ್ದಾಣದ ಲೂಪ್ ಮಾರ್ಗಕ್ಕೆ ತರಲಾಯಿತು. ಬೆಳಿಗ್ಗೆ 11.30ಕ್ಕೆ ಮೆಟ್ರೊ ಸಂಚಾರ ಪುನರಾರಂಭಗೊಂಡಿತು. ತಾಂತ್ರಿಕ ತೊಂದರೆಯಿಂದ ಪ್ರಯಾಣಿಕರಿಗೆ ಅನನುಕೂಲ ಉಂಟಾಗಿದ್ದಕ್ಕೆ ಬಿಎಂಆರ್‌ಸಿಎಲ್ ಅಧಿಕಾರಿಗಳು ವಿಷಾದ ವ್ಯಕ್ತಪಡಿಸಿದರು.

ಯುಪಿಎಸ್‌ಸಿ ಪರೀಕ್ಷೆ: 16ಕ್ಕೆ ಮೆಟ್ರೊ ಬೇಗ ಆರಂಭ

ನಾಗರಿಕ ಸೇವೆಗಳ ಪೂರ್ವಭಾವಿ ಪರೀಕ್ಷೆ (ಯುಪಿಎಸ್‌ಸಿ ಪ್ರಿಲಿಮಿನರಿ) ಜೂನ್ 16ರಂದು ನಡೆಯಲಿರುವುದರಿಂದ ಅಂದು 'ನಮ್ಮ ಮೆಟ್ರೊ' ಕಾರ್ಯಾಚರಣೆ ಒಂದು ಗಂಟೆ ಮೊದಲೇ ಆರಂಭಗೊಳ್ಳಲಿದೆ. ಪ್ರತಿ ಭಾನುವಾರ ಮೆಟ್ರೊ ಸಂಚಾರ ಬೆಳಿಗ್ಗೆ 7ಕ್ಕೆ ಆರಂಭಗೊಳ್ಳುತ್ತಿದ್ದು, ಈ ಭಾನುವಾರ ಯುಪಿಎಸ್‌ಸಿ ಪರೀಕ್ಷೆ ಇರುವುದರಿಂದ ಬೆಳಿಗ್ಗೆ 6ಕ್ಕೆ ನಾಲ್ಕು ಟರ್ಮಿನಲ್‌ಗಳಾದ ವೈಟ್‌ಫೀಲ್ಡ್ (ಕಾಡುಗೋಡಿ), ಚಲ್ಲಘಟ್ಟ, ನಾಗಸಂದ್ರ ಮತ್ತು ರೇಷ್ಮೆ ಸಂಸ್ಥೆ ನಿಲ್ದಾಣಗಳಿಂದ ಮೆಟ್ರೊ ಆರಂಭಗೊಳ್ಳಲಿದೆ ಎಂದು ಬಿಎಂಆರ್‌ಸಿಎಲ್ ಸಾರ್ವಜನಿಕ ಸಂಪರ್ಕ ಅಧಿಕಾರಿ ತಿಳಿಸಿದ್ದಾರೆ.

ಕಸದಿಂದ ವಿದ್ಯುತ್ ಘಟಕ: ಪರಿಶೀಲನೆ

ಬೆಂಗಳೂರು: ಕರ್ನಾಟಕ ವಿದ್ಯುತ್ ನಿಗಮದ (ಕೆಪಿಸಿಎಲ್) ವತಿಯಿಂದ ಬಿಡದಿಯಲ್ಲಿ ಸ್ಥಾಪಿಸಲಾಗುತ್ತಿರುವ ಕಸದಿಂದ ವಿದ್ಯುತ್ ಉತ್ಪಾದಿಸುವ ಘಟಕದಲ್ಲಿ ಪರೀಕ್ಷಾರ್ಥವಾಗಿ ವಿದ್ಯುತ್ ಉತ್ಪಾದಿಸುವ ಪ್ರಕ್ರಿಯೆಯನ್ನು ಶೀಘ್ರವೇ ನಡೆಸಬೇಕು ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಸೂಚಿಸಿದರು.

ಬಿಡದಿಯಲ್ಲಿ ನಿರ್ಮಾಣವಾಗುತ್ತಿರುವ ಕಸದಿಂದ ವಿದ್ಯುತ್ ಉತ್ಪಾದಿಸುವ ಘಟಕಕ್ಕೆ ಗುರುವಾರ ಭೇಟಿ ನೀಡಿದ್ದ ಮುಖ್ಯ ಆಯುಕ್ತರು, ಪರಿಶೀಲನೆ ನಡೆಸಿದರು. ಘಟಕದ ಕಾಮಗಾರಿ ಬಹುತೇಕ ಪೂರ್ಣಗೊಂಡಿದ್ದು, ಬಾಕಿ ಕಾಮಗಾರಿಯನ್ನು ತ್ವರಿತವಾಗಿ ಪೂರ್ಣಗೊಳಿಸಬೇಕು ಎಂದರು.

ಈ ಘಟಕವನ್ನು 10 ಎಕರೆಯಲ್ಲಿ ಸ್ಥಾಪಿಸಲಾಗಿದ್ದು, ಒಟ್ಟು ₹260 ಕೋಟಿ ವೆಚ್ಚಾಗುತ್ತಿದೆ. ಪ್ರತಿನಿತ್ಯ 11.5 ಮೆಗಾವಾಟ್ ವಿದ್ಯುತ್ ಉತ್ಪಾದಿಸುವ ಸಾಮರ್ಥ್ಯವಿದೆ. ಪಾಲಿಕೆಯ ಸಂಸ್ಕರಣಾ ಘಟಕಗಳು, ಒಣ ತ್ಯಾಜ್ಯ ಸಂಗ್ರಹಣಾ ಘಟಕಗಳಲ್ಲಿ ಸಂಗ್ರಹವಾಗುವ ಆರ್‌ಡಿಎಫ್‌ಅನ್ನು ಕಸದಿಂದ ವಿದ್ಯುತ್ ಉತ್ಪಾದಿಸುವ ಘಟಕಕ್ಕೆ ರವಾನಿಸಲಾಗುತ್ತದೆ ಎಂದು ಹೇಳಿದರು.

ನಿರ್ವಹಣೆ ಪರಿಶೀಲನೆ: ಬೊಮ್ಮನಹಳ್ಳಿ ವಲಯ ಗೊಲ್ಲಹಳ್ಳಿ ವ್ಯಾಪ್ತಿಯಲ್ಲಿ ಸರ್ವೆ ನಂ.39ರಲ್ಲಿ ಲೋಕೋಪಯೋಗಿ ಇಲಾಖೆ ಒಡೆತನದ ಸುಮಾರು 170 ಎಕರೆ ಜಾಗವಿದೆ. ಅಲ್ಲಿ ಸಮಗ್ರ ಘನತ್ಯಾಜ್ಯ ನಿರ್ವಹಣೆಯ ವ್ಯವಸ್ಥೆಯನ್ನು ಸ್ಥಾಪಿಸಲು ಸ್ಥಳ ಪರಿಶೀಲನೆ ನಡೆಸಿದರು.

ಬಿಬಿಎಂಪಿ ಮುಖ್ಯ ಎಂಜಿನಿಯರ್‌ಗಳಾದ ಬಸವರಾಜ್ ಕಬಾಡೆ, ಲೋಕೇಶ್, ಕಾರ್ಯಪಾಲಕ ಎಂಜಿನಿಯರ್ ಮಧುಸುಧನ್, ಕೆಪಿಟಿಸಿಎಲ್ ಮುಖ್ಯ ಎಂಜಿನಿಯರ್ ಎಸ್.ಆರ್. ಕಬಾಡೆ ಉಪಸ್ಥಿತರಿದ್ದರು.

ಮೂಲಸೌಕರ್ಯಗಳಿಲ್ಲದ ನರ್ಸಿಂಗ್ ಕಾಲೇಜುಗಳಿಗೆ ಬೀಗ ಜಡಿಯಿರಿ: ಡಾ. ಶರಣಪ್ರಕಾಶ್ ಪಾಟೀಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯ ಸರ್ಕಾರದಿಂದ ಎಲ್ಲ ಸವಲತ್ತುಗಳನ್ನು ಪಡೆದುಕೊಂಡು ವಿದ್ಯಾರ್ಥಿಗಳಿಗೆ ಕನಿಷ್ಠ ಮೂಲಸೌಕರ್ಯ ಒದಗಿಸಲು ವಿಫಲವಾಗಿರುವ ನರ್ಸಿಂಗ್ ಕಾಲೇಜುಗಳಿಗೆ ಬೀಗ ಜಡಿಯಬೇಕು' ಎಂದು ಇಲಾಖೆಯ ಅಧಿಕಾರಿಗಳಿಗೆ ವೈದ್ಯಕೀಯ ಶಿಕ್ಷಣ ಸಚಿವ ಡಾ. ಶರಣಪ್ರಕಾಶ್ ಪಾಟೀಲ ಕಟ್ಟುನಿಟ್ಟಿನ ಸೂಚನೆ ನೀಡಿದರು.

ಇಲಾಖೆ ಅಧಿಕಾರಿಗಳು ಮತ್ತು ನರ್ಸಿಂಗ್ ಕಾಲೇಜುಗಳ ಪದಾಧಿಕಾರಿಗಳ ಜೊತೆ ಗುರುವಾರ ಸಭೆ ನಡೆಸಿದ ಅವರು, 'ಹಲವು ನರ್ಸಿಂಗ್ ಕಾಲೇಜುಗಳಲ್ಲಿ ಮೂಲಸೌಕರ್ಯಗಳನ್ನು ಕಲ್ಪಿಸದಿರುವ ಬಗ್ಗೆ ದೂರುಗಳು ಬಂದಿವೆ. ಹೀಗಾಗಿ, ತಪಾಸಣೆ ನಡೆಸಿ ಅಂತಹ ಕಾಲೇಜುಗಳಿಗೆ ಬೀಗ ಜಡಿಯಿರಿ' ಎಂದು ಇಲಾಖೆಯ ನಿರ್ದೇಶಕಿ ಡಾ. ಸುಜಾತಾ ರಾಥೋಡ್ ಅವರಿಗೆ ನಿರ್ದೇಶನ ನೀಡಿದರು.

'ಖಾಸಗಿ ಕಾಲೇಜು ಆಡಳಿತ ಮಂಡಳಿಯವರು ತಮ್ಮ ತಪ್ಪುಗಳನ್ನು ಸರಿಪಡಿಸಿಕೊಳ್ಳಬಹುದು ಎಂಬ ಕಾರಣಕ್ಕೆ ಮಾನವೀಯ ದೃಷ್ಟಿಯಿಂದ ಈವರೆಗೆ ಸರ್ಕಾರ ನಡೆದುಕೊಂಡಿದೆ. ಇಷ್ಟಾದರೂ ಬುದ್ಧಿ ಬಂದಿಲ್ಲವೆಂದರೆ ಹೇಗೆ? ವಿದ್ಯಾರ್ಥಿಗಳನ್ನು ಪ್ರವೇಶ ಮಾಡಿಕೊಳ್ಳುವ ವೇಳೆ ಆಶ್ವಾಸನೆಗಳನ್ನು ನೀಡಿ ಹೆಚ್ಚಿನ ಶುಲ್ಕ ಪಡೆಯುತ್ತೀರಿ. ಕನಿಷ್ಠ ಪಕ್ಷ ಅಗತ್ಯ ಸೌಲಭ್ಯಗಳನ್ನು ಒದಗಿಸದಿದ್ದರೆ ಹೇಗೆ?' ಎಂದು ಆಡಳಿತ ಮಂಡಳಿಯವರ ವರ್ತನೆಗೆ ಸಚಿವರು ಆಕ್ರೋಶ ವ್ಯಕ್ತಪಡಿಸಿದರು.

'ಕೆಲವು ಕಾಲೇಜುಗಳು ಹೆಚ್ಚಿನ ಪ್ರಮಾಣದಲ್ಲಿ ಬೋಧಕ, ಬೋಧಕೇತರ, ಪ್ರಯೋಗಾಲಯ ಸಿಬ್ಬಂದಿ, ಗ್ರಂಥಾಲಯ, ಶುಚಿತ್ವ ಸೇರಿದಂತೆ ಕನಿಷ್ಠ ಮೂಲಸೌಕರ್ಯಗಳ ಕೊರತೆ ಎದುರಿಸುತ್ತಿವೆ. ಇಷ್ಟು ಸಮಸ್ಯೆಗಳನ್ನು ಇಟ್ಟುಕೊಂಡು ವಿದ್ಯಾರ್ಥಿಗಳಿಗೆ ಯಾವ ಶಿಕ್ಷಣ ಕೊಡುತ್ತೀರಿ' ಎಂದೂ ತರಾಟೆಗೆ ತೆಗೆದುಕೊಂಡರು.

'ಪ್ರತಿ ಶೈಕ್ಷಣಿಕ ವರ್ಷದ ಆರಂಭದಲ್ಲಿ, ವಿದ್ಯಾರ್ಥಿಗಳ ಪ್ರವೇಶ ಮಾಡಿಕೊಳ್ಳುವ ಮೊದಲು ಅಧಿಕಾರಿಗಳು ಪ್ರತಿಯೊಂದು ಕಾಲೇಜಿಗೆ ಭೇಟಿ ನೀಡಬೇಕು. ಸರ್ಕಾರದ ಮಾನದಂಡ ಪಾಲಿಸದ ಕಾಲೇಜುಗಳ ಮೇಲೆ ನಿರ್ದಾಕ್ಷಿಣ್ಯವಾಗಿ ಕಾನೂನು ಕ್ರಮ ತೆಗೆದುಕೊಳ್ಳಬೇಕು' ಎಂದು ಸೂಚನೆ ನೀಡಿದರು.

ವೈದ್ಯಕೀಯ ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿ ಮೊಹಮ್ಮದ್ ಮೊಹ್ಸಿನ್, ರಾಜೀವ್ ಗಾಂಧಿ ಆರೋಗ್ಯ ವಿಶ್ವವಿದ್ಯಾಲಯದ ಕುಲಸಚಿವ ಪಿ.ಆರ್. ಶಿವಪ್ರಸಾದ್ ಸಭೆಯಲ್ಲಿ ಇದ್ದರು.

ಇಂದು ನಗರಕ್ಕೆ ಕೇಂದ್ರ ಸಚಿವ ಎಚ್.ಡಿ.ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇಂದ್ರ ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸಿದ ನಂತರ ಎಚ್‌.ಡಿ. ಕುಮಾರಸ್ವಾಮಿ ಮೊದಲ ಬಾರಿ ಇಲ್ಲಿಗೆ (ಜೂನ್ 14) ಬರಲಿದ್ದಾರೆ.


ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಬೆಳಿಗ್ಗೆ 11.50ಕ್ಕೆ ಬರಲಿದ್ದಾರೆ. ಕೇಂದ್ರದ ಬೃಹತ್ ಕೈಗಾರಿಕಾ ಸಚಿವರಾಗಿ ಬರುತ್ತಿರುವ ಅವರನ್ನು ಅದ್ದೂರಿಯಾಗಿ ಸ್ವಾಗತಿಸಲು ಜೆಡಿಎಸ್ ಮುಖಂಡರು, ಕಾರ್ಯಕರ್ತರು ಸಿದ್ಧತೆ ಮಾಡಿಕೊಂಡಿದ್ದಾರೆ ಎಂದು ಜೆಡಿಎಸ್ ರಾಜ್ಯ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಗುರುವಾರ ಪತ್ರಿಕಾ ಗೋಷ್ಠಿಯಲ್ಲಿ ಮಾಹಿತಿ ನೀಡಿದರು.

ವಿಮಾನ ನಿಲ್ದಾಣದಿಂದ ಪಕ್ಷದ ಕಚೇರಿಗೆ ಬರಲಿರುವ ಅವರು ಅಲ್ಲಿ ಸನ್ಮಾನ ಸ್ವೀಕರಿಸಿದ ನಂತರ ರಾಜಭವನಕ್ಕೆ ತೆರಳಿ ರಾಜ್ಯಪಾಲರನ್ನು ಭೇಟಿ ಮಾಡುವರು. ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಎಚ್.ಡಿ. ದೇವೇಗೌಡ ಅವರ ಮನೆಗೆ ತೆರಳಿ, ತಂದೆ–ತಾಯಿಯ ಆಶೀರ್ವಾದ ಪಡೆಯುವರು. ನಂತರ ತಿರುಪತಿಯತ್ತ ಪಯಣ ಬೆಳೆಸುವರು ಎಂದು ಹೇಳಿದರು.

ನಗರದಲ್ಲಿ ಇಂದು

ವಿಶ್ವ ರಕ್ತದಾನಿ ದಿನಾಚರಣೆ, ಜಾಥಾ ಕಾರ್ಯಕ್ರಮ: ಚಾಲನೆ: ದಿನೇಶ್ ಗುಂಡೂರಾವ್, ಆಯೋಜನೆ: ಆರೋಗ್ಯ ಇಲಾಖೆ, ಸ್ಥಳ: ವಿಧಾನ ಸೌಧದಿಂದ ಪ್ರಾರಂಭ, ಬೆಳಿಗ್ಗೆ 8

ಸಾಮಾಜಿಕ ನ್ಯಾಯ ನಾಯಕತ್ವ ತರಬೇತಿ–ಎರಡು ದಿನಗಳ ಕಾರ್ಯಾಗಾರ: ಉದ್ಘಾಟನೆ: ಡಾ.ಎಚ್.ಸಿ. ಮಹದೇವಪ್ಪ, ಆಶಯ ನುಡಿ: ನ್ಯಾ. ನಾಗಮೋಹನದಾಸ್, ಅಧ್ಯಕ್ಷತೆ: ಬಾಬು ಮ್ಯಾಥ್ಯು, ಅತಿಥಿಗಳು: ಇ.ವೆಂಕಟಯ್ಯ, ರಾಕೇಶ್ ಕುಮಾರ್, ಸೋನಿ ಪೆಲ್ಲಿಸೇರಿ, ಯು. ಚಂದ್ರ ನಾಯಕ್, ಆರ್‌.ವಿ. ಚಂದ್ರಶೇಖರ್: ಆಯೋಜನೆ: ಸಾಮಾಜಿಕ ಪ್ರತ್ಯೇಕತೆ ಮತ್ತು ಒಳಗೊಳ್ಳುವಿಕೆ ನೀತಿಯ ಅಧ್ಯಯನ ಕೇಂದ್ರ, ರಾಷ್ಟ್ರೀಯ ಕಾನೂನು ಶಾಲೆ, ಸಮಾಜ ಕಲ್ಯಾಣ ಇಲಾಖೆ, ಬಾಬು ಜಗಜೀವನರಾಂ ಸಂಶೋಧನಾ ಸಂಸ್ಥೆ, ಸ್ಥಳ: ಅಂತರರಾಷ್ಟ್ರೀಯ ತರಬೇತಿ ಕೇಂದ್ರ, ರಾಷ್ಟ್ರೀಯ ಕಾನೂನು ಶಾಲೆ, ನಾಗರಭಾವಿ, ಬೆಳಿಗ್ಗೆ 10



ಸಾಂಸ್ಕೃತಿಕ, ಕ್ರೀಡಾ, ಎನ್‌ಎಸ್‌ಎಸ್, ಎನ್‌ಸಿಸಿ, ರೇಂಜರ್ಸ್ ಮತ್ತು ರೋವರ್ಸ್, ಯುವ ರೆಡ್‌ಕ್ರಾಸ್, ಕನ್ನಡ ಸಂಘ, ರಂಗಚಿರಂತನ ಮತ್ತು ಇತರೆ ಸಮಿತಿಗಳ ಕಾರ್ಯ ಚಟುವಟಿಕೆಗಳ ಸಮಾರೋಪ ಸಮಾರಂಭ: ಉದ್ಘಾಟನೆ: ಎಂ. ಕೃಷ್ಣಪ್ಪ, ಅತಿಥಿಗಳು: ಡಾ. ನಾ.ಸೋಮೇಶ್ವರ, ಪಿಚ್ಚಳ್ಳಿ ಶ್ರೀನಿವಾಸ್, ಎಂ.ಕೆ. ಗೌತಮ್, ಅಧ್ಯಕ್ಷತೆ: ಕೆ.ಆರ್. ಮುದ್ದುಕೃಷ್ಣ, ಆಯೋಜನೆ: ವಿಜಯನಗರ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಸ್ಥಳ: ಕೆಂಗಲ್ ಹನುಮಂತಯ್ಯ ರಂಗಮಂದಿರ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ವಿಜಯನಗರ, ಬೆಳಿಗ್ಗೆ 10.30

ರಾವ್‌ಬಹದ್ದೂರ್ ಗುಬ್ಬಿ ತೋಟದಪ್ಪ ಜನ್ಮದಿನಾಚರಣೆ, ಜಯನಗರ ಕದಳಿ ಮಹಿಳಾ ವೇದಿಕೆ: ಉದ್ಘಾಟನೆ: ಸಿ. ಸೋಮಶೇಖರ್, ಅಧ್ಯಕ್ಷತೆ: ಕೆ.ವಿ. ನಾಗರಾಜಮೂರ್ತಿ, ಅತಿಥಿಗಳು: ಗಂಗಾಂಬಿಕೆ ಮಲ್ಲಿಕಾರ್ಜುನ, ಎಂ. ಸದಾಶಿವಪ್ಪ, ಪ್ರಮಿಳಾ ಗರಡಿ, ಗೀತಾ ಜಯಂತ್, ಸುಧಾ ನಾಗರಾಜ್, ಸ್ಥಳ: ಶಿವರಾತ್ರಿ ರಾಜೇಂದ್ರ ಚಿಂತನ ಮಂಟಪ, ಜಯನಗರ, ಬೆಳಿಗ್ಗೆ 10.30

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ 10ನೇ ಹಾಗೂ 11ನೇ ಘಟಿಕೋತ್ಸವ, ಅಧ್ಯಕ್ಷತೆ: ಥಾವರ್‌ಚಂದ್ ಗೆಹಲೋತ್, ಅತಿಥಿ: ಡಾ.ಎಂ.ಸಿ. ಸುಧಾಕರ್, ಸ್ಥಳ: ಪುಟ್ಟಣ್ಣ ಚೆಟ್ಟಿ ಪುರಭವನ, ಬೆಳಿಗ್ಗೆ 11.30

ಆರೋಗ್ಯ ರಕ್ಷಣೆಯಲ್ಲಿ ಎಐ ಸಜ್ಜುಗೊಳಿಸುವುದು ಮತ್ತು ಡೇಟಾ ಸೈನ್ಸ್: ಹೆಲ್ತ್‌ಟೆಕ್ ಅಕಾಡೆಮಿಯ ಶೃಂಗಸಭೆ, ಆಯೋಜನೆ: ಐಐಎಚ್‌ಎಂಆರ್, ಸ್ಥಳ: ಕ್ಯಾಪಿಟಲ್ ಹೋಟೆಲ್, ಮಧ್ಯಾಹ್ನ 2.30

ಸಜ್ಜನಿಕೆಯ ಸಾಕಾರಮೂರ್ತಿ ಮಾದೇನಹಳ್ಳಿ ಮಲ್ಲಿಕಾರ್ಜುನಯ್ಯ– ಕೃತಿ ಲೋಕಾರ್ಪಣೆ: ಸಾನ್ನಿಧ್ಯ: ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಸಿದ್ಧಲಿಂಗ ಸ್ವಾಮೀಜಿ, ಅಧ್ಯಕ್ಷತೆ: ಪಿ.ಜಿ.ಆರ್. ಸಿಂಧ್ಯಾ, ಪ್ರಾಸ್ತಾವಿಕ ನುಡಿ: ಗೊ.ರು. ಚನ್ನಬಸಪ್ಪ, ಅತಿಥಿಗಳು: ಟಿ.ಕೆ. ನಂಜುಂಡಪ್ಪ, ಎಚ್.ಪಿ. ವಾಸುದೇವ ರಾವ್, ಯು. ಶ್ರೀಧರ್ ಭಟ್, ಡಿ.ಎಸ್. ಮೃತ್ಯುಂಜಯ, ಸ್ಥಳ: ಕೊಂಡಜ್ಜಿ ಬಸಪ್ಪ ಸಭಾಂಗಣ, ಭಾರತ ಸ್ಕೌಟ್ಸ್ ಮತ್ತು ಗೈಡ್ಸ್ ಕೇಂದ್ರ ಕಾರ್ಯಾಲಯ, ಅರಮನೆ ರಸ್ತೆ, ಸಂಜೆ 4

'ರಾಯದುರ್ಗದ ದುರಂತ' ನಾಟಕ ಪ್ರದರ್ಶನ: ಉದ್ಘಾಟನೆ: ಎನ್.ಟಿ. ಕೃಷ್ಣಪ್ಪ, ದೊಟ್ಟಮನೆ ವೆಂಕಟೇಶ್, ಪಂಕಜ, ಕೆ. ಬಾಬುರಾಜು, ಸನ್ಮಾನಿತರು: ಎಸ್.ಬಿ. ಕೃಷ್ಣ, ಮೋಹನ್, ರಂಗನಾಥ್, ಕೆಂಪುತ್ತೂರು ಶ್ರೀನಿವಾಸ್, ಸ್ಥಳ: ಸಂಸ ಬಯಲು ಮಂದಿರ, ರವೀಂದ್ರ ಕಲಾಕ್ಷೇತ್ರ ಆವರಣ, ಜೆ.ಸಿ. ರಸ್ತೆ, ಸಂಜೆ 4

ರಾಷ್ಟ್ರೀಯ ಏಕೀಕರಣ ಶಿಬಿರ: ಉದ್ಘಾಟನೆ: ಎನ್. ಮಂಜುನಾಥ್ ಪ್ರಸಾದ್, ಲಿಂಗರಾಜ್ ಗಾಂಧಿ, ಅತಿಥಿಗಳು: ವೂಡೇ ಪಿ. ಕೃಷ್ಣ, ಎನ್. ಆರ್. ವಿಷ್ಣುಕುಮಾರ್, ಡಿ.ಕಾರ್ತಿಗ್ವಾನ್, ಪ್ರತಾಪ್ ಲಿಂಗಯ್ಯ, ಅಧ್ಯಕ್ಷತೆ: ಜವರೇಗೌಡ, ಆಯೋಜನೆ: ಬೆಂಗಳೂರು ನಗರ ವಿಶ್ವವಿದ್ಯಾಲಯ, ಸ್ಥಳ: ಗಾಂಧಿ ಭವನ, ಕಬ್ಬನ್ ಪಾರ್ಕ್, ಸಂಜೆ 4

ಧೀಮಹಿ, ನೃತ್ಯ ಪ್ರದರ್ಶನ: ಪ್ರಸ್ತುತಿ: ಅದಿತಿ ರವಿ, ಪ್ರತಿಭಾ ರಾಮಸ್ವಾಮಿ ಮತ್ತು ರಸಿಕ ಕಲಾ ಫೌಂಡೇಶನ್ ಕಲಾವಿದರಿಂದ. ಸ್ಥಳ: ಕಲಾಕ್ಷಿತಿ ಲಲಿತಕಲಾ ಶಾಲೆ, ಬಸವನಗುಡಿ, ಸಂಜೆ 5

'ಗವರ್ನಿಂಗ್ ಅರ್ಬನ್ ಇಂಡಿಯಾ, ಪಾಲಿಸಿ ಆ್ಯಂಡ್ ಪ್ರಾಕ್ಟೀಸ್' ಕೃತಿ ಬಿಡುಗಡೆ: ಅತಿಥಿಗಳು: ವಿಜಯ್ ಕೇಳ್ಕರ್, ಎ. ರವೀಂದ್ರ, ಅರೋಮರ್ ರೇವಿ, ಆಯೋಜನೆ ಮತ್ತು ಸ್ಥಳ: ಐಐಎಚ್‌ಎಸ್ ಬೆಂಗಳೂರು ಸಿಟಿ ಕ್ಯಾಂಪಸ್, ಸಂಜೆ 5

'ಕಾವ್ಯಾಂಜಲಿ' ಕೃತಿ ಲೋಕಾರ್ಪಣೆ ಮತ್ತು ಗೀತಾವಿಹಾರ: ಅತಿಥಿಗಳು: ಎಚ್. ಡುಂಡಿರಾಜ್, ವೈ.ವಿ. ಗುಂಡೂರಾವ್, ಸುಧಾ ಸರನೋಬತ್, ಅಣಕು ರಾಮನಾಥ್, ಸ್ಥಳ: ಅಶ್ವಥ್ ಕಲಾ ಭವನ, ಎನ್.ಆರ್. ಕಾಲೊನಿ, ಸಂಜೆ 6

'ದಿ ರೈಸಿಂಗ್ ಆಫ್ ಡೆತ್' ನಾಟಕ ಪ್ರದರ್ಶನ, ನಿರ್ದೇಶನ: ರಂಗನಾಥ್ ಮಾವಿನಕೆರೆ, ಆಯೋಜನೆ: ಆದಿಶಕ್ತಿ ರಂಗ ಕಲಾಸಂಸ್ಥೆ, ಸ್ಥಳ: ಕಲಾಗ್ರಾಮ, ಮಲ್ಲತ್‌ಹಳ್ಳಿ, ಸಂಜೆ 6

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ

nagaradalli_indu@prajavani.co.in

ಜಲಮಂಡಳಿ ಅಧ್ಯಕ್ಷರ ಫೋನ್-ಇನ್ ಇಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಲಮಂಡಳಿಯ ಅಧ್ಯಕ್ಷ ಡಾ. ವಿ. ರಾಮ್‌ಪ್ರಸಾತ್ ಮನೋಹರ್ ಅವರು ಜೂನ್ 14ರಂದು ಬೆಳಿಗ್ಗೆ 9.30ರಿಂದ 10.30ರವರೆಗೆ ನೇರ ಫೋನ್-ಇನ್ ಕಾರ್ಯಕ್ರಮ ನಡೆಸಿ ಕೊಡಲಿದ್ದಾರೆ.

ವಲಯ/ಪ್ರದೇಶಗಳಲ್ಲಿನ ಕುಡಿಯುವ ನೀರಿನ ಸಮಸ್ಯೆ ಮತ್ತು ಒಳಚರಂಡಿ ಕೊಳವೆ/ಇಳಿ ಗುಂಡಿಯಿಂದ ತ್ಯಾಜ್ಯ ನೀರು ಹೊರಬರುತ್ತಿರುವ ಬಗ್ಗೆ, ಜಲಮಾಪನ ಹಾಗೂ ನೀರಿನ ಬಿಲ್‌ನ ಸಮಸ್ಯೆಯ ಬಗ್ಗೆ ನೇರವಾಗಿ ಮಾತನಾಡಿ ಬಗೆಹರಿಸಿಕೊಳ್ಳಬಹುದು. ನೀರಿನ ಸಂಪರ್ಕ ಹೊಂದಿರುವ ಗ್ರಾಹಕರು ತಮ್ಮ ಆರ್.ಆರ್. ಸಂಖ್ಯೆಯನ್ನು ತಿಳಿಸಿ ದೂರು ನೀಡಬಹುದಾಗಿದೆ. ದೂರವಾಣಿ 080-22945119 ಮತ್ತು 080-22229639.

ಜಲಮಂಡಳಿ ಅಧ್ಯಕ್ಷರು ಇನ್ನು ಮುಂದೆ ಪ್ರತಿ ತಿಂಗಳ ಎರಡನೇ ಹಾಗೂ ನಾಲ್ಕನೇ ಶುಕ್ರವಾರ ಫೋನ್-ಇನ್ ಕಾರ್ಯಕ್ರಮ ನಡೆಸಿಕೊಡಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

‘ಮೋದಿ ಕನಸು ನನಸು ಮಾಡಲು ಶ್ರಮಿಸುವೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಧಾನಿ ನರೇಂದ್ರ ಮೋದಿ ಅವರು ದೇಶದ ಅಭಿವೃದ್ಧಿಗಾಗಿ ಕರ್ನಾಟಕಕ್ಕೆ ಐದು ಸಚಿವ ಸ್ಥಾನಗಳನ್ನು ನೀಡಿದ್ದಾರೆ ಎಂದು ಕೇಂದ್ರ ಸಚಿವ ವಿ.ಸೋಮಣ್ಣ ತಿಳಿಸಿದರು.

ಕೇಂದ್ರ ಸಚಿವರಾಗಿ ಅಧಿಕಾರ ಸ್ವೀಕರಿಸಿದ ನಂತರ ಮೊದಲ ಬಾರಿಗೆ ನಗರಕ್ಕೆ ಬಂದ ಅವರು ಪಕ್ಷದ ಕಚೇರಿಗೆ ಭೇಟಿ ನೀಡಿ ಬಳಿಕ ಅವರು ಸುದ್ದಿಗಾರರ ಜತೆ ಮಾತನಾಡಿದರು.

‘ಪ್ರಧಾನಿ ಮೋದಿಯವರು ಭಾರತವನ್ನು ವಿಶ್ವದ ಅಗ್ರ ರಾಷ್ಟ್ರವನ್ನಾಗಿ ಮಾಡುವ ಸಂಕಲ್ಪವನ್ನು ತೊಟ್ಟಿದ್ದಾರೆ. ನನಗೂ ಎರಡು ಖಾತೆಗಳ ಜವಾಬ್ದಾರಿ ನೀಡಿದ್ದು, ನಾನು ಅದನ್ನು ಸಮವಾಗಿ ಸ್ವೀಕಾರ ಮಾಡಿ ಅವರ ಕನಸು ನನಸು ಮಾಡಲು ಶ್ರಮವಹಿಸಿ ಕೆಲಸ ಮಾಡುತ್ತೇನೆ’ ಎಂದರು.

ವಿಕೇಂದ್ರೀಕೃತ ಅಧಿಕಾರಕ್ಕೆ ಒಲವಿಲ್ಲ • ಗ್ರಾಮ ಸ್ವರಾಜ್ಯ, ಪಂಚಾಯತ್ ರಾಜ್ ವ್ಯವಸ್ಥೆಯ ಆಶಯಕ್ಕೆ ಕಪ್ಪುಚುಕ್ಕೆ

ಕಾರ್ಪೊರೇಟರ್‌ಗಳಿಲ್ಲದ ಮೂರೂಮುಕ್ಕಾಲು ವರ್ಷ



• ಆರ್. ಮಂಜುನಾಥ್

ಬೆಂಗಳೂರು: ಕಸ, ಮೋರಿ, ರಸ್ತೆ, ಕೊಳಕು ನೀರಿನಂತಹ ಸಮಸ್ಯೆಗಳ ನಿವಾರಣೆಗೆ ನಾಗರಿಕರು ‘ತರಾಟೆಗೆ ತೆಗೆದುಕೊಳ್ಳುವ’ ಕಾರ್ಪೊರೇಟರ್‌ಗಳಿಲ್ಲದೆ ಮೂರೂ ಮುಕ್ಕಾಲು ವರ್ಷ ಮುಗಿದಿದೆ. ಪಾಲಿಕೆ ರಚನೆಯಾದ ಮೇಲೆ ಮೊದಲ ಬಾರಿಗೆ ಇಷ್ಟು ದೀರ್ಘ ಅವಧಿಯಲ್ಲಿ ಪಾಲಿಕೆ ಕೌನ್ಸಿಲ್ ಅಸ್ತಿತ್ವದಲ್ಲಿಲ್ಲ.

1862 ಮುನಿಸಿಪಲ್ ಬೋರ್ಡ್‌ನಿಂದ ಸುಮಾರು 162 ವರ್ಷಗಳ ಇತಿಹಾಸ ಹೊಂದಿರುವ ಬೆಂಗಳೂರು ಪಾಲಿಕೆಗೆ, ಸ್ಥಳೀಯ ಪ್ರತಿನಿಧಿಗಳೇ ಜೀವಾಳ. ನಗರದ ಅಭಿವೃದ್ಧಿ ಕೆಲಸಗಳಿಗೆ ಕಾರ್ಪೊರೇಟರ್‌ಗಳ ಮೇಲುಸ್ತುವಾರಿಯನ್ನೇ ನಂಬಿಕೊಳ್ಳಲಾಗಿದೆ. ಆದರೆ, 2020ರ ಸೆಪ್ಟೆಂಬರ್‌ನಲ್ಲಿ ಬಿಬಿಎಂಪಿ ಕೌನ್ಸಿಲ್ ಅವಧಿ ಮುಕ್ತಾಯವಾಗಿದೆ.

‘ವಿಕೇಂದ್ರೀಕೃತ ಸರ್ಕಾರವಾಗಿ ‘ಪ್ರತಿ ಗ್ರಾಮವೂ ಸ್ವರಾಜ್ಯ’ವಾಗಬೇಕು, ತನ್ನದೇ ವ್ಯವಹಾರಗಳನ್ನು ನೋಡಿಕೊಳ್ಳಬೇಕು’ ಎಂಬುದು ಮಹಾತ್ಮ ಗಾಂಧಿಯವರ ಆಶಯವಾಗಿತ್ತು. ರಾಜೀವ್ ಗಾಂಧಿ ಪ್ರಧಾನಿಯಾಗಿದ್ದಾಗ 1992ರಲ್ಲಿ ಸಂವಿಧಾನಕ್ಕೆ ತಿದ್ದುಪಡಿ ತಂದು ‘ಪಂಚಾಯತ್‌ರಾಜ್ ವ್ಯವಸ್ಥೆ’ಯನ್ನು ರಾಷ್ಟ್ರದಾದ್ಯಂತ ಜಾರಿಗೆ ತಂದರು. ಆದರೆ, ಇಂತಹ ಆಶಯಕ್ಕೆ ರಾಜ್ಯ ಸರ್ಕಾರ ಆದ್ಯತೆ ಕೊಡುತ್ತಿಲ್ಲ. ಆದ್ದರಿಂದಲೇ ಸ್ಥಳೀಯ ಚುನಾವಣೆಗಳು ಮುಂದಕ್ಕೆ ಹೋಗುತ್ತಲೇ ಇವೆ.

ಕಾರ್ಪೊರೇಟರ್‌ಗಳಿಲ್ಲದೇ, ಇಷ್ಟು ವರ್ಷಗಳು ಸಚಿವರು ಹಾಗೂ ಶಾಸಕರ ಕೇಂದ್ರೀಕೃತ ಅಧಿಕಾರ ಮುಂದುವರಿದಿರುವುದು ವಿಕೇಂದ್ರೀಕೃತ ಅಧಿಕಾರ ನೀಡುವ ಸಂವಿಧಾನದ ಆಶಯಕ್ಕೆ ವ್ಯತಿರಿಕ್ತವಾದದ್ದು.

ಇಂತಹ ಕೇಂದ್ರೀಕೃತ ವ್ಯವಸ್ಥೆಯಿಂದ ನಾಗರಿಕರ ನಿತ್ಯದ ಸಮಸ್ಯೆಗಳಿಗೆ ಪರಿಹಾರ ಸಿಗದೆ ಪರಿತಪಿಸುತ್ತಿದ್ದಾರೆ. ಸಚಿವರು ಮುಖ್ಯ ಆಯುಕ್ತರು, ಅದೇನು ಸಹಾಯವಾಣಿ ಮಾಡಿದ್ದರೂ ಅದಕ್ಕೆ ಸ್ಥಳೀಯ ಅಧಿಕಾರಿಗಳು ಸ್ಪಂದಿಸಬೇಕಲ್ಲವೇ? 800 ಚದರ ಕಿ.ಮೀ. ವ್ಯಾಪ್ತಿಯ ನಗರವನ್ನು ಕೇಂದ್ರ ಕಚೇರಿಯಲ್ಲಿ ಕುಳಿತ ಮುಖ್ಯ ಆಯುಕ್ತರು ಅಥವಾ ಮೇಯರ್ ಸ್ಥಾನದಲ್ಲಿ ಕುಳಿತಿರುವ ಆಡಳಿತಗಾರರು ಜನರೊಂದಿಗೆ ಜನಪ್ರತಿನಿಧಿಗಳಂತೆ ಬೆರೆಯುತ್ತಾರೆಯೇ?

‘ಖಂಡಿತಾ ಇಲ್ಲ’ ಎಂಬುದು ನಾಗರಿಕರಿಂದ ವ್ಯಕ್ತವಾಗುವ ಮಾತು. ‘ನಮ್ಮ ಸುತ್ತಮುತ್ತಲಿನ ಪ್ರದೇಶದಲ್ಲೇ ಇರುವ ಕಾರ್ಪೊರೇಟರ್‌ಗಳು ನಾಗರಿಕರ ಸಮಸ್ಯೆಗಳಿಗೆ ಸ್ಪಂದಿಸುತ್ತಾರೆ. ಅವರ ಮನೆಗೆ ಹೋಗಿ ಸಮಸ್ಯೆಗಳನ್ನು ಹೇಳಿಕೊಳ್ಳಬಹುದು. ಜೋರೂ ಮಾಡಬಹುದು. ಆದರೆ, ಅಧಿಕಾರಿಗಳು ನಮ್ಮೊಂದಿಗೆ ಮಾತೂ ಆಡುವುದಿಲ್ಲ. ಮೂರು ವರ್ಷದಿಂದ ಸಾಮಾನ್ಯ ಸಮಸ್ಯೆಗಳನ್ನು ಹೇಳಿಕೊಂಡರೂ ಅಧಿಕಾರಿ ಸ್ಪಂದಿಸುತ್ತಿಲ್ಲ’ ಎಂಬು ಮಾತು ಎಲ್ಲೆಡೆ ಕೇಳಿ ಬರುತ್ತಿದೆ. ಕಾರ್ಪೊರೇಟರ್‌ಗಳಿದ್ದರೆ ಎಲ್ಲವೂ ಸರಿ ಇರುತ್ತದೆ ಎಂದೇನೂ ಇಲ್ಲ. ಶಾಸಕರು, ಅಧಿಕಾರಿಗಳಿಂತ ಅವರಿಂದಲೇ ಸ್ಥಳೀಯ ಸಮಸ್ಯೆಗಳಿಗೆ ಹೆಚ್ಚು ಪರಿಹಾರ ಸಿಗುತ್ತದೆ.

ಪಾಲಿಕೆ ಸದಸ್ಯರ ಇತಿಹಾಸ (ವರ್ಷ)

63	ಬೆಂಗಳೂರು ನಗರಸಭೆ (1983)
83	ಬೆಂಗಳೂರು ನಗರ ಪಾಲಿಕೆ (1989)
100	ಬೆಂಗಳೂರು ಮಹಾನಗರ ಪಾಲಿಕೆ (1996)
198	ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (2010)


ಬಿಬಿಎಂಪಿ ಕೌನ್ಸಿಲ್ ಸಭೆಯ ಸಾಂಕೇತಿಕ ಚಿತ್ರ

ಪ್ರತಿ ತಿಂಗಳೂ ಸಭೆ!

ಬಿಬಿಎಂಪಿಯಲ್ಲಿ ಕೌನ್ಸಿಲ್ ಅಸ್ತಿತ್ವದಲ್ಲಿದ್ದರೆ ಪ್ರತಿ ತಿಂಗಳೂ ಸಭೆ ನಡೆಯುತ್ತದೆ. ನಾಗರಿಕರ ಸಮಸ್ಯೆಗಳನ್ನು ಕಾರ್ಪೊರೇಟರ್‌ಗಳು ಅಲ್ಲಿ ಮಾತನಾಡುತ್ತಾರೆ. ಅವರ ವಾರ್ಡ್‌ಗೆ ಬೇಕಾದ ಸೌಲಭ್ಯ, ಮಾಡಬೇಕಾದ ಕಾಮಗಾರಿಗಳ ಬಗ್ಗೆ ಗಮನ ಸೆಳೆಯುತ್ತಾರೆ. ಕಾರ್ಯನಿರ್ವಹಿಸದ ಅಧಿಕಾರಿಯನ್ನು ತರಾಟೆಗೆ ತೆಗೆದುಕೊಳ್ಳುತ್ತಾರೆ. ಸಂಪೂರ್ಣವಾಗಿ ಜನಪರವಾಗಿಯೇ ಕೆಲಸ ನಿರ್ವಹಿಸುತ್ತಾರೆ ಎಂದು ಹೇಳಲಾಗುವುದಿಲ್ಲ. ಆದರೆ, ನಿತ್ಯವೂ ನಾಗರಿಕರು ಎದುರಿಸುವ ಕಸ ವಿಲೇವಾರಿ, ರಸ್ತೆ ಗುಂಡಿ, ಚರಂಡಿಯಲ್ಲಿ ಹೂಳು, ಮರ–ಕೊಂಬೆಗಳ ತೆರವು, ವಿದ್ಯುತ್ ಕಂಬ, ತಂತಿಯ ಸಮಸ್ಯೆ, ನೀರು ಸರಬರಾಜಿನ ಅಡೆತಡೆಗೆ ಕಾರ್ಪೊರೇಟರ್ ಕೂಡಲೇ ಸ್ಪಂದಿಸುತ್ತಾರೆ. ಅವರ ಅಕ್ಕಪಕ್ಕವಿರುವ ಹುಡುಗರೂ ಓಡಾಡಿ ಕೆಲಸವಾಗುವಂತೆ ನೋಡಿಕೊಳ್ಳುತ್ತಾರೆ.

ಬಿಬಿಎಂಪಿ ವಿಭಜನೆ: ನೀವೇನನ್ನುತ್ತೀರಿ?

ಬಿಬಿಎಂಪಿಯನ್ನು ಭಾಗ ಮಾಡಿ, ತಲಾ 80 ವಾರ್ಡ್‌ಗಳ ಐದು ಪಾಲಿಕೆಯನ್ನಾಗಿ ಮಾಡಲು ರಾಜ್ಯ ಸರ್ಕಾರ ಚಿಂತಿಸುತ್ತಿದೆ. ಈ ಬಗ್ಗೆ ನಾಗರಿಕರಾದ ನಿಮ್ಮ ಅಭಿಪ್ರಾಯವನ್ನು 50 ಪದಗಳಲ್ಲಿ ವಾಟ್ಸ್‌ಆ್ಯಪ್ ಮಾಡಿ. ನಿಮ್ಮ ಹೆಸರು, ವಿಳಾಸ ಹಾಗೂ ಭಾವಚಿತ್ರವೂ ಜೊತೆಗಿರಲಿ.

ಪ್ರಜಾವಾಣಿ 96060 38256

ಚುನಾವಣೆ ಅಭಿವೃದ್ಧಿಗೆ ಅನುಕೂಲ



ಬಿಬಿಎಂಪಿಯನ್ನು ವಿಭಜಿಸುವುದು ಬೇಡ. ಇದರಿಂದ ಬೆಂಗಳೂರು ಅನ್ಯ ಭಾಷಿಗರ ಆಡಳಿತಕ್ಕೆ ಒಳಪಡುವ ಸಂಭವ ಹೆಚ್ಚು. ಇದರ ಬದಲಾಗಿ ಆದಷ್ಟು ಬೇಗ ವಾರ್ಡ್‌ಗಳ ವಿಂಗಡಣೆಯನ್ನು ಬೇಗ ಮುಗಿಸಿ ಚುನಾವಣೆ ನಡೆದರೆ, ಬಿಬಿಎಂಪಿ ಸದಸ್ಯರಿಂದ ಬೆಂಗಳೂರು ಅಭಿವೃದ್ಧಿಗೆ ಅನುಕೂಲವಾಗುತ್ತದೆ.

ಬಸವರಾಜು ಎಂ. ಎನ್., ರಾಜರಾಜೇಶ್ವರಿ ನಗರ

ಐದು ಬೇಡ, ನಾಲ್ಕು ಮಾಡಿ



ತಲಾ 80 ವಾರ್ಡುಗಳ ಐದು ಪಾಲಿಕೆ ಮಾಡುವ ಬದಲಿಗೆ ಈಗಿರುವ ವಿಸ್ತೀರ್ಣವನ್ನು, ವಿಧಾನಸೌಧವನ್ನು ಕೇಂದ್ರವಾಗಿಸಿ ಲಂಬ ಮತ್ತು ಅಡ್ಡಗೆರೆಗಳು ಮೂಲಕ ಪೂರ್ವ, ಪಶ್ಚಿಮ, ದಕ್ಷಿಣ, ಉತ್ತರ ಎಂಬ ನಾಲ್ಕು ಪಾಲಿಕೆಗಳನ್ನಾಗಿ ಮಾಡಿದರೆ ಸಮತೋಲನದಿಂದ ಕೂಡಿರುತ್ತದೆ.

ಬಿ. ರಮೇಶ್, ಸಪ್ತಗಿರಿ ಲೇಔಟ್

ರಾಜಕೀಯ ವಂಶಾವಳಿಗಳ ಹುಟ್ಟು



ಈಗ ಇರುವಂತಹ ವಾರ್ಡ್‌ಗಳನ್ನೇ ವಿಂಗಡಣೆ ಮಾಡಿದರೆ ತುಂಬಾ ಒಳ್ಳೆಯದು. ಐದು ಭಾಗಗಳಾಗಿ ವಿಂಗಡಣೆ ಮಾಡಿದರೆ ಭ್ರಷ್ಟಾಚಾರಗಳು ಜಾಸ್ತಿಯಾಗುತ್ತವೆ. ಬೆಂಗಳೂರು ಪೂರ್ತಿ ರಾಜಕೀಯಮಯವಾಗುತ್ತದೆ. ರಾಜಕೀಯ ವಂಶಾವಳಿಗಳನ್ನು ಹುಟ್ಟು ಹಾಕುವ ಪ್ರಯತ್ನದ ಭಾಗವಾಗಿದೆ.

ಬಿ.ಪಿ. ಪ್ರಮೋದ್, ಭುವನೇಶ್ವರಿ ಬಡಾವಣೆ

ವಿಭಾಗದಿಂದ ಭ್ರಷ್ಟಾಚಾರ ಮುಕ್ತ



ತಲಾ 80 ವಾರ್ಡ್‌ಗಳ ಐದು ಪಾಲಿಕೆಗಳನ್ನಾಗಿ ಮಾಡುವುದರಿಂದ ಅಧಿಕಾರಿಗಳ ಕೆಲಸದ ಒತ್ತಡ ಕಡಿಮೆಯಾಗಿ ದಕ್ಷತೆಯಿಂದ ಕೆಲಸ ಮಾಡಲು ಮತ್ತು ಭ್ರಷ್ಟಾಚಾರ ಮುಕ್ತ ಬಿಬಿಎಂಪಿಯಾಗಿಸಬಹುದು. ತ್ಯಾಜ್ಯ ಮುಕ್ತ ಬೆಂಗಳೂರು, ಸರಾಗ ಸಂಚಾರದ ಬೆಂಗಳೂರು, ಸುಂದರ ನಗರ ಬೆಂಗಳೂರು ಎನ್ನಿಸಿಕೊಳ್ಳುವ ನಮ್ಮೆಲ್ಲರ ಕನಸು ನಿಜವಾಗಲಿ.

ಪುಷ್ಪಾ ಶ್ರೀರಾಮರಾಜು, ಪ್ಯಾಲೇಸ್ ಗುಟ್ಟಳ್ಳಿ

ಅನೇಕ ಸಿಬ್ಬಂದಿಯಿಂದ ಸಮಸ್ಯೆ ಪರಿಹಾರ



ಮಹಾನಗರದ ಆಡಳಿತದ ದೃಷ್ಟಿಯಿಂದ ಐದು ಪಾಲಿಕೆಗಳಾಗಿ ವಿಭಾಗ ಮಾಡುತ್ತಿರುವುದು ಒಳ್ಳೆಯದು. ಇದರಿಂದ ನಗರದ ಮೂಲಸೌಕರ್ಯಗಳನ್ನು ಸರಿಯಾದ ಸಮಯಕ್ಕೆ ಪೂರೈಸುವುದು, ಅಧಿಕಾರ ಹಂಚಿಕೆಯಿಂದ ಜನಸಾಮಾನ್ಯರ ಕುಂದು ಕೊರತೆ ಅರಿತು ಕ್ರಮ ತೆಗೆದುಕೊಳ್ಳಬಹುದು. ಹೆಚ್ಚು ಸಿಬ್ಬಂದಿ ಮತ್ತು ಅಧಿಕಾರಿಗಳನ್ನು ನೇಮಿಸುವುದರಿಂದ ಕಾಲಕಾಲಕ್ಕೆ ಸಮಸ್ಯೆಗಳಿಗೆ ಪರಿಹಾರ ಸಿಗುತ್ತದೆ.

ಕರುಣಾವತಿ, ವಿದ್ಯಾರಣ್ಯಪುರ

ಅನ್ಯ ಭಾಷಿಕರ ಮೇಲೆ ತೀವ್ರ ನಿಗಾ ಇರಲಿ



ಬೆಂಗಳೂರನ್ನು ಆಡಳಿತಾತ್ಮಕ ವಿವಿಧ ವಲಯಗಳಾಗಿ ಮಾಡುವುದೇನೊ ಸರಿ. ಅಲ್ಲಿ ಕನ್ನಡಿಗರ ಸಂಖ್ಯೆ ಕಡಿಮೆ ಪ್ರಮುಖವಾಗಿ ಪೂರ್ವ, ಬೊಮ್ಮನಹಳ್ಳಿ ಮತ್ತು ಮಹದೇವಪುರ ವಲಯದಲ್ಲಿ ತಮಿಳು, ತೆಲುಗು ಮತ್ತು ಉತ್ತರ ಭಾರತದ ಹಿಂದಿ ಭಾಷಿಕರ ಪ್ರಾಬಲ್ಯ ಹೆಚ್ಚು. ಅಲ್ಲೆಲ್ಲಾ ಪ್ರತ್ಯೇಕ ಪಾಲಿಕೆಯಾದರೆ ಕನ್ನಡ ಮತ್ತು ಕನ್ನಡಿಗರ ಅಸ್ತಿತ್ವಕ್ಕೆ ಧಕ್ಕೆ ಆಗದಂತೆ ಕ್ರಮ ಕೈಗೊಳ್ಳಬೇಕು. ಅಲ್ಲಿ ಕನ್ನಡದ ದಕ್ಷ ಆಡಳಿತ ಅಧಿಕಾರಿ ಕಡ್ಡಾಯವಾಗಿರಬೇಕು.

ಸಂಗಪ್ಪ ವಗ್ಗರ್, ರಾಷ್ಟ್ರೀಯ ಕಾನೂನು ಶಾಲೆ

ಸಾಕು... ಸಾಕಾಯಿತು...

‘ದಾಸರಹಳ್ಳಿಯ ಪ್ರದೇಶವೊಂದರಲ್ಲಿ ಕಳೆದ ಒಂದು ವಾರದಿಂದ ಕಸ ವಿಲೇವಾರಿ ಆಗಿರಲಿಲ್ಲ. ಆ ಭಾಗದಲ್ಲಿ ರಸ್ತೆ ಅಗೆದು ವಾರವಾಗಿದ್ದರೂ ದುರಸ್ತಿ ಮುಗಿದಿಲ್ಲ. ಹೀಗಾಗಿ ತ್ಯಾಜ್ಯ ಸಂಗ್ರಹಿಸುವವರು ಬರುತ್ತಿರಲಿಲ್ಲ. ಬಿಬಿಎಂಪಿಯ ನಿಯಂತ್ರಣ ಕೊಠಡಿಗೆ ಕರೆ ಮಾಡಿದ್ದರೂ ಪ್ರಯೋಜನವಾಗಿಲ್ಲ. ಕಸದ ವಾಸನೆ ನಿಯಂತ್ರಿಸಲು ಯಾರಿಗೆ ಹೇಳಬೇಕೋ ಗೊತ್ತಾಗಲಿಲ್ಲ. ಕೊನೆಗೆ ಯಾರ್‍ಯಾರನ್ನೋ ಹಿಡಿದು ಕಸ ವಿಲೇವಾರಿ ಮಾಡಿಸುವಲ್ಲಿ ಸಾಕುಸಾಕಾಯಿತು. ಅದೇ ಕಾರ್ಪೊರೇಟರ್ ಇದ್ದಿದ್ದರೆ ಹೀಗಾಗುತ್ತಿರಲಿಲ್ಲ. ಸ್ಥಳೀಯ ಸಮಸ್ಯೆಗಳ ನಿವಾರಣೆಗೆ ಅವರೇ ಬೇಕು’ ಎಂದು ಬಡಾವಣೆಯೊಂದರ ನಿವಾಸಿಗಳು ಪ್ರಸಂಗವನ್ನು ವಿವರಿಸಿದರು.


ಕಾಡುಬೀಸನಹಳ್ಳಿಯ ವರ್ತುಲ ರಸ್ತೆಯಲ್ಲಿ ಮಳೆನೀರು ನಿಂತು ವಾಹನ ಸಂಚಾರಕ್ಕೆ ತೊಂದರೆಯಾಯಿತು


ನಾಗರಬಾವಿ ತೆರಿಗೆ ಭವನ ರಸ್ತೆಯಲ್ಲಿ ಜನರು ಮಳೆಯಲ್ಲಿ ಸಾಗಿದರು
ಪ್ರಜಾವಾಣಿ ಚಿತ್ರ/ ಎಂ.ಎಸ್.ಮಂಜುನಾಥ್

ನಗರದಲ್ಲಿ ಹಲವೆಡೆ ಮಳೆ: ಸಂಚಾರಕ್ಕೆ ಅಡ್ಡಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಗುರುವಾರ ಮಧ್ಯಾಹ್ನದಿಂದ ರಾತ್ರಿಯವರೆಗೆ ಹಲವೆಡೆ ಮಳೆಯಾಗಿದೆ.

ಜಿಡಿ ಮರ ಜಂಕ್ಷನ್, ವಿಂಡ್ಸರ್ ಮ್ಯಾನರ್ ಜಂಕ್ಷನ್, ಮಡಿವಾಳದ ಅಯ್ಯಪ್ಪನಗರದ ಅಂಡರ್‌ಪಾಸ್ ಬಳಿ ನೀರು ನಿಂತು ವಾಹನ ಸಂಚಾರಕ್ಕೆ ಅಡ್ಡಿಯಾಯಿತು. ರಾಜರಾಜೇಶ್ವರಿ ನಗರದಲ್ಲಿ 3 ಸೆಂ.ಮೀ, ಕೆಂಗೇರಿಯಲ್ಲಿ 2.2 ಸೆಂ.ಮೀ, ವಿದ್ಯಾಪೀಠದಲ್ಲಿ 2.1 ಸೆಂ.ಮೀ, ಕೋರಮಂಗಲದಲ್ಲಿ 2 ಸೆಂ.ಮೀ, ಎಚ್‌ಎಸ್‌ಆರ್ ಲೇಔಟ್‌ನಲ್ಲಿ 1.5 ಸೆಂ.ಮೀ, ಮಾರತ್‌ಹಳ್ಳಿಯಲ್ಲಿ 1.4 ಸೆಂ.ಮೀ ಮಳೆಯಾಗಿದೆ.

ಎಚ್‌ಎಎಲ್ ವಿಮಾನ ನಿಲ್ದಾಣ, ಗೊಟ್ಟಿಗೆರೆ, ಬೆಳ್ಳಂದೂರು, ಬಿಟಿಎಂ ಲೇಔಟ್, ಪಟ್ಟಾಭಿರಾಮನಗರ, ಅಂಜನಾಪುರ, ಯಶವಂತಪುರ, ರಾಜಾಜಿನಗರ, ನಾಗವಾರ, ಪುಲಕೇಶಿನಗರ, ಹಂಪಿನಗರ, ವಿಜಯನಗರಗಳಲ್ಲಿ ಸಾಧಾರಣ ಮಳೆಯಾಯಿತು.


ಕೋರಮಂಗಲ ಜಂಕ್ಷನ್ ರಸ್ತೆಯಲ್ಲಿ ನಿಂತ ಮಳೆ ನೀರಿನಲ್ಲೇ ಮಕ್ಕಳು ಛತ್ರಿ ಹಿಡಿದು ಸಾಗಿದರು
ಪ್ರಜಾವಾಣಿ ಚಿತ್ರ– ಕಿಶೋರ್ ಕುಮಾರ್ ಬೋಳಾರ್

ಒಕ್ಕಲಿಗ ಕಾಂಗ್ರೆಸ್ ಸಚಿವರು, ಶಾಸಕರ ಆತ್ಮಾವಲೋಕನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಒಕ್ಕಲಿಗರ ಪ್ರಾಬಲ್ಯದ ಹಳೆ ಮೈಸೂರು ಭಾಗದಲ್ಲಿ ಲೋಕಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ತೀವ್ರ ಹಿನ್ನಡೆ ಅನುಭವಿಸಿದ್ದು, ಈ ಕುರಿತು ಬೆಂಗಳೂರು ಗ್ರಾಮಾಂತರ ಕ್ಷೇತ್ರದ ಅಭ್ಯರ್ಥಿಯಾಗಿದ್ದ ಡಿ.ಕೆ. ಸುರೇಶ್ ನಿವಾಸದಲ್ಲಿ ಒಕ್ಕಲಿಗ ಸಮುದಾಯದ ಕಾಂಗ್ರೆಸ್ ಸಚಿವರು, ಶಾಸಕರು ಗುರುವಾರ ರಾತ್ರಿ ಆತ್ಮಾವಲೋಕನ ನಡೆಸಿದರು.

ಔತಣಕೂಟ ನೆಪದಲ್ಲಿ ಸೇರಿದ ಸಚಿವರು, ಶಾಸಕರು, ಚುನಾವಣಾ ಫಲಿತಾಂಶ ಕುರಿತು ಪರಾಮರ್ಶೆ ನಡೆಸಿದರು. ಒಕ್ಕಲಿಗ ಮತಗಳು ಪಕ್ಷದ ಅಭ್ಯರ್ಥಿಗಳಿಗೆ ನಿರೀಕ್ಷಿತ ಪ್ರಮಾಣದಲ್ಲಿ ಬೀಳದೆ, ಹಿನ್ನಡೆಯಾದ ಬಗ್ಗೆ ವಿಚಾರವಿನಿಮಯ ನಡೆಸಿದರು ಎಂದು ಮೂಲಗಳು ತಿಳಿಸಿವೆ.

ವಿಧಾನಸಭೆ ಚುನಾವಣೆಯಲ್ಲಿ ಹಳೆ ಮೈಸೂರು ಭಾಗದಲ್ಲಿ ಪಕ್ಷ ಉತ್ತಮ ಸಾಧನೆ ಮಾಡಿದೆ. ಈ ಹಿನ್ನೆಲೆಯಲ್ಲಿ ಬೆಂಗಳೂರು ಗ್ರಾಮಾಂತರ, ಮಂಡ್ಯ, ತುಮಕೂರು ಸೇರಿದಂತೆ ಈ ಭಾಗದ ಕ್ಷೇತ್ರಗಳಲ್ಲಿ ಪಕ್ಷದ ಅಭ್ಯರ್ಥಿಗಳು ಗೆಲುವಿನ ನಿರೀಕ್ಷೆ ಹೊಂದಿದ್ದರು. ಆದರೆ, ನಿರೀಕ್ಷಿತ ಫಲಿತಾಂಶ ಬಂದಿಲ್ಲ. ಅಷ್ಟೇ ಅಲ್ಲ, ಭಾರಿ ಅಂತರದಲ್ಲಿ ಸೋಲಾಗಿದೆ. ಒಕ್ಕಲಿಗರು ಕೈಹಿಡಿಯದ ಕಾರಣ ಈ ರೀತಿಯ ಸೋಲು ಅನುಭವಿಸಬೇಕಾಯಿತು ಎಂಬ ಬಗ್ಗೆ ಚರ್ಚೆ ನಡೆದಿದೆ.

ಬಿಜೆಪಿ– ಜೆಡಿಎಸ್ ಮೈತ್ರಿಯಿಂದಾದ ಲಿಂಗಾಯತ– ಒಕ್ಕಲಿಗ ಮತಗಳ ಧ್ರುವೀಕರಣವು ಕಾಂಗ್ರೆಸ್ ಪಕ್ಷದ ಅಭ್ಯರ್ಥಿಗಳ ಸೋಲಿಗೆ ಮುಖ್ಯ ಕಾರಣ. ಮುಂದೆ ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಚುನಾವಣೆಗಳು ಬರಲಿವೆ. ಪಕ್ಷದಿಂದ ದೂರವಾಗಿರುವ ಈ ಎರಡೂ ಪ್ರಬಲ ಸಮುದಾಯಗಳನ್ನು ಈ ಚುನಾವಣೆಯ ವೇಳೆಗೆ ಪಕ್ಷದತ್ತ ಸೆಳೆಯಬೇಕಾದ ತುರ್ತು ಇದೆ. ಅದಕ್ಕೆ ಮುಂದಿನ ದಿನಗಳಲ್ಲಿ ಹಮ್ಮಿಕೊಳ್ಳಬೇಕಾದ ಕಾರ್ಯತಂತ್ರಗಳ ಬಗ್ಗೆಯೂ ಸಮಾಲೋಚನೆ ನಡೆಯಿತು ಎಂದು ಮೂಲಗಳು ಹೇಳಿವೆ.

ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಸಚಿವರಾದ ಕೃಷ್ಣ ಬೈರೇಗೌಡ, ಎನ್. ಚಲುವರಾಯಸ್ವಾಮಿ, ಕೆ. ವೆಂಕಟೇಶ್, ರಾಮಲಿಂಗಾರೆಡ್ಡಿ, ಡಾ.ಎಂ.ಸಿ. ಸುಧಾಕರ್ ಹಾಗೂ ಈ ಭಾಗದ ಶಾಸಕರು ಔತಣಕೂಟದಲ್ಲಿ ಭಾಗವಹಿಸಿದರು.

ಮುಖ್ಯಮಂತ್ರಿಗೆ ಅಂಕಿತಾ ಬಸಪ್ಪ ಪತ್ರ

ಪ್ರಜಾವಾಣಿ ವಾರ್ತೆ


ಅಂಕಿತಾ ಬಸಪ್ಪ

ಬೆಂಗಳೂರು: ಈ ಬಾರಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಶೇ 100ರಷ್ಟು ಅಂಕಗಳಿಸಿ ರಾಜ್ಯಕ್ಕೇ ಮೊದಲ ಸ್ಥಾನ ಪಡೆದ ಅಂಕಿತಾ ಬಸಪ್ಪ ಕೊಣ್ಣೂರ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪತ್ರ ಬರೆದು ತನ್ನನ್ನು ಬೆಂಗಳೂರಿಗೆ ಆಹ್ವಾನಿಸಿ, ಸನ್ಮಾನ ಮಾಡಿದ್ದಕ್ಕೆ ಕೃತಜ್ಞತೆ ಸಲ್ಲಿಸಿದ್ದಾರೆ.

ಬಾಗಲಕೋಟೆ ಜಿಲ್ಲೆ ಮೆಳ್ಳಿಗೇರಿಯ ಮೊರಾರ್ಜಿ ದೇಸಾಯಿ ವಸತಿಯಲ್ಲಿ ಇವರು ಶಿಕ್ಷಣ ಪಡೆದಿದ್ದಾರೆ. ಮುಖ್ಯಮಂತ್ರಿಯವರೇ ಮೊರಾರ್ಜಿ ದೇಸಾಯಿ ಶಾಲೆಗಳ ಸ್ಥಾಪನೆಯ ರೂವಾರಿ ಎಂಬುದನ್ನು ತಿಳಿದು ಪತ್ರದಲ್ಲಿ ಹರ್ಷ ವ್ಯಕ್ತಪಡಿಸಿದ್ದಾರೆ.

ಪತ್ರದಸಾರಾಂಶ: ‘ಇಡೀರಾಜ್ಯಕ್ಕೆಪ್ರಥಮ ಸ್ಥಾನ ಬಂದಿದ್ದು ಸಂತೋಷವಾಗಿದೆ. ಪ್ರತಿ ಬಾರಿ ಫಲಿತಾಂಶ ಎಂದೊಡನೆ ದಕ್ಷಿಣ ಕರ್ನಾಟಕದೆಡೆ ಮುಖ ಮಾಡುತ್ತಿದ್ದ ಜನರ ದೃಷ್ಟಿ ಈ ಬಾರಿ ಬದಲಾಯಿತು. ಉತ್ತರ ಕರ್ನಾಟಕದ ಒಬ್ಬ ಸಾಮಾನ್ಯ ಹುಡುಗಿಯೂ ಸಹ ತಾನಂದುಕೊಂಡಿದ್ದನ್ನು ಸಾಧಿಸಬಲ್ಲಳು ಎಂದು ತೋರಿಸಿಕೊಟ್ಟಿದ್ದು ತುಂಬಾ ಹೆಮ್ಮೆ ಎನಿಸಿದೆ ’ ಎಂದಿದ್ದಾರೆ.

ಪಠ್ಯಪುಸ್ತಕ ವಿತರಿಸದೇ ಗೊಂದಲ: ಅಶೋಕ ಟೀಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶಿಕ್ಷಣ ಇಲಾಖೆ ಪಠ್ಯಪುಸ್ತಕಗಳನ್ನು ಸರಿಯಾದ ಸಮಯಕ್ಕೆ ವಿತರಿಸದೇ ಪೋಷಕರು ಮತ್ತು ವಿದ್ಯಾರ್ಥಿಗಳನ್ನು ಗೊಂದಲದಲ್ಲಿಟ್ಟಿದೆ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ಹೇಳಿದರು. ಸರ್ಕಾರಿ ಶಾಲೆಗೆ ಮಕ್ಕಳು ಬರುವುದೇ ಕಡಿಮೆ ಆಗಿರುವಾಗ ಪಠ್ಯಪುಸ್ತಕ ಕೊರತೆ ಉಂಟಾಗಿದೆ ಎಂದು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಸರ್ಕಾರಿ ಖಜಾನೆ ಖಾಲಿ ಆಗಿದ್ದು, ಕಸಕ್ಕೂ ತೆರಿಗೆ ಹಾಕಲು ಮುಂದಾಗಿದ್ದಾರೆ. ಕರ್ನಾಟಕ ಮಾಡೆಲ್ ಏನೆಂದು ತಿಳಿಯಲು ಆರ್ಥಿಕ ಇಲಾಖೆಯ ಒಂದು ವರ್ಷದ ಪ್ರಗತಿ ಕಾರ್ಡ್ ಬಿಡುಗಡೆಗೊಳಿಸಲಿ ಎಂದು ಅವರು ಆಗ್ರಹಿಸಿದರು.

ತಮ್ಮ ಕ್ಷೇತ್ರದ ಹಲವು ರೈತರಿಗೆ ಬರಪರಿಹಾರ ನೀಡಿಲ್ಲವೆಂದು ನವಲಗುಂದ ಕ್ಷೇತ್ರದ ಕಾಂಗ್ರೆಸ್ ಶಾಸಕ ಎನ್. ಎಚ್.ಕೋನರಡ್ಡಿ ಅವರೇ ಹೇಳಿದ್ದಾರೆ. ವಿರೋಧಪಕ್ಷಗಳು ಸರ್ಕಾರದ ವಿರುದ್ಧ ಟೀಕೆ ಮಾಡಿದರೆ ಅಜ್ಞಾನ ಪ್ರದರ್ಶನ ಎಂದು ಮುಖ್ಯಮಂತ್ರಿ ಹೇಳುತ್ತಾರೆ. ಈ ಸರ್ಕಾರದ ಬಂಡವಾಳವನ್ನು ಕಾಂಗ್ರೆಸ್ ಶಾಸಕರೇ ಬಯಲು ಮಾಡುತ್ತಿದ್ದಾರೆ ಎಂದರು.

ಸಿಕ್ಕಿಂನಲ್ಲಿ ಭೂಕುಸಿತ: ಆರು ಮಂದಿ ಸಾವು

ಗ್ಯಾಂಗ್ಟಕ್ (ಪಿಟಿಐ): ಸತತ ಮಳೆಯಿಂದಾಗಿ ಸಿಕ್ಕಿಂನ ಮಂಗನ್ ಜಿಲ್ಲೆಯಲ್ಲಿ ಉಂಟಾದ ಭಾರಿ ಭೂಕುಸಿತದಲ್ಲಿ ಆರು ಮಂದಿ ಮೃತಪಟ್ಟಿದ್ದಾರೆ ಎಂದು ಅಧಿಕಾರಿಗಳು ಗುರುವಾರ ತಿಳಿಸಿದ್ದಾರೆ. ಭೂಕುಸಿತದಿಂದಾಗಿ ರಸ್ತೆಗಳ ಸಂಪರ್ಕ ಕಡಿತಗೊಂಡಿದೆ. ಹಲವು ಮನೆಗಳು ಜಖಂಗೊಂಡಿವೆ ಎಂದು ಅವರು ಹೇಳಿದ್ದಾರೆ.

ಮಂಗನ್ ಜಿಲ್ಲೆಯ ಪಕ್ಷೇಪ್ ಪ್ರದೇಶದಲ್ಲಿ ವ್ಯಕ್ತಿಯೊಬ್ಬರ ಮೃತದೇಹ ಪತ್ತೆಯಾಗಿದೆ. ರಂಗ್‌ರಂಗ್ ಸಮೀಪದ ಅಂಬಿತಾಂಗ್‌ನಿಂದ ಮೂವರು, ಪಕ್ಷೇಪ್‌ನಿಂದ ಇಬ್ಬರು ನಾಪತ್ತೆಯಾಗಿದ್ದಾರೆ.

ಒಂದೂವರೆ ವರ್ಷಗಳ ಬಳಿಕ ಕನ್ನಡ ಭವನಕ್ಕೆ ಜೀವಕಳೆ • ಎಲ್ಲ ವಲಯಗಳಲ್ಲಿ ಕನ್ನಡ ಅನುಷ್ಠಾನಕ್ಕೆ ಒತ್ತು: ಬಿಳಿಮಲೆ

ಅಧಿಕಾರ ಸ್ವೀಕರಿಸಿದ ಅಕಾಡೆಮಿ, ಪ್ರಾಧಿಕಾರಗಳ ಅಧ್ಯಕ್ಷರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವ್ಯಾಪ್ತಿಯ 11 ಅಕಾಡೆಮಿ ಮತ್ತು 2 ಪ್ರಾಧಿಕಾರಗಳ ನೂತನ ಅಧ್ಯಕ್ಷರು ಗುರುವಾರ ಅಧಿಕಾರ ಸ್ವೀಕರಿಸಿದರು. ಸುಮಾರು ಒಂದೂವರೆ ವರ್ಷಗಳ ಬಳಿಕ ಕನ್ನಡ ಭವನಕ್ಕೆ ಜೀವಕಳೆ ಬಂದಿದೆ.


ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷರಾಗಿ ಎಲ್.ಎನ್. ಮುಕುಂದರಾಜ್, ಕರ್ನಾಟಕ ನಾಟಕ ಅಕಾಡೆಮಿ ಅಧ್ಯಕ್ಷರಾಗಿ ಕೆ.ವಿ. ನಾಗರಾಜಮೂರ್ತಿ, ಕರ್ನಾಟಕ ಜಾನಪದ ಅಕಾಡೆಮಿ ಅಧ್ಯಕ್ಷರಾಗಿ ಗೊಲ್ಲಹಳ್ಳಿ ಶಿವಪ್ರಸಾದ್, ಬಂಜಾರ ಭಾಷಾ ಸಂಸ್ಕೃತಿ ಅಕಾಡೆಮಿ ಅಧ್ಯಕ್ಷರಾಗಿ ಎ.ಆರ್.ಗೋವಿಂದಸ್ವಾಮಿ ಅಧಿಕಾರ ಸ್ವೀಕರಿಸಿದರು.

ಕರ್ನಾಟಕ ಯಕ್ಷಗಾನ ಅಕಾಡೆಮಿ ಅಧ್ಯಕ್ಷರಾಗಿ ತಲ್ಲೂರು ಶಿವರಾಮ ಶೆಟ್ಟಿ, ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರಾಗಿ ಮೈಸೂರು ಮಾನಸ, ಕರ್ನಾಟಕ ಶಿಲ್ಪಕಲಾ ಅಕಾಡೆಮಿ ಅಧ್ಯಕ್ಷರಾಗಿ ಎಂ.ಸಿ. ರಮೇಶ್ , ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಅಧ್ಯಕ್ಷರಾಗಿ ಚನ್ನಪ್ಪಕಟ್ಟಿ ಅಧಿಕಾರ ವಹಿಸಿಕೊಂಡರು.

ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ ಅಧ್ಯಕ್ಷರಾಗಿ ಮೊದಲು ನೇಮಕಗೊಂಡಿದ್ದ ಕೃಪಾ ಫಡ್ಕೆ ಅವರನ್ನು ಸರ್ಕಾರ ಬುಧವಾರ ಬದಲಾಯಿಸಿ ಶುಭಾ ಧನಂಜಯ ಅವರನ್ನು ನೇಮಕ ಮಾಡಿತ್ತು. ಶುಭಾ ಅವರು ಕೂಡ ಗುರುವಾರ ಅಧಿಕಾರ ಸ್ವೀಕರಿಸಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಜಂಟಿ ನಿರ್ದೇಶಕ ಬಲವಂತರಾವ್ ಪಾಟೀಲ್, ಕನ್ನಡ ಪುಸ್ತಕ ಪ್ರಾಧಿಕಾರದ ಆಡಳಿತಾಧಿಕಾರಿ ಕಿರಣ್ ಸಿಂಗ್, ವಿವಿಧ ಅಕಾಡೆಮಿ ಮತ್ತು ಪ್ರಾಧಿಕಾರದ ರಿಜಿಸ್ಟ್ರಾರ್ ಭಾಗವಹಿಸಿದ್ದರು.

19ಕ್ಕೆ ಪ.ಸ. ಅಧಿಕಾರ ಸ್ವೀಕಾರ: ಕರ್ನಾಟಕ ಲಲಿತ ಕಲಾ ಅಕಾಡೆಮಿ ಅಧ್ಯಕ್ಷರಾಗಿ ಪ.ಸ. ಕುಮಾರ್ ಅವರು ಜೂ.19ಕ್ಕೆ ಅಧಿಕಾರ ಸ್ವೀಕಾರ ಮಾಡಲಿದ್ದಾರೆ. ಗುರುವಾರ ಲಲಿತ ಅಕಾಡೆಮಿಗೆ ಭೇಟಿ ನೀಡಿದ ಅವರು ಸಿಬ್ಬಂದಿಯೊಂದಿಗೆ ಸಮಾಲೋಚನೆ ನಡೆಸಿದರು. ಆದರೆ, ಅಧಿಕಾರ ಸ್ವೀಕರಿಸಲಿಲ್ಲ. 19ಕ್ಕೆ ದಿನ ನಿಗದಿ ಮಾಡಿದರು.


ವಿವಿಧ ಅಕಾಡೆಮಿಗಳ ಮತ್ತು ಪ್ರಾಧಿಕಾರಗಳ ಅಧ್ಯಕ್ಷರು ಗುರುವಾರ ಅಧಿಕಾರ ಸ್ವೀಕರಿಸಿದರು

ಪುರುಷೋತ್ತಮ ಬಿಳಿಮಲೆ ಪದಗ್ರಹಣ

ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿ ಸಾಹಿತಿ ಪುರುಷೋತ್ತಮ ಬಿಳಿಮಲೆ ಗುರುವಾರ ಕನ್ನಡ ಅಭಿವೃದ್ಧಿ ಪ್ರಾಧಿಕಾರ ಕಚೇರಿಯಲ್ಲಿ ಅಧಿಕಾರ ಸ್ವೀಕರಿಸಿದರು.

‘ಕನ್ನಡ ನಾಡು, ನುಡಿ, ಸಂಸ್ಕೃತಿಯ ಅಭಿವೃದ್ಧಿಗಾಗಿ, ಪ್ರಾಧಿಕಾರದ ಕಾರ್ಯ ಚಟುವಟಿಕೆಗಳನ್ನು ಅರ್ಥಪೂರ್ಣವಾಗಿ ಕಾರ್ಯರೂಪಕ್ಕೆ ತರಲಾಗುವುದು. ಕನ್ನಡದ ಅಸ್ಮಿತೆಗೆ ಧಕ್ಕೆಯಾಗುವ ಸಂದರ್ಭದಲ್ಲಿ ಪ್ರಾಧಿಕಾರ ಗಟ್ಟಿಯಾಗಿ ದನಿ ಎತ್ತಲಿದೆ. ಎಲ್ಲ ವಲಯಗಳಲ್ಲೂ ಕನ್ನಡ ಬಳಕೆ ಮತ್ತು ಅನುಷ್ಠಾನಕ್ಕಾಗಿ ಹಾಗೂ ಕನ್ನಡದ ಸಾರ್ವಭೌಮತೆಯನ್ನು ಎತ್ತಿ ಹಿಡಿಯಲು ಪ್ರಾಧಿಕಾರ ನಿರಂತರವಾಗಿ ಶ್ರಮಿಸಲಿದೆ’ ಎಂದು ಬಿಳಿಮಲೆ ತಿಳಿಸಿದರು.

ಕಯ್ಯಾರ ಕಿಞ್ಞಣ್ಣ ರೈ ಜನ್ಮ ದಿನಾಚರಣೆ

ಕರ್ನಾಟಕ ಏಕೀಕರಣದ ರೂವಾರಿಗಳಲ್ಲಿ ಒಬ್ಬರಾಗಿರುವ ಕಯ್ಯಾರ ಕಿಞ್ಞಣ್ಣ ರೈ ಅವರ 109ನೇ ಜನ್ಮ ದಿನಾಚರಣೆ ಮತ್ತು ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿ ಸೋಮಣ್ಣ ಬೇವಿನಮರದ ಅಧಿಕಾರ ಸ್ವೀಕಾರ ಕಾರ್ಯಕ್ರಮ ಪ್ರಾಧಿಕಾರದ ಕಚೇರಿ ಸಭಾಂಗಣದಲ್ಲಿ ಗುರುವಾರ ನಡೆಯಿತು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕಿ ಕೆ ಧರಣೀದೇವಿ ಮಾಲಗತ್ತಿ, ಪ್ರಾಧಿಕಾರ ಕಾರ್ಯದರ್ಶಿ ಪ್ರಕಾಶ ಮತ್ತೀಹಳ್ಳಿ, ಪ್ರಾಧಿಕಾರದ ಸದಸ್ಯರಾದ ಜಾಣಗೆರೆ ವೆಂಕಟರಾಮಯ್ಯ, ಅಶೋಕ ಚಂದರಗಿ, ಭಗತ್ ರಾಜ್, ಎ.ಆರ್. ಸುಬ್ಬಯ್ಯಕಟ್ಟೆ, ಸಂಜೀವ ಕುಮಾರ ಅತಿವಾಳೆ, ಎಂ.ಎಸ್. ಮದಭಾವಿ, ಶಿವರೆಡ್ಡಿ ಭಾಗವಹಿಸಿದ್ದರು.

ಎನ್‌ಎಸ್‌ಎ ಆಗಿ ಅಜಿತ್ ಡೊಭಾಲ್ ಮರುನೇಮಕ


ಅಜಿತ್ ಡೊಭಾಲ್

ನವದೆಹಲಿ (ಪಿಟಿಐ): ರಾಷ್ಟ್ರೀಯ ಭದ್ರತಾ ಸಲಹೆಗಾರರನ್ನಾಗಿ (ಎನ್‌ಎಸ್‌ಎ) ಮಾಜಿ ಐಪಿಎಸ್ ಅಧಿಕಾರಿ ಅಜಿತ್ ಡೊಭಾಲ್ ಅವರನ್ನು ಮರುನೇಮಕ ಮಾಡಲಾಗಿದೆ ಎಂದು ಸಿಬ್ಬಂದಿ ಸಚಿವಾಲಯವು ಆದೇಶ ಹೊರಡಿಸಿದೆ.

ಸತತ ಮೂರನೇ ಅವಧಿಗೆ ಡೊಭಾಲ್ ಅವರು ಎನ್‌ಎಸ್‌ಎ ಆಗಿ ನೇಮಕವಾಗಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ ಅವರ ಅಧಿಕಾರಾವಧಿ ಇರುವವರೆಗೆ ಅಥವಾ ಮುಂದಿನ ಆದೇಶ ನೀಡುವವರೆಗೆ ಡೊಭಾಲ್ ಅವರ ಅಧಿಕಾರಾವಧಿ ಇರಲಿದೆ. ಜೂನ್ 10ರಿಂದಲೇ ಈ ಆದೇಶ ಜಾರಿಯಲ್ಲಿದೆ ಎಂದು ಹೇಳಲಾಗಿದೆ.

ಅಧಿಕಾರಾವಧಿ ವೇಳೆ ಡೊಭಾಲ್ ಅವರಿಗೆ ಸಂಪುಟ ದರ್ಜೆ ಸಚಿವರ ಸ್ಥಾನಮಾನ ನೀಡಲಾಗುವುದು ಎಂದು ಆದೇಶದಲ್ಲಿ ಉಲ್ಲೇಖಿಸಲಾಗಿದೆ.

ಪಿ.ಕೆ. ಮಿಶ್ರಾ ಮರುನೇಮಕ: ಪ್ರಧಾನಿ ನರೇಂದ್ರ ಮೋದಿ ಅವರ ಪ್ರಧಾನ ಕಾರ್ಯದರ್ಶಿಯಾಗಿ ಮಾಜಿ ಐಎಎಸ್ ಅಧಿಕಾರಿ ಪಿ.ಕೆ. ಮಿಶ್ರಾ ಅವರನ್ನು ಮರುನೇಮಕ ಮಾಡಲಾಗಿದೆ. ಜೂನ್ 10ರಿಂದಲೇ ಈ ಆದೇಶ ಜಾರಿಯಾಗಿದೆ ಎಂದು ಸಿಬ್ಬಂದಿ ಸಚಿವಾಲಯ ತಿಳಿಸಿದೆ.

ಸಂಪುಟದ ನೇಮಕಾತಿ ಸಮಿತಿಯು ಮಿಶ್ರಾ ಅವರ ನೇಮಕಾತಿಯನ್ನು ಅನುಮೋದಿಸಿದೆ. ಪ್ರಧಾನಿ ಮೋದಿ ಅವರ ಅಧಿಕಾರಾವಧಿ ಇರುವವರೆಗೆ ಅಥವಾ ಮುಂದಿನ ಆದೇಶ ನೀಡುವವರೆಗೆ ಮಿಶ್ರಾ ಅವರ ಅಧಿಕಾರಾವಧಿ ಇರಲಿದೆ ಎಂದು ಆದೇಶದಲ್ಲಿ ಹೇಳಲಾಗಿದೆ.

ಜಮ್ಮು–ಕಾಶ್ಮೀರ: ಭದ್ರತಾ ಪರಿಸ್ಥಿತಿ ಪರಿಶೀಲಿಸಿದ ಪ್ರಧಾನಿ ನರೇಂದ್ರ ಮೋದಿ

ಭಯೋತ್ಪಾದನಾ ಚಟುವಟಿಕೆ ನಿಗ್ರಹಕ್ಕೆ ಸೂಚನೆ


ನರೇಂದ್ರ ಮೋದಿ

ನವದೆಹಲಿ (ಪಿಟಿಐ): ಭಯೋತ್ಪಾದನಾ ಚಟುವಟಿಕೆಗಳ ನಿಗ್ರಹಕ್ಕೆ ಭದ್ರತಾ ಪಡೆಗಳ ಸಂಪೂರ್ಣ ಸಾಮರ್ಥ್ಯ ಬಳಸುವಂತೆ ಪ್ರಧಾನಿ ನರೇಂದ್ರ ಮೋದಿ ಗುರುವಾರ ಸೂಚಿಸಿದ್ದಾರೆ.

ಜಮ್ಮು ಮತ್ತು ಕಾಶ್ಮೀರ ಪ್ರದೇಶದಲ್ಲಿ ಯಾತ್ರಿಗಳನ್ನು ಕರೆದೊಯ್ಯುತ್ತಿದ್ದ ಬಸ್ ಮೇಲಿನ ದಾಳಿ ಸೇರಿದಂತೆ ಇತ್ತೀಚೆಗೆ ನಡೆದ ಭಯೋತ್ಪಾದನಾ ದಾಳಿಗಳಿಗೆ ಸಂಬಂಧಿಸಿದಂತೆ ಪರಿಸ್ಥಿತಿಯನ್ನು ಅವರು ಪರಿಶೀಲಿಸಿದರು.

ಮೋದಿ ಅವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ರಾಷ್ಟ್ರೀಯ ಭದ್ರತಾ ಸಲಹೆಗಾರ ಅಜಿತ್ ಡೊಭಾಲ್ ಮತ್ತು ಇತರ ಅಧಿಕಾರಿಗಳು ಭಾಗವಹಿಸಿದ್ದರು. ಇದೇ ವೇಳೆ ಅವರು ಭದ್ರತಾ ಪಡೆಗಳ ನಿಯೋಜನೆ ಮತ್ತು ಭಯೋತ್ಪಾದನಾ ನಿಗ್ರಹ ಕಾರ್ಯಾಚರಣೆಗಳ ಕುರಿತು ಗೃಹ ಸಚಿವ ಅಮಿತ್ ಶಾ ಜತೆಗೂ ಚರ್ಚಿಸಿದರು ಎಂದು ಮೂಲಗಳು ತಿಳಿಸಿವೆ.

ಜಮ್ಮು ಮತ್ತು ಕಾಶ್ಮೀರದ ಲೆಫ್ಟಿನೆಂಟ್ ಗವರ್ನರ್ ಮನೋಜ್ ಸಿನ್ಹಾ ಅವರೊಂದಿಗೂ ಚರ್ಚೆ ನಡೆಸಿದ ಮೋದಿ ಅವರು, ಕೇಂದ್ರಾಡಳಿತ ಪ್ರದೇಶದ ಪರಿಸ್ಥಿತಿಯನ್ನು ಅವಲೋಕಿಸಿದರು. ಸಿನ್ಹಾ ಅವರು ಸ್ಥಳೀಯ ಆಡಳಿತ ಕೈಗೊಂಡಿರುವ ಕ್ರಮಗಳ ಕುರಿತು ವಿವರಿಸಿದರು.

ಕಳೆದ ನಾಲ್ಕು ದಿನಗಳಲ್ಲಿ ಜಮ್ಮು ಮತ್ತು ಕಾಶ್ಮೀರದ ರಿಯಾಸಿ, ಕಠುವಾ ಮತ್ತು ದೋಡಾ ಜಿಲ್ಲೆಗಳ ನಾಲ್ಕು ಸ್ಥಳಗಳಲ್ಲಿ ಭಯೋತ್ಪಾದಕ ದಾಳಿಗಳು ನಡೆದಿವೆ. ಒಂಬತ್ತು ಯಾತ್ರಿಕರು, ಒಬ್ಬ ಸಿಆರ್‌ಪಿಎಫ್ ಯೋಧ ಈ ದಾಳಿಗಳಲ್ಲಿ ಮೃತಪಟ್ಟಿದ್ದಾರೆ. ಏಳು ಭದ್ರತಾ ಸಿಬ್ಬಂದಿ ಸೇರಿದಂತೆ ಹಲವರು ಗಾಯಗೊಂಡಿದ್ದಾರೆ.

ಕಠುವಾದಲ್ಲಿ ಭದ್ರತಾ ಪಡೆಗಳೊಂದಿಗೆ ನಡೆದ ಎನ್‌ಕೌಂಟರ್‌ನಲ್ಲಿ ಇಬ್ಬರು ಭಯೋತ್ಪಾದಕರನ್ನು ಕೊಲ್ಲಲಾಗಿದ್ದು, ಅವರಿಂದ ದೊಡ್ಡ ಪ್ರಮಾಣದ ಶಸ್ತ್ರಾಸ್ತ್ರ ಮತ್ತು ಮದ್ದುಗುಂಡುಗಳನ್ನು ವಶಪಡಿಸಿಕೊಳ್ಳಲಾಗಿದೆ.


ಜಮ್ಮು ಮತ್ತು ಕಾಶ್ಮೀರದ ಕಠುವಾ ಜಿಲ್ಲೆಯ ಹೀರಾನಗರ ವಲಯದ ಸೈದಾ ಸುಖಲ್ ಗ್ರಾಮದಲ್ಲಿ ಗಡಿ ಭದ್ರತಾ ಪಡೆ ಸಿಬ್ಬಂದಿ ಉಗ್ರರಿಗಾಗಿ ಶೋಧ ಕಾರ್ಯ ನಡೆಸಿದರು –ಪಿಟಿಐ ಚಿತ್ರ

ಬಸ್ ಮೇಲೆ ಉಗ್ರರ ದಾಳಿ 50 ಮಂದಿ ಬಂಧನ

ಜಮ್ಮು (ಪಿಟಿಐ): ಜಮ್ಮು ಮತ್ತು ಕಾಶ್ಮೀರದ ರಿಯಾಸಿ ಜಿಲ್ಲೆಯಲ್ಲಿ ಯಾತ್ರಾರ್ಥಿಗಳು ಪ್ರಯಾಣಿಸುತ್ತಿದ್ದ ಬಸ್ ಮೇಲೆ ನಡೆದಿದ್ದ ಉಗ್ರರ ದಾಳಿ ಪ್ರಕರಣ ಸಂಬಂಧ 50 ಜನರನ್ನು ಬಂಧಿಸಲಾಗಿದೆ ಎಂದು ಪೊಲೀಸರು ಗುರುವಾರ ತಿಳಿಸಿದ್ದಾರೆ.

ಈ ಪ್ರಕರಣದ ಸಮಗ್ರ ತನಿಖೆ ಮತ್ತು ಉಗ್ರರ ಪತ್ತೆಗಾಗಿ ರಿಯಾಸಿ ಜಿಲ್ಲೆಯ ದೂರದ ಅರ್ನಾಸ್ ಹಾಗೂ ಮಾಹೌರ್ ಪ್ರದೇಶಗಳಲ್ಲಿ ಶೋಧ ಕಾರ್ಯಾಚರಣೆಯನ್ನು ವಿಸ್ತರಿಸಲಾಗಿದೆ. ಈ ಪ್ರದೇಶಗಳು 1995 ಮತ್ತು 2005ರ ನಡುವೆ ಉಗ್ರರ ಅಡಗುದಾಣಗಳಾಗಿದ್ದವು.

ಈಗಾಗಲೇ ಪೊಲೀಸರು ಉಗ್ರರ ರೇಖಾಚಿತ್ರಗಳನ್ನು ಬಿಡುಗಡೆ ಮಾಡಿದ್ದು, ಸುಳಿವು ನೀಡಿದವರಿಗೆ ₹20 ಲಕ್ಷ ಬಹುಮಾನ ಘೋಷಿಸಲಾಗಿದೆ.

ಮಾತಾ ವೈಷ್ಣೋದೇವಿಗೆ ಹೋಗುತ್ತಿದ್ದ ಯಾತ್ರಾರ್ಥಿಗಳಿದ್ದ ಬಸ್ ಮೇಲೆ ಭಾನುವಾರ ಉಗ್ರರು ಗುಂಡಿನ ದಾಳಿ ನಡೆಸಿದ್ದರು.

‘17 ವರ್ಷಗಳ ಬಳಿಕ ಉಗ್ರರ ಬಳಿ ದ್ರವ ಸ್ಫೋಟಕ’

ಶ್ರೀನಗರ (ಪಿಟಿಐ): ಜಮ್ಮು ಮತ್ತು ಕಾಶ್ಮೀರದಲ್ಲಿ ಉಗ್ರರ ಬಳಿ 17 ವರ್ಷಗಳ ಬಳಿಕ ಮತ್ತೆ ದ್ರವರೂಪದ ಸ್ಫೋಟಕಗಳು ಪತ್ತೆಯಾಗಿವೆ. ಪತ್ತೆಹಚ್ಚಲು ಕಷ್ಟಕರವಾದ (ಡಿಫಿಕಲ್ಟ್ ಟು ಡಿಟೆಕ್ಟ್ ಡಿ2ಡಿ) ಇಂತಹ ಸ್ಫೋಟಕಗಳು ಕೇಂದ್ರಾಡಳಿತ ಪ್ರದೇಶದಲ್ಲಿ ಪೊಲೀಸರು ಇತ್ತೀಚೆಗೆ ನಡೆಸಿದ ದಾಳಿಯ ವೇಳೆ ಪತ್ತೆಯಾಗಿವೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಈ ತಿಂಗಳ ಆರಂಭದಲ್ಲಿ ಪುಲ್ವಾಮಾದಲ್ಲಿ ನಡೆದ ಗುಂಡಿನ ಚಕಮಕಿಯ ನಂತರ ಬಂಧಿಸಲಾದ ಉಗ್ರನಿಂದ ದ್ರವ ರೂಪದ ಸ್ಫೋಟಕ ವಶಪಡಿಸಿಕೊಳ್ಳಲಾಯಿತು. ಲಷ್ಕರ್-ಎ-ತಯಬಾ (ಎಲ್‌ಇಟಿ) ಭಯೋತ್ಪಾದಕರಲ್ಲಿ ಒಬ್ಬನಾದ ರಯಾಜ್ ದಾರ್ ಅಲಿಯಾಸ್ ಸತ್ತಾರ್‌ನನ್ನು ಬಂಧಿಸಿದ್ದು, ಈತನ ಸಹಚರ ರಯೀಸ್ ದಾರ್ ಗುಂಡಿನ ಚಕಮಕಿ ವೇಳೆ ಹತನಾಗಿದ್ದಾನೆ.

ಇಬ್ಬರು ಲಷ್ಕರ್-ಎ-ತಯಬಾ ಭಯೋತ್ಪಾದಕರು ದ್ರವ ರೂಪದ ಐಇಡಿಗಳನ್ನು ಸಿದ್ಧಪಡಿಸಿದ್ದು, ಅವುಗಳನ್ನು ತೋಟಗಳಲ್ಲಿ ಬಚ್ಚಿಟ್ಟಿದ್ದರು ಎನ್ನುವುದು ಪೊಲೀಸ್ ತನಿಖೆಯಲ್ಲಿ ಪತ್ತೆಯಾಗಿತ್ತು. ಸೇನೆಯ ಸ್ಫೋಟಕ ತಜ್ಞರು ಸುಮಾರು 6 ಕೆಜಿ ಸ್ಫೋಟಕವನ್ನು ನಿಷ್ಕ್ರಿಯಗೊಳಿಸಿ ನಾಶಪಡಿಸಿದ್ದಾರೆ. ಇಂತಹ ಸ್ಫೋಟಕಗಳನ್ನು ಹುದುಗಿಸಿಟ್ಟರೆ ಅವುಗಳನ್ನು ಬಾಂಬ್ ಶೋಧಕಗಳು ಅಥವಾ ಶ್ವಾನಗಳಿಂದಲೂ ಪತ್ತೆಹಚ್ಚಲಾಗದು ಎನ್ನುತ್ತಾರೆ ಅಧಿಕಾರಿಗಳು.

2007ರಲ್ಲಿ ದಕ್ಷಿಣ ಕಾಶ್ಮೀರದಲ್ಲಿ ಭಯೋತ್ಪಾದಕ ಗುಂಪುಗಳು ದ್ರವ ಸ್ಫೋಟಕಗಳನ್ನು ಬಳಸಿದ್ದವು. ಆದರೆ ನಂತರದ ಒಂದೂವರೆ ದಶಕದಿಂದ ಜಮ್ಮು ಮತ್ತು ಕಾಶ್ಮೀರದಲ್ಲಿ ಭಯೋತ್ಪಾದಕರ ಬಳಿ ದ್ರವ ಸ್ಫೋಟಕ ಕಂಡುಬಂದಿರಲಿಲ್ಲ. ಪಾಕಿಸ್ತಾನ ಮೂಲದ ಭಯೋತ್ಪಾದಕ ಗುಂಪುಗಳು ಈಗ ದ್ರವರೂಪದ ಸ್ಫೋಟಕಗಳನ್ನು ಬಳಸುತ್ತಿರುವುದು ಗುಪ್ತಚರ ಮಾಹಿತಿಗಳಿಂದ ತಿಳಿದುಬಂದಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

2022ರ ಫೆಬ್ರುವರಿಯಲ್ಲಿ, ಜಮ್ಮು ಮತ್ತು ಕಾಶ್ಮೀರ ಪೊಲೀಸರು ಜಮ್ಮುವಿನ ಅಂತರರಾಷ್ಟ್ರೀಯ ಗಡಿಯಿಂದ ಶಸ್ತ್ರಾಸ್ತ್ರ ಮತ್ತು ಮದ್ದುಗುಂಡುಗಳನ್ನು ವಶಪಡಿಸಿಕೊಂಡಾಗ, ಇದರಲ್ಲಿ ಪಾಕಿಸ್ತಾನದ ಡ್ರೋನ್‌ಗಳು ಗಾಳಿಯಲ್ಲಿ ಬೀಳಿಸಿದ್ದ ಬಿಳಿ ದ್ರವದ ಮೂರು ಬಾಟಲಿಗಳು ಇದ್ದವು.

ಜಮ್ಮು ಮತ್ತು ಕಾಶ್ಮೀರ ಉಲ್ಲೇಖ: ಭಾರತ ಆಕ್ಷೇಪ

ನವದೆಹಲಿ (ಪಿಟಿಐ): ಚೀನಾ ಹಾಗೂ ಪಾಕಿಸ್ತಾನ ಈಚೆಗೆ ಹೊರಡಿಸಿದ್ದ ಜಂಟಿ ಹೇಳಿಕೆಯಲ್ಲಿ ಜಮ್ಮು ಮತ್ತು ಕಾಶ್ಮೀರದ ಬಗ್ಗೆ ಉಲ್ಲೇಖ ಮಾಡಿರುವುದಕ್ಕೆ ಭಾರತ ಆಕ್ಷೇಪ ವ್ಯಕ್ತಪಡಿಸಿದ್ದು, ಜಮ್ಮು ಮತ್ತು ಕಾಶ್ಮೀರವು ತನ್ನ ಅವಿಭಾಜ್ಯ ಅಂಗ ಎಂದು ಪ್ರತಿಪಾದಿಸಿದೆ.

ಪಾಕ್ ಆಕ್ರಮಿತ ಕಾಶ್ಮೀರದ (ಪಿಒಕೆ) ಮೂಲಕ ಸಾಗುವ ಚೀನಾ– ಪಾಕಿಸ್ತಾನ ಆರ್ಥಿಕ ಕಾರಿಡಾರ್ (ಸಿಪಿಇಸಿ) ವಿಷಯವನ್ನು ಜಂಟಿ ಹೇಳಿಕೆಯಲ್ಲಿ ಪ್ರಸ್ತಾಪಿಸಿರುವುದನ್ನೂ ಭಾರತ ಟೀಕಿಸಿದೆ.

ಪಾಕಿಸ್ತಾನದ ಪ್ರಧಾನಿ ಶೆಹಬಾಜ್ ಷರೀಫ್ ಮತ್ತು ಚೀನಾ ಪ್ರಧಾನಿ ಲಿ ಕ್ವಿಯಾಂಗ್ ನಡುವಣ ಮಾತುಕತೆಯ ಬಳಿಕ ಉಭಯ ದೇಶಗಳು ಜೂನ್ 7ರಂದು ಬೀಜಿಂಗ್‌ನಲ್ಲಿ ಜಂಟಿ ಹೇಳಿಕೆ ಹೊರಡಿಸಿದ್ದವು.

‘ಚೀನಾ ಮತ್ತು ಪಾಕಿಸ್ತಾನದ ಜಂಟಿ ಹೇಳಿಕೆಯಲ್ಲಿ ಜಮ್ಮು ಮತ್ತು ಕಾಶ್ಮೀರದ ವಿಷಯವನ್ನು ಅನಗತ್ಯವಾಗಿ ಪ್ರಸ್ತಾಪ ಮಾಡಿರುವುದು ನಾವು ಗಮನಿಸಿದ್ದೇವೆ. ಅದನ್ನು ಸಾರಾಸಗಟಾಗಿ ತಿರಸ್ಕರಿಸುತ್ತೇವೆ’ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್ ಅವರು ಗುರುವಾರ ಹೇಳಿದ್ದಾರೆ.

‘ಈ ವಿಷಯದಲ್ಲಿ ನಮ್ಮ ನಿಲುವು ದೃಢವಾಗಿದೆ ಮತ್ತು ಅದು ಸಂಬಂಧಪಟ್ಟವರಿಗೂ ಸ್ಪಷ್ಟವಾಗಿ ತಿಳಿದಿದೆ. ಕೇಂದ್ರಾಡಳಿತ ಪ್ರದೇಶಗಳಾದ ಜಮ್ಮು ಮತ್ತು ಕಾಶ್ಮೀರ ಹಾಗೂ ಲಡಾಖ್ ಇಂದು ಮತ್ತು ಮುಂದೆಯೂ ಭಾರತದ ಅವಿಭಾಜ್ಯ ಅಂಗವಾಗಿಯೇ ಉಳಿಯಲಿವೆ’ ಎಂದಿದ್ದಾರೆ.

‘ಈ ವಿಚಾರದ ಬಗ್ಗೆ ಮಾತನಾಡುವ ಅಧಿಕಾರ ಬೇರೆ ಯಾವುದೇ ದೇಶಕ್ಕೂ ಇಲ್ಲ’ ಎಂದು ಸ್ಪಷ್ಟಪಡಿಸಿದ್ದಾರೆ.

ಭೂ ಹಗರಣ: ಮಧ್ಯವರ್ತಿ ಬಂಧನ

ರಾಂಚಿ (ಪಿಟಿಐ): ಜಾರ್ಖಂಡ್ ಮಾಜಿ ಮುಖ್ಯಮಂತ್ರಿ ಹೇಮಂತ್ ಸೊರೇನ್ ಮತ್ತಿತರರು ಆರೋಪಿಗಳಾಗಿರುವ ಭೂ ಹಗರಣಕ್ಕೆ ಸಂಬಂಧಿಸಿದಂತೆ ಜಾರಿ ನಿರ್ದೇಶನಾಲಯವು (ಇ.ಡಿ) ಮಧ್ಯವರ್ತಿ ಎನ್ನಲಾದ ಶೇಖರ್ ಪ್ರಸಾದ್ ಮಾಹ್ತೊ ಅಲಿಯಾಸ್ ಶೇಖರ್ ಕುಶ್ವಾಹ ಎಂಬಾತನನ್ನು ಬುಧವಾರ ಬಂಧಿಸಿದೆ ಎಂದು ಮೂಲಗಳು ತಿಳಿಸಿವೆ.

ಇಲ್ಲಿಯ ಪಿಎಂಎಲ್‌ಎ ನ್ಯಾಯಾಲಯಕ್ಕೆ ಆತನನ್ನು ಗುರುವಾರ ಹಾಜರುಪಡಿಸಿರುವ ಇ.ಡಿ. ಅಧಿಕಾರಿಗಳು, ವಿಚಾರಣೆಗೆ ಒಳಪಡಿಸಬೇಕಿರುವುದರಿಂದ ತಮ್ಮ ವಶಕ್ಕೆ ನೀಡಬೇಕು ಎಂದು ಮನವಿ ಮಾಡಿದ್ದಾರೆ.

ಇ.ಡಿ ವಲಯ ಕಚೇರಿಯಲ್ಲಿ ಶೇಖರ್‌ನನ್ನು ವಿಚಾರಣೆಗೆ ಒಳಪಡಿಸಲಾಗಿತ್ತು. ಬಳಿಕ ಹಣ ಅಕ್ರಮ ವರ್ಗಾವಣೆ ತಡೆ ಕಾಯ್ದೆ (ಪಿಎಂಎಲ್‌ಎ) ಅಡಿ ಬಂಧಿಸಲಾಯಿತು ಎಂದಿದ್ದಾರೆ.

₹22.61 ಕೋಟಿ ಮೌಲ್ಯದ ಭೂಮಿ ಕಬಳಿಸುವ ದಿಸೆಯಲ್ಲಿ ಸುಳ್ಳು ದಾಖಲೆ ಸೃಷ್ಟಿಸಲು ಮತ್ತು ಸರ್ಕಾರದ ದಾಖಲೆಗಳನ್ನು ತಿರುಚಲು ಪ್ರಕರಣದ ಪ್ರಮುಖ ಆರೋಪಿ, ಕಂದಾಯ ಇಲಾಖೆಯ ಸಬ್ ಇನ್‌ಸ್ಪೆಕ್ಟರ್ ಭಾನು ಪ್ರತಾಪ್ ಪ್ರಸಾದ್ ಜೊತೆ ಸೇರಿ ಆತ ಪಿತೂರಿ ನಡೆಸಿದ್ದ. ಅರಿವಿದ್ದೇ ಆತ ಈ ಅಕ್ರಮದಲ್ಲಿ ಭಾಗಿಯಾಗಿದ್ದ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಬಿಎಸ್‌ವೈ ವಿರುದ್ಧ ಬಂಧನ ವಾರಂಟ್: ಬಿ.ವೈ.ರಾಘವೇಂದ್ರ ಹೇಳಿಕೆ

‘ವಾಲ್ಮೀಕಿ ನಿಗಮದ ಹಗರಣ ಮುಚ್ಚಿಹಾಕುವ ಯತ್ನ’

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: ‘ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ ನಡೆದಿರುವ ಹಗರಣ ಮುಚ್ಚಿಹಾಕಲು ಬಿ.ಎಸ್.ಯಡಿಯೂರಪ್ಪ ವಿರುದ್ಧದ ಪೋಕ್ಸೊ ಪ್ರಕರಣಕ್ಕೆ ಸರ್ಕಾರ ಮರುಜೀವ ನೀಡಿದೆ’ ಎಂದು ಶಿವಮೊಗ್ಗ ಸಂಸದ, ಯಡಿಯೂರಪ್ಪ ಅವರ ಪುತ್ರ ಬಿ.ವೈ.ರಾಘವೇಂದ್ರ ಅವರು ಆರೋಪಿಸಿದರು.

‘ಪೋಕ್ಸೊ ಪ್ರಕರಣದಲ್ಲಿ ಹುರುಳಿಲ್ಲ. ಬಿ ರಿಪೋರ್ಟ್ ಹಾಕಬೇಕಾದ ಪ್ರಕರಣದಲ್ಲಿ ಯಡಿಯೂರಪ್ಪ ಅವರ ವಿರುದ್ಧ ಜಾಮೀನುರಹಿತ ಬಂಧನ ವಾರಂಟ್ ಜಾರಿಯಾಗಿದೆ. ಈ ವಿಚಾರದಲ್ಲಿ ಸಿಐಡಿ ತನಿಖೆಯೂ ಮುಗಿದಿತ್ತು. ಆದರೆ, ಈಚೆಗೆ ಎಐಸಿಸಿ ನಾಯಕ ರಾಹುಲ್ ಗಾಂಧಿ ಬೆಂಗಳೂರಿಗೆ ಬಂದುಹೋದ ಮೇಲೆ ಈ ಬೆಳವಣಿಗೆ ನಡೆದಿದೆ’ ಎಂದು ಗುರುವಾರ ಇಲ್ಲಿ ಸುದ್ದಿಗಾರರಿಗೆ ಪ್ರತಿಕ್ರಿಯಿಸಿದರು.

‘ಪ್ರಕರಣದಲ್ಲಿ ಹುರುಳಿಲ್ಲ ಎಂದು ಸ್ವತಃ ಗೃಹ ಸಚಿವರೇ ಈ ಹಿಂದೆ ಹೇಳಿದ್ದರು. ಆದರೆ, ಈಗ ಯಡಿಯೂರಪ್ಪ ಅವರನ್ನು ಬಂಧಿಸಲು ಹೊರಟಿದ್ದಾರೆ. ರಾಜಕೀಯ ಕಾರಣಕ್ಕಾಗಿ ಈ ಹಿಂದೆಯೂ ನಮ್ಮ ಕುಟುಂಬಕ್ಕೆ ತೊಂದರೆ ಕೊಡುವ ಪ್ರಯತ್ನ ನಡೆದಿತ್ತು. ಯಡಿಯೂರಪ್ಪ ಅವರ ವಿರುದ್ಧ ಪೋಕ್ಸೊ ಅಡಿ ದೂರು ಕೊಟ್ಟಿದ್ದ ಮಹಿಳೆ ಈ ಹಿಂದೆ ಹಲವರ ವಿರುದ್ಧ ದೂರು ದಾಖಲಿಸಿದ್ದಾರೆ ಎಂಬುದನ್ನು ಗಮನಿಸಬೇಕು. ನ್ಯಾಯಾಲಯದಲ್ಲಿ ನಮಗೆ ನ್ಯಾಯ ದೊರಕಲಿದೆ’ ಎಂದು ಹೇಳಿದರು.

ಅಗತ್ಯ ಬಿದ್ದರೆ ಯಡಿಯೂರಪ್ಪ ಬಂಧನ: ಪರಮೇಶ್ವರ

ತುಮಕೂರು: ‘ಪೋಕ್ಸೊ ಪ್ರಕರಣದಲ್ಲಿ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರಿಗೆ ಸಿಐಡಿ ಅಧಿಕಾರಿಗಳು ನೋಟಿಸ್ ಜಾರಿ ಮಾಡಿದ್ದು, ಅಗತ್ಯವಿದ್ದರೆ ಬಂಧಿಸುತ್ತಾರೆ. ಅಗತ್ಯ ಇದೆ ಅಂತ ನಾನು ಹೇಳಲು ಆಗುವುದಿಲ್ಲ’ ಎಂದು ಗೃಹ ಸಚಿವ ಜಿ.ಪರಮೇಶ್ವರ ಹೇಳಿದ್ದಾರೆ.

ನಗರದಲ್ಲಿ ಗುರುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಸಹಜವಾಗಿ ಯಡಿಯೂರಪ್ಪ ಅವರು ತಮ್ಮನ್ನು ಬಂಧಿಸದಂತೆ ಕೋರಿ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿದ್ದಾರೆ. ಪೊಲೀಸ್ ಅಧಿಕಾರಿಗಳು ಜೂನ್ 15ರ ಒಳಗೆ ಚಾರ್ಜ್ ಶೀಟ್ ಸಲ್ಲಿಸಬೇಕಿದೆ. ಅಷ್ಟರ ಒಳಗೆ ಎಲ್ಲ ಪ್ರಕ್ರಿಯೆ ಪೂರ್ಣಗೊಳಿಸುತ್ತಾರೆ. ಯಡಿಯೂರಪ್ಪ ಅವರಿಂದಲೂ ಹೇಳಿಕೆ ಪಡೆಯುತ್ತಾರೆ’ ಎಂದರು.

ವಾಲ್ಮೀಕಿ ಅಭಿವೃದ್ಧಿ ನಿಗಮದ ಹಗರಣದಲ್ಲಿ ಎಸ್‌ಐಟಿ ಅಧಿಕಾರಿಗಳು ಹೈದರಾಬಾದ್‌ನಲ್ಲಿ ಮತ್ತಿಬ್ಬರನ್ನು ಬಂಧಿಸಿದ್ದಾರೆ ಎಂದು ಮಾಹಿತಿ ನೀಡಿದರು.

‘ಬಿಎಸ್‌ವೈ ಪ್ರಕರಣದ ಮಾಹಿತಿ ಇಲ್ಲ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬಿ.ಎಸ್. ಯಡಿಯೂರಪ್ಪ ಮೇಲಿನ ಪೋಕ್ಸೊ ಪ್ರಕರಣವನ್ನು ಗೃಹ ಸಚಿವಾಲಯ ನಿಭಾಯಿಸಲಿದೆ’ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.


ಡಿ ಕೆ ಶಿವಕುಮಾರ್

ಯಡಿಯೂರಪ್ಪ ಬಂಧನಕ್ಕೆ ಕೋರ್ಟ್ ವಾರಂಟ್ ಜಾರಿ ಮಾಡಿರುವ ಬಗ್ಗೆ ಕೇಳಿದರು, ‘ಈ ಬಗ್ಗೆ ನನಗೆ ಹೆಚ್ಚಿನ ಮಾಹಿತಿ ಇಲ್ಲ’ ಎಂದರು.

ನನ್ನನ್ನು ಯಾರೂ ಸಂಪರ್ಕಿಸಿಲ್ಲ: ‘ನಟ ದರ್ಶನ ಪ್ರಕರಣ ಮುಚ್ಚಿಹಾಕಲು ಸಚಿವರು ಯಾರಾದರೂ ಒತ್ತಡ ಹಾಕಿದ್ದಾರಾ’ ಎಂಬ ಪ್ರಶ್ನೆಗೆ, ‘ಈ ವಿಚಾರವಾಗಿ ನನ್ನ ಬಳಿ ಯಾರೂ ಮಾತನಾಡಿಲ್ಲ. ನನಗೆ ಅಷ್ಟಾಗಿ ಅವರ ಸಂಪರ್ಕವಿಲ್ಲ. ಸಚಿವರ ಪ್ರಯತ್ನದ ಬಗ್ಗೆ ವಿಚಾರಿಸುತ್ತೇನೆ’ ಎಂದರು.

‘ಈ ಪ್ರಕರಣದಲ್ಲಿ ಪೊಲೀಸ್ ಠಾಣೆಯನ್ನು ಶಾಮಿಯಾನ ಮೂಲಕ ಮುಚ್ಚಲಾಗಿದೆ. ಈ ಪ್ರಕರಣದಲ್ಲಿ ಸತ್ಯಾಂಶ ಮರೆಮಾಚುವ ಪ್ರಯತ್ನ ನಡೆಯುತ್ತಿದೆಯೇ’ ಎಂಬ ಪ್ರಶ್ನೆಗೆ, ‘ನನ್ನ ಪ್ರಕರಣದ ಅನುಭವದಲ್ಲೇ ಹೇಳುವುದಾದರೆ, ಅಧಿಕಾರಿಗಳು ನನ್ನನ್ನು ನ್ಯಾಯಾಲಯಕ್ಕೆ ಕರೆದುಕೊಂಡು ಹೋಗುವಾಗ ಜನರಿಗೆ ಮರೆಮಾಚಿ ಕರೆದುಕೊಂಡು ಹೋಗುತ್ತಿದ್ದರು. ಕೆಲವು ಬಾರಿ ಅಭಿಮಾನಿಗಳು ಅಡ್ಡಬರುವುದು, ಜೈಕಾರ ಕೂಗುವುದು ಅಥವಾ ಯಾರಾದರೂ ಕಲ್ಲು ಎಸೆಯಬಹುದು ಎಂಬ ಕಾರಣಕ್ಕೆ ಪೊಲೀಸ್ ಅಧಿಕಾರಿಗಳು ಆ ರೀತಿ ಮಾಡುತ್ತಾರೆ. ಈ ಪ್ರಕರಣದಲ್ಲಿ ಪೊಲೀಸರು ಇದೇ ರೀತಿ ಮುನ್ನೆಚ್ಚರಿಕೆ ಕ್ರಮ ತೆಗೆದುಕೊಂಡಿರಬಹುದು. ನನಗೆ ಮಾಹಿತಿ ಇಲ್ಲ’ ಎಂದರು.

‘ಈ ಪ್ರಕರಣವನ್ನು ರಾಜ್ಯ ಸರ್ಕಾರ ಮುಚ್ಚಿಹಾಕಲು ಪ್ರಯತ್ನಿಸಿದರೆ ನಾನು ಮಧ್ಯಪ್ರವೇಶಿಸಬೇಕಾಗುತ್ತದೆ’ ಎಂಬ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರ ಎಚ್ಚರಿಕೆ ಬಗ್ಗೆ ಕೇಳಿದಾಗ, ‘ಯಾರು ಬೇಕಾದರೂ ಮಧ್ಯಪ್ರವೇಶಿಸಲಿ’ ಎಂದರು.

‘ಕಾಂಗ್ರೆಸ್‌ನ ಸೇಡಿನ ರಾಜಕಾರಣ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್.ಯಡಿಯೂರಪ್ಪ ಅವರ ವಿರುದ್ಧ ಕಾಂಗ್ರೆಸ್ ಸರ್ಕಾರ ಹಗೆತನದ ರಾಜಕೀಯ ಮಾಡುತ್ತಿದೆ ಎಂದು ಬಿಜೆಪಿ ಮುಖಂಡರು ಆರೋಪಿಸಿದರು.

ವಿಧಾನಪರಿಷತ್ ಸದಸ್ಯರಾದ ಸಿ.ಟಿ. ರವಿ, ಎನ್.ರವಿಕುಮಾರ್, ಛಲವಾದಿ ನಾರಾಯಣಸ್ವಾಮಿ ಮತ್ತು ಬಿಜೆಪಿ ಪ್ರಧಾನಕಾರ್ಯದರ್ಶಿ ಪಿ.ರಾಜೀವ್ ಜಂಟಿ ಹೇಳಿಕೆ ನೀಡಿದ್ದು, ತಾವು ಹಗೆತನದ ರಾಜಕಾರಣ ಮಾಡುವುದಿಲ್ಲ ಎಂದು ಸಿದ್ದರಾಮಯ್ಯ ಭಾಷಣದಲ್ಲಿ ಹೇಳಿದ್ದರು. ಆದರೆ, ಇದೀಗ ಸೇಡಿನ ರಾಜಕಾರಣಕ್ಕೆ ಮುಂದಾಗಿದ್ದಾರೆ ಎಂದು ಕಿಡಿಕಾರಿದರು.

‘ಯಡಿಯೂರಪ್ಪ ಅವರು ದೆಹಲಿಯಲ್ಲಿದ್ದು, ಎರಡೇ ದಿನಗಳಲ್ಲಿ ಬರುವುದಾಗಿ ಹೇಳಿದ್ದರೂ ಗಡಿಬಿಡಿ ಮಾಡಿದ್ದಾರೆ. ನಾಲ್ಕು ತಿಂಗಳು ಇಲ್ಲದ ಗಡಿಬಿಡಿ ಕಾಂಗ್ರೆಸ್‌ಗೆ ಇವತ್ತು ಒಂದೇ ದಿನ ಬಂದಿದೆ. ಇವತ್ತೇ ಜಾಮೀನು ರಹಿತ ವಾರಂಟ್ ಪಡೆದು ಬಂಧನ ಮಾಡಲು ಹೋಗಿದ್ದಾರೆ’ ಎಂದು ಅವರು ದೂರಿದರು.

‘ಪೋಕ್ಸೊ ಪ್ರಕರಣ ದಾಖಲಿಸಿ ನಾಲ್ಕು ತಿಂಗಳು ಕಳೆದಿದೆ. ಆಗ ನೀವೆಲ್ಲಿ ಮಲಗಿದ್ದೀರಿ ಎಂದು ಜನರು ಕೇಳುವಂತಾಗಿದೆ. ಈ ಪ್ರಕರಣದಲ್ಲಿ ಹುರುಳಿಲ್ಲ ಎಂದು ಗೃಹ ಸಚಿವರೂ ಹೇಳಿದ್ದರು. ಇದೀಗ ರಾಹುಲ್‌ಗಾಂಧಿಯವರು ಕೋರ್ಟ್ ಮೆಟ್ಟಿಲು ಹತ್ತಿದ ಕಾರಣ ಬಿಜೆಪಿಯವರನ್ನೂ ಕೋರ್ಟಿಗೆ ತಂದು ನಿಲ್ಲಿಸಬೇಕೆಂಬ ಕಾಂಗ್ರೆಸ್ ಪಕ್ಷದ ದುರುದ್ದೇಶವು ಈಗ ಬಯಲಾಗಿದೆ’ ಎಂದು ಹೇಳಿದರು.

‘ಯಡಿಯೂರಪ್ಪ ವಿಚಾರದಲ್ಲಿ ಕೋರ್ಟ್‌ನಿಂದ ಬಂದ ಆದೇಶವನ್ನು ಗೌರವಿಸುತ್ತೇವೆ. ಆದರೆ, ಇದೊಂದು ರಾಜಕೀಯ ಷಡ್ಯಂತ್ರ ಅಥವಾ ರಾಜಕೀಯ ಪ್ರೇರಿತ ವಿಚಾರ. ಫೆಬ್ರುವರಿ 2ರಂದು ಘಟನೆ ನಡೆದಿದೆ ಎಂದು ಹೇಳಿ ಮಾರ್ಚ್‌ನಲ್ಲಿ ಪ್ರಕರಣ ದಾಖಲಿಸಲಾಗಿದೆ. ಆಗ ಯಡಿಯೂರಪ್ಪ ಅವರು ಪೊಲೀಸ್ ಠಾಣೆಗೆ ಬಂದು ಹೇಳಿಕೆ ನೀಡುವುದಾಗಿ ತಿಳಿಸಿದ್ದರು. ನಂತರ ಪೊಲೀಸ್‌ನವರು ಬರುವ ಅವಶ್ಯ ಇಲ್ಲ ಎಂದಿದ್ದರು. ಮನೆಗೆ ಬಂದು ಹೇಳಿಕೆಯನ್ನೂ ಪಡೆದಿದ್ದರು’ ಎಂದರು.

‘ಈ ಬಗ್ಗೆ ಪ್ರತಿಕ್ರಿಯಿಸಿದ್ದ ಗೃಹ ಸಚಿವರು, ಕೇಸು ದಾಖಲಿಸಿದವರು ಮಾನಸಿಕ ಅಸ್ವಸ್ಥೆ, ಐಎಎಸ್, ಐಪಿಎಸ್ ಹಾಗೂ ರಾಜಕಾರಣಿಗಳ ಮೇಲೆ 60ಕ್ಕೂ ಹೆಚ್ಚು ಕೇಸು ದಾಖಲಿಸಲಿದ್ದಾರೆ. ಆದ್ದರಿಂದ, ಆ ಕೇಸಿಗೆ ಮಹತ್ವ ಇಲ್ಲ ಎಂಬ ಮಾತನ್ನು ಹೇಳಿದ್ದರು’ ಎಂದರು.

‘ಈ ಪ್ರಕರಣದ ಬಿ ರಿಪೋರ್ಟ್ ನಿರೀಕ್ಷೆಯಲ್ಲಿದ್ದೆವು. ಆದರೆ ಕಳೆದ 2–3 ದಿನಗಳಲ್ಲಿ ದೊಡ್ಡ ಬೆಳವಣಿಗೆ ಆಗಿದೆ. ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್ ಮತ್ತು ರಾಹುಲ್ ಗಾಂಧಿ ಅವರು ಕೋರ್ಟ್ ಮೆಟ್ಟಿಲು ಹತ್ತುವಂತಾಗಿದ್ದು, ಆ ಹಿನ್ನೆಲೆಯಲ್ಲಿ ಬಿಜೆಪಿ ವಿರುದ್ಧ ಹಗೆ ತೀರಿಸಿಕೊಳ್ಳಲು ಸುರ್ಜೇವಾಲಾ ಅವರ ಆದೇಶದಡಿ ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ, ಗೃಹ ಸಚಿವರು ಸೇರಿ ಈ ಷಡ್ಯಂತ್ರ ಮಾಡಿದ್ದಾರೆ’ ಎಂದು ಆರೋಪಿಸಿದರು.

‘ಕೇಸು ಕೊಟ್ಟವರು ತೀರಿಕೊಂಡಿದ್ದಾರೆ. ಕೇಸು ಕೊಟ್ಟ ಮಹಿಳೆಯ ಮಗನ ದೂರು ಪಡೆದು ತಕ್ಷಣಕ್ಕೆ ಕೋರ್ಟ್ ಮೆಟ್ಟಿಲು ಹತ್ತಿದ ಪೊಲೀಸರು ಹೀಗೆ ಮಾಡಿದ್ದಾರೆ’ ಎಂದು ಅವರು ಟೀಕಿಸಿದರು.

ಬಿಎಸ್‌ವೈ ಬಂಧನಕ್ಕೆ ಸಿಐಡಿ ಶೋಧ

ಒಂದನೇ ಪುಟದಿಂದ..

ಬಂಧನಕ್ಕೆ ವಾರಂಟ್: ಯಡಿಯೂರಪ್ಪ ಅವರನ್ನು ಬಂಧಿಸಲು ಅನುಮತಿ ಕೋರಿದ್ದ ಪ್ರಾಸಿಕ್ಯೂಷನ್ ಮನವಿಯನ್ನು ಮನ್ನಿಸಿರುವ ನಗರದ ವಿಶೇಷ ನ್ಯಾಯಾಲಯ ಅವರ ಸೆರೆಗೆ ಜಾಮೀನು ರಹಿತ ಬಂಧನದ ವಾರಂಟ್ ಹೊರಡಿಸಲು ಆದೇಶಿಸಿದೆ.

ಈ ಕುರಿತಂತೆ ಪ್ರಾಸಿಕ್ಯೂಷನ್ ಸಲ್ಲಿಸಿದ್ದ ಅರ್ಜಿಯನ್ನು ನಗರದ 51ನೇ ಸಿವಿಲ್ ಮತ್ತು ಹೆಚ್ಚುವರಿ ಸೆಷನ್ಸ್ ಹಾಗೂ ಪೋಕ್ಸೊ ಪ್ರಕರಣಗಳ ವಿಚಾರಣೆ ನಡೆಸುವ ತ್ವರಿತಗತಿಯ ವಿಶೇಷ ನ್ಯಾಯಾಲಯ-1ರ ನ್ಯಾಯಾಧೀಶ ಎನ್.ಎಂ.ರಮೇಶ್ ಗುರುವಾರ ವಿಚಾರಣೆ ನಡೆಸಿದರು.

ವಿಚಾರಣೆ ವೇಳೆ ಪ್ರಕರಣದ ವಿಶೇಷ ಪ್ರಾಸಿಕ್ಯೂಟರ್ ಅಶೋಕ್ ನಾಯಕ್ ಸುದೀರ್ಘ ವಾದ ಮಂಡಿಸಿ, ‘ಪ್ರಕರಣದ ತನಿಖೆ ನಡೆಸುತ್ತಿರುವ ಸಿಐಡಿ ಪೊಲೀಸರಿಗೆ ಹಲವು ಕಾನೂನಾತ್ಮಕ ಅಡಚಣೆಗಳಿವೆ. ವಿಚಾರಣೆಗೆ ಕರೆದರೆ ಸಮಯ ಕೋರುತ್ತಿದ್ದಾರೆ. ನೋಟಿಸ್‌ಗಳನ್ನು ಕಡೆಗಣಿಸುತ್ತಿದ್ದಾರೆ. ಈಗಾಗಲೇ ಕೆಲವು ಸಾಕ್ಷ್ಯಗಳನ್ನು ನಾಶ ಮಾಡಿರುವ ಅವರಿಗೆ ಮತ್ತೂ ಸಮಯ ನೀಡಿದರೆ ಇನ್ನುಳಿದ ಸಾಕ್ಷ್ಯಗಳನ್ನೂ ಅಳಿಸಿ ಹಾಕಬಹುದು’ ಎಂದು ಆತಂಕ ವ್ಯಕ್ತಪಡಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಾಧೀಶರು, ‘ತನಿಖಾಧಿಕಾರಿಗೆ ಅರೆಸ್ಟ್ ಮಾಡೋ ಅಧಿಕಾರ ಇದೆಯಲ್ಲವೇ’ ಎಂದು ಪ್ರಶ್ನಿಸಿದರು. ಇದಕ್ಕೆ ಅಶೋಕ್ ನಾಯಕ್, ‘ಘಟನೆ ನಡೆದ ದಿನ ಸಂತ್ರಸ್ತ ಬಾಲಕಿಯ ತಾಯಿಗೆ ₹2 ಲಕ್ಷ ಮೊತ್ತವನ್ನು ಬೇಡ ಎಂದರೂ ಅವರ ಪರ್ಸಿನಲ್ಲಿ ಬಲವಂತದಿಂದ ತುರುಕಿದ್ದಾರೆ. ಹಣ ಕೊಟ್ಟು ಸಂತ್ರಸ್ತೆಯನ್ನು ಖರೀದಿ ಮಾಡುವ ಪ್ರಯತ್ನ ಮಾಡಿದ್ದಾರೆ. ಅಂದಿನ ಮಾತುಕತೆಯ ಕೆಲವು ಗಳಿಗೆಗಳನ್ನು ಬಾಲಕಿಯ ತಾಯಿ ತಮ್ಮ ಮೊಬೈಲ್‌ನಲ್ಲಿ ಸೆರೆ ಹಿಡಿದಿದ್ದರು. ಆದರೆ, ಯಡಿಯೂರಪ್ಪ ಅವರು ಅದನ್ನು ಅಳಿಸಿ ಹಾಕಿಸಿದ್ದಾರೆ. ಆದಾಗ್ಯೂ ವಿಡಿಯೊದ ಮೂಲ ರೂಪ ತನಿಖಾಧಿಕಾರಿಗಳ ಬಳಿ ಇದೆ’ ಎಂದರು.

‘ವಾಸ್ತವದಲ್ಲಿ ಸಂತ್ರಸ್ತ ಬಾಲಕಿಗೆ ಲೈಂಗಿಕ ದೌರ್ಜನ್ಯ ಆಗಿದೆ ಎಂಬ ಕಾರಣಕ್ಕಾಗಿ ಆಕೆಯ ತಾಯಿ ಕಾನೂನು ನೆರವು ಕೋರಿ ಇವರ ಬಳಿ ಬಂದಿದ್ದರು. ಏನೋ ಮಾಜಿ ಮುಖ್ಯಮಂತ್ರಿ, ನ್ಯಾಯ ಕೇಳೋಣ ಅಂತ ಬಂದ್ರೆ ಇಲ್ಲೂ ಅದೇ ಅನ್ಯಾಯವೇ? ಇವರು ನಾಲ್ಕು ಬಾರಿ ಮುಖ್ಯಮಂತ್ರಿ ಆಗಿದ್ದವರು. ಇವರನ್ನು ದಸ್ತಗಿರಿ ಮಾಡೋದಕ್ಕೆ ಕಷ್ಟವಿದೆ. ಇವರ ಒಬ್ಬ ಮಗ ಸಂಸದ. ಮತ್ತೊಬ್ಬ ಶಾಸಕ. ಅಷ್ಟೇಕೆ, ಪಕ್ಷವೊಂದರ ರಾಜ್ಯ ಘಟಕದ ಅಧ್ಯಕ್ಷರೂ ಹೌದು. ಇವರನ್ನು ವಿಚಾರಣೆಗೆ ಕರೆಯಿಸಿ ತನಿಖೆ ಪೂರೈಸುವುದೇ ಕಷ್ಟವಾಗಿದೆ’ ಎಂದರು.

‘ಆರೋಪಿಯು ಯಾವುದೇ ಒತ್ತಡ ಮತ್ತು ಬೆದರಿಕೆ ಉಂಟು ಮಾಡಿ ಘಟನೆಯ ಸತ್ಯಾಂಶ ಹೊರಬಾರದ ರೀತಿಯಲ್ಲಿ ನೋಡಿಕೊಳ್ಳುವ ಎಲ್ಲ ಸಾಧ್ಯತೆಗಳಿವೆ. ತಮ್ಮ ರಾಜಕೀಯ ಮತ್ತು ಹಣದ ಬಲದಿಂದ ಕುಟುಂಬದ ಸದಸ್ಯರ ಸ್ಥಾನಮಾನಗಳ ಪ್ರಭಾವದಿಂದ ಕಾನೂನು ಕೈಯಿಂದ ತಪ್ಪಿಸಿಕೊಳ್ಳಲು ಪ್ರಯತ್ನಿಸುವ ಸಂಭವಗಳಿವೆ. ಏತನ್ಮಧ್ಯೆ, ತನಿಖಾಧಿಕಾರಿಗಳ ಬಳಿ ಅಗತ್ಯ ಸಾಕ್ಷ್ಯಗಳಿವೆ. ಮೇಲ್ನೋಟಕ್ಕೆ ಶೇ 80ರಷ್ಟು ತನಿಖೆ ಈಗಾಗಲೇ ಪೂರ್ಣಗೊಂಡಿದೆ. ಇನ್ನುಳಿದ ದಾಖಲೆಗಳ ಶೋಧ ನಡೆಸಬೇಕಿದ್ದು ಆರೋಪಿಯ ಖುದ್ದು ವಿವರಣೆ ಪಡೆಯಬೇಕಿದೆ’ ಎಂದರು.

ಬೆಳಗಿನ ಕಲಾಪದಲ್ಲಿ ವಾದ ಆಲಿಸಿದ್ದ ನ್ಯಾಯಾಧೀಶ ರಮೇಶ್ ಅವರು ಸಂಜೆ 4.30ಕ್ಕೆ ಜಾಮೀನುರಹಿತ ಬಂಧನ ವಾರಂಟ್‌ಗೆ ಅನುಮತಿಸಿ ಆದೇಶ ಪ್ರಕಟಿಸಿದರು. ವಿಚಾರಣೆ ವೇಳೆ ತನಿಖಾಧಿಕಾರಿ ಡಿವೈಎಸ್‌ಪಿ ಎಂ.ಜೆ.ಪೃಥ್ವಿ ಹಾಜರಿದ್ದರು.

‘ಖಾಸಗಿ ಉದ್ಯಮಗಳಲ್ಲಿ ಕನ್ನಡಿಗರಿಗೆ ಶೇ 100 ಉದ್ಯೋಗ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಖಾಸಗಿ ವಲಯದ ಕೈಗಾರಿಕೆಗಳಲ್ಲಿ ‘ಸಿ’ ಮತ್ತು ‘ಡಿ’ ವೃಂದದಲ್ಲಿ ಕನ್ನಡಿಗರಿಗೆ 100ರಷ್ಟು ಮತ್ತು ಅಂಗವಿಕಲರಿಗೆ ಶೇ 5ರಷ್ಟು ಮೀಸಲಾತಿ ಕಲ್ಪಿಸಲು ರಾಜ್ಯ ಸರ್ಕಾರ ಚಿಂತನೆ ನಡೆಸಿದೆ. ಇದಕ್ಕೆ ಸಂಬಂಧಿಸಿದ ನಿಯಮ ತಿದ್ದುಪಡಿಗೆ ಮುಂದಿನ ಸಚಿವ ಸಂಪುಟಕ್ಕೆ ಪ್ರಸ್ತಾವ ಮಂಡಿಸಲು ಕಾರ್ಮಿಕ ಇಲಾಖೆ ಮುಂದಾಗಿದೆ.


ಮೀಸಲಾತಿ ಕಲ್ಪಿಸುವ ಉದ್ದೇಶದಿಂದ ‘ಕರ್ನಾಟಕ ಕೈಗಾರಿಕಾ ಉದ್ಯೋಗ (ಸ್ಥಾಯಿ ಆದೇಶಗಳು) (ತಿದ್ದುಪಡಿ) ನಿಯಮಗಳು– 2024’ ಅನ್ನು ರೂಪಿಸುವ ಕುರಿತು ಇಲಾಖೆಯ ಅಧಿಕಾರಿಗಳ ಜೊತೆ ಕಾರ್ಮಿಕ ಸಚಿವ ಸಂತೋಷ್ ಲಾಡ್ ಅವರು ಗುರುವಾರ ಸಭೆ ನಡೆಸಿದರು.

ಈ ಕುರಿತು ಮಾತನಾಡಿದ ಲಾಡ್, ‘ಸರೋಜಿನಿ ಮಹಿಷಿ ವರದಿಯನ್ನು ಈವರೆಗೆ ನೀತಿಯಾಗಿ ಪರಿಗಣಿಸಲಾಗಿದೆ. ಅದರಲ್ಲಿರುವ ಮೀಸಲಾತಿ ಶಿಫಾರಸನ್ನು ಕಾನೂನಾಗಿ ಮಾಡಲು ಉದ್ದೇಶಿಸಲಾಗಿದೆ. ಮೀಸಲಾತಿ ಕಡ್ಡಾಯಗೊಳಿಸಲು ನಿಯಮ ತಿದ್ದುಪಡಿ ಮಾಡಬೇಕಿದ್ದು, ಅದಕ್ಕೆ ಸಚಿವ ಸಂಪುಟದ ಒಪ್ಪಿಗೆ ಅಗತ್ಯವಿದೆ. 50ಕ್ಕಿಂತ ಹೆಚ್ಚು ಕೆಲಸಗಾರರನ್ನು ಹೊಂದಿರುವ ಎಲ್ಲ ಕೈಗಾರಿಕೆಗಳು ಈ ನಿಯಮಕ್ಕೆ ಬದ್ಧರಾಗುವಂತೆ ಮಾಡಲಾಗುವುದು’ ಎಂದರು.

‘ಖಾಸಗಿ ವಲಯದ ಪ್ರತಿಯೊಂದು ಕೈಗಾರಿಕೆಗೂ ಸರ್ಕಾರದಿಂದ ಒಂದಲ್ಲ ಒಂದು ರೀತಿಯ ಲಾಭ ಸಿಗುತ್ತಿದೆ. ತೆರಿಗೆ ರಿಯಾಯಿತಿಯಷ್ಟೇ ಅಲ್ಲದೆ, ಭೂಮಿ ಖರೀದಿ, ನೀರು, ವಿದ್ಯುತ್ ಪೂರೈಕೆಯಲ್ಲಿಯೂ ರಿಯಾಯಿತಿ ನೀಡಲಾಗುತ್ತಿದೆ’ ಎಂದರು.

ಕನ್ನಡಿಗರಿಗೆ ಉದ್ಯೋಗದಲ್ಲಿ ಶೇ 100ರಷ್ಟು ಮೀಸಲಾತಿ ನೀಡುವಂತೆ ಈ ಹಿಂದಿನಿಂದಲೂ ಬೇಡಿಕೆಯಿದೆ. ರಾಜ್ಯ ಸರ್ಕಾರವು 2019ರಲ್ಲಿ ಸ್ಥಾಯಿ ಆದೇಶದ ನಿಯಮಗಳಿಗೆ ತಿದ್ದುಪಡಿ ಮಾಡಿ ಉದ್ಯೋಗದಲ್ಲಿ ಕನ್ನಡಿಗರಿಗೆ ‘ಆದ್ಯತೆ’ ನೀಡುವಂತೆ ಖಾಸಗಿ ವಲಯಕ್ಕೆ ಮನವಿ ಮಾಡಿತ್ತು.

ಲೋಕಸಭೆ ಸ್ಪೀಕರ್ ಚುನಾವಣೆ ಇದೇ 26ರಂದು



ನವದೆಹಲಿ (ಪಿಟಿಐ): ಲೋಕಸಭಾ ಸ್ಪೀಕರ್ ಚುನಾವಣೆ ಜೂನ್ 26ರಂದು ನಡೆಯಲಿದೆ. ಅಭ್ಯರ್ಥಿಗಳನ್ನು ಬೆಂಬಲಿಸುವ ಪ್ರಸ್ತಾವನೆಗಳ ಸೂಚನೆಗಳನ್ನು ಸದಸ್ಯರು ಒಂದು ದಿನ ಮುಂಚಿತವಾಗಿ ಮಧ್ಯಾಹ್ನ 12 ಗಂಟೆಯೊಳಗೆ ಸಲ್ಲಿಸಬಹುದು ಎಂದು ಲೋಕಸಭೆ ಸಚಿವಾಲಯ ಗುರುವಾರ ತಿಳಿಸಿದೆ.

18ನೇ ಲೋಕಸಭೆಯ ಮೊದಲ ಅಧಿವೇಶನ ಜೂನ್ 24 ರಂದು ಪ್ರಾರಂಭವಾಗಲಿದ್ದು, ಜುಲೈ 3 ರಂದು ಮುಕ್ತಾಯವಾಗಲಿದೆ.

ಚುನಾವಣೆಗೆ ನಿಗದಿಪಡಿಸಿದ ದಿನಾಂಕದ ಹಿಂದಿನ ದಿನದಂದು ಮಧ್ಯಾಹ್ನ 12 ಗಂಟೆಯ ಮೊದಲು ಯಾವುದೇ ಸಮಯದಲ್ಲಿ, ಯಾವುದೇ ಸದಸ್ಯರು ಸ್ಪೀಕರ್ ಕಚೇರಿಗೆ ಇನ್ನೊಬ್ಬ ಸದಸ್ಯರನ್ನು ಬೆಂಬಲಿಸುವ ಪ್ರಸ್ತಾವನೆಯನ್ನು ಮಹಾಪ್ರಧಾನ ಕಾರ್ಯದರ್ಶಿ ಅವರಿಗೆ ಲಿಖಿತವಾಗಿ ನೀಡಬಹುದು ಎಂದು ಹೇಳಿಕೆಯಲ್ಲಿ ಅದು ತಿಳಿಸಿದೆ.

‘ಜೂನ್ 25ರ ಮಂಗಳವಾರ ಮಧ್ಯಾಹ್ನ 12 ಗಂಟೆಯ ಮೊದಲು ಸ್ಪೀಕರ್ ಆಯ್ಕೆಗೆ ಪ್ರಸ್ತಾವನೆಗಳ ಸೂಚನೆಗಳನ್ನು ಸಲ್ಲಿಸಬಹುದು’ ಎಂದು ಅದು ವಿವರಿಸಿದೆ.

ನೂತನವಾಗಿ ಆಯ್ಕೆಯಾದ ಸದಸ್ಯರ ಪ್ರಮಾಣ ವಚನ ಸ್ವೀಕಾರಕ್ಕೆ ಮೊದಲ ಎರಡು ದಿನ ಮೀಸಲಾಗಿದ್ದರೆ, ಜೂನ್ 26 ಸ್ಪೀಕರ್ ಆಯ್ಕೆಗೆ ದಿನಾಂಕ ನಿಗದಿಪಡಿಸಿದೆ.

ಜೂನ್ 27ರಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಲೋಕಸಭೆ ಮತ್ತು ರಾಜ್ಯಸಭೆಯ ಜಂಟಿ ಅಧಿವೇಶನ ಉದ್ದೇಶಿಸಿ ಮಾತನಾಡಲಿದ್ದಾರೆ.

ಕೊಡಗಿನಲ್ಲಿ ತಗ್ಗಿದ ಮಳೆ ಅಬ್ಬರ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ಮಸ್ಕಿ ಜಲಾಶಯಕ್ಕೆ ಒಳಹರಿವು ಹೆಚ್ಚಳ
- ಕಲಬುರಗಿ ಜಿಲ್ಲೆಯ ವಿವಿಧೆಡೆ ಕೆರೆ-ಕಟ್ಟೆಗಳು ಭರ್ತಿ

ಮಡಿಕೇರಿ: ಕೊಡಗು ಜಿಲ್ಲೆಯಲ್ಲಿ ಗುರುವಾರ ಮಳೆಯ ಅಬ್ಬರ ತುಸು ತಗ್ಗಿದೆ. ಮಡಿಕೇರಿ ನಗರದಲ್ಲಿ ಬೆಳಿಗ್ಗೆ ಬಿರುಸಿನ ಮಳೆಯಾಯಿತು. ಉಳಿದಂತೆ, ದಿನವಿಡೀ ಮೋಡಕವಿದ ವಾತಾವರಣ ಇತ್ತು.

ಗುರುವಾರ ಬೆಳಿಗ್ಗೆ 8.30ಕ್ಕೆ ಕೊನೆಗೊಂಡಂತೆ 24 ಗಂಟೆಗಳ ಅವಧಿಯಲ್ಲಿ ಮಡಿಕೇರಿ ತಾಲ್ಲೂಕಿನಲ್ಲಿ 3 ಸೆಂ.ಮೀ, ಸೋಮವಾರಪೇಟೆ ತಾಲ್ಲೂಕಿನಲ್ಲಿ 8 ಸೆಂ.ಮೀನಷ್ಟು ಮಳೆಯಾಗಿದೆ.

ಕಲಬುರಗಿ ವರದಿ: ಕಲ್ಯಾಣ ಕರ್ನಾಟಕದ ಕಲಬುರಗಿ ಹಾಗೂ ಬೀದರ್ ಜಿಲ್ಲೆಗಳಲ್ಲಿ ಗುರುವಾರ ಬಿರುಸಿನಿಂದ ಮಳೆ ಸುರಿದಿದೆ. ಇದರಿಂದ ಬಿತ್ತನೆ ಕೆಲಸಗಳ ವೇಗ ಪಡೆದುಕೊಂಡಿದೆ.

ಕಲಬುರಗಿ ನಗರ, ಚಿಂಚೋಳಿ, ಕಮಲಾಪುರ, ಆಳಂದ, ಚಿತ್ತಾಪುರ, ವಾಡಿಯಲ್ಲಿ ಬಿರುಸಿನ ಮಳೆ ಸುರಿಯಿತು. ಇದರಿಂದಾಗಿ ಕೆರೆ ಕಟ್ಟೆಗಳು ಭರ್ತಿಯಾಗಿವೆ.

ಬೀದರ್ ಜಿಲ್ಲೆಯ ಹುಲಸೂರ, ಭಾಲ್ಕಿಯಲ್ಲಿ ಮಳೆಯಾಗಿದೆ. ಭಾಲ್ಕಿ ತಾಲ್ಲೂಕಿನ ಕೋಟ್ಯಾಳ ಗ್ರಾಮದಲ್ಲಿ 24 ಆಡು, 4 ಕುರಿಗಳು ಸಿಡಿಲಿಗೆ ಮೃತಪಟ್ಟಿವೆ.

ರಾಯಚೂರು ಜಿಲ್ಲೆಯ ಮಸ್ಕಿ, ಲಿಂಗಸುಗೂರು, ಹಟ್ಟಿಚಿನ್ನದಗಣಿ, ಕವಿತಾಳದಲ್ಲಿ ಉತ್ತಮ ಮಳೆಯಾಗಿದೆ. ಮಸ್ಕಿ ಜಲಾಶಯಕ್ಕೆ ಒಳಹರಿವು ಹೆಚ್ಚಿದೆ.

ಚಾವಣಿ ಕುಸಿದು ವ್ಯಕ್ತಿ ಸಾವು

ಪ್ರಜಾವಾಣಿ ವಾರ್ತೆ

ಜಮಖಂಡಿ (ಬಾಗಲಕೋಟೆ ಜಿಲ್ಲೆ): ನಗರದ ಮೋಮಿನ್ ಗಲ್ಲಿಯಲ್ಲಿ ಗುರುವಾರ ಮನೆ ಚಾವಣಿ ಕುಸಿದು ಮುಷ್ತಾಕ್ ಮಕಬೂಲ್ ಮೋಮಿನ್ (42) ಎಂಬವರು ಮೃತಪಟ್ಟಿದ್ದಾರೆ. ಮಳೆಯಿಂದ ಮನೆ ಅಲ್ಲಲ್ಲಿ ಸೋರುತ್ತಿತ್ತು. ಪತ್ನಿ, ಮಕ್ಕಳು ಮಲಗಲು ಸಂಬಂಧಿಕರ ಮನೆಗೆ ತೆರಳಿದ್ದರು ಎಂದು ಸ್ಥಳೀಯರು ತಿಳಿಸಿದ್ದಾರೆ.

ಜಿಲ್ಲೆಯ ಇಳಕಲ್, ಬೀಳೂರ, ಬಾಗಲಕೋಟೆ ಮುಂತಾದೆಡೆ ಮಳೆಯಾಗಿದೆ.

ಬೆಳಗಾವಿ ವರದಿ: ಜಿಲ್ಲೆಯ ಮೂಡಲಗಿ, ರಾಮದುರ್ಗದಲ್ಲಿ ಗುರುವಾರ ಉತ್ತಮ ಮಳೆ ಸುರಿಯಿತು.

ಭವಾನಿ ಕಾರು ಚಾಲಕ ಅಜಿತ್ ಮನೆ ಮೇಲೆ ದಾಳಿ

ಪ್ರಜಾವಾಣಿ ವಾರ್ತೆ

ಹಾಸನ: ಮಹಿಳೆ ಅಪಹರಣ ಪ್ರಕರಣದಲ್ಲಿ ಸಿಲುಕಿರುವ ಭವಾನಿ ರೇವಣ್ಣ ಅವರ ಕಾರು ಚಾಲಕ ಅಜಿತ್ ಮನೆ ಮೇಲೆ ಬುಧವಾರ ರಾತ್ರಿ ಮೂವರು ಕಲ್ಲು ಎಸೆದಿದ್ದಾರೆ.

ಹೊಳೆನರಸೀಪುರ ತಾಲ್ಲೂಕಿನ ಮೂಡಲಹಿಪ್ಪೆ ಗ್ರಾಮದಲ್ಲಿರುವ ಮನೆ ಬಳಿ ಬಂದು ಕಲ್ಲೆಸೆದಿದ್ದೇ ಅಲ್ಲದೆ, ಅವರ ಅಕ್ಕನ ಮಗ ಮೋಹಿತ್ ಅವರನ್ನು ಎಳೆದೊಯ್ದು ಹಲ್ಲೆ ನಡೆಸಿದ್ದಾರೆ. ಗಾಯಾಳು ಹೊಳೆನರಸೀಪುರ ತಾಲ್ಲೂಕು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದಾರೆ.

ಸ್ಥಳಕ್ಕೆ ಪೊಲೀಸರು ಭೇಟಿ ನೀಡಿ ಪರಿಶೀಲಿಸಿದ್ದು, ಹೊಳೆನರಸೀಪುರ ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಪ್ರಜ್ವಲ್ ರೇವಣ್ಣ ವಿರುದ್ಧ ಅತ್ಯಾಚಾರ ಆರೋಪ ಮಾಡಿರುವ ಸಂತ್ರಸ್ತ ಮಹಿಳೆ ಅಪಹರಣ ಪ್ರಕರಣದಲ್ಲಿ ಅಜಿತ್ ವಿರುದ್ಧ ಎಸ್ಐಟಿ ವಾರಂಟ್ ಜಾರಿ ಮಾಡಿದೆ.

ಲೋಕಾಯುಕ್ತ ಬಲೆಗೆ ಶಿರಸ್ತೇದಾರ್

ಪ್ರಜಾವಾಣಿ ವಾರ್ತೆ

ಕೊಪ್ಪಳ: ಯೋಜನಾ ನಿರಾಶ್ರಿತ ಪ್ರಮಾಣ ಪತ್ರ ನೀಡಲು ಲಂಚ ಪಡೆದುಕೊಳ್ಳುತ್ತಿದ್ದಾಗ ಇಲ್ಲಿನ ತಹಶೀಲ್ದಾರ್ ಕಚೇರಿಯ ಶಿರಸ್ತೇದಾರ್ ಸುನೀಲ್ ಕುಮಾರ್ ಕುಲಕರ್ಣಿ ಗುರುವಾರ ಲೋಕಾಯುಕ್ತ ಅಧಿಕಾರಿಗಳ ಬಲೆಗೆ ಬಿದ್ದಿದ್ದಾರೆ.

ಒಟ್ಟು ₹50 ಸಾವಿರಕ್ಕೆ ಬೇಡಿಕೆಯಿಟ್ಟಿದ್ದ ಶಿರಸ್ತೇದಾರ್, ₹34 ಸಾವಿರ ಲಂಚ ಪಡೆಯುತ್ತಿದ್ದ ವೇಳೆ ಸಿಲುಕಿದ್ದಾರೆ. ತಾಲ್ಲೂಕಿನ ಗಜ್ಜೂರು ಗ್ರಾಮದ ನಿವಾಸಿ ಕರಿಯಪ್ಪ ಅವರಿಂದ ಹಣ ಪಡೆಯುವಾಗ ಅಧಿಕಾರಿಗಳು ಬಲೆ ಬೀಸಿದ್ದಾರೆ.

ಡೆಂಗಿಗೆ ಆರೋಗ್ಯ ಇಲಾಖೆ ನೌಕರ ಬಲಿ

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: ಆರೋಗ್ಯ ಇಲಾಖೆ ನೌಕರರೊಬ್ಬರು ಡೆಂಗಿಯಿಂದ ಗುರುವಾರ ಸಾವಿಗೀಡಾಗಿದ್ದಾರೆ.



ನಾಗರಾಜ್

ಜಿಲ್ಲೆಯ ಸಾಗರದ ಉಪವಿಭಾಗೀಯ ಆಸ್ಪತ್ರೆಯ ಡಯಾಲಿಸಿಸ್ ವಿಭಾಗದಲ್ಲಿ ಗುತ್ತಿಗೆ ನೌಕರರಾಗಿ ಕೆಲಸ ಮಾಡುತ್ತಿದ್ದ ಬಿ.ನಾಗರಾಜ್ (34) ಶಿವಮೊಗ್ಗದ ಖಾಸಗಿ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾರೆ.

ತೀವ್ರ ಜ್ವರದಿಂದ ಬಳಲುತ್ತಿದ್ದ ಇವರು ಕಳೆದ ಭಾನುವಾರ ಕೆಂಪು ರಕ್ತ ಕಣಗಳು ಕಡಿಮೆಯಾಗಿ ಏಕಾಏಕಿ ಅಸ್ವಸ್ಥರಾಗಿದ್ದರು. ಅವರು ಕೆಲಸ ಮಾಡುತ್ತಿದ್ದ ಆಸ್ಪತ್ರೆಯಲ್ಲೇ ಅವರನ್ನು ದಾಖಲಿಸಲಾಗಿತ್ತು. ಅಲ್ಲಿ ರಕ್ತ ಪರೀಕ್ಷೆ ನಡೆಸಿದಾಗ ಡೆಂಗಿ ಸೋಂಕು ಇರುವುದು ದೃಢಪಟ್ಟಿತ್ತು.

ಅಲ್ಲೇ ಎರಡು ದಿನ ಚಿಕಿತ್ಸೆ ನೀಡಿ, ನಂತರ ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆಗೆ ಕರೆತರಲಾಗಿತ್ತು ಎಂದು ಮೂಲಗಳು ತಿಳಿಸಿವೆ.

ಬೆಂಗಳೂರು ನಗರ ಜಿಲ್ಲಾ ಪಂಚಾಯತಿ

ಕಾರ್ಯಪಾಲಕ ಅಭಿಯಂತರರವರ ಕಛೇರಿ, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಜಿಲ್ಲಾ ಪಂಚಾಯತಿ ಕಟ್ಟಡ, ಮೊದಲನೇ ಮಹಡಿ, ಎಸ್. ಕರಿಯಪ್ಪ ರಸ್ತೆ, ಬನಶಂಕರಿ, ಬೆಂಗಳೂರು – 560070.

ಸಂಖ್ಯೆ:ಕಾಅ/ಪಂರಾಇಂವಿ/ಬೆಂನ/ಎಇ-1/ಟೆಂಡರ್/02/2024-25 ದಿನಾಂಕ: 11-06-2024

ಕೆಪಿಪಿ ಪೋರ್ಟಲ್ ಟೆಂಡರ್ ಪ್ರಕಟಣೆ

ಕಾರ್ಯಪಾಲಕ ಅಭಿಯಂತರರ ಕಛೇರಿ, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಕಛೇರಿಯಿಂದ MLA, Muzarai, Deposite, MP, Viveka Yojane, Grants ಅನುಮೋದನೆಯಾಗಿರುವ ಕಾಮಗಾರಿಗಳಿಗಾಗಿ ದ್ವಿ-ಲಕೋಟೆ ಪದ್ಧತಿಯಲ್ಲಿ ಕೆಪಿಪಿ ಪೋರ್ಟಲ್ ಮುಖಾಂತರ ಟೆಂಡರ್ ಅನ್ನು ಕರೆಯಲಾಗಿದೆ. ವೆಬ್‌ಸೈಟ್ ಮೂಲಕ ಟೆಂಡರ್ ಫಾರಂಗಳನ್ನು ದಿನಾಂಕ: **28-06-2024 ರಂದು ಸಂಜೆ 4.00 ಗಂಟೆಯವರೆಗೆ** ಪಡೆದು ಸಲ್ಲಿಸಬಹುದಾಗಿರುತ್ತದೆ. ಕಾಮಗಾರಿವಾರು ವಿವರಗಳನ್ನು ಕೆಪಿಪಿಪಿ ವೆಬ್‌ಸೈಟ್ ಮೂಲಕ ಪಡೆಯಬಹುದಾಗಿರುತ್ತದೆ. ಹೆಚ್ಚಿನ ವಿವರಗಳಿಗಾಗಿ ಕಛೇರಿ ವೇಳೆಯಲ್ಲಿ ಕಛೇರಿಯನ್ನು ಸಂಪರ್ಕಿಸಲು ಅಥವಾ ವೆಬ್‌ಸೈಟ್: **https://www.kppp.karnataka.gov.in** ನಲ್ಲಿ ವಿವರಗಳನ್ನು ಪಡೆಯಬಹುದಾಗಿರುತ್ತದೆ.

ಸಹಿ/- ಕಾರ್ಯಪಾಲಕ ಅಭಿಯಂತರರು,
ಪಂಚಾಯತ್‌ರಾಜ್ ಇಂಜಿನಿಯರಿಂಗ್ ವಿಭಾಗ,
ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು.

ವಾಸಾಸಂಇ/ವಾ.ಪ್ರ/322/ಅಡ್ವರ್ಟೋರ್/2024-25

ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ, ಕೇಂದ್ರ ಕಚೇರಿ ಕಲಬುರಗಿ

(ಉಗ್ರಾಣ ಇಲಾಖೆ)

ಸಂ. ಕಕರಸಾ/ಕೇಕ/ಉ&ಮಖಿನಿ/257/2024-25 ದಿನಾಂಕ 13.06.2024

:: ಅಲ್ಪಾವಧಿ ಟೆಂಡರ್ ಪ್ರಕಟಣೆ (ಇ-ಪ್ರೊಕ್ಯೂರ್‌ಮೆಂಟ್ ಮೋಡ್‌ನಲ್ಲಿ ಮಾತ್ರ) ::

ಈ ಕೆಳಗಿನ ವಸ್ತುಗಳನ್ನು ಪೂರೈಸಲು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (ಪ್ರಿ ಕ್ವಾಲಿಫಿಕೇಶನ್ ಮತ್ತು ಕಮರ್ಷಿಯಲ್) ಮೂಲಕ ಅಲ್ಪಾವಧಿ ಟೆಂಡರ್‌ನ್ನು ಆಹ್ವಾನಿಸಲಾಗಿದೆ.

ಕ್ರ ಸಂ.	ಸಂಖ್ಯೆ ಮತ್ತು ದಿನಾಂಕ	ವಸ್ತುಗಳ ವಿವರ	ಟೆಂಡರ್ ಮೌಲ್ಯ ರೂ. ಕೋಟಿಗಳಲ್ಲಿ	ಟೆಂಡರ್‌ನಲ್ಲಿ ಪಾಲ್ಗೊಳ್ಳಲು ಕೊನೆಯ ದಿನಾಂಕ
1	ಜಿ-11/2024-25 ದಿ: 13.06.2024	10x20 ಟೈರ್ ಸೆಟ್, ಟ್ಯೂಬ್ಲೆಸ್ ಟೈರ್ ಮತ್ತು ಹೆಚುವರಿ ಟ್ಯೂಬ್ ಮತ್ತು ಫ್ಲಾಪ್ ಸರಬರಾಜು ಮಾಡುವ ಬಗ್ಗೆ.	19.00	01.07.2024 15:00 ಗಂಟೆ ವರೆಗೆ
2	ಜಿ-14/2024-25 ದಿ: 13.06.2024	ಎಮ್.ಎಸ್.ಯ್ಯಾಂಗಲ್, ಎಮ್.ಎಸ್.ಫ್ಲಾಟ್, ಎಮ್.ಎಸ್. ಸಿ-ಚಾನಲ್, ಎಆರ್‌ಡಬ್ಲ್ಯು ಜಿಐಯ್ ಸ್ಕ್ವೇರ್ ಟ್ಯೂಬ್ಸ್ ಮತ್ತು ಸಿಆರ್ ಇಆರ್‌ಡಬ್ಲ್ಯು ಎಮ್.ಎಸ್ ರೌಂಡ್ ಟ್ಯೂಬ್ಸ್ ಸರಬರಾಜು ಮಾಡುವ ಬಗ್ಗೆ.	4.58	01.07.2024 15:00 ಗಂಟೆ ವರೆಗೆ
3	ಜಿ-09/2024-25 ದಿ: 13.06.2024	ಪಿ.ಸಿ.ಟಿ.ಆರ್. ಮತ್ತು ಅಲೈಡ್ ಮೆಟೀರಿಯಲ್ಸ್ ಸರಬರಾಜು ಮಾಡುವ ಬಗ್ಗೆ.	3.47	01.07.2024 15:00 ಗಂಟೆ ವರೆಗೆ
4	ಜಿ-13/2024-25 ದಿ: 13.06.2024	ಪ್ಲೈವುಡ್ ಶೀಟ್ಸ್ ಸರಬರಾಜು ಮಾಡುವ ಬಗ್ಗೆ.	1.20	01.07.2024 15:00 ಗಂಟೆ ವರೆಗೆ
5	ಜಿ-12/2024-25 ದಿ: 13.06.2024	ಆಟೋಮೊಟಿವ್ ಕೇಬಲ್ ವೈಯರ್ ಸರಬರಾಜು ಮಾಡುವ ಬಗ್ಗೆ.	0.61	01.07.2024 15:00 ಗಂಟೆ ವರೆಗೆ
6	ಜಿ-10/2024-25 ದಿ: 13.06.2024	ಟೈರ್ ಮತ್ತು ಟ್ಯೂಬ್ ಪ್ಯಾಚ್ಚೆಸ್ ಸರಬರಾಜು ಮಾಡುವ ಬಗ್ಗೆ.	0.31	01.07.2024 15:00 ಗಂಟೆ ವರೆಗೆ

ಟೆಂಡರ್, ನೊಂದಣಿ, ಟೆಂಡರ್ ಫಾರ್ಮ್ ದಾಖಲಾತಿಗಳ ಎಲ್ಲಾ ವಿವರಗಳು https://kppp.karnataka.gov.in/ ನಲ್ಲಿ ಲಭ್ಯವಿದೆ. ಅಗತ್ಯವಿದ್ದರೆ ಹೆಚ್ಚಿನ ಮಾಹಿತಿಗಾಗಿ cospnekrtc@gmail.com ಅಥವಾ support@eprochelpdesk.com ಗೆ -ಮೇಲ್ ಮುಖಾಂತರ ಸಂಪರ್ಕಿಸಬಹುದಾಗಿದೆ. ಪರಿಭಾಷೆಯಲ್ಲಿನ ಬದಲಾವಣೆಗಳಿಗೆ ಸಂಬಂಧಿಸಿದಂತೆ ಯಾವುದೇ ಅಡೆಂಡಮ್ /ಕೊರಿಜೆಂಡಮ್ ಮತ್ತು ಟೆಂಡರ್ ಷರತ್ತು ಮತ್ತು ನಿಭಂಧನೆಗಳು, ಸ್ಪೆಸಿಫಿಕೇಶನ್ ಮತ್ತು ಘಟನೆಗಳ ಕ್ಯಾಲೆಂಡರ್ ಇತ್ಯಾದಿಗಳನ್ನು ಇ-ಪ್ರಕ್ಯೂರಮೆಂಟ್ ಪೋರ್ಟಲ್ ಮೂಲಕ ಮಾತ್ರ ಅಪ್ಲೋಡ್ ಮಾಡಲಾಗುತ್ತದೆ.

ಸಹಿ/- ಉಗ್ರಾಣ ಮತ್ತು ಖರೀದಿ ನಿಯಂತ್ರಕರು.
(ಟೆಂಡರ್ ಆಹ್ವಾನಿಸುವ ಪ್ರಾಧಿಕಾರಸ್ಥರು)

ವಾ.ಸಾ.ಸಂ.ಇ/ಕಲಬುರಗಿ/81/ಕೆ.ಎಸ್.ಎಂ.ಸಿ.&ಎ/2024-25

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ

(ಆಡಳಿತ ಸುಧಾರಣೆ)

ಕರ್ನಾಟಕ ಸರ್ಕಾರದ ಸಚಿವಾಲಯ, 6ನೇ ಮಹಡಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು-560001
ದೂ: 080-2203 2907, 2203 2655 ಇ-ಮೇಲ್: dparar.rti.so@gmail.com
ವೆಬ್‌ಸೈಟ್: https://dparar.karnataka.gov.in

ಸಂಖ್ಯೆ: ಸಿಆಸುಇ(ಆಸು) 92 ಆರ್‌ಟಿಐ 2024 ಇ-ಆಫೀಸ್ ನಂ: 1346559 ದಿನಾಂಕ: 11.06.2024

ಅಧಿಸೂಚನೆ

ವಿಷಯ: ಕರ್ನಾಟಕ ಮಾಹಿತಿ ಆಯೋಗದಲ್ಲಿ ಪ್ರಸ್ತುತ ಖಾಲಿಯಿರುವ ರಾಜ್ಯ ಮುಖ್ಯ ಮಾಹಿತಿ ಆಯುಕ್ತರ ಒಂದು ಹುದ್ದೆ ಹಾಗೂ ರಾಜ್ಯ ಮಾಹಿತಿ ಆಯುಕ್ತರ ಒಂದು ಹುದ್ದೆಯ ನೇಮಕಾತಿಯ ಕುರಿತು.

ಮಾಹಿತಿ ಹಕ್ಕು ಅಧಿನಿಯಮ, 2005ರಡಿ ತನಗೆ ಪ್ರದತ್ತವಾಗಿರುವ ಅಧಿಕಾರವನ್ನು ಚಲಾಯಿಸಲು ಮತ್ತು ನಿಗದಿಪಡಿಸಿರುವ ಕೆಲಸ ಕಾರ್ಯಗಳನ್ನು ನಿರ್ವಹಿಸಲು ಕರ್ನಾಟಕ ಸರ್ಕಾರವು ಕರ್ನಾಟಕ ಮಾಹಿತಿ ಆಯೋಗವನ್ನು ರಚಿಸಿದೆ. ಕರ್ನಾಟಕ ಮಾಹಿತಿ ಆಯೋಗದ ಈಗಿನ ಸಂರಚನೆಯನ್ನು **www.kic.gov.in** ಇಲ್ಲಿ ನೋಡಬಹುದಾಗಿದೆ. ಕರ್ನಾಟಕ ಮಾಹಿತಿ ಆಯೋಗದಲ್ಲಿ ರಾಜ್ಯ ಮುಖ್ಯ ಮಾಹಿತಿ ಆಯುಕ್ತರು ಮತ್ತು ರಾಜ್ಯ ಮಾಹಿತಿ ಆಯುಕ್ತರ ಅಧಿಕಾರ ಮತ್ತು ಕರ್ತವ್ಯಗಳು ಮಾಹಿತಿ ಹಕ್ಕು ಅಧಿನಿಯಮ, 2005ರ ಅಧ್ಯಾಯ V ರನ್ವಯ ಇರುತ್ತವೆ.

ಮಾಹಿತಿ ಹಕ್ಕು ಕಾಯ್ದೆ 2005 ರ ಅಧ್ಯಾಯ IV ರನ್ವಯ ಕಾನೂನು, ವಿಜ್ಞಾನ ಮತ್ತು ತಂತ್ರಜ್ಞಾನ, ಸಮಾಜ ಸೇವೆ, ನಿರ್ವಹಣೆ (ಮ್ಯಾನೇಜ್ಮೆಂಟ್), ಪತ್ರಿಕೋದ್ಯಮ, ಸಮೂಹ ಮಾಧ್ಯಮ ಅಥವಾ ಆಡಳಿತ (ಅಡ್ಮಿನಿಸ್ಟ್ರೇಷನ್ ಮತ್ತು ಗವರ್ನೆನ್ಸ್) ರಲ್ಲಿ ವಿಶಾಲ ತಿಳುವಳಿಕೆ ಮತ್ತು ಅನುಭವ ಹೊಂದಿರುವ ಸಾರ್ವಜನಿಕ ಜೀವನದಲ್ಲಿ ತೊಡಗಿಸಿಕೊಂಡಿರುವ ವ್ಯಕ್ತಿಗಳನ್ನು ರಾಜ್ಯ ಮುಖ್ಯ ಮಾಹಿತಿ ಆಯುಕ್ತರು / ರಾಜ್ಯ ಮಾಹಿತಿ ಆಯುಕ್ತರನ್ನಾಗಿ ನೇಮಕಾತಿ ಮಾಡಲು ಅವಕಾಶ ಕಲ್ಪಿಸಲಾಗಿದೆ. ಪ್ರಸ್ತುತ ಕರ್ನಾಟಕ ಮಾಹಿತಿ ಆಯೋಗದಲ್ಲಿ ಖಾಲಿ ಇರುವ ರಾಜ್ಯ ಮುಖ್ಯ ಮಾಹಿತಿ ಆಯುಕ್ತರ 01 ಹುದ್ದೆ ಹಾಗೂ ರಾಜ್ಯ ಮಾಹಿತಿ ಆಯುಕ್ತರ 01 ಹುದ್ದೆಯನ್ನು ಭರ್ತಿ ಮಾಡಲು ಉದ್ದೇಶಿಸಲಾಗಿದೆ.

ರಾಜ್ಯ ಮುಖ್ಯ ಮಾಹಿತಿ ಆಯುಕ್ತರು / ರಾಜ್ಯ ಮಾಹಿತಿ ಆಯುಕ್ತರು ಸಂಸತ್ ಸದಸ್ಯರಾಗಲೀ ಅಥವಾ ಯಾವುದೇ ರಾಜ್ಯದ ಅಥವಾ ಕೇಂದ್ರಾಡಳಿತ ಪ್ರದೇಶದ ವಿಧಾನಮಂಡಲದ ಸದಸ್ಯರಾಗಿರತಕ್ಕದ್ದಲ್ಲ ಅಥವಾ ಯಾವುದೇ ಲಾಭದಾಯಕ ಹುದ್ದೆಯನ್ನು ಹೊಂದಿರತಕ್ಕದ್ದಲ್ಲ ಅಥವಾ ಯಾವುದೇ ರಾಜಕೀಯ ಪಕ್ಷದೊಂದಿಗೆ ಸಂಪರ್ಕ ಹೊಂದಿರತಕ್ಕದ್ದಲ್ಲ ಅಥವಾ ಯಾವುದೇ ವ್ಯಾಪಾರ ವ್ಯವಹಾರವನ್ನಾಗಲೀ ಅಥವಾ ಯಾವುದೇ ವೃತ್ತಿಯನ್ನು ಮಾಡತಕ್ಕದ್ದಲ್ಲ.

ರಾಜ್ಯ ಮುಖ್ಯ ಮಾಹಿತಿ ಆಯುಕ್ತರ / ರಾಜ್ಯ ಮಾಹಿತಿ ಆಯುಕ್ತರ ಪದಾವಧಿ ಮತ್ತು ಸೇವಾ ಷರತ್ತುಗಳು ಮಾಹಿತಿ ಹಕ್ಕು (ಕೇಂದ್ರ ಮಾಹಿತಿ ಆಯೋಗದ ಮುಖ್ಯ ಮಾಹಿತಿ ಆಯುಕ್ತರ ಹಾಗೂ ಮಾಹಿತಿ ಆಯುಕ್ತರ, ರಾಜ್ಯ ಮಾಹಿತಿ ಆಯೋಗದ ರಾಜ್ಯ ಮುಖ್ಯ ಮಾಹಿತಿ ಆಯುಕ್ತರು ಹಾಗೂ ರಾಜ್ಯ ಮಾಹಿತಿ ಆಯುಕ್ತರುಗಳ ಪದಾವಧಿ, ವೇತನಗಳು, ಭತ್ಯೆಗಳು ಮತ್ತು ಇತರ ಸೇವಾ ಷರತ್ತುಗಳು ಹಾಗೂ ನಿಬಂಧನೆಗಳು) ನಿಯಮಗಳು, 2019 ಅನ್ನು ಓದಿಕೊಂಡು ಮಾಹಿತಿ ಹಕ್ಕು ಅಧಿನಿಯಮ 2005, ರ ಪ್ರಕರಣ 16 ರಡಿಯಲ್ಲಿ ಹಾಗೂ ಸದರಿ ಅಧಿನಿಯಮದ ಅಡಿಯಲ್ಲಿ ಕಾಲಕಾಲಕ್ಕೆ ಹೊರಡಿಸಲಾದ ಯಾವುದೇ ಅಧಿಸೂಚನೆಗಳು, ನಿಯಮಗಳು ಮತ್ತು ತಿದ್ದುಪಡಿಗಳ ಅಡಿಯಲ್ಲಿ ಉಪಬಂಧಿಸಿದಂತೆ ಇರುತ್ತದೆ ಮತ್ತು ಪದಾವಧಿಯ ಅವಧಿಯು ಮೂರು ವರ್ಷವಾಗಿರುತ್ತದೆ. **ಅಭ್ಯರ್ಥಿಗಳು ಕರ್ನಾಟಕದ ಯಾವುದೇ ಪೀಠದಲ್ಲಿ ಸೇವೆ ಸಲ್ಲಿಸುವುದಕ್ಕೆ ಸಿದ್ಧರಿರಬೇಕು.** ಆಯ್ಕೆಗೊಂಡ ಅಭ್ಯರ್ಥಿಗಳು ಘನತೆವೆತ್ತ ರಾಜ್ಯಪಾಲರು ನಿಗದಿಪಡಿಸಿದ ದಿನಾಂಕದಂದು ಪ್ರಮಾಣವಚನ ಸ್ವೀಕರಿಸಲು ಸಿದ್ದರಿರಬೇಕು.

ರಾಜ್ಯ ಮುಖ್ಯ ಮಾಹಿತಿ ಆಯುಕ್ತರು / ರಾಜ್ಯ ಮಾಹಿತಿ ಆಯುಕ್ತರಾಗಿ ನೇಮಕಾತಿ ಹೊಂದಲು ಮೇಲಿನ ಮಾನದಂಡಗಳನ್ನು ಪೂರೈಸಿರುವವರು ಮತ್ತು ನೇಮಕಗೊಳ್ಳಲು ಆಸಕ್ತರಾದವರು ತಮ್ಮ ವ್ಯಕ್ತಿಗತ ವಿವರಗಳನ್ನು ಈ ಅಧಿಸೂಚನೆಗೆ ಲಗತ್ತಿಸಿರುವ ನಮೂನೆಯಲ್ಲಿ ಅಂಚೆ ಮೂಲಕ ಅಥವಾ ಖುದ್ದಾಗಿ **ಕೊಠಡಿ ಸಂಖ್ಯೆ: 608, ಮಾಹಿತಿ ಹಕ್ಕು ಶಾಖೆ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಆಡಳಿತ ಸುಧಾರಣೆ), 1ನೇ ಗೇಟ್, 6ನೇ ಮಹಡಿ, ಬಹುಮಹಡಿಗಳ ಕಟ್ಟಡ, ಡಾ॥ ಬಿ.ಆರ್ ಅಂಬೇಡ್ಕರ್ ವೀಧಿ, ಬೆಂಗಳೂರು-560 001.** ಇಲ್ಲಿ **ದಿನಾಂಕ:15-07-2024 ರ ಸಂಜೆ 5.30 ಗಂಟೆಯೊಳಗೆ ಅರ್ಜಿಯನ್ನು ಸಲ್ಲಿಸಬಹುದಾಗಿದೆ.**

ರಾಜ್ಯ / ಕೇಂದ್ರ ಸರ್ಕಾರದಲ್ಲಿ ಅಥವಾ ಯಾವುದೇ ಇತರ ಸಂಸ್ಥೆಗಳಲ್ಲಿ ಸೇವೆ ಸಲ್ಲಿಸುತ್ತಿರುವವರು ತಮ್ಮ ವಿವರಗಳನ್ನು ಸಮುಚಿತ ಮಾರ್ಗದ ಮೂಲಕ ಸಲ್ಲಿಸಬಹುದಾಗಿದೆ.

ಸಹಿ/- (ಜಾನಕಿ ವೈ .ಆರ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ(ಆಸು)
(ತರಬೇತಿ & ಮಾಹಿತಿ ಹಕ್ಕು)
ದೂ. ಸಂಖ್ಯೆ: 080-22032907,2203 2655

ಕರ್ನಾಟಕ ಮಾಹಿತಿ ಆಯೋಗದಲ್ಲಿ ಖಾಲಿಯಿರುವ ರಾಜ್ಯ ಮುಖ್ಯ ಮಾಹಿತಿ ಆಯುಕ್ತರ ಒಂದು ಹುದ್ದೆ ಹಾಗೂ ರಾಜ್ಯ ಮಾಹಿತಿ ಆಯುಕ್ತರ ಒಂದು ಹುದ್ದೆಯ ನೇಮಕಾತಿಗಾಗಿ.

ಸ್ವಯಂ ದೃಢೀಕರಿಸಿದ ಇತ್ತೀಚಿನ ಪಾಸ್ ಪೋರ್ಟ್ ಅಳತೆಯ ಭಾವಚಿತ್ರವನ್ನು ಅಂಟಿಸುವುದು.

ಅರ್ಜಿ ನಮೂನೆ

1. ಹೆಸರು :
2. ಹುಟ್ಟಿದ ದಿನಾಂಕ :
3. ಲಿಂಗ (ಸ್ತ್ರೀ/ಪುರುಷ) :
4. ಪರಿಶಿಷ್ಟ ಜಾತಿ/ಪಂಗಡಕ್ಕೆ ಸೇರಿದವರೇ :
5. ಯಾವ ಹುದ್ದೆಗೆ ಅರ್ಜಿ ಸಲ್ಲಿಸ ಬಯಸುತ್ತೀರಿ (ಹೌದು/ಇಲ್ಲ) :

ರಾಜ್ಯ ಮುಖ್ಯ ಮಾಹಿತಿ ಆಯುಕ್ತರು	
ರಾಜ್ಯ ಮಾಹಿತಿ ಆಯುಕ್ತರು	

6. ಅಂಚೆ ವಿಳಾಸ :
7. ಕನ್ನಡ ಭಾಷೆಯ ನೈಪುಣ್ಯತೆ (ಓದಲು, ಬರೆಯಲು ಮತ್ತು ಮಾತನಾಡಲು) :
8. ದೂರವಾಣಿ ಸಂಖ್ಯೆ / ಮೊಬೈಲ್ ಸಂಖ್ಯೆ :
9. ಇ-ಮೇಲ್ ವಿಳಾಸ :
10. ಶೈಕ್ಷಣಿಕ ಅರ್ಹತೆ :
11. ಪರಿಣಿತಿ ಹೊಂದಿರುವ ಕ್ಷೇತ್ರ :
12. ಪ್ರಸ್ತುತ ಉದ್ಯೋಗ :
13. ಸಾಧನೆಗಳು/ಉದ್ಯೋಗದ ಅನುಭವ (ಒಂದು ಪುಟಕ್ಕೆ ಮೀರದಂತೆ) :

ಸ್ಥಳ : ಅರ್ಜಿದಾರರ ಸಹಿ:
ದಿನಾಂಕ: ಅರ್ಜಿದಾರರ ಹೆಸರು:

DIPR/CP/308/Zen/2024-25

ಕರ್ನಾಟಕ ಸರ್ಕಾರ

ತಾಲ್ಲೂಕು ಸಾರ್ವಜನಿಕ ಆಸ್ಪತ್ರೆ, ಶೃಂಗೇರಿ, ಚಿಕ್ಕಮಗಳೂರು ಜಿಲ್ಲೆ

ಇ-ಟೆಂಡರ್ ಪ್ರಕಟಣೆ

ಸಾರ್ವಜನಿಕ ಆಸ್ಪತ್ರೆ, ಶೃಂಗೇರಿ, ಚಿಕ್ಕಮಗಳೂರು ಜಿಲ್ಲೆ ಇಲ್ಲಿಗೆ 2024-25 ನೇ ಸಾಲಿನ ಸಿದ್ಧಪಡಿಸಿದ ಪಥ್ಯಾಹಾರ ಸರಬರಾಜಿಗಾಗಿ ಸಂಖ್ಯೆ: ತಾ.ಸಾ.ಅ.ಶೃಂ.: ಇ-ಟೆಂಡರ್1:2024-25 ದಿನಾಂಕ:10.06.2024 ರಂತೆ ಇ-ಪ್ರಕ್ಯೂರ್‌ಮೆಂಟ್ ವೇದಿಕೆಯಲ್ಲಿ ಇ-ಟೆಂಡರ್‌ನ್ನು ಆಹ್ವಾನಿಸಿದೆ. ಟೆಂಡರ್ ಮೊತ್ತ ರೂ.10,00,000/-, ಇ.ಎಂ.ಡಿ. ರೂ 12,500/-, ಟೆಂಡರ್ ಫಾರಂ ಅಪ್‌ಲೋಡ್ ದಿನಾಂಕ 10.06.2024, ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ 28.06.2024 ಅಪರಾಹ್ನ 5-30 ಗಂಟೆಗೆ, ಟೆಂಡರ್ ತೆರೆಯುವ ದಿನಾಂಕ, ಸ್ಥಳ ಮತ್ತು ಸಮಯ ದಿನಾಂಕ 01.07.2024 ಬೆಳಿಗ್ಗೆ 11.30 ಗಂಟೆಗೆ.

ಆಡಳಿತ ವೈದ್ಯಾಧಿಕಾರಿ,
ತಾಲ್ಲೂಕು ಸಾರ್ವಜನಿಕ ಆಸ್ಪತ್ರೆ, ಶೃಂಗೇರಿ,
ಸಂಪರ್ಕ ಸಂಖ್ಯೆ : 9880283607

ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ

ನಂ. 16 ಸಿ-1, ಮಿಲ್ಲರ್ಸ್ ಟ್ಯಾಂಕ್ ಬೆಡ್ ಏರಿಯಾ, ವಸಂತನಗರ,
ಬೆಂಗಳೂರು-560052. ಫೋನ್: 080-22268677/78/79 ಫ್ಯಾಕ್ಸ್: 080-22268667
ಇ-ಮೇಲ್: kerc-ka@nic.in ವೆಬ್‌ಸೈಟ್: https://kerc.karnataka.gov.in

ಸಂಖ್ಯೆ: ಕವಿನಿಆ/ಎಫ್-34/ವಿಎಲ್-15/221 ದಿನಾಂಕ: 11-06-2024

ಸಾರ್ವಜನಿಕ ವಿಚಾರಣೆ ಬಗ್ಗೆ ಸೂಚನೆ

ವಿಷಯ: ಕರಡು ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ಲಭ್ಯವಿರುವ ಡಿಜಿಟಲ್ ಮತ್ತು ಸ್ಟಾಟಿಕ್ ಮೀಟರ್‌ಗಳಿಗೆ ಸ್ಮಾರ್ಟ್ ಮೋಡ್ಯುಲ್ ಅಳವಡಿಕೆ) ಮಾರ್ಗಸೂಚಿಗಳು, 2024 – ಸಾರ್ವಜನಿಕ ವಿಚಾರಣೆ ಬಗ್ಗೆ.

ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗವು ಈ ಮೇಲಿನ ವಿಷಯದ ಬಗ್ಗೆ ಕರಡು ಮಾರ್ಗಸೂಚಿಗಳನ್ನು ಹೊರಡಿಸಿದ್ದು, ಅದು ಆಯೋಗದ ಅಂತರ್ಜಾಲ ತಾಣ: **https://kerc.karnataka.gov.in** ಯಲ್ಲಿ ಲಭ್ಯವಿರುತ್ತದೆ.

ಆಯೋಗವು ಈ ವಿಷಯದ ಬಗ್ಗೆ ಭಾಗೀದಾರರ ಅಭಿಪ್ರಾಯ ಪಡೆಯಲು **ಮಂಗಳವಾರ ದಿನಾಂಕ: 25-06-2024 ರಂದು ಮಧ್ಯಾಹ್ನ 3.30 ಗಂಟೆಗೆ, ಆಯೋಗದ ಕೋರ್ಟ್ ಹಾಲ್‌ನ, ಒಂದನೆಯ ಮಹಡಿ, ನಂ. 16 ಸಿ-1, ಮಿಲ್ಲರ್ಸ್ ಟ್ಯಾಂಕ್ ಬೆಡ್ ಏರಿಯಾ, ವಸಂತನಗರ, ಬೆಂಗಳೂರು – 560052** ಇಲ್ಲಿ ಸಾರ್ವಜನಿಕ ವಿಚಾರಣೆಯನ್ನು ನಿಗದಿಪಡಿಸಿದೆ.

ಆಸಕ್ತರು ಸಾರ್ವಜನಿಕ ವಿಚಾರಣೆಯಲ್ಲಿ ಭಾಗವಹಿಸಿ ತಮ್ಮ ಅನಿಸಿಕೆ / ಅಭಿಪ್ರಾಯ / ಸಲಹೆಗಳನ್ನು ಆಯೋಗದ ಮುಂದೆ ಸಲ್ಲಿಸಲು ಕೋರಲಾಗಿದೆ.

ಸಹಿ/- ಕಾರ್ಯದರ್ಶಿ
ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ

ವಾಸಾಸಂಇ/ವಾ.ಪ್ರ/315/2024-25

ಕರ್ನಾಟಕ ಸರ್ಕಾರ – ಜಿಲ್ಲಾ ಪಂಚಾಯತ್, ಶಿವಮೊಗ್ಗ

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಮತ್ತು ಕಲ್ಯಾಣಾಧಿಕಾರಿಗಳ ಕಛೇರಿ, ಶಿವಮೊಗ್ಗ.

ದೂರವಾಣಿ: 08182-222382 Email Id: dhoshimoga@gmail.com
ಸಂಖ್ಯೆ: ಜಿಆಕುಕಶಿ/ಹೊ.ಗು/ಟೆಂಡರ್-08/22-23 ದಿನಾಂಕ: 12.06.2024

ಇ-ಟೆಂಡರ್ ಪ್ರಕಟಣೆ

2024-25 ನೇ ಸಾಲಿನಲ್ಲಿ ಶಿವಮೊಗ್ಗ ಜಿಲ್ಲೆಯ ಆರೋಗ್ಯ ಸಂಸ್ಥೆಗಳಲ್ಲಿ ಖಾಲಿ ಇರುವ ಫಾರ್ಮಾಸಿ ಅಧಿಕಾರಿಗಳು, ಹಾಗೂ ಕಿರಿಯ ಪ್ರಯೋಗ ಶಾಲಾ ತಾಂತ್ರಿಕ ಅಧಿಕಾರಿಗಳ ಹುದ್ದೆಗಳಿಗೆ ಹೊರಸಂಪನ್ಮೂಲ ಸಂಸ್ಥೆಗಳಿಂದ ಸೇವೆಯನ್ನು ಪಡೆಯುವ ಸಂಬಂಧ ಕರ್ನಾಟಕ ಪಾರದರ್ಶಕ ಅಧಿನಿಯಮ(KTPP) 1999 ನಿಯಮಗಳು ಹಾಗೂ 2000 ರ ಪ್ರಕಾರ ದ್ವಿ-ಲಕೋಟೆ ಸಲ್ಲಿಕೆ ಪದ್ಧತಿಯಲ್ಲಿ ಇ-ಟೆಂಡರ್ ಆಹ್ವಾನಿಸಿದ್ದು, ಆಸಕ್ತ ಟೆಂಡರ್‌ದಾರರು ಭಾಗವಹಿಸಲು ಕೋರಿದೆ.

ಕ್ರಮ ಸಂ. 1. ನೋಟಿಫಿಕೇಷನ್ ನಂ.: ಜಿಆಕುಕಶಿ/ಹೊ.ಗು/ಟೆಂಡರ್-07/22-23 ದಿನಾಂಕ: 12.06.2024 **ಟೆಂಡರ್ ಕರೆದಿರುವ ವಿವರ:** ಶಿವಮೊಗ್ಗ ಜಿಲ್ಲೆಯ ಆರೋಗ್ಯ ಸಂಸ್ಥೆಗಳಿಗೆ ಫಾರ್ಮಾಸಿ ಅಧಿಕಾರಿಗಳು, ಹಾಗೂ ಕಿರಿಯಪ್ರಯೋಗ ಶಾಲಾತಾಂತ್ರಿಕ ಅಧಿಕಾರಿಗಳ ಸೇವೆಯನ್ನು ಹೊರಗುತ್ತಿಗೆ ಆಧಾರದಲ್ಲಿ ಒದಗಿಸುವ ಬಗ್ಗೆ **ಟೆಂಡರ್ ದಾಖಲಿಸುವ ಅವಧಿ:** ದಿ:12.06.2024 ರಿಂದ ದಿ:01.07.2024 ರವರೆಗೆ **ಟೆಂಡರ್‌ನ ವಾರ್ಷಿಕ ಅಂದಾಜು ಮೊತ್ತ:** ರೂ.52,04,790.00 **ಷರಾ:** ಇ.ಎಂ.ಡಿ ಮೊತ್ತ ರೂ.1.30 ಲಕ್ಷ

ಹೆಚ್ಚಿನ ವಿವರಗಳಿಗಾಗಿ ಕಛೇರಿ ವೇಳೆಯಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಛೇರಿ, ಶಿವಮೊಗ್ಗ ಇಲ್ಲಿನ ದೂರವಾಣಿಗೆ-08182 222382ಗೆ ಸಂಪರ್ಕಿಸುವುದು ಅಥವಾ (Website: www.eproc. karnataka.gov.in)ನಲ್ಲಿ ಪಡೆಯಬಹುದಾಗಿದೆ.

ಸಹಿ/- ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ, ಶಿವಮೊಗ್ಗ

ವಾ.ಸಾ.ಸಂ.ಇ/ಕೆ.ಎಸ್.ಎಂ.ಸಿ.ಎ/ಶಿ/59/06/24-25/93

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ

ಕೇಂದ್ರ ಕಛೇರಿ, ಯಾಂತ್ರಿಕ ಇಲಾಖೆ, ಕೆ.ಹೆಚ್. ರಸ್ತೆ, ಶಾಂತಿನಗರ,
ಬೆಂಗಳೂರು-560027 ದೂ. ಸಂಖ್ಯೆ: 080-22221321 ಎಕ್ಸ್‌ಟೆನ್ಷನ್: 291

ಟೆಂಡರ್ ಆಹ್ವಾನ ಸೂಚನಾ ಪತ್ರ

ಟೆಂಡರ್ ಸಂಖ್ಯೆ: KSRTC/2024-25/IND0104 (ಟಿ-142) ದಿನಾಂಕ: 14.06.2024
(ಇ-ಪ್ರೊಕ್ಯೂರ್‌ಮೆಂಟ್ ವಿಧಾನದಲ್ಲಿ ಮಾತ್ರ)

(1) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮಕ್ಕೆ ಅವಶ್ಯವಿರುವ **222" ವ್ಹೀಲ್ ಬೇಸ್ ಬಿ.ಎಸ್-6 ಮಾದರಿಯ 70 ಸಂಖ್ಯೆ ಪೂರ್ಣ ನಿರ್ಮಿತ ಡೀಸೆಲ್ ಹವಾನಿಯಂತ್ರಣರಹಿತ ಸ್ಲೀಪರ್ ಕೋಚಸ್ ಹಾಗೂ 30 ಸಂಖ್ಯೆ ಹವಾನಿಯಂತ್ರಣರಹಿತ ಸೀಟರ್ ಕಂ ಸ್ಲೀಪರ್ ಕೋಚಸ್ ವಾಹನಗಳನ್ನು** ಸರಬರಾಜು ಮಾಡಲು ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರನ್ನು ಆಹ್ವಾನಿಸಲಾಗಿದೆ.
(2) ಟೆಂಡರ್‌ನ ಮೊತ್ತ ಕೋಟಿ ರೂ.ಗಳಲ್ಲಿ (ಅಂದಾಜು): **ರೂ. 47/- ಕೋಟಿಗಳು**
(3) ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಬಿಡ್ ಸಲ್ಲಿಸಲು ಕೊನೆಯ ದಿನಾಂಕ: **15.07.2024** ಸಮಯ **17:30** ಗಂಟೆಯವರೆಗೆ.

ಮುಂದುವರೆದಂತೆ, ಟೆಂಡರ್ ವೇಳಾಪಟ್ಟಿ, ಕಾರ್ಯವ್ಯಾಪ್ತಿ ಹಾಗೂ ಇತರೆ ಷರತ್ತು ಮತ್ತು ನಿಬಂಧನೆಗಳಲ್ಲಿ ಬದಲಾವಣೆಗಳಿದ್ದಲ್ಲಿ, ಸೇರ್ಪಡೆ/ತಿದ್ದುಪಡಿ ಮಾಹಿತಿಯನ್ನು ಇ-ಪೋರ್ಟಲ್‌ನಲ್ಲಿ ಮಾತ್ರ ಅಪ್‌ಲೋಡ್ ಮಾಡಲಾಗುವುದು/ಪ್ರಕಟಿಸಲಾಗುವುದು.

ಸೂಚನೆ: ಆಸಕ್ತಿಯುಳ್ಳ ಬಿಡ್ಡುದಾರರು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನೋಂದಣಿ ಮಾಡಿಕೊಂಡಿರಬೇಕು. ಆಸಕ್ತಿಯುಳ್ಳ ಬಿಡ್ಡುದಾರರು ಇ-ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ ವಿಳಾಸ **http://kppp.karnataka.gov.in** ಗೆ ಲಾಗ್ ಇನ್ ಮಾಡಿ ವಿವರಗಳನ್ನು ವೀಕ್ಷಿಸಬಹುದಾಗಿದೆ. ಹೆಚ್ಚಿನ ವಿವರಗಳಿಗಾಗಿ ಇ-ಮೇಲ್ **support@eprochelpdesk.com** ಅಥವಾ ದೂರವಾಣಿ ಸಂಖ್ಯೆ: 080-22230960 ಮತ್ತು 080-22234115ಕ್ಕೆ ಕರೆ ಮಾಡಬಹುದು.

ಆಸಕ್ತಿಯುಳ್ಳ ಬಿಡ್ಡುದಾರರು ಬಿಡ್ ಸಲ್ಲಿಕೆಯ ತರಬೇತಿಯನ್ನು ಪಡೆಯಲು ಇ-ಪ್ರೊಕ್ಯೂರ್‌ಮೆಂಟ್ ಸೆಲ್‌ನ್ನು ಸಂಪರ್ಕಿಸಬಹುದಾಗಿದೆ. ಹೆಚ್ಚಿನ ಮಾಹಿತಿ ಅಗತ್ಯವಿದ್ದಲ್ಲಿ **support@eprochelpdesk.com** ಇ-ಮೇಲ್ ಮಾಡಿ ಪಡೆಯಬಹುದಾಗಿರುತ್ತದೆ. ಬಿಡ್ಡುದಾರರಿಗೆ ಕ.ರಾ.ರ.ಸಾ. ನಿಗಮದ ವತಿಯಿಂದ ಮಾಹಿತಿ ಅಗತ್ಯವಿದ್ದಲ್ಲಿ **cmem@ksrtc.org/cmep@ksrtc.org**ಗೆ ಇ-ಮೇಲ್ ಮಾಡಿ ಮಾಹಿತಿ ಪಡೆಯಬಹುದಾಗಿರುತ್ತದೆ (ಮೊಬೈಲ್ ಸಂಖ್ಯೆ: **776098870, 7760990073, 7760990773, 7760990054**)

ಸಹಿ/-,
ಮುಖ್ಯ ಯಾಂತ್ರಿಕ ಅಭಿಯಂತರರು
(ಟೆಂಡರ್ ಆಹ್ವಾನಿಸುವ ಪ್ರಾಧಿಕಾರಿ)

ವಾಸಾಸಂಇ/ವಾಪ್ರ/ಎಲ್‌ಸಿ/324/2024-25

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರ ಕಛೇರಿ, ಬಿಟಿಎಂ ಬಡಾವಣೆ ವಿಭಾಗ, ಬಿಬಿಎಂಪಿ ಸಂಕೀರ್ಣ, 2ನೇ ಮಹಡಿ, ಲಷ್ಕರ್ ಹೊಸೂರು ರಸ್ತೆ, ಆಡುಗೋಡಿ, ಬೆಂಗಳೂರು.-560 030

ಸಂಖ್ಯೆ: ಕಾಪಾಅ/ಬಿಟಿಎಂ/ಸಅ/ಕೆಪಿಪಿಪಿ/02/2024-25 ದಿನಾಂಕ:12.06.2024

ಟೆಂಡರ್‌ಗಾಗಿ ಆಹ್ವಾನ

(ಕೆಪಿಪಿ ಪೋರ್ಟಲ್ ಮೂಲಕ ಮಾತ್ರ) (ದ್ವಿಲಕೋಟೆ ಪದ್ಧತಿ)

ಕಾರ್ಯಪಾಲಕ ಅಭಿಯಂತರರು, ಬಿಟಿಎಂ ಬಡಾವಣೆ ವಿಭಾಗ, ಬಿಬಿಎಂಪಿ, ಇವರು ಅರ್ಹ ಗುತ್ತಿಗೆದಾರರಿಂದ ಕೆಳಕಂಡ ಕಾಮಗಾರಿಗಳಿಗಾಗಿ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕಾಮಗಾರಿಗಳ ವಿವರ
1.	ಎಸ್ ಜಿ ಪಾಳ್ಯದ ವಾರ್ಡ್ ಸಂಖ್ಯೆ 147, 148, 151, 152, 172, 173 ಮತ್ತು 176 ರಲ್ಲಿನ ಉದ್ಯಾನವನಗಳು, ರಸ್ತೆಗಳು, ಚರಂಡಿಗಳು, ಫುಟ್‌ಪಾತ್‌ಗಳ ಸಮಗ್ರ ಅಭಿವೃದ್ಧಿ ಕಾಮಗಾರಿಗಳು, ಹಾಳಾದ ರಸ್ತೆಗಳಿಗೆ ಡಾಂಬರೀಕರಣ ಮತ್ತು ಆಸ್ಪತ್ರೆ ಕಟ್ಟಡಕ್ಕೆ ಹೆಚ್ಚುವರಿ ಮಹಡಿಗೆ ನಿರ್ಮಾಣ ಕಾಮಗಾರಿ (**ಪ್ಯಾಕೇಜ್-1, 16 ಕಾಮಗಾರಿಗಳು**). **ಕಾಮಗಾರಿಯ ಅಂದಾಜು ಮೌಲ್ಯ : ರೂ. 1890.00 ಲಕ್ಷಗಳು.** **ಇಎಂಡಿ: ರೂ. 18,90,000/-** (ರೂ. 1 ಲಕ್ಷ ಕೆಪಿಪಿ ಪೋರ್ಟಲ್‌ನಲ್ಲಿ ಪಾವತಿಸಬೇಕು ಮತ್ತು ಬಾಕಿ ಮೊತ್ತ ರೂ. 17,90,000/- ಬ್ಯಾಂಕ್ ಗ್ಯಾರಂಟಿ ಮೂಲಕ ಪಾವತಿಸಬೇಕು).
2.	ಬಿಟಿಎಂ ಲೇಔಟ್ ಕ್ಷೇತ್ರದ ಕೋರಮಂಗಲ ವಾರ್ಡ್ ಸಂಖ್ಯೆ 151 ರಲ್ಲಿ ಬಿಬಿಎಂಪಿ ಕಚೇರಿ ಕಟ್ಟಡದ ಸುಧಾರಣೆ, ಲಕ್ಕಸಂದ್ರ ವಾರ್ಡ್ ಸಂಖ್ಯೆ 146 ರಲ್ಲಿ ಶಾಲಾ ಕಟ್ಟಡಕ್ಕೆ ಹೆಚ್ಚುವರಿ ಮಹಡಿಗಳ ನಿರ್ಮಾಣ ಮತ್ತು ಮಡಿವಾಳ ವಾರ್ಡ್ ಸಂಖ್ಯೆ 172 ರಲ್ಲಿ ಬಿಬಿಎಂಪಿ ಕಚೇರಿ ಕಟ್ಟಡ ನಿರ್ಮಾಣ ಕಾಮಗಾರಿ (**ಪ್ಯಾಕೇಜ್ 02-04 ಕಾಮಗಾರಿಗಳು**). **ಕಾಮಗಾರಿಯ ಅಂದಾಜು ಮೌಲ್ಯ : ರೂ. 610.00 ಲಕ್ಷಗಳು.** **ಇಎಂಡಿ: ರೂ. 9,15,000/-** (ರೂ. 1 ಲಕ್ಷ ಕೆಪಿಪಿ ಪೋರ್ಟಲ್‌ನಲ್ಲಿ ಪಾವತಿಸಬೇಕು ಮತ್ತು ಬಾಕಿ ಮೊತ್ತ ರೂ. 8,15,000/- ಬ್ಯಾಂಕ್ ಗ್ಯಾರಂಟಿ ಮೂಲಕ ಪಾವತಿಸಬೇಕು).

1) ಟೆಂಡರ್ ಡಾಕ್ಯುಮೆಂಟ್‌ಗಳನ್ನು ಜಿಓಕೆ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **https://kppp.karnataka.gov.in** ನಿಂದ **ದಿನಾಂಕ 19.06.2024** ರಿಂದ ಡೌನ್‌ಲೋಡ್ ಮಾಡಿ ಕೊಳ್ಳಬಹುದು. 2) **ಪೂರ್ವಭಾವಿ ಸಭೆ: 01.07.2024ರ ಅಪರಾಹ್ನ 3.00 ಗಂಟೆಗೆ.** 3) ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: **19.07.2024 ರ ಸಂಜೆ 4.00 ಗಂಟೆಯವರೆಗೆ.** 4) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: **20.07.2024ರ ಸಂಜೆ 4.30 ಗಂಟೆಗೆ.** ಹೆಚ್ಚಿನ ವಿವರಗಳನ್ನು ಇ-ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ **https://kppp.karnataka.gov.in** ನಿಂದ ಅಥವಾ ಇ-ಪ್ರೊಕ್ಯೂರ್‌ಮೆಂಟ್ ಸಹಾಯವಾಣಿ 080-46010000 / 68948777 ನಿಂದ ಪಡೆದುಕೊಳ್ಳಬಹುದು.

ಸಹಿ/- ಕಾರ್ಯಪಾಲಕ ಅಭಿಯಂತರರು, ಬಿಟಿಎಂ ಬಡಾವಣೆ ವಿಭಾಗ.

ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ

ಉಗ್ರಾಣ ಮತ್ತು ಖರೀದಿ ಇಲಾಖೆ, ಕೇಂದ್ರ ಕಛೇರಿ, ಶಾಂತಿನಗರ, ಬೆಂಗಳೂರು - 560 027.
ಇ ಮೇಲ್: cosp@mybmtc.com ವೆಬ್ ಸೈಟ್:www.bmtc.in

ಸಂ/ಬೆಮಸಾಸಂ/ಉ&ಖ/ಕೇಂ.ಉ/ಎಸ್.ಡಿ.ಎಸ್/126/24-25 ದಿನಾಂಕ:13.06.2024

"ಇ-ಹರಾಜು ಪ್ರಕಟಣೆ"

ಬೆಂ.ಮ.ಸಾರಿಗೆ ಸಂಸ್ಥೆಯ ಸ್ಕ್ರಾಪ್ ವಸ್ತುಗಳನ್ನು ಮೆ॥ ಎಂ.ಎಸ್.ಟಿ.ಸಿ (ಭಾರತ ಸರ್ಕಾರದ ಅಧೀನ ಸಂಸ್ಥೆ) ಇವರು ನಡೆಸುವ ಇ-ಹರಾಜು ಪ್ರಕ್ರಿಯೆ ಮೂಲಕ ಮಾರಾಟ ಮಾಡಲಾಗುವುದು.

1) ಸ್ಕ್ರಾಪ್ ವಸ್ತುಗಳ ಇ-ಹರಾಜು ಪ್ರಕ್ರಿಯೆ ಜರಗುವ ದಿನಾಂಕ: 25.06.2024. ಆಸಕ್ತಿಯುಳ್ಳ ಬಿಡ್ಡುದಾರರು ವೆಬ್‌ಸೈಟ್: **www.mstcecommerce.com** ಗೆ ಲಾಗ್‌ಆನ್ ಆಗಬಹುದು ಮತ್ತು ಹೆಚ್ಚಿನ ವಿವರಗಳನ್ನು ಈ ಕೆಳಕಂಡ ವಿಳಾಸದಿಂದ ಪಡೆಯಬಹುದು. ಕಛೇರಿ ವಿಳಾಸ: **ಮೆ॥ ಎಂ.ಎಸ್.ಟಿ.ಸಿ ಲಿಮಿಟೆಡ್, ನಂ. 19/5, 19/6 ಮೂರನೆ ಮಹಡಿ, ಕರೀಮ್ ಟವರ್, ಕನ್ನಿಂಗ್ ಹ್ಯಾಮ್ ರಸ್ತೆ, ಬೆಂಗಳೂರು-560052. ದೂರವಾಣಿ.ಸಂ: 080-22260054/ 22266417/ 22287356, ಫ್ಯಾಕ್ಸ್ 080-22256365.** ಬೆಂ.ಮ.ಸಾರಿಗೆ ಸಂಸ್ಥೆ ರವರನ್ನು ಸಂಪರ್ಕಿಸುವ ದೂರವಾಣಿ ಸಂಖ್ಯೆ: +91 7760991988 / 7760991157

ಸಹಿ/- ಉಗ್ರಾಣ ಮತ್ತು ಖರೀದಿ ನಿಯಂತ್ರಣಾಧಿಕಾರಿ

ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ

ನಂ. 16 ಸಿ-1, ಮಿಲ್ಲರ್ಸ್ ಟ್ಯಾಂಕ್ ಬೆಡ್ ಏರಿಯಾ, ವಸಂತನಗರ,
ಬೆಂಗಳೂರು-560052. ಫೋನ್: 080-22268677/78/79 ಫ್ಯಾಕ್ಸ್: 080-22268667
ಇ-ಮೇಲ್: kerc-ka@nic.in ವೆಬ್‌ಸೈಟ್: https://kerc.karnataka.gov.in

ಸಂಖ್ಯೆ: ಕವಿನಿಆ/ಎಫ್-34/ವಿಎಲ್-12(ಎ)/220 ದಿನಾಂಕ: 11-06-2024

ಸಾರ್ವಜನಿಕ ವಿಚಾರಣೆ ಬಗ್ಗೆ ಸೂಚನೆ

ವಿಷಯ: ಕರಡು ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ವಿದ್ಯುತ್ ಉತ್ಪಾದನಾ ದರ ನಿರ್ಧರಣೆ ನಿಬಂಧನೆಗಳು ಮತ್ತು ಷರತ್ತುಗಳು) ವಿನಿಯಮಗಳು, 2024 – ಸಾರ್ವಜನಿಕ ವಿಚಾರಣೆ ಬಗ್ಗೆ.

ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗವು ಈ ಮೇಲಿನ ವಿಷಯದ ಬಗ್ಗೆ ಕರಡು ವಿನಿಯಮಗಳನ್ನು ಹೊರಡಿಸಿದ್ದು, ಅದು ಆಯೋಗದ ಅಂತರ್ಜಾಲ ತಾಣ: **https://kerc.karnataka.gov.in** ಯಲ್ಲಿ ಲಭ್ಯವಿರುತ್ತದೆ.

ಆಯೋಗವು ಈ ವಿಷಯದ ಬಗ್ಗೆ ಭಾಗೀದಾರರ ಅಭಿಪ್ರಾಯ ಪಡೆಯಲು **ಮಂಗಳವಾರ ದಿನಾಂಕ: 25-06-2024 ರಂದು ಮಧ್ಯಾಹ್ನ 3.00 ಗಂಟೆಗೆ, ಆಯೋಗದ ಕೋರ್ಟ್ ಹಾಲ್‌ನ, ಒಂದನೆಯ ಮಹಡಿ, ನಂ. 16 ಸಿ-1, ಮಿಲ್ಲರ್ಸ್ ಟ್ಯಾಂಕ್ ಬೆಡ್ ಏರಿಯಾ, ವಸಂತನಗರ, ಬೆಂಗಳೂರು – 560052** ಇಲ್ಲಿ ಸಾರ್ವಜನಿಕ ವಿಚಾರಣೆಯನ್ನು ನಿಗದಿಪಡಿಸಿದೆ.

ಆಸಕ್ತರು ಸಾರ್ವಜನಿಕ ವಿಚಾರಣೆಯಲ್ಲಿ ಭಾಗವಹಿಸಿ ತಮ್ಮ ಅನಿಸಿಕೆ / ಅಭಿಪ್ರಾಯ / ಸಲಹೆಗಳನ್ನು ಆಯೋಗದ ಮುಂದೆ ಸಲ್ಲಿಸಲು ಕೋರಲಾಗಿದೆ.

ಸಹಿ/- ಕಾರ್ಯದರ್ಶಿ
ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ

ವಾಸಾಸಂಇ/ವಾ.ಪ್ರ/314/2024-25

ಕರ್ನಾಟಕ ಗೃಹ ಮಂಡಳಿ

Karnataka Housing Board – Building Communities

3ನೇ ಮಹಡಿ, ಕಾವೇರಿ ಭವನ, ಕೆ. ಜಿ. ರಸ್ತೆ, ಬೆಂಗಳೂರು-560009

ಟೆಂಡರ್ ಪ್ರಕಟಣೆ (ಕರ್ನಾಟಕ ಸಾರ್ವಜನಿಕ ಸಂಗ್ರಹಣಾ ಪೋರ್ಟಲ್ ಮುಖಾಂತರ)

ಕರ್ನಾಟಕ ಗೃಹ ಮಂಡಳಿಯಲ್ಲಿ ಪೂರ್ವಾರ್ಹತೆ ಪಡೆದಿರುವ ಗುತ್ತಿಗೆದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣಾ ಪೋರ್ಟಲ್ ಮೂಲಕ ಈ ಕೆಳಕಂಡ ಕಾಮಗಾರಿಗೆ ಟೆಂಡರ್‌ಗಳನ್ನು ಕರೆಯಲಾಗಿದೆ ವಿವರಗಳು ಕೆಳಕಂಡಂತಿವೆ.

ಬಿಡ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ವೇಳೆ : 12.07.2024 ಸಂಜೆ 4.00 ಗಂಟೆ

ಕ್ರ.ಸಂ.	ಕಾಮಗಾರಿಯ ಹೆಸರು
1	ಕೊಪ್ಪಳ ಜಿಲ್ಲೆ ಮತ್ತು ತಾಲ್ಲೂಕು, ಕೊಪ್ಪಳ ಗ್ರಾಮದ ಬ್ಲಾಕ್-ಎ ರಲ್ಲಿ ಅಭಿವೃದ್ಧಿಪಡಿಸಲು ಉದ್ದೇಶಿಸಿರುವ ನಿವೇಶನ ಮತ್ತು ಸೇವೆಗಳ ಯೋಜನೆಯ ಕಾಮಗಾರಿ Tender Reference Number : KHB/2023-24/OW/WORK_INDENT 175/Call-2 & IFT No.181/2023-24 Date: 11.06.2024. **Amount put to tender Rs.16,93,25,453/-**
2	ಕೊಪ್ಪಳ ಜಿಲ್ಲೆ ಮತ್ತು ತಾಲ್ಲೂಕು, ಕೊಪ್ಪಳ ಗ್ರಾಮದ ಬ್ಲಾಕ್-ಬಿ ರಲ್ಲಿ ಅಭಿವೃದ್ಧಿಪಡಿಸಲು ಉದ್ದೇಶಿಸಿರುವ ನಿವೇಶನ ಮತ್ತು ಸೇವೆಗಳ ಯೋಜನೆಯ ಕಾಮಗಾರಿ Tender Reference Number : KHB/2023-24/OW/WORK_INDENT 176/Call-2 & IFT No.182/2023-24 Date: 11.06.2024. **Amount put to tender Rs.19,94,85,680/-**
3	ಕೊಪ್ಪಳ ಜಿಲ್ಲೆ ಮತ್ತು ತಾಲ್ಲೂಕು, ಕೊಪ್ಪಳ ಗ್ರಾಮದ ಬ್ಲಾಕ್-ಸಿ ರಲ್ಲಿ ಅಭಿವೃದ್ಧಿಪಡಿಸಲು ಉದ್ದೇಶಿಸಿರುವ ನಿವೇಶನ ಮತ್ತು ಸೇವೆಗಳ ಯೋಜನೆಯ ಕಾಮಗಾರಿ Tender Reference Number : KHB/2023-24/OW/WORK_INDENT 177/Call-2 & IFT No.183/2023-24 Date: 11.06.2024. **Amount put to tender Rs.19,50,87,825/-**
4	ಕೊಪ್ಪಳ ಜಿಲ್ಲೆ ಮತ್ತು ತಾಲ್ಲೂಕು, ಕೊಪ್ಪಳ ಗ್ರಾಮದ ಇರಕಲಗಡದಲ್ಲಿ ಅಭಿವೃದ್ಧಿಪಡಿಸಲು ಉದ್ದೇಶಿಸಿರುವ ನಿವೇಶನ ಮತ್ತು ಸೇವೆಗಳ ಯೋಜನೆಯ ಕಾಮಗಾರಿ Tender Reference Number : KHB/2024-25/OW/WORK_INDENT 240/Call-2 & IFT No.12/2024-25 Date: 12.06.2024. **Amount put to tender Rs.14,84,84,112/-**

ಕಾಮಗಾರಿಯ ಬಗ್ಗೆ ಹಾಗೂ ಇನ್ನಿತರ ವಿವರಗಳಿಗೆ ಈ ಕೆಳಕಂಡ ವಿಳಾಸದಲ್ಲಿ ಕಛೇರಿಯ ವೇಳೆಯಲ್ಲಿ ಪಡೆಯಬಹುದಾಗಿದೆ, ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ಗೃಹ ಮಂಡಳಿ, ಕಾವೇರಿ ಭವನ, ಬೆಂಗಳೂರು. ದೂರವಾಣಿ: 080-22273511/080-22100077 website: https://kppp.karnataka.gov.in

ಸಹಿ/- ಕಾರ್ಯಪಾಲಕ ಅಭಿಯಂತರರು,
ಕರ್ನಾಟಕ ಗೃಹ ಮಂಡಳಿ, ಬೆಂಗಳೂರು

ವಾ.ಸಾ.ಸಂ.ಇ/ವಾಪ್ರ/316/ಆಕಾರ್/2024-25

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ

ನಂ.49, "ಪರಿಸರ ಭವನ", 1 ರಿಂದ 5ನೇ ಅಂತಸ್ತು, ಚರ್ಚ್ ಸ್ಟ್ರೀಟ್,
ಬೆಂಗಳೂರು-560 001, ಕರ್ನಾಟಕ, ಭಾರತ
ಫೋನ್: 25581383, 25589112, 25586520, ಫ್ಯಾಕ್ಸ್: 080-25586321
ಈ-ಮೇಲ್: ho@kspcb.gov.in ವೆಬ್‌ಸೈಟ್ : https://kspcb.karnataka.gov.in.

No. PCB 224 INFRA EPH 2023/1083 Date : 12.06.2024

ಪರಿಸರ ಸಾರ್ವಜನಿಕ ಸಭೆಗಾಗಿ ಸೂಚನೆ

ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಳಿಯವರು ಬಳ್ಳಾರಿ ಜಿಲ್ಲೆ, ಬಳ್ಳಾರಿ ತಾಲ್ಲೂಕು, ಕುಡುತಿನಿ ಗ್ರಾಮದ ಒಟ್ಟು 670.94 ಎಕರೆ (271.52 ಹೆಕ್ಟೇರ್) ಪ್ರದೇಶದಲ್ಲಿ ಕುಡುತಿನಿ ಕೈಗಾರಿಕಾ ಪ್ರದೇಶ– 3ನೇ ಹಂತವನ್ನು ಅಭಿವೃದ್ಧಿ ಪಡಿಸಲು ಉದ್ದೇಶಿಸಿರುತ್ತಾರೆ. ಈ ಪ್ರಸ್ತಾಪಿತ ಯೋಜನೆಗೆ ಪರಿಸರ ಆಘಾತ ಅಧ್ಯಯನ ಅಧಿಸೂಚನೆ ದಿನಾಂಕ 14.09.2006ರ ಪ್ರಕಾರ ಪರಿಸರ ವಿಮೋಚನಾ ಪತ್ರವನ್ನು ಪಡೆಯಬೇಕಾಗಿರುತ್ತದೆ ಮತ್ತು ಅದರ ಅಂಗವಾಗಿ ಸಾರ್ವಜನಿಕ ಪರಿಸರ ಆಲಿಕೆ ಸಭೆಯನ್ನು ನಡೆಸಬೇಕಾಗಿರುತ್ತದೆ. ಅದರಂತೆ ಕೇಂದ್ರ ಅರಣ್ಯ, ಪರಿಸರ ಹಾಗೂ ಹವಾಮಾನ ಬದಲಾವಣೆ ಮಂತ್ರಾಲಯ, ಭಾರತ ಸರ್ಕಾರ ಇವರಿಂದ ಉಲ್ಲೇಖದ ನಿಯಮಗಳು (Terms of Reference, TOR) ಪತ್ರವನ್ನು File No. 10/44/2023-IA.III, ದಿನಾಂಕ. 01.09.2023 ರಂದು ಪಡೆದಿರುತ್ತಾರೆ ಮತ್ತು ಪ್ರವರ್ತಕರ ಪತ್ರ ಸಂಖ್ಯೆ. KIADB/BALLARI/EE/1042/2023-24, ದಿನಾಂಕ 09.01.2024ರ ಹಾಗೂ ಪರಿಸರ ಅಧಿಕಾರಿ, ಪ್ರಾದೇಶಿಕ ಕಛೇರಿ, ಬಳ್ಳಾರಿ ಇವರ ಪತ್ರ ಸಂಖ್ಯೆ: ಕರಾಮಾನಿಮಂ/ಪ್ರಾಕ(ಬ)/ಪ.ಸಾ.ಸಭೆ/2024-25/221, ದಿನಾಂಕ:01.06.2024ರ ಪ್ರಕಾರ ಸಾರ್ವಜನಿಕ ಪರಿಸರ ಆಲಿಕೆ ಸಭೆಯನ್ನು ನಡೆಸಲು ಮಾನ್ಯ ಬಳ್ಳಾರಿ ಜಿಲ್ಲಾಧಿಕಾರಿಗಳು ದಿನಾಂಕ: 12.07.2024 ರಂದು ಅಪರಾಹ್ನ 1.00 ಗಂಟೆಗೆ ನಿಗಧಿಪಡಿಸಿರುತ್ತಾರೆ. ಸದರಿ ಪರಿಸರ ಸಾರ್ವಜನಿಕ ಆಲಿಕೆ ಸಭೆಯ ವಿವರಗಳು ಈ ಕೆಳಕಂಡಂತಿವೆ.

1. **ಸಂಸ್ಥೆಯ ಹೆಸರು ಮತ್ತು ವಿಳಾಸ:** ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಳಿ, ವಲಯ ಕಛೇರಿ, ನಂ. ಸಿ.ಎ. -1, ಮುಂಡರಗಿ ಕೈಗಾರಿಕಾ ಪ್ರದೇಶ, 1ನೇ ಹಂತ, ಬೆಂಗಳೂರು ರಸ್ತೆ, ಬಳ್ಳಾರಿ - 251518.
2. **ಉದ್ದೇಶಿತ ಯೋಜನೆಯ ಸ್ಥಳ:** ಬಳ್ಳಾರಿ ಜಿಲ್ಲೆ, ಬಳ್ಳಾರಿ ತಾಲ್ಲೂಕು, ಕುಡುತಿನಿ ಗ್ರಾಮದ ಒಟ್ಟು 670.94 ಎಕರೆ (271.52 ಹೆಕ್ಟೇರ್) ಪ್ರದೇಶದಲ್ಲಿ ಕುಡುತಿನಿ ಕೈಗಾರಿಕಾ ಪ್ರದೇಶ, 3ನೇ ಹಂತವನ್ನು ಅಭಿವೃದ್ಧಿ ಪಡಿಸುವ ಯೋಜನೆ ಹೊಂದಿದೆ.
3. **ಯೋಜನೆಯ ಕಾರ್ಯಚಟುವಟಿಕೆ:** ಕುಡುತಿನಿ ಗ್ರಾಮದ ಒಟ್ಟು 670.94 ಎಕರೆ (271.52 ಹೆಕ್ಟೇರ್) ಪ್ರದೇಶದಲ್ಲಿ ಕುಡುತಿನಿ ಕೈಗಾರಿಕಾ ಪ್ರದೇಶ, 3ನೇ ಹಂತವನ್ನು ಅಭಿವೃದ್ಧಿ ಪಡಿಸುವ ಕುರಿತು.
4. **ಪರಿಸರ ಸಾರ್ವಜನಿಕ ಸಭೆಯ ಸ್ಥಳ, ದಿನಾಂಕ ಮತ್ತು ಸಮಯ. ಶುಕ್ರವಾರ, 12ನೇ ಜುಲೈ 2024 ರಂದು ಮಧ್ಯಾಹ್ನ 1.00 ಘಂಟೆಗೆ ಬಳ್ಳಾರಿ ಜಿಲ್ಲೆ, ಬಳ್ಳಾರಿ ತಾಲ್ಲೂಕು, ಕುಡುತಿನಿ ಗ್ರಾಮ, ಕುಡುತಿನಿ ಕೈಗಾರಿಕಾ ಪ್ರದೇಶ– 3ನೇ ಹಂತ.**
5. **ಯೋಜನೆಯ ವೆಚ್ಚ.:** ರೂ. 15487.74 ಲಕ್ಷ (ಯೋಜನಾ ವೆಚ್ಚ)

6 ಯೋಜನೆಯ ದಾಸ್ತವೇಜುಗಳನ್ನು ಸಾರ್ವಜನಿಕ ಪರಾಮರ್ಶೆಗೆ ಇಡುವ ಸ್ಥಳ. (ಅ) ಜಿಲ್ಲಾಧಿಕಾರಿಗಳ ಕಛೇರಿ, ಬಳ್ಳಾರಿ ಜಿಲ್ಲೆ. (ಆ) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರ ಕಛೇರಿ, ಜಿಲ್ಲಾ ಪಂಚಾಯತ್ ಬಳ್ಳಾರಿ ಜಿಲ್ಲೆ. (ಇ) ತಹಶೀಲ್ದಾರ್ ಕಾರ್ಯಾಲಯ, ಬಳ್ಳಾರಿ. (ಈ)ಜಿಲ್ಲಾ ಕೈಗಾರಿಕಾ ಕೇಂದ್ರ, ಬಳ್ಳಾರಿ ಜಿಲ್ಲೆ. (ಉ) ತಾಲ್ಲೂಕು ಪಂಚಾಯತ್ ಕಛೇರಿ, ಬಳ್ಳಾರಿ. (ಊ) ಗ್ರಾಮ ಪಂಚಾಯಿತಿ ಕಾರ್ಯಾಲಯ, ಕುಡುತಿನಿ, ಬಳ್ಳಾರಿ ತಾಲ್ಲೂಕು. (ಋ) ಹಿರಿಯ ಪರಿಸರ ಅಧಿಕಾರಿಗಳು, ವಿಜಯನಗರ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಶ್ರೀ ಸಾಯಿ ಶರಣ್ ಪ್ಲಾಜ್ಹಾ, ನಂ. 71/ಎ, 2ನೇ ಮಹಡಿ, ಡ್ಯಾಂ ರಸ್ತೆ, ಹೊಸಪೇಟೆ – 583203, ವಿಜಯನಗರ ಜಿಲ್ಲೆ. (ೠ) ಪ್ರಾದೇಶಿಕ ಕಛೇರಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಸರ್ವೆ ನಂ. 597 ಪಿ, ವಾರ್ಡ್ ಸಂಖ್ಯೆ. 25, 4ನೇ ಮುಖ್ಯರಸ್ತೆ, ಡಾ॥ ವಿಷ್ಣುವರ್ಧನ ಪಾರ್ಕ್, ಕುವೆಂಪುನಗರ, ಬಳ್ಳಾರಿ – 583104. (ಎ) ಕೇಂದ್ರ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಮಂತ್ರಾಲಯ, ದಕ್ಷಿಣ ವಲಯ ಕಛೇರಿ, ನಂ.ಇ-3/240, ಕೇಂದ್ರೀಯ ಸದನ, 4ನೇ ಮಹಡಿ, ಇ ಮತ್ತು ಎಫ್ ವಿಂಗ್ಸ್, 17ನೇ ಮುಖ್ಯ ರಸ್ತೆ, 2ನೇ ಬ್ಲಾಕ್, ಕೋರಮಂಗಲ, ಬೆಂಗಳೂರು-560 034. (ಏ) ಸಹಾಯ ಕೇಂದ್ರ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ನೆಲ ಅಂತಸ್ತು, ನಂ.49, ಪರಿಸರ ಭವನ, ಚರ್ಚ್ ಸ್ಟ್ರೀಟ್, ಬೆಂಗಳೂರು-560 001.

ಸೂಚನೆ: ಯೋಜನಾ ಸ್ಥಳದಲ್ಲಿ ವಾಸವಾಗಿರುವ ಆಸಕ್ತ ನಿವಾಸಿಗಳು, ಪರಿಸರಾಸಕ್ತ ಗುಂಪುಗಳು ಮತ್ತು ಈ ಯೋಜನೆಯಿಂದ ತೊಂದರೆಗೊಳಗಾಗಬಹುದಾದ ಸಾರ್ವಜನಿಕರು ತಮ್ಮ ಸಲಹೆಗಳು, ಅನಿಸಿಕೆಗಳು, ಟೀಕೆಟಿಪ್ಪಣಿಗಳು ಹಾಗು ಅಹವಾಲುಗಳನ್ನು ಮೌಖಿಕ/ಲಿಖಿತ/ಮಿಂಚಂಚೆ ಮುಖಾಂತರ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ/ಅಧ್ಯಕ್ಷರು, ಸಾರ್ವಜನಿಕ ಪರಿಸರ ಸಮಿತಿ (ಜಿಲ್ಲಾಧಿಕಾರಿಗಳು, ಬಳ್ಳಾರಿ ಜಿಲ್ಲೆ) ಇವರಿಗೆ ಈ ಅಧಿಸೂಚನೆ ಪ್ರಕಟವಾದ 30 ದಿನಗಳ ಒಳಗೆ ಸಲ್ಲಿಸತಕ್ಕದ್ದು. ಇಚ್ಛೆಯುಳ್ಳ ಸಾರ್ವಜನಿಕರು ಮೇಲೆ ತಿಳಿಸಿರುವ ದಿನದಂದು ಪರಿಸರ ಸಾರ್ವಜನಿಕ ಸಭೆಯಲ್ಲಿ ಪಾಲ್ಗೊಳ್ಳಬಹುದಾಗಿದೆ. ಹೆಚ್ಚಿನ ವಿವರಗಳನ್ನು ಮಂಡಳಿಯ ಜಾಲತಾಣ : http://kspcb.karnataka.gov.in ನಲ್ಲಿ ಪಡೆಯಬಹುದು.

ಸಹಿ/-
ಸದಸ್ಯ ಕಾರ್ಯದರ್ಶಿ



ಸುಭಾಷಿತ

ಎಲ್ಲರೂ ಕೇಳಿಸಿಕೊಳ್ಳಬಹುದು, ಆದರೆ ಸಂವೇದನಾಶೀಲರಿಗಷ್ಟೇ ಅರ್ಥ ಮಾಡಿಕೊಳ್ಳಲು ಸಾಧ್ಯ.
-ಖಲೀಲ್ ಗಿಬ್ರಾನ್

ರೆಪೊ ದರದಲ್ಲಿ ಯಥಾಸ್ಥಿತಿ ನಿರೀಕ್ಷಿತವೂ ಹೌದು, ಸರಿಯೂ ಹೌದು

ಭಾರತೀಯ ರಿಸರ್ವ್ ಬ್ಯಾಂಕ್‌ನ (ಆರ್‌ಬಿಐ) ಹಣಕಾಸು ನೀತಿ ಸಮಿತಿಯು (ಎಂಪಿಸಿ) ರೆಪೊ ದರದಲ್ಲಿ ಯಾವುದೇ ಬದಲಾವಣೆ ಮಾಡುವುದಿಲ್ಲ ಎಂಬುದು ನಿರೀಕ್ಷಿತವೇ ಆಗಿತ್ತು. ನಿರೀಕ್ಷೆಗೆ ಅನುಗುಣವಾಗಿಯೇ ಎಂಪಿಸಿ ನಡೆದುಕೊಂಡಿದೆ. ಕೇಂದ್ರೀಯ ಬ್ಯಾಂಕ್‌ನ ಎಂಪಿಸಿಯು ಕಳೆದ ವಾರ ನಡೆದ ಸಭೆಯಲ್ಲಿ, ಸತತ ಎಂಟನೆಯ ಬಾರಿ ರೆಪೊ ದರವನ್ನು ಯಥಾಸ್ಥಿತಿಯಲ್ಲಿ ಉಳಿಸಿಕೊಳ್ಳುವ ಕೆಲಸ ಮಾಡಿದೆ. ರೆಪೊ ದರದಲ್ಲಿ ಯಥಾಸ್ಥಿತಿಯನ್ನು ಮುಂದುವರಿಸುವ ಹಾಗೂ ಹೊಂದಾಣಿಕೆಯ ನಿಲುವನ್ನು ಹಿಂಪಡೆಯುವ ಧೋರಣೆಯನ್ನು ಕಾಯ್ದುಕೊಳ್ಳುವ ವಿಚಾರವಾಗಿ ಎಂಪಿಸಿಯು ಬಹುಮತದ ನಿರ್ಧಾರ ಕೈಗೊಂಡಿದೆ. ವಾಣಿಜ್ಯ ಬ್ಯಾಂಕ್‌ಗಳಿಗೆ ಆರ್‌ಬಿಐ ನೀಡುವ ಸಾಲದ ಮೇಲಿನ ಬಡ್ಡಿ ದರವು (ರೆಪೊ) ಶೇಕಡ 6.5ರ ಮಟ್ಟದಲ್ಲಿ ಮುಂದುವರಿಯಲಿದೆ. ರೆಪೊ ದರದ ವಿಚಾರವಾಗಿ ಯಾವುದೇ ತೀರ್ಮಾನ ಕೈಗೊಳ್ಳುವ ಸಂದರ್ಭದಲ್ಲಿ ಎಂಪಿಸಿ ಪರಿಶೀಲಿಸುವ ಕೆಲವು ವಿದ್ಯಮಾನಗಳು ಈ ತೀರ್ಮಾನ ತೆಗೆದುಕೊಳ್ಳುವುದಕ್ಕೆ ಪೂರಕವಾಗಿ ಇದ್ದವು. ಆದರೆ ಇಲ್ಲಿ ಇನ್ನೂ ಒಂದು ಸಂಗತಿಯನ್ನು ಉಲ್ಲೇಖಿಸಬಹುದು. ಅಂದರೆ, ಹೊಸದಾಗಿ ರಚನೆ ಆಗಿರುವ ಸರ್ಕಾರಕ್ಕೆ, ಆರಂಭದಲ್ಲಿಯೇ ಬಡ್ಡಿ ದರದಲ್ಲಿ ಬದಲಾವಣೆ ಆಗುವುದರಿಂದ ಸೃಷ್ಟಿಯಾಗುವ ಪರಿಸ್ಥಿತಿಯನ್ನು ನಿಭಾಯಿಸಬೇಕಾದ ಅನಿವಾರ್ಯ ಇರುವುದಿಲ್ಲ.



ಆರ್ಥಿಕ ಬೆಳವಣಿಗೆಯು ಚೆನ್ನಾಗಿ ಇರುವ ನಿರೀಕ್ಷೆ ಇರುವಾಗ, ರೆಪೊ ದರವನ್ನು ತಗ್ಗಿಸುವ ಅಗತ್ಯ ಇರಲಿಲ್ಲ

ಬೆಲೆಗಳಲ್ಲಿ ಸ್ಥಿರತೆಯನ್ನು ತರುವ ಅಗತ್ಯದ ಕಾರಣಕ್ಕಾಗಿ ಎಂಪಿಸಿಯು ರೆಪೊ ದರದಲ್ಲಿ ಬದಲಾವಣೆ ಮಾಡದೆ ಇರುವ ತೀರ್ಮಾನ ಕೈಗೊಂಡಿದೆ. ಚಿಲ್ಲರೆ ಹಣದುಬ್ಬರ ದರವನ್ನು ಶೇಕಡ 4ರಲ್ಲಿ ನಿಯಂತ್ರಿಸುವ ಹೊಣೆಯು ಆರ್‌ಬಿಐ ಮೇಲೆ ಇದೆ. ಆದರೆ ಚಿಲ್ಲರೆ ಹಣದುಬ್ಬರ ದರವು ಶೇ 4ಕ್ಕಿಂತಲೂ ಹೆಚ್ಚಿನ ಮಟ್ಟದಲ್ಲಿಯೇ ಉಳಿದಿದೆ. ಹೀಗಾಗಿ, ತಾನು ನಿಭಾಯಿಸಬೇಕಿರುವ ಹೊಣೆಗಾರಿಕೆಯ ದೃಷ್ಟಿಯಿಂದ ಕಂಡಾಗ ಆರ್‌ಬಿಐ ಮುಂದೆ ಹೆಚ್ಚಿನ ಆಯ್ಕೆಗಳೇನೂ ಇರಲಿಲ್ಲ. ಹಿಂದಿನ ವರ್ಷಗಳಲ್ಲಿ ಹೆಚ್ಚಿನ ಮಟ್ಟದಲ್ಲಿ ಉಳಿದಿದ್ದ ಚಿಲ್ಲರೆ ಹಣದುಬ್ಬರ ಪ್ರಮಾಣವು ಈ ವರ್ಷದಲ್ಲಿ ತುಸು ಕಡಿಮೆ ಆಗಿದೆ ಎಂಬುದು ನಿಜವಾದರೂ ಹಣದುಬ್ಬರದ ಪ್ರಮಾಣ ಇಳಿಕೆ ಆಗುತ್ತಿರುವ ಗತಿಯು ನಿಧಾನವಾಗಿಯೇ ಇದೆ. ಫೆಬ್ರುವರಿಯಲ್ಲಿ ಶೇ 5.8ರಷ್ಟು ಇದ್ದ ಚಿಲ್ಲರೆ ಹಣದುಬ್ಬರ ಪ್ರಮಾಣವು ಮೇ ತಿಂಗಳಲ್ಲಿ ಶೇ 4.75ಕ್ಕೆ ತಗ್ಗಿದೆ. ಹಣದುಬ್ಬರದ ವಿಚಾರದಲ್ಲಿ ಆರ್‌ಬಿಐ ಗವರ್ನರ್ ಶಕ್ತಿಕಾಂತ ದಾಸ್ ಅವರು ಬಹಳ ಎಚ್ಚರಿಕೆಯಿಂದ ಇದ್ದಾರೆ. ಈಗಿನ ತ್ರೈಮಾಸಿಕದಲ್ಲಿ ಜಾಗತಿಕ ಮಟ್ಟದಲ್ಲಿ ಸರಕುಗಳ ಬೆಲೆಯು ಹೆಚ್ಚಾಗಿಯೇ ಇದೆ ಎಂದು ಅವರು ಹೇಳಿದ್ದಾರೆ. ಪ್ರಸಕ್ತ ಹಣಕಾಸು ವರ್ಷದಲ್ಲಿ ಚಿಲ್ಲರೆ ಹಣದುಬ್ಬರ ದರವು ಶೇ 4.5ರಷ್ಟು ಇರಲಿದೆ ಎಂದು ಈ ಹಿಂದೆ ಮಾಡಿದ್ದ ಅಂದಾಜನ್ನು ಅವರು ಪರಿಷ್ಕರಿಸಿಲ್ಲ. ಈ ಅಂದಾಜು ಕೂಡ ಆರ್‌ಬಿಐ ನಿಗದಿ ಮಾಡಿಕೊಂಡಿರುವ ಮಿತಿಗಿಂತ ಹೆಚ್ಚಿನದು ಎಂಬುದನ್ನು ಗಮನಿಸಬೇಕು. ಆಹಾರ ವಸ್ತುಗಳ ಬೆಲೆ ಏರಿಕೆ ಪ್ರಮಾಣವು ಇನ್ನೂ ಹೆಚ್ಚಿದೆ. ಮುಂಗಾರು ಮಳೆಯು ಈ ವರ್ಷ ಚೆನ್ನಾಗಿ ಆಗಲಿದೆ ಎಂಬ ಮುನ್ಸೂಚನೆ ಇದ್ದರೂ ಮುಂಗಾರು ಮಳೆಯು ಚೆನ್ನಾಗಿ ಆಗಿ ಬೆಲೆ ಇಳಿಕೆ ಆಗಬಹುದು ಎಂಬ ಅಂದಾಜನ್ನು ಇರಿಸಿಕೊಳ್ಳಬಹುದಾಗಿದ್ದರೂ ಆರ್‌ಬಿಐ ಹೆಚ್ಚಿನ ಅಪಾಯವನ್ನು ಮೈಮೇಲೆ ಎಳೆದುಕೊಳ್ಳುವ ಕೆಲಸಕ್ಕೆ ಕೈಹಾಕಿಲ್ಲ.

ಇದೇ ವೇಳೆ ಆರ್‌ಬಿಐ, ಆರ್ಥಿಕ ಬೆಳವಣಿಗೆಯ ವಿಚಾರವಾಗಿ ಕೆಲವು ಭರವಸೆಗಳನ್ನು ಕೂಡ ವ್ಯಕ್ತಪಡಿಸಿದೆ. ಈ ಭರವಸೆಗಳು ಆಧಾರಸಹಿತವಾಗಿವೆ. ಪ್ರಸಕ್ತ ಹಣಕಾಸು ವರ್ಷದಲ್ಲಿ ದೇಶದ ಜಿಡಿಪಿ ಬೆಳವಣಿಗೆ ದರವು ಶೇ 7.2ರಷ್ಟು ಇರಲಿದೆ ಎಂದು ಆರ್‌ಬಿಐ ಅಂದಾಜಿಸಿದೆ. ಹಿಂದೆ ಮಾಡಿದ್ದ ಅಂದಾಜಿನ ಆಧಾರದಲ್ಲಿ ಆರ್‌ಬಿಐ, ಬೆಳವಣಿಗೆ ದರ ಶೇ 7ರಷ್ಟು ಇರಲಿದೆ ಎಂದು ಹೇಳಿತ್ತು. ಬೆಳವಣಿಗೆಯ ವೇಗಕ್ಕೆ ಧಕ್ಕೆ ಆಗುವುದಿಲ್ಲ ಎನ್ನಲು ವಿಶ್ವಾಸಾರ್ಹ ಸೂಚನೆಗಳು ಕಂಡಿವೆ ಎಂದು ಅದು ಹೇಳಿದೆ. ಮುಂಗಾರು ಮಳೆಯು ಈ ವರ್ಷ ವಾಡಿಕೆಗಿಂತ ಹೆಚ್ಚು ಇರಲಿದೆ ಎಂಬ ಅಂದಾಜು ಇದೆ. ಇದು ದೇಶದ ಗ್ರಾಮೀಣ ಪ್ರದೇಶಗಳಲ್ಲಿ ಕಂಡುಬರುವ ಬೇಡಿಕೆಯ ದೃಷ್ಟಿಯಿಂದ ಹಾಗೂ ಕೃಷಿ ವಲಯದ ಚಟುವಟಿಕೆಗಳ ದೃಷ್ಟಿಯಿಂದ ಒಳ್ಳೆಯ ಸುದ್ದಿ. ತಯಾರಿಕೆ ಹಾಗೂ ಸೇವಾ ವಲಯಗಳಲ್ಲಿ ಬೆಳವಣಿಗೆ ದರವು ತಗ್ಗುವ ಅಂದಾಜು ಇಲ್ಲ. ಈ ಎರಡು ವಲಯಗಳಲ್ಲಿನ ಬೆಳವಣಿಗೆಯು ದೇಶದ ಮಾರುಕಟ್ಟೆಗಳಲ್ಲಿ ಬೇಡಿಕೆಯನ್ನು ಜಾಸ್ತಿ ಮಾಡಬಹುದು. 'ಬ್ಯಾಂಕ್ ಹಾಗೂ ಕಾರ್ಪೊರೇಟ್ ಕಂಪನಿಗಳ ಹಣಕಾಸಿನ ಸ್ಥಿತಿ ಚೆನ್ನಾಗಿರುವ ಕಾರಣಕ್ಕೆ, ಸರ್ಕಾರವು ಮೂಲಸೌಕರ್ಯ ವಲಯದ ಮೇಲೆ ವೆಚ್ಚ ಮಾಡುವುದನ್ನು ಮುಂದುವರಿಸಲಿರುವ ಕಾರಣಕ್ಕೆ ಹಾಗೂ ಉದ್ಯಮ ವಲಯದಲ್ಲಿ ಆಶಾವಾದ ಇರುವ ಕಾರಣಕ್ಕೆ ಹೂಡಿಕೆ ಚಟುವಟಿಕೆಗಳು ನಿರೀಕ್ಷೆಯಂತೆಯೇ ಚೆನ್ನಾಗಿರಲಿವೆ' ಎಂದು ಕೇಂದ್ರೀಯ ಬ್ಯಾಂಕ್ ಹೇಳಿದೆ. ಹೀಗಾಗಿ, ಆರ್ಥಿಕ ಬೆಳವಣಿಗೆಯು ಚೆನ್ನಾಗಿ ಇರುವ ನಿರೀಕ್ಷೆ ಇರುವಾಗ, ರೆಪೊ ದರವನ್ನು ತಗ್ಗಿಸುವ ಅಗತ್ಯವೂ ಇರಲಿಲ್ಲ.

ಪ್ರಕೃತಿಯ ವೈಚಿತ್ರ್ಯಗಳು ಮರುಕಳಿಸುವಂತೆ ಇತಿಹಾಸವೂ ಮರುಕಳಿಸುತ್ತದೆ

ಆರ್‌ಎಸ್‌ಎಸ್‌ನ ರಂಗಪ್ರವೇಶ



ವಿಶ್ಲೇಷಣೆ

ದಿನೇಶ್ ಅಮಿನ್ ಮಟ್ಟು

ರಾಷ್ಟ್ರೀಯ ಸ್ವಯಂಸೇವಕ ಸಂಘದ ಸರಸಂಘಚಾಲಕ ಮೋಹನ್ ಭಾಗವತ್ ಅವರು ಪ್ರಧಾನಿ ನರೇಂದ್ರ ಮೋದಿ ಮತ್ತು ಅವರ ತಂಡಕ್ಕೆ ಪರೋಕ್ಷವಾಗಿ ಹೇಳಿರುವ 'ಬುದ್ಧಿವಾದ' ದೇಶದ ರಾಜಕೀಯ ಮತ್ತು ಸಾಮಾಜಿಕ ಕ್ಷೇತ್ರಗಳಲ್ಲಿ ಸಂಚಲನ ಉಂಟುಮಾಡಿದೆ. ಈ ಹೇಳಿಕೆಯಿಂದ ಬಿಜೆಪಿ ನಾಯಕರಿಗೆ ಆಗಿರುವ ಆಘಾತದ ತೀವ್ರತೆಗಿಂತ ಸಂಘ ಪರಿವಾರದ ಸೈದ್ಧಾಂತಿಕ ವಿರೋಧಿಗಳಿಗೆ ಆಗಿರುವ ಸಂತೋಷ, ಸಮಾಧಾನದ ತೀವ್ರತೆಯೇ ಹೆಚ್ಚಾಗಿ ಇರುವಂತಿದೆ. 'ಮೋದಿ ಅವರಿಗೆ ಆರ್‌ಎಸ್‌ಎಸ್ ಸರಿಯಾದ ಪಾಠ ಕಲಿಸಿದೆ, ಇನ್ನು ಮೋದಿಯವರ ಯುಗ ಮುಗಿಯಿತು' ಎಂದು ನಮ್ಮ ಪ್ರಗತಿಪರರು, ಬುದ್ಧಿಜೀವಿಗಳು ಪಿಸುಗುಟ್ಟತೊಡಗಿದ್ದಾರೆ.

ಭಾಗವತ್ ಅವರ ಭಾಗವತಿಕೆಯಲ್ಲಿ ತೇಲಿ ಹೋದವರು ಒಮ್ಮೆ ಕಣ್ಣುಬಿಟ್ಟು ನೋಡಿದರೆ ವಾಸ್ತವದ ಅರಿವಾಗಬಹುದು. 'ನರೇಂದ್ರ ಮೋದಿಯವರಿಗೆ ಪಾಠ ಕಲಿಸಿರುವುದು ಆರ್‌ಎಸ್‌ಎಸ್ ಅಲ್ಲ, ಅದು ಈ ದೇಶದ ಪ್ರಜ್ಞಾವಂತ ಮತದಾರ, ನರೇಂದ್ರ ಮೋದಿ ಯುಗ ಮುಗಿದಿದೆ, ಮುನ್ನೂರರ ಬಲದ ಬಿಜೆಪಿ ಕೂಡ ಸದ್ಯೋಭವಿಷ್ಯದಲ್ಲಿ ಮರಳಿ ಬಾರದು' ಎನ್ನುವ ಗೋಡೆಯ ಮೇಲಿನ ಬರಹ ಸ್ಪಷ್ಟವಾಗಿದೆ.

ಗ್ಯಾರಂಟಿಯಾಗಿ ಹೇಳಬಹುದಾದರೆ, ಬಿಜೆಪಿ ಕನಿಷ್ಠ ಇನ್ನು ಐದು ವರ್ಷ ಅಧಿಕಾರದಲ್ಲಿದ್ದರೂ ಸಂವಿಧಾನ ಬದಲಾವಣೆಯ ಸೊಲ್ಲೆತ್ತುವುದಿಲ್ಲ, ಮಥುರಾ-ಕಾಶಿಯಲ್ಲಿ ಹಿಂದೂಗಳ ಹಕ್ಕು ಸ್ಥಾಪನೆಯ ಬೇಡಿಕೆ ಮಂಡಿಸುವುದಿಲ್ಲ. ಸಮಾನ ನಾಗರಿಕ ಸಂಹಿತೆ ಜಾರಿಯಾಗುವುದಿಲ್ಲ, ಮುಸ್ಲಿಮರ ಮೀಸಲಾತಿ ರದ್ದಾಗುವುದಿಲ್ಲ, ಏಕರೂಪದ ಚುನಾವಣೆಯ ಬಗ್ಗೆಯೂ ಸರ್ಕಾರ ಮಾತನಾಡುವುದಿಲ್ಲ. ಇಷ್ಟಕ್ಕೆ ನಿರಾಳವಾಗಿ ಇರಬಹುದೇ? ಇದು, ಇನ್ನೇನು ಅಪ್ಪಳಿಸಲಿದೆ ಎಂದು ಭೀತಿ ಹುಟ್ಟಿಸಿದ್ದ ಸುನಾಮಿ-ಚಂಡಮಾರುತ ಸರಿದುಹೋದಾಗ ಹುಟ್ಟಿಕೊಂಡ ತಕ್ಷಣದ ನಿರಾಳ ಭಾವ.


ಪ್ರಕೃತಿಯ ವೈಚಿತ್ರ್ಯಗಳು ಮರುಕಳಿಸುವಂತೆ ಇತಿಹಾಸವೂ ಮರುಕಳಿಸುತ್ತದೆ. ಮೈತ್ರಿಧರ್ಮ ಪಾಲನೆಯ ಬಂಧನ ಇರುವುದು ಬಿಜೆಪಿಗೆ, ಸಂಘ ಪರಿವಾರಕ್ಕೆ ಅಲ್ಲವಲ್ಲ, ಅದು ತನ್ನ ಕೆಲಸ ಶುರುಮಾಡಿದೆ. ನೇಪಥ್ಯದಲ್ಲಿದ್ದು ತಾಲೀಮು ನಡೆಸುತ್ತಿದ್ದ ಪ್ರಧಾನ ಗಣವೇಷಧಾರಿ ಮೋಹನ್ ಭಾಗವತ್ ಅವರು ರಂಗಪ್ರವೇಶ ಮಾಡಿ ಗುಡುಗಿದ್ದಾರೆ. 'ಸೇವಕನಿಗೆ ಅಹಂಕಾರ ಇರಬಾರದು, ನಡವಳಿಕೆಯಲ್ಲಿ ಸಭ್ಯತೆ, ಘನತೆ ಇರಬೇಕು ಎಂದೆಲ್ಲ ಬುದ್ಧಿ ಹೇಳಿದ್ದಾರೆ. ಮೋದಿಯವರು ಸೋನಿಯಾ ಗಾಂಧಿ ಅವರನ್ನು ಜರ್ಸಿ ದನ ಎಂದು ಹೀಗಳೆದಾಗ, ಮುಸ್ಲಿಮರೆಂದರೆ ಕಾರಿಗೆ ಅಡ್ಡ ಬಂದ ನಾಯಿಮರಿಗಳು ಎಂಬರ್ಥದಲ್ಲಿ ಮಾತನಾಡಿದಾಗ ಯಾಕೆ ಆಕ್ಷೇಪಿಸಲಿಲ್ಲ ಎಂದು ಕೇಳಿದರೆ, ಕಳೆದುಹೋದ ಇತಿಹಾಸವನ್ನು ಯಾಕೆ ನೆನಪಿಸುತ್ತೀರಿ ಎಂದು ಭಾಗವತ್ ಅವರು ಹೇಳಬಹುದು.

ಹಾಗಿದ್ದರೆ ಮೊನ್ನೆ ಮೊನ್ನೆ ಚುನಾವಣಾ ಪ್ರಚಾರ ಕಾಲದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಕಾಂಗ್ರೆಸ್ ಪಕ್ಷ ಮಂಗಳಸೂತ್ರ ಕಿತ್ತುಕೊಳ್ಳುತ್ತದೆ, ಹಿಂದೂಗಳ ಸಂಪತ್ತನ್ನು ಮುಸ್ಲಿಮರಿಗೆ ಹಂಚುತ್ತದೆ, ದಲಿತರ ಮೀಸಲಾತಿಯನ್ನು ಕಿತ್ತು ಮುಸ್ಲಿಮರಿಗೆ ಕೊಡುತ್ತದೆ, ಅವರು ಹಿಂದೂಗಳ ಎಮ್ಮೆ ಹೊಡ್ಕೊಂಡು ಹೋಗುತ್ತಾರೆ ಎಂದೆಲ್ಲ 'ಅಹಂಕಾರ'ಭರಿತರಾಗಿ ಪ್ರಚೋದನಕಾರಿ ಹಸಿ ಸುಳ್ಳುಗಳನ್ನು ಉದುರಿಸುತ್ತಿದ್ದಾಗ ಮೋಹನ್ ಭಾಗವತ್ ಎಲ್ಲಿದ್ದರು? ವಾನಪ್ರಸ್ಥಾಶ್ರಮ ಸೇರಿದ್ದರೆ? ಆಗಲೇ ಬುದ್ಧಿ ಹೇಳಿ ಮೋದಿ ಅವರ ತಲೆಗೆ ಮೊಟಕಿದ್ದರೆ ಅವರು ಕೇಳುತ್ತಿದ್ದರೋ ಇಲ್ಲವೋ ಎನ್ನುವುದು ನಂತರದ ಚರ್ಚೆ, ಕನಿಷ್ಠ ಈಗ ತಪ್ಪನ್ನು ಪ್ರಶ್ನಿಸುವ ನೈತಿಕತೆಯಾದರೂ ಇರುತ್ತಿತ್ತು.

ನರೇಂದ್ರ ಮೋದಿ ಅವರನ್ನು ಹಿಂದೂ ಹೃದಯ ಸಾಮ್ರಾಟ ಎಂದು ಮೆರವಣಿಗೆ ಮಾಡಿದ್ದ ಆರ್‌ಎಸ್‌ಎಸ್‌ಗೆ ಈಗ ಒಮ್ಮಿಂದೊಮ್ಮೆಲೇ ಅವರಲ್ಲಿ ಅಹಂಕಾರ, ಉದ್ಧಟತನ, ಸ್ವಾರ್ಥದಂತಹ ಅವಗುಣಗಳೆಲ್ಲ ಕಾಣಿಸಿಕೊಂಡದ್ದು ಹೇಗೆ? ಒಂದೊಮ್ಮೆ ಮೋದಿ ನೇತೃತ್ವದ ಬಿಜೆಪಿ ಚಾರ್ ಸೌ ಪಾರ್ ಆಗಿದ್ದರೆ ಅಥವಾ ಕನಿಷ್ಠ 300 ಸ್ಥಾನಗಳನ್ನು ಗೆದ್ದಿದ್ದರೆ ಆಗಲೂ ಭಾಗವತ್ ಅವರು ಈಗಿನ ಬುದ್ಧಿಮಾತುಗಳನ್ನೇ ಹೇಳುತ್ತಿದ್ದರೇ? ಖಂಡಿತ ಇಲ್ಲ.

ಸೇವಕನಿಗೆ ಅಹಂಕಾರ ಇರಬಾರದು ಎಂದು ಬುದ್ಧಿ ಹೇಳುತ್ತಿರುವ ಭಾಗವತರು ಮೊದಲು ಈ ಅಹಂಕಾರವನ್ನು ಮೋದಿಯವರಲ್ಲಿ ತುಂಬಿದವರು ಯಾರು ಎನ್ನುವ ಪ್ರಶ್ನೆಗೆ ಉತ್ತರಿಸಬೇಕಾಗುತ್ತದೆ. ತಾನು ಜೈವಿಕವಾಗಿ ಹುಟ್ಟಿದವನೇ ಅಲ್ಲ, ದೇವರೇ ತನ್ನನ್ನು ಕಳುಹಿಸಿದ್ದಾನೆ ಎನ್ನುವಷ್ಟು ದುರಹಂಕಾರ ತೋರುತ್ತಿರುವ ಮೋದಿ ಅವರು ಇದೇ ರಾಷ್ಟ್ರೀಯ ಸ್ವಯಂಸೇವಕ ಸಂಘದ ಉತ್ಪನ್ನ, ಹೆಮ್ಮೆಯ ಪುತ್ರ. ಮೋದಿ ಅವರು ಹೀಗಾಗಿರುವುದು ಹಿಂದಿನ ಮೂರು ತಿಂಗಳಲ್ಲಿ ಅಲ್ಲ, ಗಿಡವಾಗಿ ಅವರು ಬೆಳೆದದ್ದೇ ಹಾಗೆ, ಈಗ ಮರ ಬಗ್ಗಿಸಲು ಹೊರಟರೆ ಅದು ಬಗ್ಗೀತೆ?

ಗುಜರಾತ್ ಹತ್ಯಾಕಾಂಡದ ಸಮಯದಲ್ಲಿ ಅಟಲ್ ಬಿಹಾರಿ ವಾಜಪೇಯಿ ಅವರು ಮೋದಿಯವರ ತಲೆದಂಡ ಬಯಸಿದಾಗ, ಲಾಲ್ ಕೃಷ್ಣ ಅಡ್ವಾಣಿ ಅವರ ಮೂಲಕ ಅವರ ತಲೆ ಉಳಿಸಿದ್ದು ಇದೇ ಆರ್‌ಎಸ್‌ಎಸ್ ಅಲ್ಲವೇ? ಸರ್ವಾಧಿಕಾರಿಯಾದವನು ವಿರೋಧಿಗಳ ತಲೆ ಕಡಿಯುತ್ತಾನೆ, ಶರಣಾದವರನ್ನು ಅಡಿಯಾಳುಗಳನ್ನಾಗಿಸುತ್ತಾನೆ. ಮೋದಿ ಅವರು ಗುಜರಾತ್ ರಾಜ್ಯದ ಮುಖ್ಯಮಂತ್ರಿಯಾದ ನಂತರದ ಇಲ್ಲಿಯವರೆಗಿನ 24 ವರ್ಷಗಳಲ್ಲಿ ಉರುಳಿಸಿದ ತಲೆಗಳ ಲೆಕ್ಕ ಹಾಕಿದರೆ ಅವರೊಳಗೆ ಬೆಳೆಯುತ್ತಿದ್ದ ಸರ್ವಾಧಿಕಾರಿಯ ಸರಿಯಾದ ಪರಿಚಯ ಆಗಬಹುದು.



ರಾಮಜನ್ಮಭೂಮಿ ಚಳವಳಿಯ ಮೂಲಕ ದೆಹಲಿ ಗದ್ದುಗೆವರೆಗೆ ಬಿಜೆಪಿಯನ್ನು ತಂದು ಕೂರಿಸಿದ್ದ ಮತ್ತು ತನಗೆ ರಾಜಕೀಯ ಜೀವದಾನ ಮಾಡಿದ್ದ ಲಾಲ್ ಕೃಷ್ಣ ಅಡ್ವಾಣಿಯವರನ್ನೇ ಅವರು ಬಿಡಲಿಲ್ಲ. ಮುರಳಿ ಮನೋಹರ ಜೋಷಿ, ಯಶವಂತ ಸಿನ್ಹಾ, ಅರುಣ್ ಶೌರಿ, ಸಂಜಯ ಜೋಷಿ, ಕೇಶುಭಾಯಿ ಪಟೇಲ್, ಹರೇನ್ ಪಾಂಡ್ಯ, ಸುರೇಶ್ ಮೆಹ್ತಾ, ವೆಂಕಯ್ಯ ನಾಯ್ಡು, ನಿತಿನ್ ಗಡ್ಕರಿ, ವಸುಂಧರಾ ರಾಜೆ, ಉಮಾಭಾರತಿ... ಪಟ್ಟಿ ಇನ್ನೂ ಉದ್ದ ಇದೆ. ಇದರಲ್ಲಿ ಶಿವರಾಜ್ ಸಿಂಗ್ ಚೌಹಾಣ್ ಮತ್ತು ಯೋಗಿ ಆದಿತ್ಯನಾಥ ಅವರನ್ನೂ ಸೇರಿಸಬಹುದು. ಅರುಣ್ ಜೇಟ್ಲಿ, ಸುಷ್ಮಾ ಸ್ವರಾಜ್ ಮತ್ತು ಅನಂತಕುಮಾರ್ ಬದುಕಿದ್ದರೆ ಅವರೂ ಮೂಲೆಗುಂಪಾಗುತ್ತಿದ್ದರು. ಕಷ್ಟಕಾಲದಲ್ಲಿ ಪಕ್ಷದಲ್ಲಿದ್ದು ಅದನ್ನು ಕಟ್ಟಿ ಬೆಳೆಸಿದ ಈ ಸಂಘನಿಷ್ಠರಾದ ವಾಜಪೇಯಿ-ಅಡ್ವಾಣಿ ಶಿಷ್ಯರೆಲ್ಲರ ನಾಯಕತ್ವಕ್ಕೆ ಮೋದಿಯವರು ಅಂತ್ಯ ಹಾಡುತ್ತಿದ್ದಾಗ ಆರ್‌ಎಸ್‌ಎಸ್ ಯಾಕೆ ದನಿ ಎತ್ತಲಿಲ್ಲ?

ಈಗಿನ ಕಾರಣ ಬಹಳ ಸರಳವಾದುದು. ಮೋದಿ ಯುಗ ಮುಗಿದಿದೆ ಎನ್ನುವ ಚುನಾವಣಾ ಫಲಿತಾಂಶದ ಸಂದೇಶವನ್ನು, ನಾಯಕರನ್ನು ಬಳಸಿ ಬಿಸಾಕುವ ಚಾಳಿಯ ಆರ್‌ಎಸ್‌ಎಸ್ ಎಲ್ಲರಿಗಿಂತ ಚೆನ್ನಾಗಿ ಅರ್ಥಮಾಡಿಕೊಂಡಿದೆ. ಮೋದಿಯವರ ರಾಜಕೀಯ ಆಯುಷ್ಯ ಇರುವುದು ಹೆಚ್ಚೆಂದರೆ ಇನ್ನು ಐದು ವರ್ಷ. ಅದರ ನಂತರ ಅವರು ಬಿಜೆಪಿ ಬಗ್ಗೆ ತಲೆಕೆಡಿಸಿಕೊಳ್ಳಲಾರರು. ಆದರೆ ಆರ್‌ಎಸ್‌ಎಸ್‌ಗೆ ಈ ಬಗ್ಗೆ ತಲೆಕೆಡಿಸಿಕೊಳ್ಳದೇ ಇರಲು ಆಗದು.

ಬಿಜೆಪಿ ಮತ್ತು ಸಂಘ ಪರಿವಾರದ ನಡುವೆ ಒಂದು ಪರಸ್ಪರ ಸಹಮತದ ಒಪ್ಪಂದ ಇದೆ. ಬಿಜೆಪಿ ಅಧಿಕಾರಕ್ಕೆ ಬಂದಾಗ ಅದರ ಲಾಭವನ್ನು ಬಳಸಿಕೊಂಡು ತನ್ನನ್ನು ಆಳ-ಅಗಲಕ್ಕೆ ವಿಸ್ತರಿಸಿಕೊಂಡು ಬುಡ ಭದ್ರ ಮಾಡಿಕೊಳ್ಳುವುದು ಮಾತ್ರವಲ್ಲ, ಸರ್ಕಾರಕ್ಕೆ ಮುಜುಗರ ಉಂಟುಮಾಡುವ ಮಾತು-ಕೃತಿಗಳಿಂದ ಸಾಧ್ಯವಿದ್ದಷ್ಟೂ ದೂರ ಇರುವುದು, ಅಧಿಕಾರ ಕೈಯಿಂದ ದೂರ ಸರಿದಾಗ ಉಗ್ರಸ್ವರೂಪ ತಾಳಿ ಹಿಂದೂ ಮತಗಳ ಧ್ರುವೀಕರಣಕ್ಕಾಗಿ ತನ್ನಲ್ಲಿರುವ ಕೋಮುವಾದದ ಮದ್ದುಗುಂಡುಗಳನ್ನೆಲ್ಲ ಬಳಸಿಕೊಂಡು ಕದನಕ್ಕೆ ಇಳಿದುಬಿಡುವುದು.

ಆದ್ದರಿಂದ ಮೋಹನ್ ಭಾಗವತ್ ಅವರ ಹೇಳಿಕೆಯ ಬಗ್ಗೆ ಆತ್ಮಾವಲೋಕನ ಇಲ್ಲವೇ ಕದನವಿರಾಮ ಎಂಬ ತೀರ್ಮಾನಕ್ಕೆ ಬಂದರೆ, ಹಿಂದುತ್ವದ ಅಸಲಿ ಮುಖವಾದ ಆರ್‌ಎಸ್‌ಎಸ್‌ನ ಪರಿಚಯ ಇಲ್ಲ ಎಂದರ್ಥ. ಇನ್ನೇನು ಒಂದು ವರ್ಷಕ್ಕೆ ನೂರು ತುಂಬಲಿರುವ ಆರ್‌ಎಸ್‌ಎಸ್ ಕೈಕಟ್ಟಿ ಕೂರುವ ಸಂಘಟನೆ ಅಲ್ಲ. ಉಳಿದಿರುವ ಅಜೆಂಡಾಗಳನ್ನು ಜಾರಿಗೆ ತರಲು ಬೇಕಾದ ರಾಜಕೀಯ ಅಧಿಕಾರ ಗಳಿಸುವ ಇನ್ನೊಂದು ಸುತ್ತಿನ ಕದನಕ್ಕೆ ಅದು ರೆಡಿಯಾಗಿದೆ. ಈ ಕದನ ಮೊದಲು ಒಳಗಿನಿಂದಲೇ ಶುರುವಾಗಿದೆ. ಇದಕ್ಕೆ ಸದ್ಯದಲ್ಲಿಯೇ ನಡೆಯಬೇಕಾಗಿರುವ ಪಕ್ಷದ ರಾಷ್ಟ್ರೀಯ ಅಧ್ಯಕ್ಷರ ಚುನಾವಣೆ ವೇದಿಕೆಯಾಗಲಿದೆ.

ಚುರುಮುರಿ



ಡಿವೋರ್ಸ್ ನ್ಯೂಸ್!

• ತುರುವೇಕೆರೆ ಪ್ರಸಾದ್

'ರೀ, ನಿಮ್ಮ ಅಭಿಪ್ರಾಯದಲ್ಲಿ ಡಿವೋರ್ಸ್‌ಗಳು ಯಾಕೆ ಆಗುತ್ತೆ?' ಪೇಪರ್ ಓದುತ್ತಾ ಕೂತಿದ್ದ ಪರ್ಮೇಶಿನ ಪದ್ದಮ್ಮನವರು ಕೇಳಿದ್ರು.

'ಅದಕ್ಕೆ ಇಂತದ್ದೇ ಕಾರಣ ಅಂತ ಏನೂ ಇಲ್ಲ. ಗಂಡ ನೆಲ ಒರೆಸ್ಲಿಲ್ಲ ಅಂತಾನೂ ಡಿವೋರ್ಸ್ ಆಗ್ಬಹುದು' ಎಂದ ಪರ್ಮೇಶಿ.

'ಅದ್ಯಾರೋ ಒಬ್ಬಾಕೆ ಗಂಡ ಗೊರಕೆ ಹೊಡೀತಾನೆ ಅಂತ ಡಿವೋರ್ಸ್ ಕೊಟ್ಟಿದ್ಲಂತೆ'.

'ಹೆಂಡ್ತಿ ಪೊರಕೇಲಿ ಹೊಡೀತಾಳೆ ಅಂತಾನೂ ಡಿವೋರ್ಸ್ ತಗಂಡಿರೋ ಗಂಡಂದಿರಿದಾರೆ'.

'ಒಬ್ಬಾಕೆ, ನನ್ ಗಂಡಂಗೆ ನನ್ ಮೇಲೆ ನಂಬಿಕೇನೆ ಇಲ್ಲ, ನನಗೆ ಹೇಳಿದ್ದ ತರಲೆ ತಾಪತ್ರಯನೇ ಅವನ ದಾರಿ ತಪ್ಪಿಸೋ ಬೇರೆಯವರಿಗೂ ಹೇಳ್ತಾನೆ ಅಂತ ಡಿವೋರ್ಸ್ ಕೊಟ್ಟಿದ್ಲಂತೆ. ಇನ್ನೊಬ್ಬಳು, ಮನೆಗೆ ಬಂದಾಗೆಲ್ಲಾ ಸಿಂಕಲ್ಲಿ ಪಾತ್ರೆ ಹಾಗೇ ಇರುತ್ತೆ ಅಂತ ಸಿಟ್ಕೊಂಡು ಗಂಡನ ಮೇಲೆ ಡಿವೋರ್ಸ್ ಕೇಸ್ ಹಾಕಿದ್ಲಂತೆ'.

'ನಾನಂತೂ ಸಿನ್ಸಿಯರ್‍ರಾಗಿ ಪಾತ್ರೆ ತೊಳೆದಿರ್ತೀನಿ ಬಿಡು. ಅದಿರ್ಲಿ, ಅರಬ್ ಮಧುಮಗನೊಬ್ಬ ಹುಡುಗಿಗೆ ಸಿಕ್ಕಾಪಟ್ಟೆ ಮೇಕಪ್ ಮಾಡಿ ನನಗೆ ಮೋಸ ಮಾಡಿದ್ಲು ಅಂತ ಡಿವೋರ್ಸ್ ಕೊಟ್ಟಿದ್ನಂತೆ. ನಾನೂ ಹೀಗೇ ಅಲ್ವಾ ಮಂಗ ಆಗಿದ್ದು?'

'ಸಾಕು ಸುಮ್ನಿರ್ರಿ, ನೀವೇನ್ ಹೊಳೆದು-ಹೋಗ್ತಿದ್ರಾ? ತೈವಾನಿನ ಹೆಣ್ಣುಮಗಳೊಬ್ಳು ಗಂಡ ತನ್ ಮೆಸೇಜ್‌ಗೆ ರಿಪ್ಲೈ ಮಾಡ್ಲಿಲ್ಲ ಅಂತ ಡಿವೋರ್ಸ್ ಕೊಟ್ಟದಾಳೆ. ನಾನು ಹಾಗ್ ಮಾಡಿದೀನಾ? ಗಂಡ ಮನೆ ತುಂಬಾ ಆ್ಯಂಟಿಕ್ ಪೀಸ್ ತಂದಿಟ್ಕೊಂಡಿದಾನೆ ಅಂತ ಒಬ್ಬಳು ಡಿವೋರ್ಸ್ ಕೊಟ್ಟಿದ್ಲಂತೆ. ಡೊನಾಲ್ಡ್ ಟ್ರಂಪ್‌ಗೆ ತನ್ನ ಗಂಡ ವೋಟು ಹಾಕ್ದ ಅಂತ ಗೈಲ್ ಅನ್ನೋಳು ಡಿವೋರ್ಸ್ ಕೊಟ್ಟಿದ್ದು ಗೊತ್ತಾ?'

'ಹೌದಾ? ಆದ್ರೂ ನೀನು ಹೇಳಿದೋರಿಗೇ ವೋಟ್ ಹಾಕೋಕೆ ಹೋದೆ, ಎಣ್ಣೆ ಮೇಲಿದ್ನಲ್ಲ, ಸ್ವಲ್ಪ ಕೈ ಅಲ್ಲಾಡಿಬಿಟ್ಟು ಅಂತ ಹೇಳಿ ಬಚಾವಾಗಬಹುದಿತ್ತು ಅಲ್ಲವೇ? ಇದೆಲ್ಲಾ ಕೇಳ್ತಿದೀಯಲ್ಲ, ನೀನೂ ಏನಾದ್ರೂ ಡಿವೋರ್ಸ್?'

'ಅಯ್ಯೋ ನಿಮಗೆ ಡಿವೋರ್ಸ್ ಕೊಟ್ಟು ಏನ್ ಪ್ರಯೋಜನ? ಆಸ್ತಿ ನನ್ ಹೆಸರಲ್ಲೇ ಇದೆ. ಹಂಗಾಗಿ ಪರಿಹಾರನೂ ಇಲ್ಲ, ನೀವು ಸ್ಟಾರೇನೂ ಅಲ್ಲ ದಿರೋದ್ರಿಂದ ಪ್ರಚಾರನೂ ಇಲ್ಲ. ವೇಸ್ಟ್ ಬಾಡಿ' ನಕ್ಕರು ಪದ್ದಮ್ಮ, ಪರ್ಮೇಶಿ ಮುಖ ಹಿಂಡಿದ.

ದಿನದ ಟ್ವೀಟ್

ವಿಮಾನ ಪ್ರಯಾಣ ಹೊರೆಯಾಗದಿರಲಿ



ಈ ಸಮಸ್ಯೆಯನ್ನು ಪರಿಹರಿಸಲು ಮುಂದಾಗಿರುವುದು ಖುಷಿ ತಂದಿದೆ. ದೆಹಲಿ- ಬೆಂಗಳೂರು ಮಾರ್ಗದ ಒಂದು ಬದಿಯ ವಿಮಾನ ಪ್ರಯಾಣಕ್ಕೆ ₹ 17 ಸಾವಿರ ಪಾವತಿಸಿದ್ದೇನೆ... ಹಲವು ನೆರೆಹೊರೆಯ ರಾಷ್ಟ್ರಗಳಿಗೆ ವಿಮಾನದಲ್ಲಿ ಪ್ರಯಾಣಿಸಲು ಭರಿಸುವುದಕ್ಕಿಂತಲೂ ಹೆಚ್ಚಿನ ದರ ಇದು. ಗಗನಮುಖಿಯಾಗುತ್ತಿರುವ ಸ್ವದೇಶಿ ವಿಮಾನ ಪ್ರಯಾಣ ದರ ಕಡಿತದ ಬೇಡಿಕೆಯನ್ನು ಪರಿಶೀಲಿಸುವುದಾಗಿ ನೂತನ ನಾಗರಿಕ ವಿಮಾನಯಾನ ಸಚಿವ ರಾಮ್ಮೋಹನ್ ನಾಯ್ಡು ಭರವಸೆ ನೀಡಿದ್ದಾರೆ.

ನಬಿಲಾ ಜಮಾಲ್, ಪತ್ರಕರ್ತೆ

ಕಿಡಿನುಡಿ



ಫೇಕ್ ಖಾತೆಯನ್ನು ಮಾಡಿಕೊಂಡು, ಆನ್‌ಲೈನ್‌ನಲ್ಲಿ ಯಾರದ್ದೋ ಪೋಸ್ಟ್‌ನಲ್ಲಿನ ವಿಚಾರ ತಮಗೆ ಇಷ್ಟವಾಗಲಿಲ್ಲ ಎಂಬ ಕಾರಣಕ್ಕೆ ಕೆಟ್ಟಪದ ಬಳಸಿ ಪ್ರತಿಕ್ರಿಯಿಸುವುದು, ಕೆಟ್ಟದಾಗಿ ಸಂದೇಶ ಕಳಿಸುವುದನ್ನು ತಡೆಯುವ ದಿಸೆಯಲ್ಲಿ ಸರ್ಕಾರ ಗಟ್ಟಿಯಾದ ಕ್ರಮ ಕೈಗೊಳ್ಳಬೇಕು.

ಅರುಣ್ ಜಾವಗಲ್, ಕನ್ನಡಪರ ಕಾರ್ಯಕರ್ತ

25 ವರ್ಷಗಳ ಹಿಂದೆ

ಸೋಮವಾರ, 14-6-1999

• ಉತ್ತರ ಕನ್ನಡ ಪ್ರವಾಹ ಇಳಿಮುಖ

ಕಾರವಾರ, ಜೂನ್ 13– ಉತ್ತರ ಕನ್ನಡದ ಕರಾವಳಿಯಲ್ಲಿ ಸುರಿದ ಭಾರಿ ಮಳೆಯಿಂದಾಗಿ ಉಕ್ಕಿಹರಿದ ಉಪನದಿಗಳು, ಹಳ್ಳಗಳ ಪ್ರವಾಹ ಇಳಿಮುಖವಾಗಿದ್ದು, ಜನಜೀವನ ಸಹಜ ಸ್ಥಿತಿಗೆ ಮರಳುತ್ತಿದೆ.

ಗಂಜಿ ಕೇಂದ್ರಗಳಿಂದ ನೆರೆ ಸಂತ್ರಸ್ತ ನಾಗರಿಕರು ತಮ್ಮ ಗುಡಿಸಲುಗಳಿಗೆ ಮರಳುತ್ತಿದ್ದು, ಇಂದು ಹೊನ್ನಾವರದ ನೆರೆಪೀಡಿತ ಗ್ರಾಮಗಳಿಗೆ ಜಿಲ್ಲಾ ಉಸ್ತುವಾರಿ ಸಚಿವ ಪಿ.ಎ. ಜೈವಂತ ಭೇಟಿ ನೀಡಿದ್ದರು.

ಪ್ರವಾಹಕ್ಕೆ ಸಿಕ್ಕಿ ಮರಣ ಹೊಂದಿದವರ ಕುಟುಂಬದವರಿಗೆ ತಲಾ ಒಂದು ಲಕ್ಷ ರೂ. ಪರಿಹಾರ ನೀಡಲು ಜಿಲ್ಲಾ ಆಡಳಿತವು ಸರ್ಕಾರಕ್ಕೆ ಶಿಫಾರಸು ಮಾಡಲಿದೆ ಎಂದು ತಿಳಿದುಬಂದಿದ್ದು, ಜಿಲ್ಲಾ ಉಸ್ತುವಾರಿ ಸಚಿವರು ಈ ಸಂಬಂಧ ಆಡಳಿತಕ್ಕೆ ನಿರ್ದೇಶನ ನೀಡಿದ್ದಾರೆಂದು ವರದಿಯಾಗಿದೆ.

• ಕಾರ್ಗಿಲ್: ಪಾಕ್ ಷೆಲ್ ದಾಳಿ ಪ್ರಧಾನಿ ಪಾರು

ಕಾರ್ಗಿಲ್, ಜೂನ್ 13 (ಪಿಟಿಐ)– ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅವರು ಪಾಕಿಸ್ತಾನಿ ಪಡೆಗಳು ಇಂದು ನಡೆಸಿದ ಷೆಲ್ ದಾಳಿಯಿಂದ ಸ್ವಲ್ಪದರಲ್ಲಿ ಪಾರಾದರು. ಇದರಿಂದಾಗಿ ಅವರ ಡ್ರಾಸ್ ಭೇಟಿ ರದ್ದಾಯಿತು.

ಕಾರ್ಗಿಲ್ ಪ್ರದೇಶದಲ್ಲಿ ಪಾಕಿಸ್ತಾನ ಬೆಂಬಲಿತ ಅತಿಕ್ರಮಣಕಾರರ ವಿರುದ್ಧ ನಡೆಯುತ್ತಿರುವ ಮಿಲಿಟರಿ ಕಾರ್ಯಾಚರಣೆಯನ್ನು ವೀಕ್ಷಿಸಲು ಪ್ರಧಾನಿ ಆಗಮಿಸಿದಾಗ ಈ ದಾಳಿ ನಡೆಯಿತು. ವಾಜಪೇಯಿ ಅವರು ಯೋಧರನ್ನು ಉದ್ದೇಶಿಸಿ ಭಾಷಣ ಮಾಡಬೇಕಿದ್ದ ಬಾರ್ಡ್ ವಿಭಾಗಾಧಿಕಾರಿ ಕಚೇರಿ ಈ ಷೆಲ್ ದಾಳಿಯಲ್ಲಿ ನಾಶವಾಯಿತು.

50 ವರ್ಷಗಳ ಹಿಂದೆ

ಶುಕ್ರವಾರ, 14-6-1974

• ಬಳ್ಳಾರಿ–ಹೊಸಪೇಟೆ ಪ್ರದೇಶದಲ್ಲಿ ಕಬ್ಬಿಣ ಅದಿರು ನಿಕ್ಷೇಪ ವೃದ್ಧಿ ಯೋಜನೆ ಬಗ್ಗೆ ಸಮಿತಿ ನೇಮಕ

ನವದೆಹಲಿ, ಜೂನ್ 13– ಕರ್ನಾಟಕದ ಬಳ್ಳಾರಿ–ಹೊಸಪೇಟೆ ಪ್ರದೇಶದಲ್ಲಿರುವ ಕಬ್ಬಿಣದ ಅದಿರು ನಿಕ್ಷೇಪದ ಅಭಿವೃದ್ಧಿ ಯೋಜನೆ ಬಗ್ಗೆ ಅಧ್ಯಯನ ನಡೆಸಿ ಸಲಹೆ ನೀಡಲು ಕಬ್ಬಿಣ ಅದಿರು ಮಂಡಳಿ ಸಮಿತಿಯೊಂದನ್ನು ರಚಿಸಿದೆ.

ನಿಕ್ಷೇಪವನ್ನು ಹೊರತೆಗೆಯಲು ಕೈಗೊಳ್ಳುವ ನಾನಾ ವಿಧಾನಗಳಿಗೆ ಬೇಕಾಗುವ ಬಂಡವಾಳ ಹಾಗೂ ಆ ಪ್ರದೇಶದಲ್ಲಿ ಉದ್ಯೋಗ ನೀಡಿಕೆ ಅವಕಾಶವನ್ನು ಹೆಚ್ಚಿಸುವ ಅಗತ್ಯ– ಈ ಹಿನ್ನೆಲೆಯಲ್ಲಿ, ಸಮಿತಿಯು ಉತ್ಪಾದನೆ ಕುರಿತು ಯೋಜನೆಯನ್ನು ರೂಪಿಸಲಿದೆ.

• ಹರಿಜನ, ಗಿರಿಜನರ ರಕ್ಷಣೆಗೆ ರಾಜ್ಯದಲ್ಲಿ ಪ್ರತ್ಯೇಕ ಪೊಲೀಸ್ ಘಟಕ

ಬೆಂಗಳೂರು, ಜೂನ್ 13– ರಾಜ್ಯದಲ್ಲಿ ಹರಿಜನ, ಗಿರಿಜನರ ಹಕ್ಕುಬಾಧ್ಯತೆಗಳನ್ನು ರಕ್ಷಿಸಲು ಸರ್ಕಾರ ಪ್ರತ್ಯೇಕ ಪೊಲೀಸ್ ಘಟಕವೊಂದನ್ನು ಶೀಘ್ರದಲ್ಲಿಯೇ ಸ್ಥಾಪಿಸಲು ಪರಿಶೀಲಿಸುತ್ತಿದೆ.

ಸಮಾಜ ಕಲ್ಯಾಣ ಸಚಿವ ಎನ್. ರಾಚಯ್ಯ ಈ ವಿಷಯವನ್ನು ಸುದ್ದಿಗಾರರಿಗೆ ಪ್ರಕಟಿಸಿ, ಆ ಘಟಕವು ಪೊಲೀಸ್ ಸೂಪರಿಂಟೆಂಡೆಂಟ್ ಒಬ್ಬರನ್ನು ಮುಖ್ಯಾಧಿಕಾರಿಯನ್ನಾಗಿ ಪಡೆಯಲಿದೆ ಎಂದರು.

ಸಂಗತ

ಜೀವೋತ್ಪತ್ತಿಯ ಹಬ್ಬ, ಅಲ್ಲೂ ಇಲ್ಲೂ

ತೀವ್ರ ಪೈಪೋಟಿಯ ಯುಗದ ಇಂದಿನ ದಿನಗಳಲ್ಲಿ ಮಕ್ಕಳ ಮೇಲೆ ಪೋಷಕರು ಅತಿನಿರೀಕ್ಷೆಯ ಭಾರವನ್ನು ಹೇರುವುದು ಸರಿಯಲ್ಲ

• ಸತೀಶ್ ಜಿ.ಕೆ. ತೀರ್ಥಹಳ್ಳಿ

ಜೂನ್ ಮಾಸ ಅಡಿಯಿಡುತ್ತಿದ್ದಂತೆ ಶುರುವಾಗುವುದು ಮುಂಗಾರು. ಹದಮಳೆ ಹನಿಸುತ್ತಲೇ ಋತುಮಾನಗಳ ಚಲನೆಯ ರುಜುವಾಗಿ ಪ್ರಕೃತಿಯಲ್ಲೊಂದು ಗುರುತರ ಸ್ಥಿತ್ಯಂತರ. ಅಲ್ಲಿ ಯಾವುದೋ ಜೀವಜಂತುವಿಗೆ ಬಿಲದೊಳಗೆ ಮೈಮುದುಡಿ ಬೆಚ್ಚಗೆ ಅವಿತುಕೊಳ್ಳಲು ಅವಸರ, ಮತ್ತ್ಯಾವುದೋ ಜೀವಕ್ಕೆ ಗೂಡಿನಿಂದ ಮೈಮುರಿದು ಹೊರಬರುವ ಕಾತರ, ವರ್ಷವಿಡೀ ಕಾಣೆಯಾಗಿದ್ದ ಬೇಲಿಸಾಲಿನ ಡೇಲಿಯ ಗಡ್ಡೆಗಳಿಗೆ ಮತ್ತೆ ಜೀವ ತಳೆಯುವ ಸಡಗರ, ಬಯಲಲ್ಲಿ ಅನಾಥವಾಗಿ ಬಿದ್ದಿದ್ದ ಅಸಂಖ್ಯ ತತ್ತಿಗಳಿಗೂ ಬೀಜಗಳಿಗೂ ಜೀವಾಂಕುರದ ಹಂಬಲ... ಹೀಗೆ ಮುಂಗಾರಿಗೆ ಜೀವೋತ್ಪತ್ತಿಯ ಹಬ್ಬ.

ಮಳೆ ಎಂಬ ಪ್ರಕೃತಿಯ ಜೀವಂತ ಕಾವ್ಯದ ಕಾರಣವೇ ರಮಣೀಯ. ಮೈತುಂಬಿದ ಮುಗಿಲು ಬಾಗಿ ತುಂತುರು ನೆಲ ತಾಕುವ ಹೊತ್ತಿಗೆ ರೈತಾಪಿ ಮೈಮನಸ್ಸುಗಳಲ್ಲಿ ಅಕ್ಷರಶಃ ವಿದ್ಯುತ್‌ಸಂಚಾರ. ಮಣ್ಣಿನ ಘಮಲು ಹಾಯುವ ಕನಸಿನ ಹಾದಿಯಲ್ಲಿ ಹಸಿರು-ಪೈರು ಕಂಗೊಳಿಸುವಂತೆ ಕಣ್ಣಂಚಲ್ಲಿ ತೇವ. ಹದಗೊಂಡ ನೆಲದಲ್ಲಿ ಊರುವ ಭರವಸೆಯ ಬೀಜಗಳು ಚಿಗುರೊಡೆಯಲು ತವಕಿಸುವ ಹೊತ್ತಿಗೆ ಆಗೆಲ್ಲಾ ನೇಗಿಲು, ಕಂಬಳಿಕೊಪ್ಪೆಗಳು, ಜೋಡೆತ್ತುಗಳೊಟ್ಟಿಗೆ ಗದ್ದೆಗಿಳಿಯುತ್ತಿದ್ದರೆ ಇದೀಗ ಯಂತ್ರಗಳ ಸರದಿ.

ಮುಂಗಾರು ಎಂದರೆ ಪ್ರಕೃತಿಗೆ ತನ್ನ ರಮಣೀಯತೆಗೆ ಮರಳುವ ಸಡಗರ ಮಾತ್ರವಲ್ಲ. ರಜೆಯ ಮೋಜಿನಲ್ಲಿ ಮಿಂದೇಳುವ ಎಳೆಯ ಮನಸುಗಳಿಗೂ ಪಾಟಿಚೀಲದೊಟ್ಟಿಗೆ ಶಾಲೆಯ ಕಡೆಗೆ ಹೊರಳುವ, ಮೆಲ್ಲಗೆ ಅರಳುವ ಸಂಭ್ರಮ. ವರ್ಷದ ಕಾಯುವಿಕೆಯ ಕೊನೆಗೆ ಕೂಡಿ ಬರುವ ರಜಾಕಾಲದಲ್ಲಿ ಎಳೆಯ ಮನಸುಗಳೆದುರು ತೆರೆದುಕೊಳ್ಳುವ ಲೋಕಾನುಭವಕ್ಕೆ ದೀಪದಾರಿಯ ಮೌಲ್ಯವಿದೆ. ಮಕ್ಕಳು ವರ್ಷದ ಒತ್ತಡವನ್ನೆಲ್ಲಾ ಕಳಚಿಕೊಂಡು ಮುಕ್ತರಾಗುವ, ಆಡಿಕುಣಿದು, ಹಿಗ್ಗಿ ಹಗುರಾಗುವ ಕಾಲವದು. ಹಿರಿಯರ ಅನುಭವದ ಹೆಜ್ಜೆಗಳಲ್ಲಿ ಮಗು ಹೆಕ್ಕಿಕೊಳ್ಳುವ ಒಲವು, ನಲಿವು, ಅರಿವಿನ ತುಣುಕುಗಳೇ ಅವರ ನಾಳೆಗಳ ಬದುಕಿನಾಸರೆ. ಕಂಡುಂಡ ರಜಾದಿನಗಳ ರಸಾನುಭೂತಿಯು ತರಗತಿಯೊಳಗಿನ ಔಪಚಾರಿಕ ಕಲಿಕೆಯಲ್ಲಿ ಕಲೆತು ಮಗುವು ಸರಸರನೆ ಅರಳಲು ಸಾಧ್ಯಮಾಡುತ್ತದೆ.

ಬಯಲಿನ ಬಾಲ್ಯದ ತೆರೆದ ಬೇಲಿಯೊಳಗಿನ ಆಟ-ಊಟ, ಮಾತು-ಕತೆ, ಪ್ರವಾಸ, ಹಬ್ಬ-ಜಾತ್ರೆಗಳ ಹಿತಾನುಭವದಲ್ಲಿ ಮಕ್ಕಳು ಬದುಕಿಗೆ ಬೇಕಾದ ಅಮೂಲ್ಯ ಮೌಲ್ಯಗಳನ್ನು ಹೆಕ್ಕಿಕೊಳ್ಳುತ್ತವೆ. ಪುಸ್ತಕದ ಆಚೆಗಿನ ವಾಸ್ತವ, ಸಂಬಂಧಗಳ ಮಹತ್ವ, ಹಿರಿಯರ ಹಾದಿ, ಹಸಿರಿನ ಸಾಂಗತ್ಯ, ಮಣ್ಣಿನ ಸಂಪರ್ಕ, ಹಬ್ಬ, ಜಾತ್ರೆ, ತೇರು, ಕಲೆ-ಸಂಸ್ಕೃತಿ, ಉದಾತ್ತತೆ ಹೀಗೆ ಜಗತ್ತಿನ ಯಾವ ವ್ಯಕ್ತಿ, ಶಾಲೆ, ಭಾಷೆ-ಬರವಣಿಗೆಗಳಿಂದಲೂ ನೀಡಲಾಗದ ಅರಿವನ್ನು ಮಕ್ಕಳು ತಮ್ಮ ಸ್ವಾನುಭವದಲ್ಲಿ ಕಂಡುಕೊಳ್ಳುತ್ತಾ ಸಹಜವಾಗಿ ಕಲಿಯುತ್ತಾರೆ, ಬಲಿಯುತ್ತಾರೆ ಮತ್ತು ಬೆಳಗುತ್ತಾರೆ.

ಮುಂಗಾರಿನಲ್ಲಿ ಬೀಜವೂ ತನ್ನ ನಿಶ್ಚೇತನ ಕಾಲವಾಗಿರುವ ರಜಾ ಅವಧಿಯನ್ನು ಕಳೆದು ಭೂಮಿಗೆ ಬಿದ್ದು ಮೊದಲ ಮಳೆಯೊಟ್ಟಿಗೆ ಮೊಳೆಯಲು ಮೊದಲಾಗುತ್ತದೆ. ಅವರೆಗೆ ತನ್ನೆಲ್ಲ ಸತ್ವವನ್ನೂ ಸಾಮರ್ಥ್ಯವನ್ನೂ ಪುಟ್ಟ ಕೋಶಭಿತ್ತಿಯಲ್ಲಿ ಬಚ್ಚಿಟ್ಟು ಸುಪ್ತಾವಸ್ಥೆಯಲ್ಲಿ ಕಾಲನೂಕುವ ಬೀಜವು ಕಾವು ಕಟ್ಟಿಕೊಂಡು ಕಾದಿರುತ್ತದೆ. ನೆಲದೊಳಗೆ ಕೂತು, ಹದ ಮಳೆಯೊಂದಿಗೆ ಬೆರೆತು ಬೀಜವು ಹೆಮ್ಮರವಾಗುವ ತವಕದಲ್ಲಿ ಮೊದಲ ಹಂತಕ್ಕೆ ಮೊಳಕೆಯೊಡೆಯುತ್ತದೆ. ನಂತರ ಮಣ್ಣು, ನೀರಿನಲ್ಲಿನ ಅಗತ್ಯ ಪೋಷಕತ್ವವನ್ನು ಹೀರುತ್ತಾ ಚಿಗುರಾಗುತ್ತದೆ, ಗಾಳಿಯೊಂದಿಗೆ ಬಲಿಯುತ್ತದೆ. ವಿಶಾಲ ಜಗತ್ತಿನಲ್ಲಿ ಬೆಳೆಯುವ ಮಗುವೂ ಹಾಗೆಯೇ...

ಅತ್ತ ರೈತ ತನ್ನ ಹದಗೊಂಡ ನೆಲದಲ್ಲಿ ನೇಗಿಲೂಡುವ, ಬೀಜ ಬಿತ್ತುವ ಕಾತರದಲ್ಲಿದ್ದರೆ, ಇತ್ತ ಶಾಲೆಯೆಡೆಗೆ ಹೆಜ್ಜೆ ಹಾಕುವ ಹೊತ್ತಿನಲ್ಲಿ ಮಗುವಿನ ಮನದೊಳಗೆ ಸಣ್ಣತಳಮಳ. ಪೋಷಕರು ಮತ್ತು ಶಾಲಾ ವ್ಯವಸ್ಥೆಯ ನಿರೀಕ್ಷೆಗೆ ಒಡ್ಡಿಕೊಳ್ಳಬೇಕಾದ ಅನಿವಾರ್ಯದಲ್ಲಿ ಮಕ್ಕಳು ಅಪರಿಮಿತ ಒತ್ತಡ, ತಳಮಳದಲ್ಲಿ ಬೇಯುವುದಿದೆ. ಇವತ್ತಿನ ತೀವ್ರ ಪೈಪೋಟಿ ಯುಗದ ಕಾರಣದಿಂದ, ಪೋಷಕರು ಅತಿನಿರೀಕ್ಷೆಯ ಭಾರವನ್ನು ಹೇರದೆ, ಎಳೆಯ ಜೀವಗಳು ಮಾನಸಿಕವಾಗಿ ಕುಸಿಯದಂತೆ ಎಚ್ಚರ ವಹಿಸುವುದು ತುಂಬಾ ಅಗತ್ಯ. ಬರೀ ನೀಟ್, ಜೆಇಇ, ಸಿಇಟಿ, ಅಂಕ, ಮೆರಿಟ್ಟು, ರ್‍ಯಾಂಕು ಗಳಿಕೆಯ ಹಳಹಳಿಕೆಯಲ್ಲಿ ಅನರ್ಥಗಳನ್ನು ತುರುಕಿ ಹಸಿ ಮನಸುಗಳು ನಲುಗದಂತೆ ಎಚ್ಚರ ವಹಿಸಬೇಕಾದದ್ದು ವ್ಯವಸ್ಥೆಯ ಜವಾಬ್ದಾರಿಯೂ ಹೌದು. ಮಕ್ಕಳು ತಮಗಿರುವ ಅವಕಾಶದಲ್ಲಿ ಬುದ್ಧಿಯೊಂದಿಗೆ ಭಾವಪರಿಧಿಯನ್ನು ಹಿಗ್ಗಿಸಬಲ್ಲ ಕ್ರೀಡೆ, ಸಾಹಿತ್ಯ, ಸಂಗೀತ, ಸಹಬಾಳ್ವೆ, ಒತ್ತಡ ನಿವಾರಣಾ ಕೌಶಲ, ನಾಯಕತ್ವ ಬೆಳವಣಿಗೆಯಂತಹ ವಿಭಿನ್ನವಾದ ಬಹುಮುಖಿ ಚಟುವಟಿಕೆಗಳಲ್ಲಿ ಭಾಗಿಯಾಗುವಂತೆ ಆಗಬೇಕು. ಆಗೆಲ್ಲಾ ಹೆತ್ತವರು, ಗುರುಗಳ ಮಾರ್ಗದರ್ಶನ, ಪ್ರೇರಣೆಯು ಹದಮಳೆಯ ಹಾಗೆ ಹಿತವಾಗಿ ಹನಿಯಬೇಕು.



ಯಾಂತ್ರಿಕತೆ ಮತ್ತು ಪ್ರಕೃತಿಯ ಮೇಲಿನ ಅತಿಯಾದ ಹಸ್ತಕ್ಷೇಪಗಳನ್ನು ನಿಯಂತ್ರಿಸಿಕೊಂಡು ಸುಸ್ಥಿರವೂ ಸರಳವೂ ನಿಸ್ವಾರ್ಥವೂ ಆದ ಜೀವನ್ಮುಖಿ ಕೃಷಿಬದುಕಿಗೆ ರೈತರು ಹಂಬಲಿಸಬೇಕು. ಹಾಗಾಗದಿದ್ದಲ್ಲಿ ಲಾಭದಾಸೆಗೆ ಮಿತಿಮೀರಿ ರಾಸಾಯನಿಕಗಳನ್ನು ತಂದು ಸುರಿದು ಸಮೃದ್ಧ ಮತ್ತು ಚೈತನ್ಯಯುತ ನೆಲವನ್ನು ನಿರ್ಜೀವಗೊಳಿಸುತ್ತಿರುವ ಆಧುನಿಕ ಕೃಷಿವಿಧಾನದ ಹಾಗೆಯೇ ಶಿಕ್ಷಣ ವ್ಯವಸ್ಥೆಯೂ ಇವತ್ತಿನ ಕೃತಕ ಮತ್ತು ಯಾಂತ್ರಿಕ ಜಗತ್ತಿನ ಮುಂದುವರಿಕೆಗಷ್ಟೇ ಸಾಕ್ಷಿಯಾಗಬೇಕಾಗುತ್ತದೆ.

ಹಾಗಾಗದಿರಲಿ ಅಂತ ಬಯಸುವುದಾದರೆ, ಗದ್ದೆಯ ಕೃಷಿ ಮತ್ತು ಮಕ್ಕಳ ಕಲಿಕೆಗಳೆರಡೂ ಸಾಧ್ಯವಾದಷ್ಟು ಮಟ್ಟಿಗೆ ಸಾವಯವಗೊಳ್ಳಲಿ ಎಂಬುದೇ ಆಶಯ.

ವಾಚಕರ ವಾಣಿ

ಅಪರೂಪದ ಅರಣ್ಯದಲ್ಲಿ ಗಣಿಗಾರಿಕೆ ಸಲ್ಲ

ಬಳ್ಳಾರಿ ಜಿಲ್ಲೆಯ ಸಂಡೂರಿನ ದೇವದಾರಿ ಕಾಡಿನಲ್ಲಿ ಕಬ್ಬಿಣದ ಅದಿರಿನ ಗಣಿಗಾರಿಕೆ ನಡೆಸಲು ಕೇಂದ್ರ ಬೃಹತ್ ಕೈಗಾರಿಕೆ ಮತ್ತು ಉಕ್ಕು ಸಚಿವ ಎಚ್.ಡಿ.ಕುಮಾರಸ್ವಾಮಿ ಅವರು ಸಹಿ ಹಾಕಿದ ವರದಿ (ಪ್ರ.ವಾ., ಜೂನ್ 13) ಓದಿ ತುಂಬಾ ಬೇಸರವಾಯಿತು. ಏಕೆಂದರೆ ಸಂಡೂರಿನ ಅರಣ್ಯ ನಮ್ಮ ರಾಜ್ಯದಲ್ಲಿ ತುಂಬಾ ಅಪರೂಪವಾದ ಅರಣ್ಯಗಳಲ್ಲಿ ಒಂದು. ಇಲ್ಲಿಯ ವನ್ಯಜೀವಿಗಳ ವೈವಿಧ್ಯ ಮತ್ತು ಕಣ್ಮನ ಸೆಳೆಯುವ ಗುಡ್ಡಬೆಟ್ಟಗಳು ಬಯಲುಸೀಮೆಯಲ್ಲಿ ಬೇರೆ ಎಲ್ಲೂ ಕಂಡುಬರುವುದಿಲ್ಲ. ಈ ಕಾರಣದಿಂದಾಗಿಯೇ ಮಹಾತ್ಮ ಗಾಂಧಿ ಸಹ ಸಂಡೂರಿನ ಕಾಡು ಪ್ರದೇಶವನ್ನು ಹೆಮ್ಮೆಯಿಂದ ಕೊಂಡಾಡಿದ್ದರು.

ಈಗಾಗಲೇ ಇಲ್ಲಿ ವಿಪರೀತ ಗಣಿಗಾರಿಕೆಯಿಂದ ಆದ ಅಪಾರ ಪರಿಸರ ಹಾನಿಯನ್ನು ಗಮನಿಸಿ ಕೇಂದ್ರ ಸರ್ಕಾರವೇ ಇಲ್ಲಿ ಅರಣ್ಯದ ಪುನರ್ ನಿರ್ಮಾಣ ಯೋಜನೆಯನ್ನು ಕಾರ್ಯಗತಗೊಳಿಸುತ್ತಿದೆ. ಅದು ಕೂಡ ಸರಿಯಾಗಿ ಆಗುತ್ತಿಲ್ಲ. ಮತ್ತೆ ಇಲ್ಲಿ ಗಣಿಗಾರಿಕೆ ನಡೆಸಿದರೆ ಉಂಟಾಗುವ ಪರಿಸರ ನಾಶ ಮತ್ತು ಅದರಿಂದ ಉಂಟಾಗುವ ಜನಾರೋಗ್ಯ ಹಾನಿ ಕುರಿತ ಅಂಶಗಳನ್ನು ಗಮನಿಸಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಇಲ್ಲಿ ಗಣಿಗಾರಿಕೆಗೆ ನೀಡಿರುವ ಅನುಮತಿಯನ್ನು ಹಿಂತೆಗೆದುಕೊಳ್ಳಬೇಕು.

ಹುರುಕಡ್ಲಿ ಶಿವಕುಮಾರ, ಬಾಚಿಗೊಂಡನಹಳ್ಳಿ, ಹಗರಿಬೊಮ್ಮನಹಳ್ಳಿ

ಮಣ್ಣಿನ ಕಥೆ- ವ್ಯಥೆ

'ಮಣ್ಣಿನ ಮಗ'ನ ಮಗ
ಸಹಿ ಹಾಕಿದ ಕಡತ
ಮಣ್ಣಿನಿಂದ ಅದಿರು
ಸೆಳೆಯುವುದು!
ಬೇಡ ಅಯ್ಯಾ, ಮಣ್ಣಿನ
ಉಸಿರು ಕಳೆಯುವುದು,
ಮಣ್ಣಿನಲ್ಲಿ ನಮ್ಮ ಕಾರ್ಯ
ಹಸಿರು ಬೆಳೆಯುವುದು.

ಎಚ್.ಆನಂದರಾಮ ಶಾಸ್ತ್ರೀ
ಬೆಂಗಳೂರು

ಅಭಿಮಾನಿಗಳ ಹುಚ್ಚಾಟಕ್ಕೆ ಬೀಳಲಿ ಕಡಿವಾಣ

ಕನ್ನಡದ ನಾಯಕನಟರೊಬ್ಬರ ವೈಯಕ್ತಿಕ ಜೀವನಕ್ಕೆ ಸಂಬಂಧಪಟ್ಟ ವಿಚಾರಕ್ಕೆ ಜಾಲತಾಣದಲ್ಲಿ ಹಾಕಿದ ಕಾಮೆಂಟೊಂದು, ಒಬ್ಬ ವ್ಯಕ್ತಿಯ ಬರ್ಬರ ಕೊಲೆಯಲ್ಲಿ ಅಂತ್ಯವಾಗಿದೆ. ಇದರಲ್ಲಿ ಸ್ವತಃ ನಟನೇ ಭಾಗಿಯಾಗಿರುವ ಆರೋಪ ಕೇಳಿಬಂದಿರುವುದು ಬಹಳ ಆತಂಕಕಾರಿ. ದಕ್ಷಿಣ ಭಾರತದ ಮೂರು ರಾಜ್ಯಗಳಲ್ಲಿ ನಟರ ಅಭಿಮಾನಿಗಳ ಹುಚ್ಚಾಟ, ಗಲಾಟೆ ಆಗಾಗ ವರದಿಯಾಗುತ್ತಲೇ ಇರುತ್ತವೆ. ಸಿನಿಮಾ ಬಿಡುಗಡೆ ಸಂದರ್ಭ ರಸ್ತೆಯಲ್ಲಿ ಕಟೌಟ್ ಹೊತ್ತು ಸಾಗುವಾಗ ಟ್ರಾಫಿಕ್ ಜಾಮ್ ಆಗುವುದು ಮಾಮೂಲು. ತಮ್ಮ ನಟನಿಗೆ ಜೈಕಾರ ಹಾಕುತ್ತಾ, ಇನ್ನೊಬ್ಬ ನಟನಿಗೆ ಧಿಕ್ಕಾರ ಕೂಗುತ್ತಾ ರಸ್ತೆಯಲ್ಲಿ ಕೇಕೆ ಹಾಕುತ್ತಾ ಸಾಗುವುದರಿಂದ ಜನರಿಗೆ ತೊಂದರೆ ಆಗುತ್ತಲೇ ಇರುತ್ತದೆ.

ಹಿಂದೊಮ್ಮೆ ನಮ್ಮ ರಾಜ್ಯದಲ್ಲಿ ತೆಲುಗು ನಟರಿಬ್ಬರ ಅಭಿಮಾನಿಗಳ ಹುಚ್ಚಾಟಕ್ಕೆ ಒಬ್ಬ ವ್ಯಕ್ತಿಯ ಕೊಲೆ ಆಗಿತ್ತು. ಇನ್ನು ನಟನ ಕಟೌಟ್ ಹೊತ್ತು ಸಾಗುವಾಗ ವಿದ್ಯುತ್ ತಂತಿಗಳಿಗೆ ಕಟೌಟ್ ಸ್ಪರ್ಶಿಸಿ ಕೆಲವರು ಸಾವನ್ನಪ್ಪಿದ ದಾರುಣ ಘಟನೆಯೂ ನಡೆದಿದೆ. ತಮ್ಮ 'ನೇಮ್, ಫೇಮ್, ಮನಿ'ಗಾಗಿ ಅಭಿಮಾನಿ ಸಂಘ ಸ್ಥಾಪನೆಗೆ ಅನುಮತಿ, ಅವಕಾಶ ನೀಡುವ ನಾಯಕನಟರು ಇದರ ನೈತಿಕ ಜವಾಬ್ದಾರಿಯನ್ನು ಹೊರಬೇಕು. ಕನ್ನಡದ ಹಿರಿಯ ನಟ ಅನಂತನಾಗ್ ಅವರು ನಾಯಕನಟನಾಗಿ ಜನಪ್ರಿಯರಾಗಿದ್ದಾಗ ಕೆಲವರು ಅಭಿಮಾನಿ ಸಂಘ ಸ್ಥಾಪಿಸಲು, ಥಿಯೇಟರ್ ಮುಂದೆ ಕಟೌಟ್ ಅಳವಡಿಸಲು ಮುಂದಾದಾಗ ಅನಂತನಾಗ್ ಅದಕ್ಕೆ ಅವಕಾಶ ನೀಡಲಿಲ್ಲ. ಈ ಪ್ರಬುದ್ಧತೆ ಈಗಿನ ನಾಯಕನಟರಿಗೆ ಮಾದರಿಯಾಗಲಿ. ನಟರ ಅಭಿಮಾನಿ ಸಂಘಗಳ ಅತಿರೇಕಗಳಿಗೆ ಸರ್ಕಾರ ಲಗಾಮು ಹಾಕಬೇಕು. ಶಾಂತಿ, ಸುವ್ಯವಸ್ಥೆ ಕಾಪಾಡಲು ಇದು ಅಗತ್ಯ.

ಲಕ್ಷ್ಮೀಕಾಂತ್ ಕೊಟ್ಟಾರ ಚೌಕಿ, ಮಂಗಳೂರು

ಎಂಜಿನಿಯರಿಂಗ್ ಶುಲ್ಕ ಹೆಚ್ಚಳ ಬೇಡ

ಎಂಜಿನಿಯರಿಂಗ್ ಸೇರಿದಂತೆ ವಿವಿಧ ವೃತ್ತಿಪರ ಕೋರ್ಸ್‌ಗಳ ಶುಲ್ಕವನ್ನು ಶೇ 15ರಷ್ಟು ಹೆಚ್ಚಿಸುವಂತೆ ಖಾಸಗಿ ವೃತ್ತಿಪರ ಕಾಲೇಜುಗಳ ಆಡಳಿತ ಮಂಡಳಿಯು ಸರ್ಕಾರವನ್ನು ಒತ್ತಾಯಿಸಿರುವುದು ಸರಿಯಲ್ಲ. ಈ ಕುರಿತಂತೆ ಅದು ಸರ್ಕಾರಕ್ಕೆ ಸಲ್ಲಿಸಿರುವ ಪ್ರಸ್ತಾವಕ್ಕೆ ಒಪ್ಪಿಗೆ ಸಿಕ್ಕಿದರೆ ಆಶ್ಚರ್ಯ ಪಡುವಂತಹುದೇನೂ ಇಲ್ಲ. ಏಕೆಂದರೆ ರಾಜ್ಯದ ಬಹುತೇಕ ಖಾಸಗಿ ಎಂಜಿನಿಯರಿಂಗ್ ಕಾಲೇಜುಗಳು ಪ್ರಮುಖ ರಾಜಕಾರಣಿಗಳ ಸ್ವತ್ತುಗಳಾಗಿವೆ. ಹೀಗಾಗಿ, ಎಂಜಿನಿಯರಿಂಗ್ ಶಿಕ್ಷಣ ಮತ್ತಷ್ಟು ತುಟ್ಟಿ ಆಗುವುದು ಖಚಿತ. ಸರ್ಕಾರಿ ಎಂಜಿನಿಯರಿಂಗ್ ಕಾಲೇಜುಗಳಲ್ಲಿ ಸೀಟು ಸಿಗದ ವಿದ್ಯಾರ್ಥಿಗಳು ಖಾಸಗಿ ಕಾಲೇಜುಗಳಲ್ಲಿ ಸೀಟು ಪಡೆಯಬೇಕಾಗುತ್ತದೆ. ಸರ್ಕಾರಿ ಸೀಟುಗಳನ್ನು ಪಡೆದಾಗ ಆಗುವ ವೆಚ್ಚಕ್ಕೆ ಹೋಲಿಸಿದರೆ ಖಾಸಗಿ ಕಾಲೇಜುಗಳಲ್ಲಿ ವೆಚ್ಚ ಶೇ 50ರಷ್ಟು ಹೆಚ್ಚಾಗುತ್ತದೆ. ಆದರೆ, ಪುನಃ ಶೇ 15ರಷ್ಟು ಶುಲ್ಕ ಹೆಚ್ಚಳಕ್ಕೆ ಶಿಕ್ಷಣ ಸಂಸ್ಥೆಗಳು ಮುಂದಾಗಿರುವುದು ಎಂಜಿನಿಯರಿಂಗ್ ಕನಸು ಕಾಣುವ ಮಧ್ಯಮ ಮತ್ತು ಬಡ ವರ್ಗದವರಿಗೆ ಗಾಯದ ಮೇಲೆ ಬರೆ ಎಳೆದಂತೆ.

ವಿಜಯಕುಮಾರ್ ಎಚ್.ಕೆ., ರಾಯಚೂರು

ಆಟದಿಂದ ಮನಸ್ಸು ಅರಳಲಿ

'ಪಾಕಿಸ್ತಾನ ಕ್ರಿಕೆಟ್ ತಂಡದ ಜೊತೆ ಭಾರತ ತಂಡವು ಆಡಲೇಬಾರದು', 'ಎಲ್ಲಿಯವರೆಗೆ ಭಾರತ ಹೇಳಿದಂತೆ ಪಾಕಿಸ್ತಾನ ಕೇಳುವುದಿಲ್ಲವೋ ಅಲ್ಲಿಯವರೆಗೆ ಅವರ ಜೊತೆ ಆಟ ಆಡಬಾರದು'. 'ಟಿ20 ವಿಶ್ವಕಪ್ ಪಂದ್ಯದಲ್ಲಿ ಭಾರತ ತಂಡವು ಪಾಕಿಸ್ತಾನವನ್ನು ಹೀನಾಯವಾಗಿ ಸೋಲಿಸಬೇಕು'- ಈ ಹೇಳಿಕೆಗಳನ್ನು ವಿಧಾನಸಭೆ ಅಧ್ಯಕ್ಷ ಯು.ಟಿ.ಖಾದರ್ ಅವರು ನೀಡಿರುವುದು ವರದಿಯಾಗಿದೆ (ಪ್ರ.ವಾ., ಜೂನ್ 9). ಕ್ರಿಕೆಟ್ ಆಟವನ್ನು ಶುದ್ಧ ಕ್ರೀಡೆಯ ಪರಿಭಾಷೆಯಲ್ಲಿ ಯೋಚಿಸಿದಾಗ ಮೂರೂ ಹೇಳಿಕೆಗಳು ಅಪ್ರಸ್ತುತವಾಗಿ ಬಿಡುತ್ತವೆ.

ವ್ಯಕ್ತಿ-ವ್ಯಕ್ತಿಗಳು, ದೇಶ-ದೇಶಗಳ ನಡುವೆ ಉದ್ಭವಿಸಬಹುದಾದ ದ್ವೇಷವನ್ನು ತಗ್ಗಿಸುವ ಸಾಧನವೇನಾದರೂ ಇದ್ದರೆ ಅದು ಕ್ರೀಡೆ ಮಾತ್ರ. ಅದರಿಂದ ಭಾರತ, ಪಾಕಿಸ್ತಾನವನ್ನೂ ಒಳಗೊಂಡಂತೆ ಪ್ರಪಂಚದ ಎಲ್ಲ ದೇಶಗಳ ತಂಡಗಳ ಜೊತೆ ಎಲ್ಲ ಆಟಗಳನ್ನೂ ಆಡಬೇಕು. ಕ್ರೀಡಾಭಿಮಾನಿಗಳಾದ ನಾವು ಭಾರತ, ಪಾಕಿಸ್ತಾನದ ನಡುವಿನ ಕ್ರಿಕೆಟ್ ಪಂದ್ಯವನ್ನು ಸಮರದ ಪರಿಭಾಷೆಯಲ್ಲಿ ಯೋಚಿಸುವುದನ್ನು ಮತ್ತು ಆ ಪಂದ್ಯಗಳಿಗೆ ಅನಗತ್ಯ ಪ್ರಾಧಾನ್ಯ ನೀಡುವುದನ್ನು ಮೊದಲು ಬಿಡಬೇಕು. ಯಾವುದೇ ದೇಶ ಇನ್ನೊಂದು ದೇಶ ಹೇಳಿದಂತೆ ಕೇಳುವುದಿಲ್ಲ. ಅದನ್ನು ನಿರೀಕ್ಷಿಸುವುದೇ ಸರಿಯಲ್ಲ. ಸಮಬಲದ ಜಿದ್ದಾಜಿದ್ದಿನ ಸೆಣಸಾಟವೇ ಕ್ರೀಡೆಗೆ ಕಳೆ ತರುವುದು. ಕ್ರೀಡಾಭಿಮಾನಿಗಳಿಗೆ ಆಟ ಮುಖ್ಯವಾಗಬೇಕೇ ವಿನಾ ಆಟಗಾರರು ಪ್ರತಿನಿಧಿಸುವ ದೇಶ, ಧರ್ಮ, ವರ್ಣ, ಜಾತಿ, ಭಾಷೆ, ರಾಜ್ಯ ಮುಖ್ಯವಾಗಬಾರದು. ಈ ಯಾವ ಉಪಾದಿಗಳೂ ಇಲ್ಲದೆ ಆಟವನ್ನು ನೋಡಿದಾಗ ಮನಸ್ಸು ಅರಳುತ್ತದೆ, ಉಲ್ಲಸಿತಗೊಳ್ಳುತ್ತದೆ.

ಸಿ.ಚಿಕ್ಕತಿಮ್ಮಯ್ಯ ಹಂದನಕೆರೆ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.



ಸಿನಿ ಸಮ್ಮಾನದ 2ನೇ ಆವೃತ್ತಿಗೆ ದಿನಗಣನೆ



'ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ'ದ ಎರಡನೇ ಆವೃತ್ತಿಗೆ ಶುಭಕೋರಿದ ತೀರ್ಪುಗಾರರು ಹಾಗೂ ಪ್ರಾಯೋಜಕರು.

ಚಂದನವನದ ಚೆಂದದ ಘಮಲನ್ನು ಪಸರಿಸುವ 'ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ'ದ ಎರಡನೇ ಆವೃತ್ತಿಗೆ ದಿನಗಣನೆ ಆರಂಭವಾಗಿದೆ. ಕಳೆದ ವರ್ಷ ತನ್ನ 'ಅಮೃತ ಸಂಭ್ರಮ'ದ ಸಂದರ್ಭದಲ್ಲಿ 'ಪ್ರಜಾವಾಣಿ' ಪ್ರಾರಂಭಿಸಿದ ಈ 'ಸಿನಿ ಸಮ್ಮಾನ'ವೆಂಬ ಅರ್ಥಗರ್ಭಿತ, ವರ್ಣರಂಜಿತ ಕಾರ್ಯಕ್ರಮದ ಎರಡನೇ ಆವೃತ್ತಿ ಇದೇ 28ರಂದು ನಡೆಯಲಿದೆ.

ಕರ್ನಾಟಕದ ಶ್ರೀಮಂತ ಸಿನಿಮಾ ಪರಂಪರೆಯನ್ನು ಸಂಭ್ರಮಿಸುವ, ಬೆಸೆಯುವ ವೇದಿಕೆಯಾಗಿರುವ ಈ 'ಸಿನಿ ಸಮ್ಮಾನ'ದ ಎರಡನೇ ಆವೃತ್ತಿಯ ಕಾರ್ಯಕ್ರಮಕ್ಕೆ ಪೂರ್ವಭಾವಿಯಾಗಿ ಬುಧವಾರ (ಜೂನ್ 12) ಸಿನಿ ಸಮ್ಮಾನದ ಮುಖ್ಯ ತೀರ್ಪುಗಾರರು ಹಾಗೂ ತಾಂತ್ರಿಕ ತೀರ್ಪುಗಾರರ ಸಭೆ ನಡೆಯಿತು. ಈ ಕಾರ್ಯಕ್ರಮದ ಮುಖಾಂತರ ಎರಡನೇ ಆವೃತ್ತಿಗೆ ಅಧಿಕೃತ ಚಾಲನೆ ದೊರೆಯಿತು.

ನೆನಪುಗಳ ಮೆಲುಕು: ಆನ್‌ಲೈನ್ ಮೂಲಕವೇ ನಡೆದ ಎರಡನೇ ಆವೃತ್ತಿಯ ನಾಮನಿರ್ದೇಶಿತರ ಆಯ್ಕೆ ಪ್ರಕ್ರಿಯೆಯ ಬಳಿಕ ತೀರ್ಪುಗಾರರ ಮಂಡಳಿ ಇದೇ ಮೊದಲ ಬಾರಿ ಸಮ್ಮಿಲನಗೊಂಡಿತ್ತು. ಅವರಲ್ಲಿ ಹಲವರು ಮೊದಲ ಆವೃತ್ತಿಗೂ ತೀರ್ಪುಗಾರರಾಗಿದ್ದರು. ಅವರು ಹೊಸದಾಗಿ ಸೇರ್ಪಡೆಗೊಂಡ ತೀರ್ಪುಗಾರರ ಜೊತೆಗೂಡಿ 'ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ'ದ ಮೊದಲ ಆವೃತ್ತಿಯ ನೆನಪುಗಳನ್ನು ಮೆಲುಕು ಹಾಕಿದರು. ಇದಕ್ಕೆ ಪೂರಕವಾಗಿ ಮೂಡಿಬಂದ ಮೊದಲ ಆವೃತ್ತಿಯ ಸಮಾರಂಭದ ವಿಡಿಯೊ ತುಣುಕುಗಳಲ್ಲಿ ಅವರ ನೆನಪುಗಳಿಗೆ ದೃಶ್ಯಗಳು ಸಾಥ್ ನೀಡಿದವು. ಇವುಗಳನ್ನು ಆಸ್ವಾದಿಸುತ್ತಲೇ ಸಿನಿ ಸಮ್ಮಾನದ ಎರಡನೇ ಆವೃತ್ತಿಗೆ ಅವರೆಲ್ಲರೂ ಒಕ್ಕೊರಲಿನಿಂದ ಶುಭಕೋರಿದರು.

ಎರಡನೇ ಆವೃತ್ತಿಯ ಮುಖ್ಯ ತೀರ್ಪುಗಾರರಾದ ನಿರ್ದೇಶಕ ಟಿ.ಎಸ್.ನಾಗಾಭರಣ, ಸಂಗೀತ ನಿರ್ದೇಶಕ ವಿ.ಮನೋಹರ್, ನಿರ್ದೇಶಕಿ ಸುಮನ್ ಕಿತ್ತೂರು, ತಾಂತ್ರಿಕ ತೀರ್ಪುಗಾರರ ಮಂಡಳಿಯಲ್ಲಿರುವ ಕಲಾ ನಿರ್ದೇಶಕ ಶಶಿಧರ ಅಡಪ, ಸಿನಿಮಾ ವಿಮರ್ಶಕ ಗಂಗಾಧರ್ ಮೊದಲಿಯಾರ್, ಸಂಕಲನಕಾರ ಎಂ.ಎನ್.ಸ್ವಾಮಿ, ಸಿನಿಮಾ ವಿಮರ್ಶಕ ಎಸ್.ವಿಶ್ವನಾಥ್, ನಟಿ ಪೂಜಾ ಗಾಂಧಿ, ಚಿತ್ರ ಸಾಹಿತಿ–ನಿರ್ದೇಶಕ ವಿ.ನಾಗೇಂದ್ರ ಪ್ರಸಾದ್, ಸಾಹಿತಿ–ಸಿನಿಮಾ ವಿಮರ್ಶಕಿ ಪ್ರತಿಭಾ ನಂದಕುಮಾರ್, ಧ್ವನಿಗ್ರಹಣ ಪರಿಣಿತ ಜಾನ್ಸನ್, ಗಾಯಕಿ-ಸಂಗೀತ ನಿರ್ದೇಶಕಿ ಎಂ.ಡಿ.ಪಲ್ಲವಿ, ನಿರ್ದೇಶಕ ಜಯತೀರ್ಥ, ನಟ ಶಿವಧ್ವಜ್, ಸಾಹಿತಿ–ಸಿನಿಮಾ ವಿಮರ್ಶಕಿ ಸಂಧ್ಯಾರಾಣಿ, ಸಿನಿಮಾ ವಿಮರ್ಶಕಿ ಪ್ರೀತಿ ನಾಗರಾಜ್, ಸಿನಿಮಾ ವಿಮರ್ಶಕ ಹರೀಶ್ ಮಲ್ಯ ಕಾರ್ಯಕ್ರಮದಲ್ಲಿಭಾಗವಹಿಸಿದರು.

'ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ'ದ ಮುಖ್ಯ ಪ್ರಾಯೋಜಕರಾದ ಕಾಸಾಗ್ರ್ಯಾಂಡ್‌ನ ಮಾರ್ಕೆಟಿಂಗ್ ವಿಭಾಗದ ಗ್ರೂಪ್ ಮ್ಯಾನೇಜರ್ ಶೇಖ್ ಜಾಕೀರ್ ಹುಸೈನ್ ಹಾಗೂ ಸಹ ಪ್ರಾಯೋಜಕರಾದ ಇನ್‌ಸೈಟ್ಸ್ ಐಎಎಸ್‌ನ ಸಂಸ್ಥಾಪಕ-ನಿರ್ದೇಶಕ ವಿನಯ್ ಕುಮಾರ್ ಜಿ.ಬಿ. ಉಪಸ್ಥಿತರಿದ್ದರು. ಕಾರ್ಯಕ್ರಮದಲ್ಲಿ ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿಮಿಟೆಡ್ ನಿರ್ದೇಶಕರಾದ ಪಾರುಲ್ ಶಾ, ಸಿಇಒ ಸೀತಾರಾಮನ್ ಶಂಕರ್ ಹಾಗೂ 'ಪ್ರಜಾವಾಣಿ' ಕಾರ್ಯನಿರ್ವಾಹಕ ಸಂಪಾದಕ ರವೀಂದ್ರ ಭಟ್ಟ ಇದ್ದರು.

2023ರಲ್ಲಿ ತೆರೆಕಂಡ ಸಿನಿಮಾಗಳಲ್ಲಿ ಪ್ರಶಸ್ತಿಗಳು ಯಾರು ಯಾರಿಗೆ ಸಲ್ಲಲಿವೆ ಎನ್ನುವ ಕುತೂಹಲ ಇನ್ನೇನು ಕೆಲವೇ ದಿನಗಳಲ್ಲಿ ತಣಿಯಲಿದೆ. ಎರಡು ಹಂತಗಳ ತೀರ್ಪುಗಾರರ ಮಂಡಳಿ ಆಯ್ಕೆ ಮಾಡಿರುವ ನಾಮನಿರ್ದೇಶಿತರ ಪಟ್ಟಿಯನ್ನು ಚಿತ್ರರಂಗದಲ್ಲಿ ಕಾರ್ಯನಿರ್ವಹಿಸುತ್ತಿರುವ ಅಕಾಡೆಮಿ ಸದಸ್ಯರಿಗೆ ಮತದಾನಕ್ಕಾಗಿ ಕಳುಹಿಸಲಾಗಿದೆ. ಜೊತೆಗೆ ಸಾರ್ವಜನಿಕರೂ ಶ್ರೇಷ್ಠ ನಟ, ನಟಿ, ಚಿತ್ರ ಹಾಗೂ ಅತ್ಯುತ್ತಮ ಸಂಗೀತವನ್ನು ಮತದಾನದ ಮುಖಾಂತರ ಆಯ್ಕೆ ಮಾಡಬಹುದು. ಇದಕ್ಕಾಗಿ prajavani.net/cinesamman/season2 ಗೆ ಭೇಟಿ ನೀಡಿ. ❖

ಹಾಡಿದ ಪೂಜಾ ಗಾಂಧಿ

ನಟಿ ಪೂಜಾ ಗಾಂಧಿ ಅವರ ಕನ್ನಡ ಪ್ರೇಮ ಎಲ್ಲರಿಗೂ ತಿಳಿದೇ ಇದೆ. ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನದ ಎರಡನೇ ಆವೃತ್ತಿಯ ತಾಂತ್ರಿಕ ತೀರ್ಪುಗಾರರಲ್ಲಿ ಇವರೂ ಒಬ್ಬರು. ಕಾರ್ಯಕ್ರಮದಲ್ಲಿ ಆಯೋಜಿಸಲಾಗಿದ್ದ ಸಾಂಸ್ಕೃತಿಕ ಕಾರ್ಯಕ್ರಮದ ನಡುವೆ ಸ್ವಇಚ್ಛೆಯಿಂದ ವೇದಿಕೆಯೇರಿದ ಪೂಜಾ ಗಾಂಧಿ, 'ಜೀವ ಹೂವಾಗಿದೆ..' ಹಾಗೂ 'ಜೇನಿನ ಹೊಳೆಯೋ..' ಎಂಬ ಹಾಡುಗಳನ್ನು ಹಾಡಿ ತಮ್ಮ ಕನ್ನಡ ಪ್ರೇಮವನ್ನು ಮೆರೆದರು.





'ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ' 2ನೇ ಆವೃತ್ತಿಗೆ ಕ್ಲ್ಯಾಪ್ ಮಾಡುವ ಮುಖಾಂತರ ಚಾಲನೆ ನೀಡಿದ ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿಮಿಟೆಡ್ ನಿರ್ದೇಶಕರಾದ ಪಾರುಲ್ ಶಾ ಹಾಗೂ ಚಲನಚಿತ್ರ ನಿರ್ದೇಶಕ ಟಿ.ಎಸ್ ನಾಗಾಭರಣ —ಪ್ರಜಾವಾಣಿ ಚಿತ್ರಗಳು: ಎಂ.ಎಸ್ ಮಂಜುನಾಥ್



ಪ್ರಜಾವಾಣಿಗೆ ತನ್ನದೇ ಆದ ಮೌಲ್ಯವಿದೆ. ನಮ್ಮ ಕೆಲಸವನ್ನು ಪ್ರಜಾವಾಣಿ ಮಾಡುತ್ತಿದೆ. ಇಂತಹ ಪ್ರಶಸ್ತಿಗಳು ಸ್ಫೂರ್ತಿ ನೀಡುತ್ತವೆ. ಕನ್ನಡ ಚಿತ್ರರಂಗದಲ್ಲಿ ಇದೊಂದು ಮಾದರಿ ಸನ್ಮಾನ ಕಾರ್ಯಕ್ರಮ. ನಿರ್ಮಾಪಕರನ್ನೂ ಪ್ರಶಸ್ತಿ ಮೂಲಕ ಗುರುತಿಸುವ ಕೆಲಸವಾಗಲಿ ಎಂದು ಆಶಿಸುತ್ತೇನೆ.

ಎನ್.ಎಂ.ಸುರೇಶ್, ಅಧ್ಯಕ್ಷ, ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ

'ಆತ್ಮಸ್ಥೈರ್ಯ ಹೆಚ್ಚಿಸುವ ಕೆಲಸ'

'ಭಾರತೀಯ ಇತಿಹಾಸದಲ್ಲಿ ಬೆಳೆದು ಬಂದ ಕುಟುಂಬತನ ಮುಂದೆಯೂ ಪ್ರವಹಿಸಬೇಕೆಂಬ 'ಪ್ರಜಾವಾಣಿ'ಯ ವಿಚಾರ ಅದ್ಭುತವಾದದ್ದು. ಸೃಜನಶೀಲ, ಪ್ರದರ್ಶನ ಕಲೆಗಳಲ್ಲಿ ಬಹುಮಟ್ಟಿನ ವ್ಯವಸ್ಥೆಯ ಕುಸಿತ ಕಂಡಿರುವಂತಹ ಕ್ಷಣವಿದು. ನಾವೆಲ್ಲ ಸ್ವಂತಿಗಳಾಗಿದ್ದೇವೆ. ಸೆಲ್ಫಿ ದಾಸರಾಗಿದ್ದೇವೆ. ದಿಗ್ಗಜರನ್ನು ಮರೆಯುತ್ತಿದ್ದೇವೆ. ಸಮುದಾಯ ಕಟ್ಟಬೇಕಿದ್ದರೆ ಸಾಂಘಿಕ ಕಲೆಯ ಭರವಸೆ, ನಂಬಿಕೆ ಬೇಕು ಎಂಬುದನ್ನು ಮರೆಯುತ್ತಿದ್ದೇವೆ. ಸಿನಿಮಾ ಅದ್ಭುತವಾದ ಸಾಂಘಿಕ ಕಲೆ. ಚಿತ್ರರಂಗ ಕುಟುಂಬದ ಕಲ್ಪನೆಗೆ ಒತ್ತು ನೀಡುತ್ತ ಬಂದಿದೆ. ನಿರ್ಮಾಪಕ ತಂದೆ, ನಿರ್ದೇಶಕ ತಾಯಿಯಾದಾಗ ಮಾತ್ರ ಸಿನಿಮಾ ಯಶಸ್ವಿಯಾಗಲು ಸಾಧ್ಯ. ಇಂತಹ ಸಿನಿಮಾ ರಂಗದ ಆತ್ಮಸ್ಥೈರ್ಯವನ್ನು ಹೆಚ್ಚಿಸುವ ಕೆಲಸವನ್ನು 'ಪ್ರಜಾವಾಣಿ' ಈ ಪ್ರಶಸ್ತಿಯೊಂದಿಗೆ ಮಾಡುತ್ತಿದೆ' ಎಂದರು ಮುಖ್ಯ ತೀರ್ಪುಗಾರರಾದ ನಿರ್ದೇಶಕ ಟಿ.ಎಸ್.ನಾಗಾಭರಣ.

'2018ರಿಂದ ರಾಜ್ಯ ಸರ್ಕಾರ ಸಿನಿಮಾ ಪ್ರಶಸ್ತಿ ನೀಡಿಲ್ಲ. ಸರ್ಕಾರ ಮಾಡದ ಕೆಲಸವನ್ನು ಪತ್ರಿಕೆ ತನ್ನ ಕರ್ತವ್ಯವೆಂದು ಭಾವಿಸಿ ಮಾಡುತ್ತಿದೆ. ನಮ್ಮತನವನ್ನು ಕಟ್ಟಿಕೊಳ್ಳುವ, ಭಾಷೆಯನ್ನು ಬೆಳೆಸುವ ಕೆಲಸಕ್ಕೆ ಇಂತಹ ಇನ್ನಷ್ಟು ವೇದಿಕೆಗಳು ಸೃಷ್ಟಿಯಾಗಬೇಕು. ಕಳೆದ ಎರಡು ಮೂರು ದಶಕಗಳಲ್ಲಿ ಕೇವಲ ಸಿನಿಮಾ ಮಾತ್ರವಲ್ಲ, ಇಡೀ ನಮ್ಮ ಬದುಕಿನ ಜೀವನ ಕ್ರಮವೇ ಬದಲಾಗಿದೆ. ಬದುಕನ್ನು ಪ್ರೀತಿಸುವ, ಇನ್ನೊಬ್ಬರನ್ನು ಗೌರವಿಸುವ ಕಾರ್ಯಗಳು ಹಿಂದಕ್ಕೆ ಸರಿಯುತ್ತಿವೆ. ಇಂತಹ ಸಮಯದಲ್ಲಿ ಯಾರೇ ಪ್ರಶಸ್ತಿ ಪಡೆದರೂ ನಮ್ಮ ಕುಟುಂಬದವರು ಪ್ರಶಸ್ತಿ ಪಡೆದಂತೆ. ಮೊದಲ ಪ್ರಶಸ್ತಿಯಿಂದ ಎರಡನೇ ಆವೃತ್ತಿಗೆ ಬಂದಿರುವುದೇ ನಿರಂತರತೆ. ಮುಂದಿನ ದಿನಗಳಲ್ಲಿ ಈ ಪ್ರಶಸ್ತಿಯ ಬೆಲೆ ಅರ್ಥವಾಗುತ್ತದೆ. ಕನ್ನಡ ಮನಸ್ಸುಗಳನ್ನು ಕಟ್ಟುವಲ್ಲಿ ಈ ರೀತಿ ವೇದಿಕೆಗಳು ಬಹಳ ಮುಖ್ಯ' ಎಂದು ಅವರು ತಿಳಿಸಿದರು.

'ಆನ್‌ಲೈನ್‌ನಲ್ಲಿ ಸಿನಿಮಾ ನೋಡಿದರೆ ಮೆಷಿನ್ ಜೊತೆ ಸಿನಿಮಾ ನೋಡಿದ ಅನುಭವವಾಗುತ್ತದೆ. ನಾವೆಲ್ಲ ಒಟ್ಟಿಗೆ ಕುಳಿತು ಸಿನಿಮಾ ನೋಡುವಂತೆ ಆಗಬೇಕು. ಗುಂಪಾಗಿ ನೋಡಿದಾಗ ಮಾತ್ರ ಭಾವನೆಗಳು ಹೊರಬರಲು ಸಾಧ್ಯ. ಒಬ್ಬರೇ ಕುಳಿತು ಸಿನಿಮಾ ನೋಡಿದಾಗ ಎಷ್ಟೋ ಭಾವನೆಗಳು ಅಭಿವ್ಯಕ್ತಗೊಳ್ಳದೇ ಹೋಗಬಹುದು. ಸಿನಿಮಾ ಯಾವತ್ತೂ ಆಫ್‌ಲೈನ್ ಮಾಧ್ಯಮ, ಆನ್‌ಲೈನ್ ಅಲ್ಲ'

ಟಿ.ಎಸ್.ನಾಗಾಭರಣ
ಮುಖ್ಯ ತೀರ್ಪುಗಾರರ ಮಂಡಳಿ ಅಧ್ಯಕ್ಷ

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ **9606038256**

✗ 'ಉತ್ತರ ಪ್ರದೇಶದಲ್ಲಿ ಜನಸಂಖ್ಯೆ ನಿಯಂತ್ರಣ ಕಾನೂನನ್ನು ಜಾರಿಗೆ ತರಲಾಗಿದೆ. ಎರಡಕ್ಕಿಂತ ಹೆಚ್ಚು ಮಕ್ಕಳು ಇರುವವರಿಗೆ ಸರ್ಕಾರಿ ಉದ್ಯೋಗ ಇಲ್ಲ, ಸರ್ಕಾರಿ ಸವಲತ್ತುಗಳೂ ಇಲ್ಲ. ಅಂತಹವರು ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಸ್ಪರ್ಧಿಸುವಂತೆಯೂ ಇಲ್ಲ. ಇನ್ನು ಮುಂದೆ ಓಲೈಕೆ ರಾಜಕಾರಣ ನಡೆಯುವುದಿಲ್ಲ. ಇನ್ನೇನ್ನಿದ್ದರೂ ಆ್ಯಕ್ಷನ್ ಮಾತ್ರ' ಎಂಬ ಸಂದೇಶ ಇರುವ ಪೋಸ್ಟ್‌ಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿವೆ. ಆದರೆ ಇದು ಸುಳ್ಳು ಸುದ್ದಿ.

✓ ಜನಸಂಖ್ಯೆ ನಿಯಂತ್ರಣಕ್ಕೆ ಕಾನೂನು ರೂಪಿಸಲು ಉತ್ತರ ಪ್ರದೇಶ ಸರ್ಕಾರ 2021ರಲ್ಲೇ ಮುಂದಾಗಿತ್ತು. ಇದಕ್ಕಾಗಿ 'ಉತ್ತರ ಪ್ರದೇಶ ಜನಸಂಖ್ಯಾ ನಿಯಂತ್ರಣ ಮಸೂದೆ'ಯ ಕರಡನ್ನೂ ರೂಪಿಸಿತ್ತು. ಎರಡಕ್ಕಿಂತ ಹೆಚ್ಚು ಮಕ್ಕಳಿದ್ದರೆ ಅಂತಹವರು ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಸ್ಪರ್ಧಿಸಲು ಅವಕಾಶವಿಲ್ಲ ಎಂದು ಆ ಕರಡು ಮಸೂದೆಯಲ್ಲಿ ಉಲ್ಲೇಖಿಸಲಾಗಿದೆ. ಆದರೆ ಈವರೆಗೆ ಈ ಮಸೂದೆಯನ್ನು ರಾಜ್ಯ ವಿಧಾನಸಭೆಯಲ್ಲಿ ಮಂಡಿಸಿಲ್ಲ. ವಿಧಾನಸಭೆಯಲ್ಲಿ ಮಂಡಿಸಿ, ಅನುಮೋದನೆ ಪಡೆಯದೆ ಮತ್ತು ರಾಜ್ಯಪಾಲರ ಅಂಗೀಕಾರ ಪಡೆಯದೆ ಯಾವುದೇ ಮಸೂದೆ ಕಾಯ್ದೆಯಾಗುವುದಿಲ್ಲ. ಹೀಗಾಗಿ ಉತ್ತರ ಪ್ರದೇಶ ಸರ್ಕಾರ ಇಂತಹ ಒಂದು ಕಾನೂನನ್ನು ಜಾರಿಗೆ ತಂದಿದೆ ಎಂಬುದು ಸುಳ್ಳು ಸುದ್ದಿ.

ಗುಂಡಣ್ಣ



ನುಡಿ ಬೆಳಗು



ಪ್ರೊ.ಎಂ.ಕೃಷ್ಣೇಗೌಡ

ಕತ್ತಲಲ್ಲಿ ಕೈ ತುತ್ತಿಟ್ಟ ತಾಯಿ

ಸ್ವಾತಂತ್ರ್ಯ ಹೋರಾಟಗಾರರಾಗಿದ್ದ ಮೈಸೂರಿನ ಎಂ.ಎನ್. ಜೋಯಿಸ್ ಅವರು ಸುಮಾರು ಇಪ್ಪತ್ತೈದು ವರ್ಷಗಳ ಹಿಂದೆ ನನ್ನೊಂದಿಗೆ ಹೇಳಿದ ಒಂದು ಕತೆ ನನ್ನನ್ನು ಈಗಲೂ ಕಾಡುತ್ತದೆ. ಅದನ್ನು ಅವರ ಮಾತುಗಳಲ್ಲೇ ಹೇಳುತ್ತೇನೆ, ಕೇಳಿ-

'ಆಗ ಸ್ವದೇಶೀ ಪ್ರಚಾರಕ್ಕಾಗಿ ನಾವು ಹಳ್ಳಿ ಹಳ್ಳಿಗಳಿಗೆ ಹೋಗ್ತಾ ಇದ್ವೊ. ಆಗೆಲ್ಲಾ ಬಸ್ಸುಗಿಸ್ಸು ಇರಲಿಲ್ಲ, ನಡೆದುಕೊಂಡೇ ಪ್ರಯಾಣ. ಜೊತೆಗೆ ನಮ್ಮ ಮೇಲೆ ಅರೆಸ್ಟ್ ವಾರಂಟ್ ಬೇರೆ ಇದ್ದದ್ದರಿಂದ ನಾವು ದೊಡ್ಡರಸ್ತೆಗಳನ್ನು ಬಿಟ್ಟು ಒಳದಾರಿಗಳಲ್ಲಿ ಓಡಾಡುತ್ತಿದ್ವೊ'.

'ಅದೊಂದು ದಿನ ನಾನೂ ತಗಡೂರು ರಾಮಚಂದ್ರರಾಯರೂ ಮಳವಳ್ಳಿ ಕಡೆ ಹಳ್ಳಿಗಳಿಗೆ ಹೋಗಿದ್ವೊ. ಅದೊಂದು ಊರಿನಲ್ಲಿ ಕತ್ತಲಾಯಿತು. ಸಿಕ್ಕಾಪಟ್ಟೆ ನಡೆದು ಆಯಾಸವಾಗಿತ್ತು. ಆವತ್ತು ಬೆಳಿಗ್ಗಿನಿಂದಲೂ ಹೊಟ್ಟೆಗೆ ಏನೆಂದರೆ ಏನೂ ಹಾಕಿರಲಿಲ್ಲ. ಆಗೆಲ್ಲಾ ಈ ಕರೆಂಟ್ ಗಿರೆಂಟ್ ಇರಲಿಲ್ಲವಲ್ಲ, ರಾತ್ರಿ ಬಹಳ ಹೊತ್ತು ದೀಪ ಉರಿಸೋಕೆ ಹಳ್ಳಿಯವರಿಗೆ ಸೀಮೆಎಣ್ಣೆ ಸಿಕ್ತಾ ಇರಲಿಲ್ಲ. ಹಾಗಾಗಿ ಹೊತ್ತುಮುಳುಗಿದ ಸ್ವಲ್ಪ ಹೊತ್ತಿಗೆಲ್ಲಾ ಹಳ್ಳಿಗಳ ಸದ್ದಡಗಿ ಹೋಗುತ್ತಿತ್ತು'.

'ಅದ್ಯಾವ ಊರೋ ಈವತ್ತಿಗೂ ಗೊತ್ತಿಲ್ಲ. ಒಬ್ಬರ ಮುಖ ಒಬ್ಬರಿಗೆ ಕಾಣದಂಥಾ ಕತ್ತಲು. ನಾವಿಬ್ಬರೂ ಒಂದು ಮನೆಯ ಹಿಂಭಾಗದ ಗೋಡೆಗೆ ಒರಗಿಕೊಂಡು ಸಣ್ಣಗೆ ಮಾತಾಡುತ್ತಾ ಕುಳಿತಿದ್ವೊ. ರಾಮಚಂದ್ರರಾಯರು, 'ಈವತ್ತು ಹೊಟ್ಟೆಗೆ ಏನೂ ಸಿಗಲಿಲ್ವಲ್ಲೋ ಜೋಯಿಸ? ನನಗಂತೂ ತುಂಬಾ ಹಸಿವಾಗ್ತಾ ಇದೆ, ಏನೋ ಮಾಡೋದು..?' ಅಂದ್ರು. ಆಗ ನಮ್ಮ ತಲೆಯ ಮೇಲಿದ್ದ ಆ ಮನೆಯ ಒಂದು ಸಣ್ಣ ಕಿಟಕಿ ತೆರೆದುಕೊಳ್ತು. ಒಳಗಿನಿಂದ ಯಾರೋ ತಾಯಿ 'ಯಾರಪ್ಪಾ? ಸೊಸಂತ್ರದೋರಾ?' ಅಂದ್ಳು. 'ಹೌದು ತಾಯಿ' ಅಂದೊ. 'ಅಯ್ಯೋ ಪಾಪ, ಒಟ್ಟೆ ಅಸೀತಾ ಇದ್ದದಾ? ನಮ್ಮನೇಲೂ ಅಟ್ಟುಂಡು ಮುಗೀತಲ್ಲಪ್ಪಾ, ಏನ್ ಮಾಡೂದು....? ನಮ್ಮನೇಲಿ ಒಸಿ ಹಳಸಿದ ಅನ್ನ ಅದೆ , ಹುಳಿ ಮಜ್ಜಗೆ ಅದೆ. ನೀವೇನೂ ತೆಪ್ಪುತಿಳಕೊಳ್ಳದೆ ಓದ್ರೆ ಅದನ್ನೇ ಕಲಸಿಕೊಡ್ತೀನಿ, ತಿನ್ತಿರಾ?' ಅಂದ್ಳು. ಆನಂದವಾಗೋಯ್ತು ನಮಗೆ. 'ಕೊಡು ತಾಯಿ ತಿನ್ತೀವಿ' ಅಂದೊ.

'ಆ ತಾಯಿ, ಹುಳಿ ಮಜ್ಜಿಗೆಯಲ್ಲಿ ಕಲಸಿದ ಹಳಸಿದ ಅನ್ನವನ್ನ ಕಿಟಕಿಯೊಳಗಿಂದ ಕೈತುತ್ತು ಕೊಟ್ಟಳು. ನಾವು ಈ ಕಡೆಯಿಂದ ಅದನ್ನ ಈಸ್ಕೊಂಡು ತಿಂದೊ. ಆ ದೃಶ್ಯವನ್ನ ಕಲ್ಪನೆ ಮಾಡ್ಕೊಳ್ಳಿ. ನಮಗೆ ಕೈತುತ್ತು ಕೊಡೋ ತಾಯಿಯ ಮುಖ ನಮಗೆ ಕಾಣಿಸ್ತಿಲ್ಲ. ಅವಳಿಗೆ ನಮ್ಮ ಮುಖ ಕಾಣ್ತಾ ಇಲ್ಲ. ಆ ಹಸಿವಿನಲ್ಲಿ ಆ ತಾಯಿ ಕೊಟ್ಟದ್ದು ಊಟವಲ್ಲ ಕಣಪ್ಪಾ...ಪ್ರಸಾದ.. ಹಾಗಂತ ನಾನೂ ತಗಡೂರು ರಾಮಚಂದ್ರರಾಯರೂ ಕಣ್ಣಿಗೊತ್ತಿಕೊಂಡು ಊಟ ಮಾಡಿದೊ'.

ಈ ಕತೆ ಹೇಳಿ ಮುಗಿಸುವಷ್ಟರಲ್ಲಿ ಜೋಯಿಸರ ಕಣ್ಣಲ್ಲಿ ನೀರು ತುಳುಕುತ್ತಿದ್ದವು. ಸ್ವಲ್ಪ ಹೊತ್ತಾದ ಮೇಲೆ ಅವರ ನೆನಪಿನ ಲೋಕದಿಂದ ಹೊರಬಂದು ಜೋಯಿಸರು ಹೇಳಿದರು-

'ಸ್ವಾತಂತ್ರ್ಯ ಸುಮ್ನೆ ಸಿಕ್ಕಿದ್ದಲ್ಲಪ್ಪ, ನಿಮ್ಮ ಮನೆ, ಊರು, ಕಚೇರಿಗಳಲ್ಲಿ ನೀವು ಪ್ರಾಮಾಣಿಕವಾಗಿ ಕೆಲಸ ಮಾಡಿ, ಅಧಿಕಾರ ಸಿಕ್ಕರೆ ಜನರನ್ನ ಅಯ್ಯೋ ಅನ್ನಸಬೇಡಿ. ಈ ಸ್ವಾತಂತ್ರ್ಯಕ್ಕಾಗಿ ರಕ್ತವೂ ಹರಿದಿದೆ, ಕಣ್ಣೀರೂ ಹರಿದಿದೆ. ಯಾರಾದರೂ ಅದನ್ನ ಬೇಕಾಬಿಟ್ಟಿ ಬಳಸಿದರೆ ನಮಗೆ ಹೊಟ್ಟೆ ಉರಿಯುತ್ತೆ...' ಹೀಗೆಂದು ಮಾತು ಮುಗಿಸಿದರು ಎಂ.ಎನ್. ಜೋಯಿಸರು. ❖

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಶುಕ್ರವಾರ ಜೂನ್ 14, 2024

ಶ್ರೀ ಕ್ರೋಧಿ ನಾಮ ಸಂವತ್ಸರ ಉತ್ತರಾಯಣ ಗ್ರೀಷ್ಮ ಋತು ತಿಥಿ: ಜ್ಯೇಷ್ಠ ಶುಕ್ಲ ಅಷ್ಟಮಿ ಗಂ. 24-05 ನಕ್ಷತ್ರ: ಉತ್ತರಫಲ್ಗುನಿ ಅಹೋರಾತ್ರ ಯೋಗ: ಸಿದ್ಧಿ (ಆಸ್ರಿಕ್) ಗಂ. 19-07 ಕರಣ: ವಿಷ್ಟಿ ಗಂ. 10-49, ವೃಷಭ ಮಾಸದ ನೇ 31 ದಿನ, ಮಳೆನಕ್ಷತ್ರ: ಮೃಗಶಿರ 2.
ರಾಹುಕಾಲ : ಬೆಳಿಗ್ಗೆ 10-30 – 12-00
ಸೂರ್ಯೋದಯ : 06-07 ಸೂರ್ಯಾಸ್ತ : 06-54
ಮುಸ್ಲಿಂ ದಿನಾಂಕ : 07 ಜುಲ್‌ಹಿಜಾ
ಅದೃಷ್ಟ ಸಂಖ್ಯೆ : 1, 7

ಮೇಷ: ಮಾತನ್ನು ತಿರಸ್ಕರಿಸಿ ಬೇರೆಯ ಮಾರ್ಗ ಹಿಡಿದಂಥ ಮಕ್ಕಳು ಪಶ್ಚಾತಪಿಸುತ್ತಿರುವುದನ್ನು ಕಾಣುವಿರಿ. ಓದಿಗೆ ಅಡ್ಡಿಯಾಗಿರುವ ಸಮಸ್ಯೆಗೆ ಪರಿಹಾರ ಸಿಕ್ಕಿ ನೆಮ್ಮದಿ ಮೂಡುತ್ತದೆ. ನೂತನ ವಸ್ತ್ರ ಖರೀದಿ ಯೋಗವಿದೆ.

ವೃಷಭ: ಮಾರಣಾಂತಿಕ ಕಾಯಿಲೆಗಳಿಗೆ ಒಳಗಾಗುವಂಥ ಆಹಾರ ಪದಾರ್ಥಗಳು ಜೀವನಕ್ರಮದಲ್ಲಿ ಇದೆಯೇ ಎಂದು ಕಂಡುಕೊಳ್ಳಿರಿ. ಮನೆಯಲ್ಲಿ ಮಾತಿನಿಂದ ಯುದ್ಧದ ವಾತಾವರಣ ನಿರ್ಮಾಣ ಮಾಡಿಕೊಳ್ಳದಿರಿ.

ಮಿಥುನ: ನೆರೆ-ಹೊರೆಯವರೊಂದಿಗಿನ ವ್ಯವಹಾರಿಕ ಸಂಬಂಧದಲ್ಲಿ ಸಣ್ಣ ಪುಟ್ಟ ವಿಚಾರಗಳಿಗೆ ದೊಡ್ಡ ಮಟ್ಟದಲ್ಲಿ ಭಿನ್ನಾಭಿಪ್ರಾಯ ಮೂಡಬಹುದು. ಹಿಂದೆ ರೂಪಿಸಿದ್ದ ಯೋಜನೆಗಳು ಯಶಸ್ಸುಗೊಳ್ಳಲಿವೆ.

ಕರ್ಕಾಟಕ: ಮನೆಯನ್ನು ಶುಚಿಗೊಳಿಸುವ ಕೆಲಸವನ್ನು ಇನ್ನು ಯಾವ ಕಾರಣಕ್ಕಾಗಿಯು ಮುಂದೆ ಹಾಕುವುದು ಸೂಕ್ತವಲ್ಲ. ಮಹತ್ತರ ಕಾರ್ಯವನ್ನು ಶುರು ಮಾಡುವ ಮೊದಲಿಗೆ ಗುರು ಹಾಗೂ ಗಣಪತಿಯನ್ನು ಸ್ಮರಿಸಿ.

ಸಿಂಹ: ದೇಶಭಕ್ತಿಯ ಹೆಸರಿನಲ್ಲಿ ನಡೆಸಿರುವ ಹಾಗೂ ನಡೆಸುವ ಕಾರ್ಯಗಳು ಮಾನ್ಯವಾಗುತ್ತವೆ. ಹತ್ತಿರದ ಬಂಧುಗಳನ್ನು ಅನಿರೀಕ್ಷಿತವಾಗಿ ಕಂಡು ಹರ್ಷ ಉಂಟಾಗುತ್ತದೆ. ಮಾರ್ಗದರ್ಶಕರ ಸಲಹೆ ಪಡೆದು ಪಾಲಿಸಿರಿ.

ಕನ್ಯಾ: ಮಿತ್ರರಿಂದ ಸಹಾಯ ಪಡೆಯುವುದು ಮಾತ್ರವಲ್ಲದೆ ಅವರ ಕಷ್ಟ ಕಾಲದಲ್ಲಿ ಸಹಾಯವನ್ನು ಮಾಡಲು ಸರ್ವಸನ್ನದ್ಧರಾಗಿ ಇರಬೇಕಾಗುತ್ತದೆ. ಕೃಷಿಕರಿಗೆ ಕೃಷಿಯಲ್ಲಿ ಉತ್ಸಾಹ ಹೆಚ್ಚುವಂತಾಗಲಿದೆ.

ತುಲಾ: ಸ್ಥಾನಮಾನದಲ್ಲಿ ಬೇರೆಯವರು ಪಡುವ ಈರ್ಷ್ಯೆಯನ್ನು ಕಳೆದುಕೊಳ್ಳಲು ಉತ್ತಮ ಸನ್ನಿವೇಶವು ಉಂಟಾಗುವುದು. ಉತ್ತಮ ಧ್ಯೇಯೋದ್ದೇಶಕ್ಕಾಗಿ ಇಂದಿನಿಂದ ಶ್ರಮವನ್ನು ಪಡುವಿರಿ.

ವೃಶ್ಚಿಕ: ಸ್ಥಿರ ಆಸ್ತಿಯನ್ನು ಸಂಪಾದಿಸುವ ನಿರ್ಣಯದಲ್ಲಿ ದೃಢವಾಗಿ ನಿಲ್ಲುವಂಥ ತೀರ್ಮಾನ ಮಾಡಿಕೊಳ್ಳಿರಿ. ಸ್ವಪ್ನಸದೃಶ್ಯವಾದ ಘಟನೆಗಳನ್ನು ನೋಡುವ ಸಾಧ್ಯತೆ ಇದೆ. ಕೆಲಸಕಾರ್ಯದಲ್ಲಿ ಕಷ್ಟಗಳು ಎದುರಾಗಬಹುದು.

ಧನು: ವ್ಯವಹಾರದಲ್ಲಿನ ಹಿಂದಿನ ನಿರ್ಧಾರಗಳು ನಿಮ್ಮ ಒಳಿತಿಗಾಗಿ ಬದಲಾಗುವ ಸಂಭವವಿದೆ. ಗೃಹಸ್ಥಾಶ್ರಮದಲ್ಲಿನ ವಿರಕ್ತತೆ ಅನ್ಯರಿಗೆ ಬೇಜವಾಬ್ದಾರಿ ಎಂದೆನಿಸಬಹುದು.

ಮಕರ: ವೃತ್ತಿಯಲ್ಲಿ ಬದಲಾವಣೆ ಮಾಡುವವರು ಲಕ್ಷ್ಮಿ ಸಮೇತನಾದ ಶ್ರೀನಿವಾಸ ದೇವರ ಸೇವೆ ಮಾಡುವುದರಿಂದ ಅಭಿವೃದ್ಧಿ ಕಾಣಬಹುದು. ಮನೆಯಲ್ಲಿ ದೇವತಾಕಾರ್ಯ ಮಾಡುವ ತೀರ್ಮಾನ ಮಾಡಿರಿ.

ಕುಂಭ: ವೈಯಕ್ತಿಕ ಸಮಸ್ಯೆಗಳು ಏನೇ ಇದ್ದರೂ ವೃತ್ತಿ ವಿಷಯಗಳಿಗೆ ಆದ್ಯತೆ ಸಿಗಲಿ. ಆದರ ಭಾವದಿಂದ ನಿಮ್ಮ ಸಂಬಂಧಿಗಳಲ್ಲಿ ನಡೆದುಕೊಳ್ಳುವಿರಿ. ಕಾರ್ಯನಿಮಿತ್ತದ ಪ್ರಯಾಣವನ್ನು ಮಾಡಬಹುದು.


ಮೀನ: ಒಡಹುಟ್ಟಿದವರ ಸಹಕಾರದಿಂದ ಮಾನಸಿಕ ನೆಮ್ಮದಿ ಹಾಗೂ ಸಂಸಾರದಲ್ಲಿ ಸಮತೋಲನ ಪಡೆಯುವಿರಿ. ಕುಟುಂಬದ ಹಿರಿಯರ ಆರೋಗ್ಯದ ವಿಷಯದಲ್ಲಿ ವಿಶೇಷ ಕಾಳಜಿವಹಿಸಿ.

ಪದಬಂಧ 5711

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಕೈಗೂಡದ ಆಸೆ ಹಸುವಿನಲ್ಲಿದೆ! (6)
4.ಕನ್ನಡಿಗ ಧರಿಸಿರುವ ಹೆಲ್ಮೆಟ್! (4)
5.ಮರವನ್ನು ಕತ್ತರಿಸುವ ಸಾಧನ (4)
7.ಈತ ಕಬ್ಬಿಣದ ಕೆಲಸಗಾರ (3)
9. ಸೆಕೆ ಇದ್ದಾಗ ಚರ್ಮರಂಧ್ರಗಳಿಂದ ಹೊಮ್ಮುವ ದ್ರವ (3)
12.ಈತ ಉಪಕಾರ ಮಾಡುವವನು (4)
13.ಪತಿಯೊಳಗಿರುವ ಮೇರೆ! (4)
15.ಇದು ಹಣೆ ಬರಹ (6)

ಮೇಲಿಂದ ಕೆಳಕ್ಕೆ
1.ಹಣ್ಣುವಿನೊಳಗಣ ತೀಕ್ಷ್ಣದೃಷ್ಟಿ! (4)
2.ಹರಸುತಲಿದ್ದಾಗ ಮಗ ಬಂದಿಹನಲ್ಲಾ! (2)
3.ಕಾಲಿನ ಅಡಿ (3)
6.ದೊಡ್ಡ ಜಾತಿಯ ನಿಂಬೆ (4)
7.ಧಾನ್ಯದ ತೆನೆ (3)
8.ದೊಡ್ಡ ಗಲಾಟೆ (4)
10. ಚನ್ನಾಗಿ ಗುರುತುಳ್ಳವನು (4)
11.ಪ್ರಸವಕ್ಕೊಂದು ಪರ್ಯಾಯ ಪದ (3)
14.ತಿಕ್ಕಲ ಹಿಡಿದಿರುವ ಎಳ್ಳು (2)



5710ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಅನುಪಮ 3.ವಿಕೋಪ
4.ಗರಗಸ 6.ರಂಜಕ
7.ನಾಮಧೇಯ 8.ಕಠಾರಿ
9.ಪ್ರತ್ಯುತ್ತರ 12.ನೀರವ
13.ಶಯ್ಯಾಗೃಹ 15.ಸಾತ್ವಿಕ
16.ಗೆಳೆತನ

ಮೇಲಿಂದ ಕೆಳಕ್ಕೆ:
1.ಅಪರಂಜಿ 2.ಮಗ
3.ವಿಚಿತ್ರ 5.ಸಮಯ
7.ನಾರಿ 8.ಕರ
9.ಪ್ರವೇಶ 10.ಅವಸಾನ
11.ಪಾತಕ 14.ಹಗೆ

ಸುಡೊಕು 6096

	7			2				5
3		6	5		8			
	4			7		2		
	6				5			
9		1		8			6	2
4			2			1	3	
		2	3		7		5	
7	1			5		6		3
5		3	4					1


ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6095 ಸುಡೊಕು

4	9	7	1	8	3	5	2	6
2	3	1	4	6	5	9	7	8
6	8	5	7	9	2	4	1	3
9	2	4	6	7	8	1	3	5
5	7	3	2	4	1	8	6	9
8	1	6	3	5	9	7	4	2
1	6	9	5	2	7	3	8	4
3	4	8	9	1	6	2	5	7
7	5	2	8	3	4	6	9	1

ಷೇರುಪೇಟೆ ವಹಿವಾಟು 204



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	23,323
ಇಂದಿನ ಅಂತ್ಯ	23,398
▲	75
ದಿನದ ಗರಿಷ್ಠ	23,481

ವಿನಿಮಯ ದರ

$ ಡಾಲರ್	83.54
£ ಪೌಂಡ್	106.78
€ ಯುರೊ	90.24
¥ ಯೆನ್ (100ಕ್ಕೆ)	53

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100ಕ್ಕೆ	₹595
12 ಕ್ಕೆ	₹80
ಮೈಸೂರು	
100ಕ್ಕೆ	₹597

ಖಾದ್ಯ ತೈಲ ಮುಂಬೈ (10 ಕೆಜಿಗೆ)
(ಆವರಣದಲ್ಲಿ ಹಿಂದಿನ ದಿನದ ದರ)

ಶೇಂಗಾ (ರಿಫೈನ್ಡ್)	₹1500 (1500)
ಸೋಯಾ (ರಿಫೈನ್ಡ್)	₹977 (975)
ಸೂರ್ಯಕಾಂತಿ (ರಿಫೈನ್ಡ್)	₹980 (980)
ಪಾಮೋಲಿನ್	₹925 (925)

ಕೊಬ್ಬರಿ ಧಾರಣೆ
(ಕ್ವಿಂಟಲ್‌ಗೆ)

ಅರಸೀಕೆರೆ	₹7500-9500
ಬೆಂಗಳೂರು	₹8000-12000

ಎನ್.ಆರ್.ಪುರ ರಬ್ಬರ್
(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹198.50
ಆರ್‌ಎಸ್‌ಎಸ್-5	₹190
ಗುಡ್ ಲಾಟ್	₹179

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹265-482
ದ್ವಿತಳಿ (ಬಿ.ವಿ)	₹340-635

ತಾಳೆ ಎಣ್ಣೆ ಆಮದು ಹೆಚ್ಚಳ

ನವದೆಹಲಿ (ಪಿಟಿಐ): ಭಾರತವು ಮೇ ತಿಂಗಳಿನಲ್ಲಿ 7.63 ಲಕ್ಷ ಟನ್‌ನಷ್ಟು ತಾಳೆ ಎಣ್ಣೆಯನ್ನು ಆಮದು ಮಾಡಿಕೊಂಡಿದೆ.

2023ರ ಮೇ ತಿಂಗಳಿನಲ್ಲಿ 4.39 ಲಕ್ಷ ಟನ್ ಆಮದಾಗಿತ್ತು. ಇದಕ್ಕೆ ಹೋಲಿಸಿದರೆ ಶೇ 74ರಷ್ಟು ಏರಿಕೆಯಾಗಿದೆ. ದೇಶೀಯ ಮಾರುಕಟ್ಟೆ ಯಲ್ಲಿನ ಬೇಡಿಕೆಯಿಂದಾಗಿ ಆಮದು ಪ್ರಮಾಣದಲ್ಲಿ ಹೆಚ್ಚಳವಾಗಿದೆ ಎಂದು ಭಾರತೀಯ ಎಣ್ಣೆ ಗಿರಣಿ ಮಾಲೀಕರ ಸಂಘ (ಎಸ್‌ಇಎ) ಗುರುವಾರ ತಿಳಿಸಿದೆ.

ಒಟ್ಟು 15.29 ಲಕ್ಷ ಟನ್ ಸಸ್ಯಜನ್ಯ ತೈಲ, 5.32 ಲಕ್ಷ ಟನ್ ಕಚ್ಚಾ ತಾಳೆ ಎಣ್ಣೆ ಹಾಗೂ 2.25 ಲಕ್ಷ ಟನ್ ಆರ್‌ಬಿಡಿ ಪಾಮೋಲಿನ್ ಆಮದಾಗಿದೆ. ಆದರೆ, ಕಚ್ಚಾ ಪಾಮ್ ಕೆರ್ನಲ್ ತೈಲ ಆಮದು ಇಳಿಕೆಯಾಗಿದೆ ಎಂದು ತಿಳಿಸಿದೆ. 4.10 ಲಕ್ಷ ಟನ್‌ನಷ್ಟು ಸೂರ್ಯಕಾಂತಿ ಎಣ್ಣೆ ಮತ್ತು 3.24 ಲಕ್ಷ ಟನ್‌ನಷ್ಟು ಸೋಯಾಬಿನ್ ಎಣ್ಣೆ ಆಮದಾಗಿದೆ.

ತೆರಿಗೆ ಸರಳೀಕರಣ: ವರದಿ ಸಲ್ಲಿಸಲು ಸಮಿತಿಗೆ ಗಡುವು ನಿರೀಕ್ಷೆ

22ಕ್ಕೆ ಜಿಎಸ್‌ಟಿ ಮಂಡಳಿ ಸಭೆ

ನವದೆಹಲಿ (ಪಿಟಿಐ): ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರ ಅಧ್ಯಕ್ಷತೆಯಲ್ಲಿ ಜೂನ್ 22ರಂದು ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಮಂಡಳಿಯ 53ನೇ ಸಭೆ ನಡೆಯಲಿದೆ.

ಎಂಟು ತಿಂಗಳ ಬಳಿಕ ನಡೆಯುತ್ತಿರುವ ಈ ಸಭೆಯಲ್ಲಿ ಆನ್‌ಲೈನ್ ಗೇಮಿಂಗ್ ವಲಯದ ಮೇಲೆ ವಿಧಿಸಿರುವ ಶೇ 28ರಷ್ಟು ಜಿಎಸ್‌ಟಿ ಕುರಿತಂತೆ ಪರಾಮರ್ಶೆ ನಡೆಸುವ ಸಾಧ್ಯತೆಯಿದೆ.

‘ನವದೆಹಲಿಯಲ್ಲಿ ಸಭೆ ಆಯೋಜಿಸಲಾಗಿದ್ದು, ಸಭೆಯ ಕಾರ್ಯಸೂಚಿಗೆ ಸಂಬಂಧಿಸಿದಂತೆ ಮಂಡಳಿಯ ಸದಸ್ಯರಿಗೆ ಇನ್ನೂ ಸಂದೇಶ ರವಾನಿಸಿಲ್ಲ’ ಎಂದು ಮಂಡಳಿಯು ಗುರುವಾರ ‘ಎಕ್ಸ್’ನಲ್ಲಿ ತಿಳಿಸಿದೆ.

ಲೋಕಸಭಾ ಚುನಾವಣೆ ಬಳಿಕ ನಡೆಯುತ್ತಿರುವ ಮೊದಲ ಸಭೆ ಇದಾಗಿದೆ. ಎಲ್ಲಾ ರಾಜ್ಯಗಳು, ಕೇಂದ್ರಾಡಳಿತ ಪ್ರದೇಶದ ಹಣಕಾಸು ಸಚಿವರು ಸಭೆಯಲ್ಲಿ ಪಾಲ್ಗೊಳ್ಳಲಿದ್ದಾರೆ. ಕಳೆದ ವರ್ಷದ ಅಕ್ಟೋಬರ್ 7ರಂದು ಮಂಡಳಿಯ 52ನೇ ಸಭೆ ನಡೆದಿತ್ತು.



ಸಮಿತಿಗೆ ಗಡುವು ನಿರೀಕ್ಷೆ: ಜಿಎಸ್‌ಟಿ ವ್ಯವಸ್ಥೆ ಅಡಿಯಲ್ಲಿ ತೆರಿಗೆ ಪ್ರಮಾಣವನ್ನು ಸರಳಗೊಳಿಸುವ ಸಂಬಂಧ ಪರಿಶೀಲನೆ ನಡೆಸಲು 2021ರ ಸೆಪ್ಟೆಂಬರ್‌ನಲ್ಲಿ ಸಚಿವರ ಸಮಿತಿ ರಚಿಸಲಾಗಿದೆ. ಉತ್ತರ ಪ್ರದೇಶದ ಹಣಕಾಸು ಸಚಿವ ಸುರೇಶ್ ಕುಮಾರ್ ಖನ್ನಾ ಇದರ ಸಂಚಾಲಕರಾಗಿದ್ದಾರೆ.

ಈ ಸಮಿತಿಯು 2022ರ ಜೂನ್‌ನಲ್ಲಿ ನಡೆದ ಸಭೆಯಲ್ಲಿ ಮಧ್ಯಂತರ ವರದಿ ಸಲ್ಲಿಸಿದೆ. ತ್ವರಿತಗತಿಯಲ್ಲಿ ಅಧ್ಯಯನ ಪೂರ್ಣಗೊಳಿಸಿ ಅಂತಿಮ ವರದಿ ಸಲ್ಲಿಸುವಂತೆ ಸಮಿತಿಗೆ ಸಭೆಯಲ್ಲಿ ಗಡುವು ನೀಡುವ ನಿರೀಕ್ಷೆಯಿದೆ.

ಜಿಎಸ್‌ಟಿ ದರ ಸುಧಾರಣೆ, ವಿನಾಯಿತಿ ಸೌಲಭ್ಯ ಹಾಗೂ ಜಿಎಸ್‌ಟಿ ವರಮಾನ ಹೆಚ್ಚಳಕ್ಕೆ ಸಂಬಂಧಿಸಿದಂತೆ ಸಮಿತಿಯು ವರದಿ ಸಲ್ಲಿಸಲಿದೆ. ಸದ್ಯ ಜಿಎಸ್‌ಟಿ ಅಡಿಯಲ್ಲಿ ಶೇ 5, ಶೇ 12, ಶೇ 18, ಶೇ 28 ಹೀಗೆ ನಾಲ್ಕು ಹಂತದ ತೆರಿಗೆ ದರ ನಿಗದಿಪಡಿಸಲಾಗಿದೆ.

ಆನ್‌ಲೈನ್ ಗೇಮ್ಸ್ ತೆರಿಗೆ ಪರಾಮರ್ಶೆ

ಜಿಎಸ್‌ಟಿ ಕಾಯ್ದೆಗೆ ತಂದಿರುವ ತಿದ್ದುಪಡಿ ಅನ್ವಯ ಆನ್‌ಲೈನ್ ಆಟಗಳು ಹಾಗೂ ಕ್ಯಾಸಿನೊಗಳಲ್ಲಿ ಪೂರ್ಣ ಬೆಟ್ಟಿಂಗ್ ಮೊತ್ತದ ಮೇಲೆ ಜಿಎಸ್‌ಟಿ ವಿಧಿಸಲು ಅವಕಾಶ ಕಲ್ಪಿಸಲಾಗಿದೆ. ಹಾಗಾಗಿ, ಕಳೆದ ವರ್ಷದ ಅಕ್ಟೋಬರ್ 1ರಿಂದ ಕ್ಯಾಸಿನೊ, ಕುದುರೆ ರೇಸ್ ಮತ್ತು ಆನ್‌ಲೈನ್ ಆಟಗಳಿಗೆ ಶೇ 28ರಷ್ಟು ಜಿಎಸ್‌ಟಿ ವಿಧಿಸಲಾಗುತ್ತಿದೆ.

ಈ ಬಗ್ಗೆ ಆರು ತಿಂಗಳ ಬಳಿಕ ಪರಾಮರ್ಶೆ ನಡೆಸಲಾಗುವುದು ಎಂದು ಜಿಎಸ್‌ಟಿ ಜಾರಿಯ ವೇಳೆ ಮಂಡಳಿಯು ಹೇಳಿತ್ತು. ಮಂಡಳಿಯು ಕೈಗೊಂಡಿದ್ದ ನಿರ್ಣಯದ ಪ್ರಕಾರ ಏಪ್ರಿಲ್‌ನಲ್ಲಿ ಪರಾಮರ್ಶೆ ನಡೆಸಬೇಕಿತ್ತು. ಆದರೆ, ಸಭೆ ನಡೆದಿರಲಿಲ್ಲ. ಹಾಗಾಗಿ, ಈ ಸಭೆಯಲ್ಲಿ ಇದರ ಬಗ್ಗೆ ಪರಿಶೀಲನೆ ನಡೆಸುವ ನಿರೀಕ್ಷೆಯಿದೆ.

ಸುದ್ದಿ 2 ನಿಮಿಷ

ನಿಶ್ಚಿತ ಠೇವಣಿ ಬಡ್ಡಿದರ ಇಳಿಕೆ ಸಾಧ್ಯತೆ: ದಿನೇಶ್ ಖಾರಾ

ನವದೆಹಲಿ (ಪಿಟಿಐ): ಪ್ರಸ್ತುತ ವಿವಿಧ ಅವಧಿಯ ನಿಶ್ಚಿತ ಠೇವಣಿಗಳ ಮೇಲಿನ ಬಡ್ಡಿದರ ಹೆಚ್ಚಿದ್ದು, ಮುಂಬರುವ ತಿಂಗಳುಗಳಲ್ಲಿ ಇಳಿಕೆಯ ಪಥದಲ್ಲಿ ಸಾಗುವ ಸಾಧ್ಯತೆಯಿದೆ’ ಎಂದು ಸರ್ಕಾರಿ ಸ್ವಾಮ್ಯದ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ (ಎಸ್‌ಬಿಐ) ಅಧ್ಯಕ್ಷ ದಿನೇಶ್ ಖಾರಾ ಹೇಳಿದ್ದಾರೆ.

ಚಿಲ್ಲರೆ ಹಣದುಬ್ಬರವನ್ನು ನಿಯಂತ್ರಿಸುವ ಜೊತೆಗೆ ದೇಶದ ಆರ್ಥಿಕತೆಗೆ ಉತ್ತೇಜನ ನೀಡುವ ನಿಟ್ಟಿನಲ್ಲಿ ಕಳೆದ ವಾರ ನಡೆದ ಭಾರತೀಯ ರಿಸರ್ವ್ ಬ್ಯಾಂಕ್‌ನ ಹಣಕಾಸು ನೀತಿ ಸಮಿತಿ ಸಭೆಯು, ರೆಪೊ ದರದಲ್ಲಿ ಯಥಾಸ್ಥಿತಿ ಕಾಯ್ದುಕೊಂಡಿದೆ.

‘ಅಕ್ಟೋಬರ್ ವೇಳೆಗೆ ಚಿಲ್ಲರೆ ಹಣದುಬ್ಬರವು ಆರ್‌ಬಿಐ ನಿಗದಿಪಡಿಸಿರುವ ಶೇ 4ರ ಮಿತಿಗೆ ತಲುಪುವ ಸಾಧ್ಯತೆಯಿದೆ. ಆ ವೇಳೆ ಆರ್‌ಬಿಐ ರೆಪೊ ದರ ಕಡಿತಗೊಳಿಸುವ ಸಾಧ್ಯತೆಯೂ ಇದೆ’ ಎಂದು ಖಾರಾ ಹೇಳಿದ್ದಾರೆ.

‘ಹಾಗಾಗಿ, ಸದ್ಯ ಹೆಚ್ಚಿರುವ ಠೇವಣಿಗಳ ಮೇಲಿನ ಬಡ್ಡಿದರವನ್ನು ಕೆಲವು ತಿಂಗಳು ಅಥವಾ ವರ್ಷಗಳವರೆಗೆ ಅನ್ವಯವಾಗುವಂತೆ ಇಳಿಸಲು ನಾವು ಎದುರು ನೋಡುತ್ತಿದ್ದೇವೆ’ ಎಂದರು.

ಈಗಾಗಲೇ, ಮುಂದುವರಿದ ದೇಶಗಳಾದ ಸ್ವಿಟ್ಜರ್ಲೆಂಡ್, ಸ್ವೀಡನ್, ಕೆನಡಾ ಸೇರಿ ಐರೋಪ್ಯ ಒಕ್ಕೂಟದ ಕೆಲವು ದೇಶಗಳಲ್ಲಿ ಬಡ್ಡಿದರ ಕಡಿತಗೊಳಿಸುವ ಪ್ರಕ್ರಿಯೆ ಆರಂಭವಾಗಿದೆ. ಮುಂದಿನ ಹಣಕಾಸು ನೀತಿ ಸಮಿತಿ ಸಭೆಯಲ್ಲಿ ಅಮೆರಿಕದ ಫೆಡರಲ್ ರಿಸರ್ವ್ ಕೂಡ ಬಡ್ಡಿದರ ಕಡಿತಗೊಳಿಸುವ ಸಾಧ್ಯತೆಯಿದೆ ಎಂದು ಹೇಳಲಾಗಿದೆ.

ಕಳೆದ ತಿಂಗಳು ಎಸ್‌ಬಿಐ ಆಯ್ದ ನಿಶ್ಚಿತ ಠೇವಣಿಗಳ ಮೇಲಿನ ಬಡ್ಡಿದರವನ್ನು ಶೇ 0.75ರ ವರೆಗೆ ಹೆಚ್ಚಿಸಿತ್ತು.

ಅದಾನಿ ತೆಕ್ಕೆಗೆ ಪೆನ್ನಾ ಸಿಮೆಂಟ್

ನವದೆಹಲಿ (ಪಿಟಿಐ): ಅದಾನಿ ಸಮೂಹದ ಅಂಬುಜಾ ಸಿಮೆಂಟ್ಸ್ ಕಂಪನಿಯು, ಆಂಧ್ರಪ್ರದೇಶದ ಪೆನ್ನಾ ಸಿಮೆಂಟ್ ಇಂಡಸ್ಟ್ರೀಸ್ ಲಿಮಿಟೆಡ್ ಅನ್ನು (ಪಿಸಿಐಎಲ್) ₹10,422 ಕೋಟಿಗೆ ಸ್ವಾಧೀನಪಡಿಸಿಕೊಳ್ಳಲಿದ್ದು, ಈ ಕುರಿತ ಒಪ್ಪಂದಕ್ಕೆ ಸಹಿ ಹಾಕಿದೆ.

ಪಿಸಿಐಎಲ್ ವಾರ್ಷಿಕವಾಗಿ 1.4 ಕೋಟಿ ಟನ್ ಸಿಮೆಂಟ್ ಉತ್ಪಾದಿಸುವ ಸಾಮರ್ಥ್ಯ ಹೊಂದಿದೆ. ಈ ಸ್ವಾಧೀನದಿಂದಾಗಿ ಅದಾನಿ ಸಮೂಹದ ವಾರ್ಷಿಕ ಉತ್ಪಾದನಾ ಸಾಮರ್ಥ್ಯವು 8.9 ಕೋಟಿ ಟನ್‌ಗೆ ಹೆಚ್ಚಳವಾಗಲಿದೆ.

ಪಿಸಿಐಎಲ್‌ನ ಪ್ರವರ್ತಕ ಪಿ. ಪ್ರತಾಪ್ ರೆಡ್ಡಿ ಮತ್ತು ಅವರ ಕುಟುಂಬದ ಒಡೆತನದಲ್ಲಿರುವ ಕಂಪನಿಯ ಶೇ 100ರಷ್ಟು ಷೇರುಗಳನ್ನು ಖರೀದಿಸಲಾಗುವುದು. ಈ ಸ್ವಾಧೀನದಿಂದಾಗಿ ದೇಶದ ಸಿಮೆಂಟ್ ಮಾರುಕಟ್ಟೆಯಲ್ಲಿ ಅದಾನಿ ಸಮೂಹದ ಪಾಲು ಶೇ 2ರಷ್ಟು ಮತ್ತು ದಕ್ಷಿಣ ಭಾರತದ ಮಟ್ಟದಲ್ಲಿ ಶೇ 8ರಷ್ಟು ಇರಲಿದೆ ಎಂದು ಕಂಪನಿ ತಿಳಿಸಿದೆ.


ಸಾರ್ವಕಾಲಿಕ ಮಟ್ಟ ತಲುಪಿ ಕುಸಿದ ಸೆನ್ಸೆಕ್ಸ್

ಮುಂದುವರಿದ ಗೂಳಿ ಓಟ

ಮುಂಬೈ (ಪಿಟಿಐ): ದೇಶದ ಷೇರುಪೇಟೆಗಳಲ್ಲಿ ಗುರುವಾರ ನಡೆದ ವಹಿವಾಟಿನಲ್ಲಿಯೂ ಗೂಳಿ ಓಟ ಮುಂದುವರಿಯಿತು.

ಮೇ ತಿಂಗಳಿನಲ್ಲಿ ಚಿಲ್ಲರೆ ಹಣದುಬ್ಬರವು ಒಂದು ವರ್ಷದ ಕನಿಷ್ಠ ಮಟ್ಟಕ್ಕೆ ಇಳಿಕೆಯಾಗಿದೆ. ಹಾಗಾಗಿ, ಆರ್‌ಬಿಐ ರೆಪೊ ದರ ಕಡಿತಗೊಳಿಸುವ ಸಾಧ್ಯತೆಯಿದೆ ಎಂಬ ಹೂಡಿಕೆದಾರರ ನಿರೀಕ್ಷೆಯಿಂದಾಗಿ ಷೇರು ಸೂಚ್ಯಂಕಗಳು ಏರಿಕೆ ಪಥದಲ್ಲಿ ಸಾಗಿವೆ.

ಬಂಡವಾಳ ಸರಕು, ಗ್ರಾಹಕರ ಬಳಕೆಯ ವಸ್ತುಗಳು ಹಾಗೂ ಕೈಗಾರಿಕಾ ವಲಯದ ಷೇರುಗಳ ಖರೀದಿಯೂ ಇದಕ್ಕೆ ನೆರವಾಯಿತು ಎಂದು ಮಾರುಕಟ್ಟೆ ತಜ್ಞರು ತಿಳಿಸಿದ್ದಾರೆ.



ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 204 ಅಂಶ ಏರಿಕೆ ಕಂಡು, 76,810 ಅಂಶಗಳಲ್ಲಿ ವಹಿವಾಟು ಸ್ಥಿರಗೊಂಡಿತು. ಆರಂಭಿಕ ವಹಿವಾಟಿನಲ್ಲಿ 538 ಅಂಶ ಏರಿಕೆ ಕಂಡು ಸಾರ್ವಕಾಲಿಕ ಗರಿಷ್ಠ ಮಟ್ಟವಾದ 77,145 ಅಂಶಕ್ಕೆ ಮುಟ್ಟಿತ್ತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 75 ಅಂಶ ಏರಿಕೆ ಕಂಡು 23,398 ಅಂಶಗಳಲ್ಲಿ ಅಂತ್ಯಗೊಂಡಿತು. ವಹಿವಾಟಿನ ಒಂದು ಹಂತದಲ್ಲಿ 158 ಅಂಶ ಏರಿಕೆಯಾಗಿತ್ತು.

ಸೆನ್ಸೆಕ್ಸ್ ಗುಚ್ಛದಲ್ಲಿನ ಮಹೀಂದ್ರ ಆ್ಯಂಡ್ ಮಹೀಂದ್ರ, ಟೈಟನ್, ಎಲ್ ಆ್ಯಂಡ್ ಟಿ, ಇಂಡಸ್‌ಇಂಡ್ ಬ್ಯಾಂಕ್, ಟೆಕ್ ಮಹೀಂದ್ರ, ಅಲ್ಟ್ರಾಟೆಕ್ ಸಿಮೆಂಟ್, ವಿಪ್ರೊ, ಟಿಸಿಎಸ್, ಬಜಾಜ್ ಫೈನಾನ್ಸ್ ಮತ್ತು ನೆಸ್ಲೆ ಇಂಡಿಯಾ ಕಂಪನಿ ಷೇರಿನ ಮೌಲ್ಯದಲ್ಲಿ ಏರಿಕೆಯಾಗಿದೆ.

ಹಿಂದುಸ್ತಾನ್ ಯೂನಿಲಿವರ್, ಪವರ್ ಗ್ರಿಡ್, ಎಕ್ಸಿಸ್ ಬ್ಯಾಂಕ್, ಭಾರ್ತಿ ಏರ್‌ಟೆಲ್, ಐಸಿಐಸಿಐ ಬ್ಯಾಂಕ್ ಮತ್ತು ಐಟಿಸಿ ಷೇರಿನ ಮೌಲ್ಯದಲ್ಲಿ ಇಳಿಕೆಯಾಗಿದೆ.

ಬಿಎಸ್‌ಇಯಲ್ಲಿ ನೋಂದಾಯಿತ ಕಂಪನಿಗಳ ಮಾರುಕಟ್ಟೆ ಮೌಲ್ಯವು 431.67 ಲಕ್ಷ ಕೋಟಿಗೆ ತಲುಪಿದ್ದು, ಸಾರ್ವಕಾಲಿಕ ದಾಖಲೆ ಬರೆದಿದೆ.

‘ಅಮೆರಿಕ ಮತ್ತು ಭಾರತದಲ್ಲಿ ಹಣದುಬ್ಬರವು ಇಳಿಕೆಯಾಗಿದೆ. ಪ್ರಮುಖವಾಗಿ ಬ್ಯಾಂಕಿಂಗ್ ಸೂಚ್ಯಂಕದ ದೃಷ್ಟಿಯಲ್ಲಿ ಇದು ಸಕಾರಾತ್ಮಕ ಬೆಳವಣಿಗೆಯಾಗಿದೆ. ಹಾಗಾಗಿ, ದೇಶೀಯ ಷೇರುಪೇಟೆಗಳು ಏರಿಕೆ ಕಂಡಿವೆ’ ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಮುಖ್ಯ ಹೂಡಿಕೆ ತಜ್ಞ ವಿ.ಕೆ. ವಿಜಯ್‌ಕುಮಾರ್ ಹೇಳಿದ್ದಾರೆ.

ಮುಂಬೈ ಧಾರಣೆ

ಶೇಂಗಾ
13-6-2024

ಜಾವಾ 70/80(ಹೊಸ)	11200-11300
ಜಾವಾ 80/90(ಹೊಸ)	10800-10900
ದಪ್ಪ ಮಧ್ಯಪ್ರದೇಶ(ಹೊಸ)	9800-9900
ದಪ್ಪ ಗುಜರಾತ್(ಹೊಸ)	10600-10700

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1510 (1510)
ಒಂದು ವಾರದ ಡೆಲಿವರಿ	1505 (1505)
ಸೋಯಾ ಕಚ್ಚಾ	927 (925)
ಪಾಮ್ ವಾರದ ಡೆಲಿವರಿ	923 (923)
ಸೂರ್ಯಕಾಂತಿ ಎಣ್ಣೆ ಕಚ್ಚಾ	920 (920)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
₹71,200 (71,450)
ಬೆಳ್ಳಿ ಕೆ.ಜಿ ₹87,800 (88,300)
ಆವರಣದಲ್ಲಿ ಹಿಂದಿನ ದಿನದ ಧಾರಣೆ

ಮುದ್ರಮನೆ ಕಾಫಿ
(50 ಕೆಜಿಗೆ)



ಎಪಿ	₹15400
ಎಸಿ	₹9100
ಆರ್‌ಪಿ	₹16500
ಆರ್‌ಸಿ	₹9750



ಇಟಲಿಯಲ್ಲಿ ಗುರುವಾರ ಆರಂಭವಾದ ಜಿ7 ಶೃಂಗಸಭೆಯಲ್ಲಿ (ಎಡದಿಂದ ಬಲಕ್ಕೆ) ಪಾಲ್ಗೊಂಡಿರುವ ಜರ್ಮನ್ ಚಾನ್ಸಲರ್ ಓಲಾಫ್ ಸ್ಕೋಲ್ಜ್, ಕೆನಡಾ ಪ್ರಧಾನಿ ಜಸ್ಟಿನ್ ಟ್ರುಡೊ, ಫ್ರಾನ್ಸ್ ಅಧ್ಯಕ್ಷ ಎಮ್ಯಾನುಯೆಲ್ ಮ್ಯಾಕ್ರನ್, ಇಟಲಿಯ ಪ್ರಧಾನಿ ಜಾರ್ಜಿಯಾ ಮೆಲೋನಿ, ಅಮೆರಿಕ ಅಧ್ಯಕ್ಷ ಜೋ ಬೈಡನ್, ಜಪಾನ್ ಪ್ರಧಾನಿ ಫ್ಯೂಮಿಯೊ ಕಿಶಿಡಾ, ಬ್ರಿಟನ್ ಪ್ರಧಾನಿ ರಿಷಿ ಸುನಕ್ ಕ್ಯಾಮೆರಾಕ್ಕೆ ಪೋಸ್ ನೀಡಿದ್ದು ಹೀಗೆ – ಎಎಫ್‌ಪಿ ಚಿತ್ರ

ಉಕ್ರೇನ್‌ಗೆ ₹4.17 ಲಕ್ಷ ಕೋಟಿ ಸಾಲ ನೀಡಲು ಒಪ್ಪಿಗೆ

ಇಟಲಿ: ಜಿ7 ಶೃಂಗಸಭೆ ಆರಂಭ

ಬಾರಿ (ಇಟಲಿ) (ಎಪಿ): ಮುಟ್ಟುಗೋಲು ಹಾಕಿಕೊಂಡಿರುವ ರಷ್ಯಾದ ಆಸ್ತಿಗಳ ಆಧಾರದ ಮೇಲೆ ಉಕ್ರೇನ್‌ಗೆ 50 ಬಿಲಿಯನ್ ಡಾಲರ್ (ಸುಮಾರು ₹4.17 ಲಕ್ಷ ಕೋಟಿ) ಸಾಲ ನೀಡುವ ಒಪ್ಪಂದಕ್ಕೆ ಗುರುವಾರ ಆರಂಭವಾದ ಜಿ7 ರಾಷ್ಟ್ರಗಳ ಶೃಂಗಸಭೆ ಒಪ್ಪಿಗೆ ನೀಡಿದೆ. ಇದರಿಂದಾಗಿ ರಷ್ಯಾ ವಿರುದ್ಧ ಹೋರಾಡಲು ಉಕ್ರೇನ್‌ಗೆ ಭಾರಿ ಬೆಂಬಲ ಸಿಕ್ಕಂತಾಗಲಿದೆ. ಸಾಲ ನೀಡುವ ಕುರಿತಾದ ಈ ಒಪ್ಪಂದದ ಬಗ್ಗೆ ಅಮೆರಿಕ ಪ್ರಸ್ತಾವ ಇರಿಸಿತ್ತು.

ಮೂರು ದಿನಗಳ ಶೃಂಗಸಭೆಗಾಗಿ ಜಿ7 ರಾಷ್ಟ್ರಗಳ ನಾಯಕರು ದಕ್ಷಿಣ ಇಟಲಿಗೆ ಬಂದಿಳಿಯುವ ಮೊದಲು ಈ ಒಪ್ಪಂದದ ಕುರಿತು ಅಂತಿಮ ನಿರ್ಧಾರಕ್ಕೆ ಬರಲಾಗಿತ್ತು ಎಂದು ರಾಜತಾಂತ್ರಿಕರು ದೃಢಪಡಿಸಿದರು.

ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಅವರು ಅಮೆರಿಕ ಅಧ್ಯಕ್ಷ ಜೋ ಬೈಡನ್ ಅವರೊಂದಿಗೆ ಪ್ರತ್ಯೇಕವಾಗಿ ದ್ವಿಪಕ್ಷೀಯ ಭದ್ರತಾ ಒಪ್ಪಂದಕ್ಕೂ ಇದೇ ವೇಳೆ ಸಹಿ ಹಾಕುವ ನಿರೀಕ್ಷೆ ಇದೆ.

‘ಜಿ7 ಶೃಂಗಸಭೆಯಲ್ಲಿ ಜಪಾನ್ ಮತ್ತು ಅಮೆರಿಕದ ಜತೆಗಿನ ಭದ್ರತಾ ಒಪ್ಪಂದಕ್ಕೆ ಸಹಿ ಹಾಕಲಾಗುವುದು’ ಎಂದು ಝೆಲೆನ್‌ಸ್ಕಿ ಅವರು ‘ಟೆಲಿಗ್ರಾಮ್’ನಲ್ಲಿ ಪೋಸ್ಟ್ ಮಾಡಿದ್ದಾರೆ. ಬೈಡನ್ ಅವರು ಗುರುವಾರ ಉಕ್ರೇನ್ ಜತೆಗಿನ ಹೊಸ ಭದ್ರತಾ ಒಪ್ಪಂದಕ್ಕೆ ಸಹಿ ಹಾಕಲಿರುವ ಬಗ್ಗೆ ಅಮೆರಿಕದ ಅಧಿಕಾರಿಯೊಬ್ಬರು ಬುಧವಾರವೇ ಮಾಹಿತಿ ಹಂಚಿಕೊಂಡಿದ್ದರು.

ಪೋಪ್ ಫ್ರಾನ್ಸಿಸ್ ಅವರು ಜಿ7 ಶೃಂಗಸಭೆ ಉದ್ದೇಶಿಸಿ ಶುಕ್ರವಾರ ಭಾಷಣ ಮಾಡಲಿದ್ದು, ಈ ಶೃಂಗಸಭೆ ಉದ್ದೇಶಿಸಿ ಮಾತನಾಡಿದ ಮೊದಲ ಪೋಪ್ ಎನ್ನುವ ಶ್ರೇಯಕ್ಕೆ ಅವರು ಪಾತ್ರರಾಗಲಿದ್ದಾರೆ.

ಬಿಸಿಲಿನ ಝಳದಲ್ಲಿ ಮುಳುಗಿರುವ ಇಟಲಿಯ ಪುಗ್ಲಿಯಾ ಪ್ರದೇಶದಲ್ಲಿರುವ ಐಷಾರಾಮಿ ರೆಸಾರ್ಟ್‌ನಲ್ಲಿ ಈ ವರ್ಷ ನಡೆಯುತ್ತಿರುವ ವಾರ್ಷಿಕ ಶೃಂಗದಲ್ಲಿ ಪೋಪ್ ಕೃತಕ ಬುದ್ಧಿಮತ್ತೆಯಿಂದ ಆಗುವ ಅನುಕೂಲಗಳು ಮತ್ತು ಅಪಾಯಗಳ ಬಗ್ಗೆ ಮಾತನಾಡಲಿದ್ದಾರೆ. ಜತೆಗೆ ಉಕ್ರೇನ್ ಮೇಲೆ ನಡೆಯುತ್ತಿರುವ ರಷ್ಯಾದ ಪೂರ್ಣ ಪ್ರಮಾಣದ ಆಕ್ರಮಣ ಮತ್ತು ಗಾಜಾದಲ್ಲಿ ಇಸ್ರೇಲ್-ಹಮಾಸ್ ನಡುವಿನ ಯುದ್ಧವನ್ನು ಶಾಂತಿಯುತವಾಗಿ ಅಂತ್ಯಗೊಳಿಸಬೇಕು ಎಂಬ ಮನವಿಯನ್ನು ಅವರು ತಮ್ಮ ಭಾಷಣದಲ್ಲಿ ಪುನರುಚ್ಚರಿಸುವ ನಿರೀಕ್ಷೆ ಇದೆ.

ಕೆನಡಾ, ಫ್ರಾನ್ಸ್, ಜರ್ಮನಿ, ಇಟಲಿ, ಜಪಾನ್, ಬ್ರಿಟನ್ ಹಾಗೂ ಅಮೆರಿಕ ಜಿ7 ಗುಂಪಿನ ಸದಸ್ಯ ರಾಷ್ಟ್ರಗಳಾಗಿವೆ.

ಈ ವರ್ಷದ ಶೃಂಗಸಭೆಯ ಆತಿಥ್ಯ ವಹಿಸಿರುವ ಇಟಲಿ, ಅಲ್ಜೀರಿಯಾದ ಅಧ್ಯಕ್ಷ ಅಬ್ದೆಲ್‌ಮಡ್ಜಿದ್ ಟೆಬ್ಬೌನ್, ಕೆನ್ಯಾದ ಅಧ್ಯಕ್ಷ ವಿಲಿಯಂ ರುಟೊ ಮತ್ತು ಟುನೀಶಿಯಾದ ಅಧ್ಯಕ್ಷ ಕೈಸ್ ಸೈದ್ ಸೇರಿದಂತೆ ಆಫ್ರಿಕಾದ ಹಲವು ನಾಯಕರನ್ನು ಸಭೆಗೆ ಆಹ್ವಾನಿಸಿದೆ. ಅಲ್ಲದೆ, ಅತಿಥಿಗಳಾಗಿ ಬ್ರೆಜಿಲ್ ಅಧ್ಯಕ್ಷ ಲೂಯಿಜ್ ಇನಾಸಿಯೊ ಲುಲಾ ಡಾ ಸಿಲ್ವಾ, ಭಾರತದ ಪ್ರಧಾನಿ ನರೇಂದ್ರ ಮೋದಿ, ಟರ್ಕಿ ಅಧ್ಯಕ್ಷ ರೆಸೆಪ್ ತಯ್ಯಿಪ್ ಎರ್ದೊಗನ್‌ಅ ವರನ್ನೂ ಇಟಲಿ ಪ್ರಧಾನಿ ಜಾರ್ಜಿಯಾ ಮೆಲೋನಿ ಆಹ್ವಾನಿಸಿದ್ದಾರೆ.

> **ಈ ನಿರ್ಣಾಯಕ ಕ್ಷಣದಲ್ಲಿ ಉಕ್ರೇನ್ ಅನ್ನು ಬೆಂಬಲಿಸುವ ಮತ್ತು ರಷ್ಯಾ ಅಧ್ಯಕ್ಷ ಪುಟಿನ್ ಸಾರಿರುವ ‘ಅಕ್ರಮ ಯುದ್ಧ’ ವನ್ನು ಕೊನೆಗೊಳಿಸಲು ನಾವು ಬದ್ಧತೆ ಪ್ರದರ್ಶಿಸಬೇಕು**
> **ರಿಷಿ ಸುನಕ್,** ಬ್ರಿಟನ್ ಪ್ರಧಾನಿ

‘ಗಾಜಾ ಕದನ ವಿರಾಮ ಬೆಂಬಲಿಸಲು ಬೈಡನ್ ಮನವಿ’

ಬಾರಿ (ಇಟಲಿ) (ರಾಯಿಟರ್ಸ್): ಗಾಜಾ ಕದನ ವಿರಾಮದ ಮಾತುಕತೆಗಳನ್ನು ಬೆಂಬಲಿಸಲು ಮತ್ತು ಇಸ್ರೇಲ್ ಬೆಂಬಲಿತ ಪ್ರಸ್ತಾಪ ಸ್ವೀಕರಿಸುವಂತೆ ಹಮಾಸ್ ಅನ್ನು ಮನವೊಲಿಸಲು ಜಿ7 ರಾಷ್ಟ್ರಗಳ ನಾಯಕರನ್ನು ಅಮೆರಿಕ ಅಧ್ಯಕ್ಷ ಜೋ ಬೈಡನ್ ಒತ್ತಾಯಿಸಲಿದ್ದಾರೆ ಎಂದು ರಾಷ್ಟ್ರೀಯ ಭದ್ರತಾ ಸಲಹೆಗಾರ ಜೇಕ್ ಸುಲ್ಲಿವಾನ್ ಗುರುವಾರ ಹೇಳಿದ್ದಾರೆ.

ದಕ್ಷಿಣ ಇಟಲಿಯಲ್ಲಿ ನಡೆಯುತ್ತಿರುವ ಜಿ7 ರಾಷ್ಟ್ರಗಳ ನಾಯಕರ ಸಭೆಯ ಹಿನ್ನೆಲೆಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಸುಲ್ಲಿವಾನ್, ಈ ಪ್ರಸ್ತಾಪವನ್ನು ಸ್ವೀಕರಿಸಲು ಮತ್ತು ಬಿಕ್ಕಟ್ಟನ್ನು ನಿವಾರಿಸಲು ಪ್ಯಾಲೆಸ್ಟೀನ್‌ನ ಬಂಡುಕೋರರ ಗುಂಪನ್ನು ಜಗತ್ತು ಉತ್ತೇಜಿಸಬೇಕು ಎಂದು ಹೇಳಿದರು. ಗಾಜಾ ಪಟ್ಟಿಯಲ್ಲಿ ಎಂಟು ತಿಂಗಳಿನಿಂದ ನಡೆಯುತ್ತಿರುವ ಯುದ್ಧವನ್ನು ಕೊನೆಗೊಳಿಸಲು ಇಸ್ರೇಲ್ ಕದನ ವಿರಾಮದ ಪ್ರಸ್ತಾಪಕ್ಕೆ ಒಪ್ಪಿಗೆ ಸೂಚಿಸಿದೆ. ಹಮಾಸ್‌ನೊಂದಿಗಿನ ಸಂಘರ್ಷ ಶಮನಗೊಳಿಸುವ ಉದ್ದೇಶದಿಂದ ಶೀಘ್ರದಲ್ಲೇ ಒಪ್ಪಂದಕ್ಕೆ ಬರುವುದು ಈ ಕದನ ವಿರಾಮದ ಗುರಿಯಾಗಿದೆ ಎಂದು ಸುಲ್ಲಿವಾನ್ ಹೇಳಿದರು.

ಶೃಂಗಸಭೆಯಲ್ಲಿ ಮೋದಿ ಭಾಗಿ

ನವದೆಹಲಿ (ಪಿಟಿಐ): ಇಟಲಿಯಲ್ಲಿ ನಡೆಯುತ್ತಿರುವ ಜಿ7 ಶೃಂಗಸಭೆಯಲ್ಲಿ ಭಾರತವು ಕೃತಕ ಬುದ್ಧಿಮತ್ತೆ, ಇಂಧನ, ಆಫ್ರಿಕಾ ಮತ್ತು ಮೆಡಿಟರೇನಿಯನ್ ವಿಷಯಗಳ ಚರ್ಚೆ ಮೇಲೆ ಗಮನ ಕೇಂದ್ರೀಕರಿಸಲಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಗುರುವಾರ ಹೇಳಿದ್ದಾರೆ.

ಮೂರನೇ ಅವಧಿಗೆ ಪ್ರಧಾನಿಯಾದ ನಂತರ ಮೋದಿ ತಮ್ಮ ಮೊದಲ ವಿದೇಶ ಪ್ರವಾಸವಾಗಿ ಗುರುವಾರ ಇಟಲಿಗೆ ತೆರಳಿದರು.

ಅವರು ಶುಕ್ರವಾರ ಶೃಂಗಸಭೆಯ ಅಧಿವೇಶನದಲ್ಲಿ ಪಾಲ್ಗೊಳ್ಳಲಿದ್ದಾರೆ. ವಿಶ್ವದ ಹಲವು ನಾಯಕರೊಂದಿಗೆ ದ್ವಿಪಕ್ಷೀಯ ಮಾತುಕತೆ ನಡೆಸಲಿದ್ದಾರೆ.

‘ಇಟಲಿ ಪ್ರಧಾನಿ ಜಾರ್ಜಿಯಾ ಮೆಲೋನಿ ಅವರ ಆಹ್ವಾನದ ಮೇರೆಗೆ ಜೂನ್ 14 ರಂದು ಜಿ 7 ಶೃಂಗಸಭೆಯಲ್ಲಿ ಭಾಗವಹಿಸಲು ಇಟಲಿಯ ಅಪುಲಿಯಾ ಪ್ರದೇಶಕ್ಕೆ ಪ್ರಯಾಣಿಸುತ್ತಿದ್ದೇನೆ. ಅಭಿವೃದ್ಧಿಯಲ್ಲಿ ಹಿಂದುಳಿದ ದೇಶಗಳಿಗೆ ಸಂಬಂಧಿಸಿದ ಪ್ರಮುಖ ವಿಷಯಗಳನ್ನು ಈ ಅಧಿವೇಶನದಲ್ಲಿ ಚರ್ಚಿಸಲಾಗುವುದು’ ಎಂದು ಮೋದಿ ಪ್ರಯಾಣಕ್ಕೂ ಮೊದಲು ಹೇಳಿದರು.

ಭಾರತ್–ಎನ್‌ಸಿಎಪಿ: ಪಂಚ್, ನೆಕ್ಸಾನ್‌ಗೆ 5 ಸ್ಟಾರ್ ಶ್ರೇಯಾಂಕ

ನವದೆಹಲಿ (ಪಿಟಿಐ): ಭಾರತ್–ನ್ಯೂ ಕಾರ್ ಅಸೆಸ್‌ಮೆಂಟ್ ಪ್ರೋಗ್ರಾಂನ (ಭಾರತ್–ಎನ್‌ಸಿಎಪಿ) ಕ್ರ್ಯಾಷ್ ಟೆಸ್ಟ್‌ನಲ್ಲಿ ಟಾಟಾ ಮೋಟರ್ಸ್‌ನ ವಿದ್ಯುತ್‌ಚಾಲಿತ ಪಂಚ್ ಮತ್ತು ನೆಕ್ಸಾನ್ ಕಾರಿಗೆ 5 ಸ್ಟಾರ್ ಶ್ರೇಯಾಂಕ ಲಭಿಸಿದೆ.

ವಿದ್ಯುತ್‌ಚಾಲಿತ ವಾಹನಗಳ ವಿಭಾಗದಲ್ಲಿ ಈ ಶ್ರೇಯಾಂಕ ಪಡೆದ ದೇಶದ ಮೊದಲ ಕಾರುಗಳು ಎಂಬ ಶ್ರೇಯ ಪಡೆದಿವೆ.

‘ಪಂಚ್ ಮತ್ತು ನೆಕ್ಸಾನ್ ಭಾರತದ ಆಟೊಮೊಬೈಲ್ ಮಾರುಕಟ್ಟೆಯ ವಿದ್ಯುತ್‌ಚಾಲಿತ ವಾಹನಗಳ ವಿಭಾಗದಲ್ಲಿ 5 ಸ್ಟಾರ್ ಶ್ರೇಯಾಂಕ ಪಡೆದಿರುವುದು ಹೆಮ್ಮೆಯ ಸಂಗತಿ’ ಎಂದು ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವ ನಿತಿನ್ ಗಡ್ಕರಿ ಅವರು ‘ಎಕ್ಸ್’ನಲ್ಲಿ ಅಭಿನಂದಿಸಿದ್ದಾರೆ.

‘ಭಾರತ್ ಎನ್‌ಸಿಎಪಿ’ ಮೂಲಕ ನೀಡುವ ಶ್ರೇಯಾಂಕವು ವಾಹನಗಳು ಎಷ್ಟು ಸುರಕ್ಷಿತವಾಗಿವೆ ಎಂಬುದನ್ನು ಗ್ರಾಹಕರಿಗೆ ಮನದಟ್ಟು ಮಾಡುತ್ತದೆ. ಅಲ್ಲದೆ, ಸುರಕ್ಷಿತ ವಾಹನಗಳ ಆಯ್ಕೆ ಮತ್ತು ಖರೀದಿಸಲು ಅವರಿಗೆ ನೆರವಾಗಲಿದೆ’ ಎಂದು ಹೇಳಿದ್ದಾರೆ.



ಜಾಗತಿಕ ಮಾನದಂಡದ ಪ್ರಕಾರ ಭಾರತ್–ಎನ್‌ಸಿಎಪಿ ಅಡಿಯಲ್ಲಿ ಕ್ರ್ಯಾಷ್ ಟೆಸ್ಟ್ ನಡೆಯುತ್ತದೆ. ಸಾರಿಗೆ ಸಚಿವಾಲಯದ ನಿಯಮಾವಳಿಗಳ ಅನ್ವಯವೇ ರಸ್ತೆ ಮತ್ತು ವಾಹನ ಸುರಕ್ಷತೆಯ ಮಾನದಂಡ ಆಧರಿಸಿ ಶ್ರೇಯಾಂಕ ನೀಡುವ ವ್ಯವಸ್ಥೆಯನ್ನು ವಿನ್ಯಾಸಗೊಳಿಸಲಾಗಿದೆ ಎಂದು ತಿಳಿಸಿದ್ದಾರೆ.

ಅಡಿಕೆ ಧಾರಣೆ (₹ಗಳಲ್ಲಿ)

ಬಂಟ್ವಾಳ	
ಕೋಕ	18000-28500
ಹೊಸತು	28500-38000
ಹಳತು	38000-46500
ಕಾರ್ಕಳ	
ಹೊಸತು	25000-38000
ಹಳತು	30000-47500
ಕುಮಟ	
ಚಿಪ್ಪು	23319-31269
ಕೋಕ	11060-29889
ಹಳೆಚಾಲಿ	35569-38999
ಹೊಸಚಾಲಿ	32100-35256
ಸಾಗರ	
ಬಿಳಿಗೋಟು	10199-28011
ಚಾಲಿ	26899-35209
ಕೋಕ	11021-28499
ಕೆಂಪುಗೋಟು	17869-35699
ರಾಶಿ	34699-53099
ಸಿಪ್ಪೆಗೋಟು	10389-19129
ಶಿವಮೊಗ್ಗ	
ಬೆಟ್ಟೆ	47400-56159
ಗೊರಬಲು	17850-36169
ರಾಶಿ	33110-53399
ಸರಕು	48800-86396
ಸಿದ್ದಾಪುರ	
ಬಿಳಿಗೋಟು	26619-28919
ಚಾಲಿ	34059-36319
ಕೋಕ	25699-28989
ಕೆಂಪುಗೋಟು	26900-33700
ರಾಶಿ	43389-49599
ತಟ್ಟಿಬೆಟ್ಟೆ	38900-48500
ಶಿರಸಿ	
ಬೆಟ್ಟೆ	32399-46899
ಬಿಳಿಗೋಟು	23550-30600
ಚಾಲಿ	33181-37411
ಕೆಂಪುಗೋಟು	20199-28369
ರಾಶಿ	46599-48309
ಯಲ್ಲಾಪುರ	
ಹೊಸಚಾಲಿ	31899-36790
ಕೆಂಪುಗೋಟು	22899-33100
ರಾಶಿ	44606-52899
ತಟ್ಟಿಬೆಟ್ಟೆ	34969-43989
ಬಿಳಿಗೋಟು	22009-31805
ಕೋಕ	8899-26412

ಸ್ಥಳಾಂತರಗೊಂಡವರ ಸಂಖ್ಯೆ 12 ಕೋಟಿ: ವಿಶ್ವಸಂಸ್ಥೆ

ಜಿನಿವಾ (ಎಎಫ್‌ಪಿ): ಯುದ್ಧ, ಹಿಂಸಾಚಾರ ಮತ್ತು ಕಿರುಕುಳ ಇತ್ಯಾದಿಯಿಂದಾಗಿ ಜಾಗತಿಕವಾಗಿ 12 ಕೋಟಿ ಜನರು ಬಲವಂತವಾಗಿ ಸ್ಥಳಾಂತರವಾಗಿದ್ದಾರೆ ಎಂದು ವಿಶ್ವಸಂಸ್ಥೆಯು ಗುರುವಾರ ಹೇಳಿದೆ.

ಗಾಜಾ, ಸುಡಾನ್, ಮ್ಯಾನ್ಮಾರ್‌ನಲ್ಲಿ ನಡೆದಿರುವ ಸಂಘರ್ಷದಿಂದಾಗಿ ಹೆಚ್ಚಿನ ಸಂಖ್ಯೆಯಲ್ಲಿ ಜನರು ತಮ್ಮ ಮನೆಗಳನ್ನು ತೊರೆದಿದ್ದಾರೆ ಎಂದು ವಿಶ್ವಸಂಸ್ಥೆಯ ನಿರಾಶ್ರಿತರ ಘಟಕ ಯುಎನ್‌ಎಚ್‌ಸಿಆರ್ ತಿಳಿಸಿದೆ.

ಜಾಗತಿಕವಾಗಿ ಸ್ಥಳಾಂತರಗೊಂಡವರ ಜನಸಂಖ್ಯೆಯು ಜಪಾನ್‌ನ ಜನಸಂಖ್ಯೆಗೆ ಸಮಾನವಾಗಿದೆ ಎಂದು ಅದು ಹೇಳಿದೆ. ‘ಸಂಘರ್ಷವು ಸಾಮೂಹಿಕ ಸ್ಥಳಾಂತರಕ್ಕೆ ಮುಖ್ಯ ಕಾರಣವಾಗಿದೆ’ ಎಂದು ವಿಶ್ವಸಂಸ್ಥೆಯ ನಿರಾಶ್ರಿತರ ಘಟಕದ ಮುಖ್ಯಸ್ಥರಾದ ಫಿಲಿಪ್ಪೊ ಗ್ರಾಂಡಿ ತಿಳಿಸಿದ್ದಾರೆ.

ಕಳೆದ ವರ್ಷದ ಅಂತ್ಯದವರೆಗೆ ಸ್ಥಳಾಂತರಗೊಂಡವರ ಒಟ್ಟು ಸಂಖ್ಯೆ 11.73 ಕೋಟಿ ಎಂದು ಯುಎನ್‌ಎಚ್‌ಸಿಆರ್ ವರದಿಯಲ್ಲಿ ತಿಳಿಸಿದೆ.

ಈ ವರ್ಷದ ಏಪ್ರಿಲ್ ಅಂತ್ಯದ ವೇಳೆಗೆ ಈ ಸಂಖ್ಯೆ ಮತ್ತಷ್ಟು ಹೆಚ್ಚಾಗಿದೆ. ಜಗತ್ತಿನಾದ್ಯಂತ ಅಂದಾಜು 12 ಕೋಟಿ ಜನರು ಸ್ಥಳಾಂತರವಾಗಿದ್ದಾರೆ. 12 ವರ್ಷಗಳಿಂದ ಈ ಸಂಖ್ಯೆ ಹೆಚ್ಚುತ್ತಲೇ ಇದೆ. ಅಂತರರಾಷ್ಟ್ರೀಯ ಬಿಕ್ಕಟ್ಟುಗಳು ಹಾಗೂ ಆಯಾ ದೇಶದೊಳಗಿನ ಆಂತರಿಕ ಸಂಘರ್ಷಗಳನ್ನು ತ್ವರಿತವಾಗಿ ಬಗೆಹರಿಸಲು ವಿಫಲವಾಗಿರುವ ಕಾರಣ 2012ರಿಂದ ವಲಸೆ ಹೋದವರ ಸಂಖ್ಯೆ ಮೂರು ಪಟ್ಟು ಹೆಚ್ಚಾಗಿದೆ ಎಂದು ಹೇಳಿದೆ.

ರುದರ್‌ಫೋರ್ಡ್ ಅಬ್ಬರದ ಬ್ಯಾಟಿಂಗ್ • ಅಲ್ಜರಿಗೆ ನಾಲ್ಕು ವಿಕೆಟ್ • ನ್ಯೂಜಿಲೆಂಡ್‌ಗೆ ನಿರಾಸೆ

ಸೂಪರ್ ಎಂಟರ ಹಂತಕ್ಕೆ ವಿಂಡೀಸ್

ತರೋಬಾ, ಟ್ರಿನಿಡಾಡ್ (ಪಿಟಿಐ): ಶೆರ್ಫೇನ್ ರುದರ್‌ಫೋರ್ಡ್ ಅಬ್ಬರದ ಬ್ಯಾಟಿಂಗ್‌ನಿಂದ ಆತಿಥೇಯ ವೆಸ್ಟ್ ಇಂಡೀಸ್ ತಂಡವು 'ಸಿ' ಗುಂಪಿನ ಪಂದ್ಯದಲ್ಲಿ ನ್ಯೂಜಿಲೆಂಡ್ ಎದುರು ಜಯಿಸಿತು. ಇದರೊಂದಿಗೆ ಟಿ20 ವಿಶ್ವಕಪ್ ಕ್ರಿಕೆಟ್ ಟೂರ್ನಿಯ ಸೂಪರ್ 8 ಹಂತ ಪ್ರವೇಶಿಸಿತು.

ಬ್ರಯನ್ ಲಾರಾ ಕ್ರೀಡಾಂಗಣದಲ್ಲಿ ಗುರುವಾರ ಬೆಳಿಗ್ಗೆ (ಭಾರತೀಯ ಕಾಲಮಾನ) ನಡೆದ ಪಂದ್ಯದಲ್ಲಿ ವಿಂಡೀಸ್ ತಂಡವು 13 ರನ್‌ಗಳಿಂದ ಗೆದ್ದಿತು.

ಟಾಸ್ ಗೆದ್ದ ನ್ಯೂಜಿಲೆಂಡ್ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ವಿಂಡೀಸ್ ತಂಡವು ಆರಂಭದಲ್ಲಿ ಎಡವಿತು. ಹೀಗಾಗಿ ಕಿವೀಸ್ ಬೌಲರ್‌ಗಳ ದಾಳಿಯ ಮುಂದೆ 30 ರನ್‌ಗಳಿಗೆ 5 ವಿಕೆಟ್ ಕಳೆದುಕೊಂಡಿತು.

ಈ ಹಂತದಲ್ಲಿ ರುದರ್‌ಫೋರ್ಡ್ (ಔಟಾಗದೆ 68; 39ಎ, 4X2, 6X6) ತಂಡಕ್ಕೆ ಆಸರೆಯಾದರು. ಇದರಿಂದಾಗಿ ವಿಂಡೀಸ್ ತಂಡವು 20 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 149 ರನ್‌ಗಳ ಹೋರಾಟದ ಮೊತ್ತ ಗಳಿಸಿತು.

ನ್ಯೂಜಿಲೆಂಡ್ ತಂಡದಲ್ಲಿಯೂ ಉತ್ತಮ ಬ್ಯಾಟರ್‌ಗಳಿದ್ದರು. ಆದರೆ ಕೇನ್ ವಿಲಿಯಮ್ಸನ್ ಬಳಗವನ್ನು ವೇಗಿ ಅಲ್ಜರಿ ಜೋಸೆಫ್ (19ಕ್ಕೆ4) ಮತ್ತು ಸ್ಪಿನ್ನರ್ ಗುಡಕೇಶ್ ಮೋತಿ (25ಕ್ಕೆ3) ಕಟ್ಟಿಹಾಕಿದರು.

ನ್ಯೂಜಿಲೆಂಡ್ ತಂಡವು 20 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 136 ರನ್ ಗಳಿಸಿತು. ಫಿನ್ ಅಲೆನ್ (26; 23ಎ) ಮತ್ತು ಮಧ್ಯಮ ಕ್ರಮಾಂಕದಲ್ಲಿ ಗ್ಲೆನ್ ಫಿಲಿಪ್ಸ್ (40; 33ಎ, 4X3, 6X2) ಹೋರಾಟ ತಂಡದ ಜಯಕ್ಕೆ ಸಾಕಾಗಲಿಲ್ಲ. ಇದರಿಂದಾಗಿ ತಂಡವು ಆಡಿದ ಎರಡೂ ಪಂದ್ಯಗಳಲ್ಲಿ ಸೋತಿದೆ. ಸೂಪರ್ 8ರ ಘಟ್ಟ ತಲುಪುವುದು ಅನುಮಾನವಾಗಿದೆ.

ಸಂಕ್ಷಿಪ್ತ ಸ್ಕೋರು: ವೆಸ್ಟ್ ಇಂಡೀಸ್: 20 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 149 (ಶೆರ್ಫೇನ್ ರುದರ್‌ಫೋರ್ಡ್ ಔಟಾಗದೆ 68, ನಿಕೊಲಸ್ ಪೂರನ್ 17, ಅಕೀಲ್ ಹುಸೇನ್ 15, ಆ್ಯಂಡ್ರೆ ರಸೆಲ್ 14, ರೊಮೆರಿಯೊ ಶೆಫರ್ಡ್ 13, ಟ್ರೆಂಟ್ ಬೌಲ್ಟ್ 16ಕ್ಕೆ3, ಟಿಮ್ ಸೌಥಿ 21ಕ್ಕೆ2, ಲಾಕಿ ಫರ್ಗ್ಯುಸನ್ 27ಕ್ಕೆ2) **ನ್ಯೂಜಿಲೆಂಡ್:** 20 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 136 (ಫಿನ್ ಅಲೆನ್ 26, ಡೆರಿಲ್ ಮಿಚೆಲ್ 12, ಗ್ಲೆನ್ ಫಿಲಿಪ್ಸ್ 40, ಮಿಚೆಲ್ ಸ್ಯಾಂಟನರ್ ಔಟಾಗದೆ 21, ಅಲ್ಜರಿ ಜೋಸೆಫ್ 19ಕ್ಕೆ4, ಗುಡಕೇಶ್ ಮೋತಿ 25ಕ್ಕೆ3) **ಫಲಿತಾಂಶ:** ವೆಸ್ಟ್ ಇಂಡೀಸ್ ತಂಡಕ್ಕೆ 13 ರನ್‌ಗಳ ಜಯ. **ಪಂದ್ಯ ಶ್ರೇಷ್ಠ:** ಶೆರ್ಫೇನ್ ರುದರ್‌ಫೋರ್ಡ್.


ವೆಸ್ಟ್ ಇಂಡೀಸ್ ಬ್ಯಾಟರ್ ಶೆರ್ಫೇನ್ ರುದರ್‌ಫೋರ್ಡ್ —ಎಪಿ/ಪಿಟಿಐ ಚಿತ್ರ

ಟಿ20 ವಿಶ್ವಕಪ್: ಪಾಯಿಂಟ್ ಪಟ್ಟಿ

ತಂಡ	ಆಡಿದ ಪಂದ್ಯ	ಗೆಲುವು	ಸೋಲು	ಫಲಿತಾಂಶ ಇಲ್ಲ	ಪಾಯಿಂಟ್ಸ್	ನೆಟ್ ರನ್‌ರೇಟ್
'ಎ' ಗುಂಪು						
ಭಾರತ	3	3	0	0	6	1.137
ಅಮೆರಿಕ	3	2	1	0	4	0.127
ಪಾಕಿಸ್ತಾನ	3	1	2	0	2	0.191
ಕೆನಡಾ	3	1	2	0	2	-0.493
ಐರ್ಲೆಂಡ್	2	0	2	0	0	-1.712
'ಬಿ' ಗುಂಪು						
ಆಸ್ಟ್ರೇಲಿಯಾ	3	3	0	0	6	3.580
ಸ್ಕಾಟ್ಲೆಂಡ್	3	2	0	1	5	2.164
ನಮಿಬಿಯಾ	3	1	2	0	2	-2.098
ಇಂಗ್ಲೆಂಡ್	2	0	1	1	1	-1.800
ಒಮಾನ್	3	0	3	0	0	-1.613
'ಸಿ' ಗುಂಪು						
ವೆಸ್ಟ್ ಇಂಡೀಸ್	3	3	0	0	6	2.596
ಅಫ್ಘಾನಿಸ್ತಾನ	2	2	0	0	4	5.225
ಯುಗಾಂಡ	3	1	2	0	2	-4.217
ಪಾ. ನ್ಯೂಗಿನಿ	2	0	2	0	0	-0.434
ನ್ಯೂಜಿಲೆಂಡ್	2	0	2	0	0	-2.425
'ಡಿ' ಗುಂಪು						
ದಕ್ಷಿಣ ಆಫ್ರಿಕಾ	3	3	0	0	6	0.603
ಬಾಂಗ್ಲಾದೇಶ	3	2	1	0	4	0.478
ನೆದರ್ಲೆಂಡ್ಸ್	3	1	2	0	2	-0.408
ನೇಪಾಳ	2	0	1	1	1	-0.539
ಶ್ರೀಲಂಕಾ	3	0	2	1	1	-0.777

*ಗುರುವಾರದ ಪಂದ್ಯದವರೆಗೆ

ಆತಿಥೇಯರಿಗೆ ಐರ್ಲೆಂಡ್ ಸವಾಲು

ಪಾಕಿಸ್ತಾನದ ಸೂಪರ್ ಎಂಟರ ಭವಿಷ್ಯ ಅಮೆರಿಕ ಕೈಯಲ್ಲಿ?

ಫ್ಲಾರಿಡಾ (ಪಿಟಿಐ): ಬಾಬರ್ ಆಜಂ ನಾಯಕತ್ವದ ಪಾಕಿಸ್ತಾನ ತಂಡದವರ ಕಣ್ಣುಗಳು ಈಗ ಲಾಡರ್‌ಹಿಲ್‌ನಲ್ಲಿರುವ ಸೆಂಟ್ರಲ್ ಬ್ರೊವಾರ್ಡ್ ರೀಜನಲ್ ಪಾರ್ಕ್ ಕ್ರೀಡಾಂಗಣದ ಮೇಲೆ ನೆಟ್ಟಿವೆ.

ಶುಕ್ರವಾರ ಈ ಕ್ರೀಡಾಂಗಣದಲ್ಲಿ ನಡೆಯಲಿರುವ ಅಮೆರಿಕ ಮತ್ತು ಐರ್ಲೆಂಡ್ ನಡುವಣ ಪಂದ್ಯದ ಫಲಿತಾಂಶವು ಪಾಕ್ ತಂಡದ 'ಭವಿಷ್ಯ' ನಿರ್ಧರಿಸಲಿದೆ.

ಎ ಗುಂಪಿನ ಈ ಪಂದ್ಯದಲ್ಲಿ ಒಂದೊಮ್ಮೆ ಅಮೆರಿಕ ಜಯಿಸಿದರೆ ಪಾಕ್ ತಂಡವು ಸೂಪರ್ 8ರ ಹಂತಕ್ಕೆ ತಲುಪುವ ಕನಸು ಭಗ್ನವಾಗಲಿದೆ. ಒಂದೊಮ್ಮೆ ಸೋತರೆ ಬಾಬರ್ ಬಳಗಕ್ಕೆ ಒಂದು ಅವಕಾಶ ಉಳಿಯಲಿದೆ.

ಎ ಗುಂಪಿನಲ್ಲಿ ಅಮೆರಿಕ ತಂಡವು ನಾಲ್ಕು ಅಂಕಗಳೊಂದಿಗೆ ಎರಡನೇ ಸ್ಥಾನದಲ್ಲಿದೆ. ಮೂರು ಪಂದ್ಯಗಳನ್ನು ಆಡಿರುವ ಅಮೆರಿಕವು ಭಾರತದ ಎದುರು ಸೋತಿದೆ. ಆದರೆ ಪಾಕಿಸ್ತಾನ ಮತ್ತು ಕೆನಡಾ ತಂಡದ ವಿರುದ್ಧ ಜಯಿಸಿದೆ. ಐರ್ಲೆಂಡ್ ತಂಡವು ಆಡಿರುವ ಎರಡೂ ಪಂದ್ಯಗಳಲ್ಲಿ ಸೋತಿದೆ. ಈ ಗುಂಪಿನಿಂದ ಭಾರತ ತಂಡವು ಈಗಾಗಲೇ ಸೂಪರ್ ಎಂಟರ ಘಟ್ಟ ತಲುಪಿದೆ.

ಪಾಕ್ ತಂಡವು ಈಗಾಗಲೇ ಮೂರು ಪಂದ್ಯಗಳನ್ನು ಆಡಿದೆ. ಕೇವಲ ಎರಡು ಅಂಕಗಳನ್ನು ಗಳಿಸಿದೆ. ಶುಕ್ರವಾರದ ಪಂದ್ಯದಲ್ಲಿ ಅಮೆರಿಕ ಸೋತರೆ, ಪಾಕ್ ತಂಡವು ತನ್ನ ಕೊನೆಯ ಪಂದ್ಯದಲ್ಲಿ ದೊಡ್ಡ ರನ್‌ರೇಟ್ ನೊಂದಿಗೆ ಜಯಿಸಬೇಕಾಗುತ್ತದೆ. ಒಂದೊಮ್ಮೆ ಮಳೆ ಬಂದು ಪಂದ್ಯ ರದ್ದಾದರೆ ಉಭಯ ತಂಡಗಳಿಗೂ ತಲಾ ಒಂದು ಅಂಕ ಲಭಿಸುತ್ತವೆ. ಇದರಿಂದಾಗಿ ಐದು ಅಂಕಕ್ಕೇರುವ ಅಮೆರಿಕ ತಂಡಕ್ಕೆ ಲಾಭ. ಪಾಕ್ ಹೊರ ಬೀಳುವುದು ಖಚಿತ.


ಅಮೆರಿಕ ತಂಡದ ಸೌರಭ್ ನೇತ್ರಾವಳ್ಕರ್ ಮತ್ತು ಸಹ ಆಟಗಾರರು—ಎಎಫ್‌ಪಿ ಚಿತ್ರ

ಇಂದಿನ ಪಂದ್ಯ

Vs	ಅಫ್ಘಾನಿಸ್ತಾನ – ಪಾಪುವಾ ನ್ಯೂಗಿನಿ	ಬೆಳಿಗ್ಗೆ 6.00
Vs	ಅಮೆರಿಕ – ಐರ್ಲೆಂಡ್	ರಾತ್ರಿ 8.00
ಲೈವ್	ಸ್ಟಾರ್ ಸ್ಪೋರ್ಟ್ಸ್, ಡಿಡಿ ಸ್ಪೋರ್ಟ್ಸ್, ಹಾಟ್ ಸ್ಟಾರ್	

ವಿಶ್ವಕಪ್ ಪಂದ್ಯಗಳಿಗೆ ನಿರ್ಮಿಸಲಾಗಿದ್ದ ತಾತ್ಕಾಲಿಕ ಮೈದಾನ

ನಾಸೌ ಕೌಂಟಿ ಕ್ರೀಡಾಂಗಣ ಸ್ಥಳಾಂತರ!

ನ್ಯೂಯಾರ್ಕ್ (ಪಿಟಿಐ): ಟಿ20 ಕ್ರಿಕೆಟ್ ವಿಶ್ವಕಪ್ ಟೂರ್ನಿಯ ಪಂದ್ಯಗಳ ಆಯೋಜನೆಗಾಗಿ ನಿರ್ಮಿಸಲಾಗಿದ್ದ ನಾಸೌ ಕೌಂಟಿ ಕ್ರಿಕೆಟ್ ಕ್ರೀಡಾಂಗಣವನ್ನು ಸ್ಥಳಾಂತರಿಸಲಾಗುವುದು.

ಕೇವಲ 100 ದಿನಗಳಲ್ಲಿ ಈ 'ತಾತ್ಕಾಲಿಕ ಕ್ರೀಡಾಂಗಣ'ವನ್ನು ನಿರ್ಮಾಣ ಮಾಡಲಾಗಿತ್ತು. ಆಸ್ಟ್ರೇಲಿಯಾದ ಅಡಿಲೇಡ್‌ನಿಂದ ತಂದ ಡ್ರಾಪ್ ಇನ್ ಪಿಚ್‌ಗಳನ್ನು ಇಲ್ಲಿ ಅಳವಡಿಸಲಾಗಿತ್ತು. ಬುಧವಾರದವರೆಗೆ ಇಲ್ಲಿ ನಡೆದ ಪಂದ್ಯಗಳಲ್ಲಿ ಬ್ಯಾಟರ್‌ಗಳು ರನ್ ಗಳಿಸಲು ಹರಸಾಹಸಪಟ್ಟಿದ್ದರು.

ಭಾರತ ಮತ್ತು ಅಮೆರಿಕ ನಡುವಣ ಪಂದ್ಯವೇ ಇಲ್ಲಿ ನಡೆದ ಕೊನೆಯ ಪಂದ್ಯವಾಯಿತು. ಅದರಲ್ಲಿ ಭಾರತ ತಂಡವು 7 ವಿಕೆಟ್‌ಗಳಿಂದ ಜಯಿಸಿತು.

ಲಾಂಗ್ ಐಲ್ಯಾಂಡ್‌ನಲ್ಲಿರುವ 930 ಎಕರೆ ವಿಸ್ತಾರದ ಐಸೆನ್‌ಹೋವರ್ ಪಾರ್ಕ್‌ನಲ್ಲಿ ಈ ಕ್ರೀಡಾಂಗಣ ನಿರ್ಮಾಣವಾಗಿತ್ತು. ಕ್ರೀಡಾಂಗಣದಲ್ಲಿ ಒಟ್ಟು 10 ಡ್ರಾಪ್ ಇನ್ ಪಿಚ್‌ಗಳನ್ನು ಅಳವಡಿಸಲಾಗಿತ್ತು. ಅದರಲ್ಲಿ ನಾಲ್ಕು ಮುಖ್ಯ ಪಿಚ್‌ಗಳಾಗಿದ್ದವು. ಇನ್ನುಳಿದ ಆರು ಅಭ್ಯಾಸಕ್ಕಾಗಿ ಬಳಕೆಯಾದವು.

ಇಲ್ಲಿಯ ಮೂಲಸೌಲಭ್ಯಗಳಿಗೆ ಬಳಸಲಾದ ಎಲ್ಲ ಸಾಮಗ್ರಿ, ಸಲಕರಣೆಗಳನ್ನು ಪ್ರತ್ಯೇಕ ಭಾಗಗಳಾಗಿ ಬಿಚ್ಚಿ ಬೇರೆಡೆ ಸಾಗಿಸಬಹುದಾಗಿದೆ.

'ಜೂನ್ 12ರಂದು ನಡೆದ ಪಂದ್ಯದ ನಂತರ ಕ್ರೀಡಾಂಗಣದ ಮೂಲಸೌಕರ್ಯಗಳಿಗೆ ಬಳಕೆಯಾದ ಸಾಮಗ್ರಿಗಳನ್ನು ಪ್ರತ್ಯೇಕವಾಗಿ ಬಿಚ್ಚಿ ಲಾಸ್ ವೇಗಾಸ್‌ಗೆ ಕಳುಹಿಸಲಾಗುತ್ತಿದೆ. ಅಲ್ಲಿ ನಡೆಯುವ ಗಾಲ್ಫ್ ಟೂರ್ನಿಯ ಆಯೋಜನೆಗೆ ಈ ಸಲಕರಣೆಗಳನ್ನು ಬಳಸಲಾಗುತ್ತದೆ. ತದನಂತರ ಐಸೆನ್‌ಹೋವರ್ ಪಾರ್ಕ್ ಮೊದಲಿನಂತೆ ಬಳಕೆಗೆ ಮುಕ್ತವಾಗಲಿದೆ' ಎಂದು ನ್ಯೂಯಾರ್ಕ್ ಟೈಮ್ಸ್ ವರದಿ ಮಾಡಿದೆ.

ಆರು ವಾರಗಳ ಅವಧಿಯಲ್ಲಿ ಈ ಸ್ಥಳಾಂತರ ಕಾಮಗಾರಿ ನಡೆಯಲಿದೆ. 34 ಸಾವಿರ ಪ್ರೇಕ್ಷಕರಿಗಾಗಿ ಗ್ಯಾಲರಿಗಳನ್ನು ನಿರ್ಮಿಸಲಾಗಿತ್ತು. ಜೂನ್ 9ರಂದು ಇಲ್ಲಿಯೇ ನಡೆದಿದ್ದ ಭಾರತ ಮತ್ತು ಪಾಕಿಸ್ತಾನ ನಡುವಣ ಪಂದ್ಯಕ್ಕೆ ಕ್ರೀಡಾಂಗಣ ಭರ್ತಿಯಾಗಿತ್ತು.

ಭಾರತ ತಂಡವು ಈ ಕ್ರೀಡಾಂಗಣದಲ್ಲಿ ಅಭ್ಯಾಸ ಪಂದ್ಯವೂ ಸೇರಿದಂತೆ ಒಟ್ಟು ನಾಲ್ಕು ಪಂದ್ಯಗಳನ್ನು ಆಡಿದೆ. ಟೂರ್ನಿಯ ಒಟ್ಟು ಎಂಟು ಪಂದ್ಯಗಳು ಇಲ್ಲಿ ನಡೆದವು.



ಅಜೇಯ ಅರ್ಧಶತಕ ಗಳಿಸಿದ ಶಕೀಬ್ ಅಲ್ ಹಸನ್ —ಎಎಫ್‌ಪಿ ಚಿತ್ರ

ಶಕೀಬ್ ಅರ್ಧಶತಕ: ಡಚ್ಚರ ವಿರುದ್ಧ ಬಾಂಗ್ಲಾಕ್ಕೆ ಜಯ

ಕಿಂಗ್ಸ್‌ಟೌನ್, ಸೇಂಟ್ ವಿನ್ಸೆಂಟ್ (ಪಿಟಿಐ): ಅನುಭವಿ ಆಟಗಾರ ಶಕೀಬ್ ಅಲ್ ಹಸನ್ (64*, 46ಎ, 4X9) ಅವರ ಅಜೇಯ ಅರ್ಧಶತಕ ಹಾಗೂ ರಿಶಾದ್ ಹುಸೇನ್ (33ಕ್ಕೆ 3) ಅವರ ಪರಿಣಾಮಕಾರಿ ಬೌಲಿಂಗ್ ದಾಳಿಯ ನೆರವಿನಿಂದ ಬಾಂಗ್ಲಾದೇಶ ತಂಡವು ಟಿ20 ವಿಶ್ವಕಪ್ 'ಡಿ' ಗುಂಪಿನ ಮಹತ್ವದ ಪಂದ್ಯದಲ್ಲಿ ಗುರುವಾರ ನೆದರ್ಲೆಂಡ್ಸ್ ತಂಡವನ್ನು 25 ರನ್‌ಗಳಿಂದ ಮಣಿಸಿತು.

160 ರನ್‌ಗಳ ಗೆಲುವಿನ ಗುರಿಯನ್ನು ಬೆನ್ನತ್ತಿದ ಡಚ್ ತಂಡವು ಆರಂಭಿಕ ಆಟಗಾರರನ್ನು ಬೇಗನೆ ಕಳೆದುಕೊಂಡರೂ ನಂತರ ಚೇತರಿಕೆಯ ಹಾದಿಯಲ್ಲಿತ್ತು. ಒಂದು ಹಂತದಲ್ಲಿ 3 ವಿಕೆಟ್‌ಗೆ 111 ರನ್ ಗಳಿಸಿ, ಜಯಕ್ಕೆ 32 ಎಸೆತಗಳಲ್ಲಿ 49 ರನ್ ಬೇಕಾಗಿತ್ತು. ಈ ವೇಳೆ ತಂಡವು ನಾಟಕೀಯ ಕುಸಿತಕ್ಕೆ ಒಳಗಾಯಿತು. ಕೇವಲ 6 ರನ್ ಅಂತರದಲ್ಲಿ ನಾಲ್ಕು ವಿಕೆಟ್ ಕಳೆದುಕೊಂಡಿತು. ಹೀಗಾಗಿ, 20 ಓವರ್‌ಗಳಲ್ಲಿ 8 ವಿಕೆಟ್‌ಗೆ 134 ರನ್‌ಗಳಿಸಿ ಸವಾಲನ್ನು ಮುಗಿಸಿತು. ಸೈಬ್ರಾಂಡ್ ಎಂಗಲ್‌ಬ್ರೆಕ್ಟ್ (33), ವಿಕ್ರಮಜಿತ್ ಸಿಂಗ್ (26), ನಾಯಕ ಸ್ಕಾಟ್ ಎಡ್ವರ್ಡ್ಸ್ (25) ಕೊಂಚ ಹೋರಾಟ ತೋರಿದರು.

ಇದಕ್ಕೂ ಮೊದಲು ಟಾಸ್ ಸೋತು ಬ್ಯಾಟಿಂಗ್‌ಗೆ ಇಳಿದ ಬಾಂಗ್ಲಾ ತಂಡವು ನಿಗದಿತ ಓವರ್‌ಗಳಲ್ಲಿ 5 ವಿಕೆಟ್‌ಗೆ 159 ರನ್ ಗಳಿಸಿತ್ತು. ಆಫ್ ಸ್ಪಿನ್ನರ್ ಆರ್ಯನ್ ದತ್ (17ಕ್ಕೆ2) ತಂಡಕ್ಕೆ ಆರಂಭದಲ್ಲೇ ಯಶಸ್ಸು ದೊರಕಿಸಿಕೊಟ್ಟರು. ಆದರೆ, ಶಕೀಬ್ ಕೆಲವು ಜೊತೆಯಾಟಗಳ ಮೂಲಕ ತಂಡ ಕುಸಿಯದಂತೆ ನೋಡಿಕೊಂಡರು. ಇದು ಅವರಿಗೆ ಈ ಮಾದರಿಯಲ್ಲಿ 13ನೇ ಅರ್ಧ ಶತಕ.

ಮೂರನೇ ವಿಕೆಟ್‌ಗೆ ತಂಜಿದ್ ಹಸನ್ (35, 26ಎ, 4x5, 6x1) ಜೊತೆಗೂಡಿದ ಶಕೀಬ್ ಲಗುಬಗನೇ 48 ರನ್ ಸೇರಿಸಿದರು. ಮಹಮುದುಲ್ಲಾ (25, 21ಎ) ಜೊತೆ ಐದನೇ ವಿಕೆಟ್‌ಗೆ 41 ರನ್ ಸೇರಿಸಿದ್ದರಿಂದ ತಂಡ ಗೌರವದ ಮೊತ್ತ ಗಳಿಸಲು ಸಾಧ್ಯವಾಯಿತು.

ಸ್ಕೋರುಗಳು: ಬಾಂಗ್ಲಾದೇಶ: 20 ಓವರುಗಳಲ್ಲಿ 5 ವಿಕೆಟ್‌ಗೆ 159 (ತಂಜಿದ್ ಹಸನ್ 35, ಶಕೀಬ್ ಅಲ್ ಹಸನ್ ಔಟಾಗದೇ 64, ಮಹಮುದುಲ್ಲಾ 25; ಆರ್ಯನ್ ದತ್ 17ಕ್ಕೆ2, ಪಾಲ್ ವಾನ್ ಮೀಕೆರನ್ 15ಕ್ಕೆ2, ಟಿಮ್ ಪ್ರಿಂಗಲ್ 26ಕ್ಕೆ1). **ನೆದರ್ಲೆಂಡ್ಸ್:** 20 ಓವರ್‌ಗಳಲ್ಲಿ 8 ವಿಕೆಟ್‌ಗೆ 134 (ವಿಕ್ರಮಜಿತ್ ಸಿಂಗ್ 26, ಸೈಬ್ರಾಂಡ್ ಎಂಗಲ್‌ಬ್ರೆಕ್ಟ್ 33, ಸ್ಕಾಟ್ ಎಡ್ವರ್ಡ್ಸ್ 25; ರಿಶಾದ್ ಹುಸೇನ್ 33ಕ್ಕೆ 3, ತಸ್ಕಿನ್ ಅಹ್ಮದ್ 30ಕ್ಕೆ 2). **ಪಂದ್ಯದ ಆಟಗಾರ:** ಶಕೀಬ್ ಅಲ್ ಹಸನ್

ಕೇಂದ್ರೀಯ ಚಲನಚಿತ್ರ ಪ್ರಮಾಣೀಕರಣ ಮಂಡಳಿಗೆ ತರಾಟೆ

'ಹಮಾರೆ ಬಾರಹ್' ಚಿತ್ರಕ್ಕೆ ತಡೆ

ನವದೆಹಲಿ (ಪಿಟಿಐ): ಅನ್ನೂ ಕಪೂರ್ ಅವರ 'ಹಮಾರೆ ಬಾರಹ್' ಸಿನಿಮಾ ಬಿಡುಗಡೆಗೆ ಸುಪ್ರೀಂ ಕೋರ್ಟ್ ಗುರುವಾರ ತಡೆ ನೀಡಿದೆ. ಜೂನ್ 14ರಂದು ಸಿನಿಮಾ ಬಿಡುಗಡೆ ಆಗಬೇಕಿತ್ತು. ಈ ಚಿತ್ರಕ್ಕೆ ಕರ್ನಾಟಕದಲ್ಲಿ ಈಗಾಗಲೇ ನಿಷೇಧ ಹೇರಲಾಗಿದೆ.

ಸಿನಿಮಾದ ಟ್ರೇಲರ್ ಬಿಡುಗಡೆಯಾಗಿದ್ದು, ಅದರಲ್ಲಿ ಇಸ್ಲಾಂನ ನಂಬಿಕೆಗಳು ಮತ್ತು ವಿವಾಹಿತ ಮುಸ್ಲಿಂ ಮಹಿಳೆಯರ ಕುರಿತ ಅವಹೇಳನಕಾರಿ ಸಂಭಾಷಣೆಗಳಿವೆ ಎಂದು ಆರೋಪಿಸಿ, ಈ ಚಿತ್ರ ಬಿಡುಗಡೆಗೆ ತಡೆ ಕೋರಿ ಅಜರ್ ಬಾಷಾ ತಂಬೋಲಿ ಎಂಬುವರು ಸುಪ್ರೀಂ ಕೋರ್ಟ್ ಮೊರೆಹೋಗಿದ್ದರು.

ಅರ್ಜಿಯನ್ನು ಪರಿಗಣಿಸಿದ ನ್ಯಾಯಮೂರ್ತಿಗಳಾದ ವಿಕ್ರಮ್ ನಾಥ್ ಮತ್ತು ಸಂದೀಪ್ ಮೆಹ್ತಾ ಅವರಿದ್ದ ರಜಾ ಕಾಲದ ಪೀಠ, ಆಕ್ಷೇಪಾರ್ಹ ಸಂಭಾಷಣೆಗಳನ್ನು ತೆಗೆದುಹಾಕದೇ ಇರುವುದಕ್ಕೆ ಕೇಂದ್ರೀಯ ಚಲನಚಿತ್ರ ಪ್ರಮಾಣೀಕರಣ ಮಂಡಳಿ (ಸಿಬಿಎಫ್‌ಸಿ) ವಿರುದ್ಧ ಹರಿಹಾಯ್ದಿದೆ.



'ನಾವು ಸಿನಿಮಾ ಟ್ರೇಲರ್ ಅನ್ನು ನೋಡಿದ್ದೇವೆ. ಎಲ್ಲಾ ಆಕ್ಷೇಪಾರ್ಹ ಸಂಭಾಷಣೆಗಳನ್ನು ಟ್ರೇಲರ್‌ನಲ್ಲಿ ಉಳಿಸಿಕೊಳ್ಳಲಾಗಿದೆ. ಶಾಸನಬದ್ಧ ಸಂಸ್ಥೆಯಾದ ಸಿಬಿಎಫ್‌ಸಿ ತನ್ನ ಕರ್ತವ್ಯ ನಿರ್ವಹಿಸುವಲ್ಲಿ ವಿಫಲವಾಗಿದೆ' ಎಂದು ಪೀಠ ಹೇಳಿದೆ.

ಅರ್ಜಿದಾರ ತಂಬೋಲಿ ಅವರನ್ನು ಪ್ರತಿನಿಧಿಸಿದ ವಕೀಲರಾದ ಫೌಜಿಯಾ ಶಕೀಲ್, ಸಿನಿಮಾ ಬಿಡುಗಡೆಗೆ ಇದ್ದ ತಡೆಯಾಜ್ಞೆಯನ್ನು ಹೈಕೋರ್ಟ್ 'ವಿವೇಚನಾರಹಿತ ಆದೇಶ'ದಿಂದ ತೆರವುಗೊಳಿಸಿತು ಎಂದು ವಾದಿಸಿದರು.

ಇವರ ವಾದವನ್ನು ಆಲಿಸಿದ ಪೀಠವು, ಈ ಅರ್ಜಿಯನ್ನು ತ್ವರಿತವಾಗಿ ಇತ್ಯರ್ಥಪಡಿಸುವಂತೆ ಬಾಂಬೆ ಹೈಕೋರ್ಟ್‌ಗೆ ಸೂಚಿಸಿತು. ಬಾಂಬೆ ಹೈಕೋರ್ಟ್‌ನಿಂದ ಅರ್ಜಿ ಇತ್ಯರ್ಥವಾಗುವವರೆಗೆ ಈ ವಿವಾದಿತ ಚಿತ್ರದ ಪ್ರದರ್ಶನಕ್ಕೆ ತಡೆಯನ್ನು ನೀಡಿದೆ.

'ಹೈಕೋರ್ಟ್‌ನಲ್ಲಿ ಅರ್ಜಿ ಇತ್ಯರ್ಥ ಆಗುವವರೆಗೆ, ಪ್ರಶ್ನಾರ್ಹ ಚಲನಚಿತ್ರದ ಪ್ರದರ್ಶನವನ್ನು ಅಮಾನತುಗೊಳಿಸಲಾಗುತ್ತದೆ. ಅರ್ಜಿಯನ್ನು ತ್ವರಿತವಾಗಿ ವಿಲೇವಾರಿ ಮಾಡುವಂತೆಯೂ ನಾವು ಹೈಕೋರ್ಟ್‌ಗೆ ವಿನಂತಿಸುತ್ತೇವೆ' ಎಂದು ಅದು ಹೇಳಿದೆ.

ಆಕ್ಷೇಪಾರ್ಹ ಕೆಲವು ಸಂಭಾಷಣೆಗಳನ್ನು ಅಳಿಸಲು ನಿರ್ಮಾಪಕರು ಒಪ್ಪಿಕೊಂಡ ನಂತರ ಚಲನಚಿತ್ರ ಬಿಡುಗಡೆಗೆ ಹೈಕೋರ್ಟ್ ಅನುಮತಿ ನೀಡಿತ್ತು.

'ಹಮಾರೆ ಬಾರಹ್ ಚಿತ್ರದಲ್ಲಿ ಪವಿತ್ರ ಕುರಾನ್‌ನ ಶ್ಲೋಕಗಳನ್ನು ತಿರುಚುವ ಮೂಲಕ ಮುಸ್ಲಿಂ ಸಮುದಾಯದ ಧಾರ್ಮಿಕ ಭಾವನೆಗಳನ್ನು ಉದ್ದೇಶಪೂರ್ವಕವಾಗಿ ಗಾಸಿಗೊಳಿಸಲಾಗಿದೆ. ವಿವಾಹಿತ ಮುಸ್ಲಿಂ ಮಹಿಳೆಯರನ್ನು ಅವಮಾನಿಸಿ, ಹಿಂಸೆಯನ್ನು ಪ್ರಚೋದಿಸಲಾಗಿದೆ. ಇದು ಇಸ್ಲಾಂನ ನಂಬಿಕೆಯ ವಿನಾಕಾರಣ ನಿಂದನೆ' ಎಂದು ತಂಬೋಲಿ ಅರ್ಜಿಯಲ್ಲಿ ಆರೋಪಿಸಿದ್ದಾರೆ.

ಸನ್ನಿ ಲಿಯೋನ್ ಕಾರ್ಯಕ್ರಮ ರದ್ದು

ತಿರುವನಂತಪುರ (ಪಿಟಿಐ): ಕೇರಳ ವಿಶ್ವವಿದ್ಯಾಲಯವು ತನ್ನ ಎಂಜಿನಿಯರಿಂಗ್ ಕಾಲೇಜ್ ಕ್ಯಾಂಪಸ್‌ನಲ್ಲಿ ನಟಿ ಸನ್ನಿ ಲಿಯೋನ್‌ರ ಕಾರ್ಯಕ್ರಮಕ್ಕೆ ಅನುಮತಿ ನೀಡಲು ನಿರಾಕರಿಸಿದೆ.


ಸನ್ನಿ ಲಿಯೊನ್

ಕಾಲೇಜಿನಲ್ಲಿ ನಡೆಸಲು ಉದ್ದೇಶಿಸಿದ್ದ ಟೆಕ್ ಫೆಸ್ಟ್ ಅಂಗವಾಗಿ ಜುಲೈ 5ರಂದು ಸನ್ನಿ ಲಿಯೊನ್ ಅವರ ಕಾರ್ಯಕ್ರಮ ಏರ್ಪಡಿಸಲು ವಿದ್ಯಾರ್ಥಿಗಳು ಯೋಜನೆ ರೂಪಿಸಿದ್ದರು.

'ವಿ.ವಿಗೆ ಸೇರಿದ ಕ್ಯಾಂಪಸ್‌ಗಳಲ್ಲಿ ಹೊರಗಿನವರು ಬಂದು ಕಾರ್ಯಕ್ರಮ ನೀಡುವುದನ್ನು ನಿಷೇಧಿಸಿ ಉನ್ನತ ಶಿಕ್ಷಣ ಇಲಾಖೆಯು ಈ ಹಿಂದೆಯೇ ನಿರ್ದೇಶನ ನೀಡಿತ್ತು. ಆದ್ದರಿಂದ, ಸನ್ನಿ ಲಿಯೋನ್ ಕಾರ್ಯಕ್ರಮಕ್ಕೆ ಅನುಮತಿ ನಿರಾಕರಿಸಲಾಗಿದೆ' ಎಂದು ಕುಲಪತಿ ಮೋಹನನ್ ಕುನ್ನುಮ್ಮಲ್ ಹೇಳಿದ್ದಾರೆ.

'ಸನ್ನಿ ಲಿಯೋನ್ ಕಾರ್ಯಕ್ರಮಕ್ಕೆ ಸಿದ್ಧತೆ ನಡೆದಿರುವ ವಿಚಾರ, ಪೋಸ್ಟರ್‌ಗಳನ್ನು ನೋಡಿದ ಬಳಿಕವಷ್ಟೇ ನನ್ನ ಗಮನಕ್ಕೆ ಬಂದಿದೆ. ಕ್ಯಾಂಪಸ್‌ನಲ್ಲಿ ಆಯೋಜಿಸುವ ಕಾರ್ಯಕ್ರಮಗಳಿಗೆ ಹೊರಗಿನವರಿಂದ ಹಣ ಸಂಗ್ರಹಿಸಬಾರದು ಎಂಬ ನಿಯಮ ಕೂಡಾ ಜಾರಿಯಲ್ಲಿದೆ. ಈ ಕ್ಯಾಂಪಸ್‌ನಲ್ಲಿ 300 ವಿದ್ಯಾರ್ಥಿಗಳು ಮಾತ್ರ ಇದ್ದು, ಬಾಲಿವುಡ್ ನಟಿಯ ಕಾರ್ಯಕ್ರಮಕ್ಕೆ ದೊಡ್ಡ ಮೊತ್ತ ಸಂಗ್ರಹಿಸಬೇಕಾಗುತ್ತದೆ' ಎಂದಿದ್ದಾರೆ.

ಪೇಮಾ ಖಂಡು ಅಧಿಕಾರ ಸ್ವೀಕಾರ

ಅರುಣಾಚಲ ಪ್ರದೇಶ: 3ನೇ ಬಾರಿ ಸಿ.ಎಂ ಆಗಿ ಪ್ರಮಾಣ

ಇಟಾನಗರ (ಪಿಟಿಐ): ಬಿಜೆಪಿ ನಾಯಕ ಪೇಮಾ ಖಂಡು ಅವರು ಸತತ ಮೂರನೇ ಬಾರಿಗೆ ಅರುಣಾಚಲ ಪ್ರದೇಶದ ಮುಖ್ಯಮಂತ್ರಿಯಾಗಿ ಗುರುವಾರ ಪ್ರಮಾಣ ವಚನ ಸ್ವೀಕರಿಸಿದರು.

ಈಚೆಗೆ ನಡೆದ ವಿಧಾನಸಭಾ ಚುನಾವಣೆಯಲ್ಲಿ ಮುಕ್ತೊ ಕ್ಷೇತ್ರದಿಂದ ಅವಿರೋಧವಾಗಿ ಆಯ್ಕೆಯಾಗಿದ್ದ ಪೇಮಾ ಅವರಿಗೆ ರಾಜ್ಯಪಾಲ ಕೈವಲ್ಯ ತ್ರಿವಿಕ್ರಮ ಪರ್ನಾಯಕ್ ಪ್ರಮಾಣವಚನ ಬೋಧಿಸಿದರು.

ಗೃಹ ಸಚಿವ ಅಮಿತ್ ಶಾ, ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ, ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವ ಶರ್ಮಾ ಮತ್ತು ಸಿಕ್ಕಿಂ ಮುಖ್ಯಮಂತ್ರಿ ಪ್ರೇಮ್‌ಸಿಂಗ್ ತಮಾಂಗ್ ಒಳಗೊಂಡಂತೆ ಹಲವರು ಸಮಾರಂಭಕ್ಕೆ ಸಾಕ್ಷಿಯಾದರು.

ದೊರ್ಜಿ ಖಂಡು ಕನ್ವೆನ್‌ಷನ್ ಸೆಂಟರ್‌ನಲ್ಲಿ ನಡೆದ ಕಾರ್ಯಕ್ರಮದಲ್ಲಿ ಇತರ ಹನ್ನೊಂದು ಶಾಸಕರು ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸಿದರು. ಅವರಲ್ಲಿ ಉಪಮುಖ್ಯಮಂತ್ರಿ ಚೌನಾ ಮೇನ್, ಮಾಜಿ ಸ್ಪೀಕರ್ ಪಿ.ಡಿ.ಸೋನಾ, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿಯುರಾಮ್ ವಾಹ್ಗೆ ಮತ್ತು ಮಾಜಿ ಮುಖ್ಯಮಂತ್ರಿ, ದಿವಂಗತ ಕಲಿಖೊ ಪುಲ್ ಅವರ ಪತ್ನಿ ದಾಸಂಗಲು ಪುಲ್ ಸೇರಿದ್ದಾರೆ.

ದಾಸಂಗಲು ಅವರು ಎಂಟು ಮಂದಿ ಹೊಸಬರನ್ನು ಒಳಗೊಂಡ ಸಂಪುಟದಲ್ಲಿರುವ ಏಕೈಕ ಮಹಿಳೆ ಎನಿಸಿದ್ದಾರೆ.



ಪ್ರಮಾಣವಚನ ಸ್ವೀಕರಿಸಿದ ಬಳಿಕ ಪೇಮಾ ಖಂಡು (ಎಡ) ಮತ್ತು ರಾಜ್ಯಪಾಲ ಕೈವಲ್ಯ ತ್ರಿವಿಕ್ರಮ ಪರ್ನಾಯಕ್ ಪರಸ್ಪರ ಶುಭ ಕೋರಿದರು —ಪಿಟಿಐ ಚಿತ್ರ

ಶೀಘ್ರದಲ್ಲೇ ಖಾತೆ ಹಂಚಿಕೆ ನಡೆಯಲಿದ್ದು, ಆ ಬಳಿಕ ನೂತನ ಸಂಪುಟದ ಮೊದಲ ಸಭೆ ನಡೆಯಲಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

60 ಸದಸ್ಯಬಲದ ವಿಧಾನಸಭೆಯಲ್ಲಿ 46 ಸ್ಥಾನಗಳನ್ನು ಗೆಲ್ಲುವ ಮೂಲಕ ಬಿಜೆಪಿಯು ಈಶಾನ್ಯ ಭಾರತದ ಈ ರಾಜ್ಯದಲ್ಲಿ ಸತತ ಮೂರನೇ ಬಾರಿ ಅಧಿಕಾರಕ್ಕೇರಿದೆ.

'ಬೋರ್ಡ್ ಪರೀಕ್ಷೆ ಕೇಂದ್ರಗಳಲ್ಲಿ ಸ್ಯಾನಿಟರಿ ನ್ಯಾಪ್‌ಕಿನ್ ಲಭ್ಯವಿರಲಿ'

ನವದೆಹಲಿ (ಪಿಟಿಐ): ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಬೋರ್ಡ್ ಪರೀಕ್ಷೆಯ ಸಮಯದಲ್ಲಿ ಎಲ್ಲಾ ಪರೀಕ್ಷಾ ಕೇಂದ್ರಗಳಲ್ಲಿ ವಿದ್ಯಾರ್ಥಿನಿಯರಿಗೆ ಉಚಿತ ಸ್ಯಾನಿಟರಿ ನ್ಯಾಪ್‌ಕಿನ್ ಲಭ್ಯವಾಗುವಂತೆ ಮಾಡಬೇಕು ಎಂದು ಕೇಂದ್ರ ಶಿಕ್ಷಣ ಸಚಿವಾಲಯ ಗುರುವಾರ ಸಲಹೆ ನೀಡಿದೆ.

ಋತುಚಕ್ರದ ನೈರ್ಮಲ್ಯ ನಿರ್ವಹಣೆಯು ಹೆಣ್ಣುಮಕ್ಕಳ ಒಟ್ಟಾರೆ ಯೋಗಕ್ಷೇಮಕ್ಕೆ ಸಂಬಂಧಿಸಿದ ಮಹತ್ವದ ವಿಷಯವಾಗಿದೆ ಮತ್ತು ಅದು ಆಕೆಯ ಶೈಕ್ಷಣಿಕ ಸಾಧನೆಗೆ ಅಡ್ಡಿ ಆಗಬಾರದು ಎಂದು ಹೇಳಿರುವ ಸಚಿವಾಲಯವು ಎಲ್ಲ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ಶಾಲೆಗಳು, ಸಿಬಿಎಸ್‌ಇ (ಸೆಂಟ್ರಲ್ ಬೋರ್ಡ್ ಆಫ್ ಸೆಕೆಂಡರಿ ಎಜುಕೇಶನ್), ಕೆವಿಎಸ್ (ಕೇಂದ್ರೀಯ ವಿದ್ಯಾಲಯ ಸಂಘಟನ್) ಹಾಗೂ ಎನ್‌ವಿಎಸ್‌ಗೆ (ನವೋದಯ ವಿದ್ಯಾಲಯ ಸಮಿತಿ) ಸುತ್ತೋಲೆ ಹೊರಡಿಸಿದೆ.

'10 ಮತ್ತು 12ನೇ ತರಗತಿಯ ಬೋರ್ಡ್ ಪರೀಕ್ಷೆಯ ಸಮಯದಲ್ಲಿ ಪರೀಕ್ಷಾ ಕೇಂದ್ರಗಳಲ್ಲಿ ಸ್ಯಾನಿಟರಿ ನ್ಯಾಪ್‌ಕಿನ್ ಉಚಿತವಾಗಿ ಲಭ್ಯ ಇರುವುದನ್ನು ಖಚಿತಪಡಿಸಬೇಕು. ಋತುಚಕ್ರದ ನೈರ್ಮಲ್ಯ ಕಾಪಾಡಲು ಅಗತ್ಯ ಎನಿಸಿದಾಗ ಹೆಣ್ಣುಮಕ್ಕಳಿಗೆ ಪರೀಕ್ಷೆಯ ಅವಧಿಯಲ್ಲಿ ಶೌಚಾಲಯಕ್ಕೆ ತೆರಳಲು ವಿರಾಮ ನೀಡಬೇಕು' ಎಂದು ಸಚಿವಾಲಯ ಹೇಳಿದೆ.

'ವಿದ್ಯಾರ್ಥಿಗಳು, ಶಿಕ್ಷಕರು ಮತ್ತು ಸಿಬ್ಬಂದಿಗೆ ಮುಟ್ಟಿನ ನೈರ್ಮಲ್ಯದ ಬಗ್ಗೆ ಅರಿವು ಮೂಡಿಸಲು ಶೀಘ್ರದಲ್ಲೇ ಶೈಕ್ಷಣಿಕ ಕಾರ್ಯಕ್ರಮಗಳನ್ನು ಜಾರಿ ಮಾಡಲಾಗುವುದು' ಎಂದು ತಿಳಿಸಿದೆ.

ಮುಟ್ಟಿನ ನೈರ್ಮಲ್ಯದ ಅಗತ್ಯತೆಗಳ ವಿಚಾರದಲ್ಲಿ ಹೆಣ್ಣುಮಕ್ಕಳನ್ನು ಘನತೆಯಿಂದ ನಡೆಸಿಕೊಳ್ಳುವುದರ ಮಹತ್ವವನ್ನು ಸಚಿವಾಲಯ ಒತ್ತಿಹೇಳಿದೆ.

ಪುರಿ ದೇವಾಲಯ: ಎಲ್ಲ ದ್ವಾರಗಳು ಭಕ್ತರಿಗೆ ಮುಕ್ತ

ಭುವನೇಶ್ವರ (ಪಿಟಿಐ): ಒಡಿಶಾ ಮುಖ್ಯಮಂತ್ರಿ ಮೋಹನ್ ಚರಣ್ ಮಾಝಿ ಮತ್ತು ಅವರ ಸಂಪುಟ ಸಚಿವರ ಉಪಸ್ಥಿತಿಯಲ್ಲಿ ಪುರಿ ಜಗನ್ನಾಥ ದೇವಾಲಯದ ಎಲ್ಲ ನಾಲ್ಕು ದ್ವಾರಗಳನ್ನು ಭಕ್ತರಿಗಾಗಿ ಗುರುವಾರ ಬೆಳಿಗ್ಗೆ ತೆರೆಯಲಾಯಿತು.

12ನೇ ಶತಮಾನ ಈ ದೇವಾಲಯದ ಮೂರು ದ್ವಾರಗಳನ್ನು ಕೋವಿಡ್– 19 ಸಾಂಕ್ರಾಮಿಕದ ಕಾರಣ ಮುಚ್ಚಲಾಗಿತ್ತು. ಬುಧವಾರ ಪ್ರಮಾಣ ವಚನ ಸ್ವೀಕರಿಸಿದ ಬಳಿಕ ಮಾಝಿ ಅವರು ಜಗನ್ನಾಥ ದೇವಾಲಯದ ಎಲ್ಲಾ ದ್ವಾರಗಳನ್ನು ತೆರೆಯುವ ಕುರಿತಾಗಿಯೇ ತಮ್ಮ ಮೊದಲ ನಿರ್ಣಯ ತೆಗೆದುಕೊಂಡಿದ್ದರು.

ಸುನೇತ್ರಾ ಪವಾರ್ ನಾಮಪತ್ರ ಸಲ್ಲಿಕೆ

ಮುಂಬೈ (ಪಿಟಿಐ): ಮಹಾರಾಷ್ಟ್ರ ಉಪಮುಖ್ಯಮಂತ್ರಿ ಅಜಿತ್ ಪವಾರ್ ಅವರ ಪತ್ನಿ ಸುನೇತ್ರಾ ಪವಾರ್ ಅವರು ರಾಜ್ಯಸಭಾ ಚುನಾವಣೆಗೆ ಎನ್‌ಸಿಪಿ ಅಭ್ಯರ್ಥಿಯಾಗಿ ಗುರುವಾರ ನಾಮಪತ್ರ ಸಲ್ಲಿಸಿದರು.

ಈಚೆಗೆ ನಡೆದ ಲೋಕಸಭಾ ಚುನಾವಣೆಯಲ್ಲಿ ಬಾರಾಮತಿ ಕ್ಷೇತ್ರದಿಂದ ಸ್ಪರ್ಧಿಸಿದ್ದ ಸುನೇತ್ರಾ ಅವರು ಎನ್‌ಸಿಪಿ ಶರದ್ ಪವಾರ್ ಬಣದ ಸುಪ್ರಿಯಾ ಸುಳೆ ಎದುರು ಪರಾಭವಗೊಂಡಿದ್ದರು.

'ರಾಜ್ಯಸಭಾ ಚುನಾವಣೆಗೆ ಸುನೇತ್ರಾ ಪವಾರ್ ಅವರನ್ನು ಕಣಕ್ಕಿಳಿಸಲು ಎನ್‌ಸಿಪಿ ನಿರ್ಧರಿಸಿದೆ. ರಾಜ್ಯಸಭೆಗೆ ಸ್ಪರ್ಧಿಸಲು ನಾನೂ ಉತ್ಸುಕನಾಗಿದ್ದೆ. ಆದರೆ ಬುಧವಾರ ನಡೆದ ಸಭೆಯಲ್ಲಿ ಪಕ್ಷದ ಮುಖಂಡರು ಸುನೇತ್ರಾ ಹೆಸರನ್ನು ಅಂತಿಮಗೊಳಿಸಿದ್ದಾರೆ' ಎಂದು ಎನ್‌ಸಿಪಿ ನಾಯಕ ಛಗನ್ ಭುಜಬಲ್ ಅವರು ಗುರುವಾರ ಹೇಳಿದರು.

ರಾಜ್ಯಸಭೆಯ ಕೆಲ ಸದಸ್ಯರು ಲೋಕಸಭೆ ಚುನಾವಣೆಯಲ್ಲಿ ಸ್ಪರ್ಧಿಸಿ ಗೆದ್ದ ಕಾರಣ ರಾಜ್ಯಸಭೆಯಲ್ಲಿ 10 ಸ್ಥಾನಗಳು ತೆರವುಗೊಂಡಿವೆ ಎಂದು ರಾಜ್ಯಸಭಾ ಕಾರ್ಯಾಲಯವು ಪ್ರಕಟಣೆಯಲ್ಲಿ ತಿಳಿಸಿತ್ತು.

ಮುಂಬೈನಲ್ಲಿ ಘಟನೆ: ತನಿಖೆಗೆ ಸಹಕರಿಸುವುದಾಗಿ ಕಂಪನಿ ಹೇಳಿಕೆ

ಐಸ್‌ಕ್ರೀಂನಲ್ಲಿ ಮಾನವನ ಬೆರಳು ಪತ್ತೆ!

ಪ್ರಜಾವಾಣಿ ವಾರ್ತೆ/ ಪಿಟಿಐ

ಮುಂಬೈ: ಆನ್‌ಲೈನ್‌ನಲ್ಲಿ ತರಿಸಿದ ಕೋನ್ ಐಸ್‌ಕ್ರೀಂನಲ್ಲಿ ಮಾನವನ ಬೆರಳು ಪತ್ತೆಯಾಗಿದ್ದು, ಘಟನೆ ಸಂಬಂಧ ಮುಂಬೈ ಪೊಲೀಸರು ತನಿಖೆ ಆರಂಭಿಸಿದ್ದಾರೆ.

ಮುಂಬೈನ ಮಲಾಡ್ ನಿವಾಸಿ ಡಾ.ಆರ್ಲೆಮ್ ಬ್ರೆಂಡನ್ ಸೆರಾವೊ ಎಂಬವರು ಆನ್‌ಲೈನ್‌ನಲ್ಲಿ ಐಸ್‌ಕ್ರೀಂ ತರಿಸುವಂತೆ ತಮ್ಮ ಸಹೋದರಿಗೆ ಹೇಳಿದ್ದಾರೆ. ಅವರು ತರಿಸಿದ 'ಯಮ್ಮೊ' ಕಂಪನಿಯ ಬಟರ್‌ಸ್ಕಾಚ್ ಕೋನ್ ಐಸ್‌ಕ್ರೀಂನಲ್ಲಿ ಅರ್ಧ ಇಂಚು ಗಾತ್ರದ ಬೆರಳು ಕಂಡುಬಂದಿದೆ.

'ಬೆರಳು ಕಂಡು ದಂಗಾದ ಗ್ರಾಹಕ, ಐಸ್‌ಕ್ರೀಂ ಕಂಪನಿಗೆ ದೂರು ನೀಡಿದ್ದಾರೆ. ಆದರೆ, ಅವರಿಂದ ಸೂಕ್ತ ಪ್ರತಿಕ್ರಿಯೆ ಲಭಿಸದ ಕಾರಣ ಬೆರಳನ್ನು ಐಸ್ ಬ್ಯಾಗ್‌ನಲ್ಲಿ ರಕ್ಷಿಸಿ ಮಲಾಡ್ ಪೊಲೀಸ್ ಠಾಣೆಗೆ ಬಂದು ವಿಷಯ ತಿಳಿಸಿದ್ದಾರೆ. ಅವರ ದೂರಿನ ಆಧಾರದಲ್ಲಿ ಐಸ್‌ಕ್ರೀಂ ಕಂಪನಿ ವಿರುದ್ಧ ಪ್ರಕರಣ ದಾಖಲಿಸಲಾಗಿದೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದರು.

ಘಟನೆ ಬಗ್ಗೆ ತನಿಖೆ ಕೈಗೆತ್ತಿಕೊಳ್ಳಲಾಗಿದ್ದು, ಐಸ್‌ಕ್ರೀಂ ಹಾಗೂ ಬೆರಳನ್ನು ವಿಧಿವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಲಾಗಿದೆ ಎಂದು ಮಾಹಿತಿ ನೀಡಿದರು.

'ಐಸ್‌ಕ್ರೀಂ ಸವಿಯುವಾಗ ನಾಲಿಗೆಗೆ ಏನೋ ಸಿಕ್ಕ ಹಾಗಾಯಿತು. ಸೂಕ್ಷ್ಮವಾಗಿ ಗಮನಿಸಿದಾಗ ಮಾನವನ ಬೆರಳು ಕಂಡುಬಂದಿದೆ' ಎಂದು ಸೆರಾವೊ ಹೇಳಿದ್ದಾರೆ.

ತನಿಖೆಗೆ ಸಹಕಾರ: 'ಐಸ್‌ಕ್ರೀಂನಲ್ಲಿ ಬಾಹ್ಯ ವಸ್ತು ದೊರೆತ ಬಗ್ಗೆ ಗ್ರಾಹಕರೊಬ್ಬರು ದೂರು ನೀಡಿದ್ದಾರೆ. ಉತ್ಪನ್ನದ ಗುಣಮಟ್ಟ ಮತ್ತು ಸುರಕ್ಷತೆಯು ನಮ್ಮ ಆದ್ಯತೆಯಾಗಿದ್ದು, ಅವರ ದೂರಿಗೆ ಸ್ಪಂದಿಸಲು ಮುಂದಾಗಿದ್ದೆವು. ಅಷ್ಟರಲ್ಲೇ ಅವರು ಪೊಲೀಸರಿಗೆ ದೂರು ನೀಡಿದ್ದಾರೆ. ಈ ಘಟನೆಯನ್ನು ಗಂಭೀರವಾಗಿ ಪರಿಗಣಿಸಿದ್ದು, ಆ ಐಸ್‌ಕ್ರೀಂ ಪೂರೈಕೆಯಾದ ಘಟಕದಲ್ಲಿ ಉತ್ಪಾದನೆಯನ್ನು ನಿಲ್ಲಿಸಿದ್ದೇವೆ. ತನಿಖೆಗೆ ಎಲ್ಲ ರೀತಿಯ ಸಹಕಾರ ನೀಡುತ್ತೇವೆ' ಎಂದು 'ಯಮ್ಮೊ' ಐಸ್‌ಕ್ರೀಂ ಕಂಪನಿಯ ವಕ್ತಾರರೊಬ್ಬರು ಪ್ರತಿಕ್ರಿಯಿಸಿದ್ದಾರೆ.

'ಅಮೆರಿಕವೇ ವಿದ್ಯಾರ್ಥಿಗಳ ಮೊದಲ ಆಯ್ಕೆ'

ಪ್ರಜಾವಾಣಿ ವಾರ್ತೆ

ನವದೆಹಲಿ: ಕಳೆದ ಮೂರು ವರ್ಷದಲ್ಲಿ ಅಮೆರಿಕದಲ್ಲಿ ಉನ್ನತ ಶಿಕ್ಷಣ ಪಡೆಯಲು ಆಯ್ಕೆ ಮಾಡಿಕೊಳ್ಳುವ ಭಾರತೀಯ ವಿದ್ಯಾರ್ಥಿಗಳ ಸಂಖ್ಯೆಯಲ್ಲಿ ದಾಖಲೆ ಪ್ರಮಾಣದಲ್ಲಿ ಏರಿಕೆ ಕಂಡಿದೆ.

ವಿದೇಶದಲ್ಲಿ ಉನ್ನತ ಶಿಕ್ಷಣ ಪಡೆಯಲು ಭಾರತೀಯರಿಗೆ ಅಮೆರಿಕವೇ ಮೊದಲ ಆಯ್ಕೆ ಆಗಿದ್ದು, ಬೇರೆ ದೇಶಗಳಿಗೆ ಹೋಲಿಸಿದರೆ ಶೇ 69ರಷ್ಟು ಮಂದಿ ಈಗಲೂ ಅಮೆರಿಕವನ್ನೇ ಆಯ್ಕೆ ಮಾಡಿಕೊಂಡಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಕಾನ್ಸುಲರ್ ಟೀಮ್ ಇಂಡಿಯಾವು 8ನೇ ವಾರ್ಷಿಕ ವಿದ್ಯಾರ್ಥಿ ವೀಸಾ ದಿನವಾದ ಗುರುವಾರ ಒಂದೇ ದಿನ 3,900 ವೀಸಾ ಅರ್ಜಿದಾರರನ್ನು ಸಂದರ್ಶಿಸಿತು. ಆ ಮೂಲಕ ಅಮೆರಿಕದಲ್ಲಿ ಉನ್ನತ ಶಿಕ್ಷಣ ಬಯಸುವ ಭಾರತೀಯ ವಿದ್ಯಾರ್ಥಿಗಳ ವಿಚಾರದಲ್ಲಿ ಬದ್ಧತೆ ವ್ಯಕ್ತಪಡಿಸಿದ್ದು, ಉಭಯ ದೇಶಗಳ ನಡುವಿನ ಶೈಕ್ಷಣಿಕ ಸಂಬಂಧವನ್ನು ಎತ್ತಿ ತೋರಿಸಿತು.


ಕಾನ್ಸುಲರ್ ಟೀಮ್ ಇಂಡಿಯಾವು 8ನೇ ವಾರ್ಷಿಕ ವೀಸಾ ದಿನವಾದ ಗುರುವಾರ ಹಮ್ಮಿಕೊಂಡಿದ್ದ ವೀಸಾ ಪ್ರಕ್ರಿಯೆಯಲ್ಲಿ ಪಾಲ್ಗೊಂಡಿದ್ದ ವಿದ್ಯಾರ್ಥಿಗಳು

2018, 2019 ಹಾಗೂ 2020ರ ಮೂರು ವರ್ಷದ ಅವಧಿಗೆ ಹೋಲಿಸಿದರೆ, 2023ರಲ್ಲಿ ಭಾರತೀಯ ವಿದ್ಯಾರ್ಥಿಗಳಿಗೆ ಅಮೆರಿಕದಲ್ಲಿ ವ್ಯಾಸಂಗ ಮಾಡಲು ಹೆಚ್ಚಿನ ವೀಸಾ ನೀಡಿತ್ತು. 2021 ಹಾಗೂ 2023ರ ಅವಧಿ ನಡುವೆ ಈ ಪ್ರಮಾಣವು ಶೇಕಡ 400ರಷ್ಟು ಏರಿಕೆ ದಾಖಲಿಸಿದೆ ಎಂದು ಅಧಿಕಾರಿಗಳು ತಿಳಿಸಿದರು.

ಭಾರತೀಯ ವಿದ್ಯಾರ್ಥಿಗಳಿಗೆ ಶುಭಾಶಯ ಕೋರಿ ಮಾತನಾಡಿದ ಭಾರತದ ಅಮೆರಿಕ ರಾಯಭಾರಿ ಎರಿಕ್ ಗಾರ್ಸೆಟ್ಟಿ, 'ಅಮೆರಿಕದ ಕ್ಯಾಂಪಸ್‌ನಲ್ಲಿ ಪ್ರತಿ ಅಂತರರಾಷ್ಟ್ರೀಯ ವಿದ್ಯಾರ್ಥಿಯು ಪ್ರಚಂಡ ಯಶಸ್ಸು ಅನ್ನು ಪ್ರತಿನಿಧಿಸುತ್ತಾನೆ. ತನ್ನ ಶೈಕ್ಷಣಿಕ ಶ್ರೇಷ್ಠತೆ ಸಾಧಿಸಲು ವರ್ಷಗಳ ಕಾಲ ಅಧ್ಯಯನ ಹಾಗೂ ಕಠಿಣ ಪರಿಶ್ರಮದ ಮೂಲಕ ಯಶಸ್ಸು ಸಾಧಿಸಲು ಮುಂದಾಗಿದ್ದಾರೆ. ಈಗಾಗಲೇ ಅಮೆರಿಕದಲ್ಲಿರುವ ವಿದ್ಯಾರ್ಥಿಗಳಂತೆ ಸಂದರ್ಶನ ಎದುರಿಸಿದ 3,900 ವಿದ್ಯಾರ್ಥಿಗಳು ಅತ್ಯುನ್ನತ ಯಶಸ್ಸು ಸಾಧಿಸಲಿದ್ದಾರೆ' ಎಂದು ವಿಶ್ವಾಸ ವ್ಯಕ್ತ ಪಡಿಸಿದರು.

ಅಮೆರಿಕದ ರಾಯಭಾರ ವ್ಯವಹಾರಗಳ ಸಚಿವ ರಸೆಲ್ ಬ್ರೌನ್ ಮಾತನಾಡಿ, 'ಈ ವರ್ಷ ಅತೀ ದೊಡ್ಡ ಸಂಖ್ಯೆಯಲ್ಲಿ ಭಾರತೀಯ ವಿದ್ಯಾರ್ಥಿಗಳು ಅಮೆರಿಕದಲ್ಲಿ ಶಿಕ್ಷಣ ಪಡೆಯಲು ಸಿದ್ಧರಾಗಿದ್ದಾರೆ' ಎಂದು ತಿಳಿಸಿದರು.

ಭಾರತದಲ್ಲಿನ ಅಮೆರಿಕ ರಾಯಭಾರ ಕಚೇರಿ ಭಾರತದ ವಿದ್ಯಾರ್ಥಿ ವೀಸಾ ಅರ್ಜಿದಾರರ ನಿರಂತರ ಹೆಚ್ಚಳವನ್ನು ನಿರೀಕ್ಷಿಸುತ್ತದೆ. ಹೆಚ್ಚಿನ ಬೇಡಿಕೆಯನ್ನು ಪೂರೈಸಲು 2024 ರ ವಿದ್ಯಾರ್ಥಿ ವೀಸಾ ಋತುವಿನ ಅವಧಿಯನ್ನು ವಿಸ್ತರಿಸಿದೆ.

ಅಮೆರಿಕಕ್ಕೆ ಪ್ರಯಾಣಿಸಲು ತಯಾರಿ ನಡೆಸುತ್ತಿರುವ ಭಾರತೀಯ ವಿದ್ಯಾರ್ಥಿಗಳು bit.ly/EdUSAIndiaPDO24, ಶೈಕ್ಷಣಿಕ ಅಮೆರಿಕ ಆಯೋಜಿಸಿದ ಕಾರ್ಯಾಗಾರದಲ್ಲಿ ಭಾಗವಹಿಸುವ ಮೂಲಕ ವಿದ್ಯಾರ್ಥಿ ವೀಸಾ ಪ್ರಕ್ರಿಯೆಯ ಬಗ್ಗೆ ತಿಳಿಯಬಹುದು.

ಆಸ್ಟ್ರೇಲಿಯಾ ಓಪನ್ ಬ್ಯಾಡ್ಮಿಂಟನ್: ಆಕರ್ಷಿ, ಸಮೀರ್ ಮುನ್ನಡೆ

ಕ್ವಾರ್ಟರ್ ಫೈನಲ್‌ಗೆ ಪ್ರಣಯ್

ಸಿಡ್ನಿ (ಪಿಟಿಐ): ಭಾರತದ ಎಚ್‌.ಎಸ್. ಪ್ರಣಯ್ ಮತ್ತು ಸಮೀರ್ ವರ್ಮಾ ಅವರು ಆಸ್ಟ್ರೇಲಿಯಾ ಓಪನ್ ಬ್ಯಾಡ್ಮಿಂಟನ್ ಟೂರ್ನಿಯ ಪುರುಷರ ಸಿಂಗಲ್ಸ್‌ನಲ್ಲಿ ಗುರುವಾರ ಕ್ವಾರ್ಟರ್ ಫೈನಲ್ ಪ್ರವೇಶಿಸಿದ್ದಾರೆ.

ಐದನೇ ಶ್ರೇಯಾಂಕದ ಪ್ರಣಯ್ 16ರ ಸುತ್ತಿನ ಪಂದ್ಯದಲ್ಲಿ ಇಸ್ರೇಲ್‌ನ ಮಿಶಾ ಜಿಲ್ಬರ್ಮನ್ ಅವರನ್ನು 21-17, 21-15 ರಿಂದ ಸೋಲಿಸಲು ಕೇವಲ 46 ನಿಮಿಷ ತೆಗೆದುಕೊಂಡರು. ಅವರು ಮುಂದಿನ ಸುತ್ತಿನಲ್ಲಿ ಎರಡನೇ ಶ್ರೇಯಾಂಕದ ಕೊಡೈ ನರೋಕಾ (ಜಪಾನ್) ಅವರನ್ನು ಎದುರಿಸಲಿದ್ದಾರೆ.

ಒಂದು ಗಂಟೆ ಎರಡು ನಿಮಿಷ ನಡೆದ ಪಂದ್ಯದಲ್ಲಿ ಸಮೀರ್ ವರ್ಮಾ ಅವರು 21–14, 14–21, 21–19ರಿಂದ ಎಂಟನೇ ಶ್ರೇಯಾಂಕದ ಲೋಹ್ ಕೀನ್ ಯೂ (ಸಿಂಗಪುರ) ಅವರಿಗೆ ಆಘಾತ ನೀಡಿದರು. ಆದರೆ, ಕಿರಣ್ ಜಾರ್ಜ್ 20-22, 6-21ರಲ್ಲಿ ಜಪಾನ್‌ನ ಏಳನೇ ಶ್ರೇಯಾಂಕದ ಕೆಂಟಾ ನಿಶಿಮೊಟೊ ಅವರಿಗೆ ಸೋತರು.



ಭಾರತದ ಎಚ್‌.ಎಸ್. ಪ್ರಣಯ್ ಅವರ ಆಟದ ವೈಖರಿ —ಎಎಫ್‌ಪಿ ಚಿತ್ರ

ಮಹಿಳೆಯರ ಸಿಂಗಲ್ಸ್‌ನಲ್ಲಿ ಆಕರ್ಷಿ ಕಶ್ಯಪ್ 21-16, 21-13 ರಿಂದ ಆಸ್ಟ್ರೇಲಿಯಾದ ಕೈಕ್ವಿ ಬರ್ನಿಸ್ ಟಿಯೊಹ್ ಅವರನ್ನು ಸೋಲಿಸಿದರು.

ಆದರೆ, ಎರಡನೇ ಸುತ್ತಿನಲ್ಲಿ ಅನುಪಮಾ ಉಪಾಧ್ಯಾಯ 11-21, 18-21ರಲ್ಲಿ ಆರನೇ ಶ್ರೇಯಾಂಕದ ಪಿ.ಕುಸುಮಾ ವಾರ್ದಾನಿ (ಇಂಡೊನೇಷ್ಯಾ) ವಿರುದ್ಧ ಸೋತರೆ, ಮಾಳವಿಕಾ ಬನ್ಸೋಡ್ 17-21, 21-23 ಅಂತರದಲ್ಲಿ ಇಂಡೋನೇಷ್ಯಾದ ಎಸ್ತರ್ ನುರುಮಿ ಟ್ರಿ ವಾರ್ಡೋಯೊ ವಿರುದ್ಧ ಪರಾಭವಗೊಂಡರು.

ಮಹಿಳೆಯರ ಡಬಲ್ಸ್‌ನಲ್ಲಿ ಪಾಂಡಾ ಸಹೋದರಿಯರಾದ ರುತಪರ್ಣ ಮತ್ತು ಶ್ವೇತಪರ್ಣ 5–21, 9–21 ಅಂತರದಲ್ಲಿ ಮಲೇಷ್ಯಾದ ಪೀ ಜಿಂಗ್ ಲೈ ಮತ್ತು ಚಿವ್ ಸಿಯೆನ್ ಲಿಮ್ ಎದುರು ಸೋಲನುಭವಿಸಿದರು. ಮಿಶ್ರ ಡಬಲ್ಸ್ ಜೋಡಿ ಬಿ.ಸುಮೀತ್ ರೆಡ್ಡಿ ಮತ್ತು ಎನ್.ಸಿಕ್ಕಿ ರೆಡ್ಡಿ ಅವರು 21-11, 21-11ರಿಂದ ಆಸ್ಟ್ರೇಲಿಯಾದ ಕೈ ಚೆನ್ ಟಿಯೋಹ್ ಮತ್ತು ಕೈ ಕ್ವಿ ಬರ್ನಿಸ್ ಟಿಯೊಹ್ ಅವರನ್ನು ಸೋಲಿಸಿ ಅಂತಿಮ ಎಂಟರ ಘಟ್ಟಕ್ಕೆ ಪ್ರವೇಶಿಸಿದರು. ಕ್ವಾರ್ಟರ್ ಫೈನಲ್‌ನಲ್ಲಿ ಇವರಿಬ್ಬರು ಅಗ್ರ ಶ್ರೇಯಾಂಕದ ಚೀನಾದ ಝೆುನ್ ಬಾಂಗ್ ಜಿಯಾಂಗ್ ಮತ್ತು ಯಾ ಕ್ಸಿನ್ ವೀ ವಿರುದ್ಧ ಸೆಣಸಲಿದ್ದಾರೆ.

ಒಲಿಂಪಿಕ್ಸ್: ಸಿದ್ಧತೆ ಮಾಹಿತಿ ಪಡೆದ ಮಾಂಡವೀಯ

ನವದೆಹಲಿ (ಪಿಟಿಐ): ನೂತನ ಕ್ರೀಡಾ ಸಚಿವ ಮನ್ಸುಖ್ ಮಾಂಡವೀಯ ಗುರುವಾರ ಭಾರತ ಒಲಿಂಪಿಕ್ ಸಂಸ್ಥೆ ಅಧ್ಯಕ್ಷೆ ಪಿ.ಟಿ.ಉಷಾ ಅವರನ್ನು ಇಲ್ಲಿ ಭೇಟಿಯಾಗಿ, ಪ್ಯಾರಿಸ್ ಒಲಿಂಪಿಕ್ಸ್‌ಗೆ ಭಾರತದ ಕ್ರೀಡಾಪಟುಗಳು ನಡೆಸಿರುವ ಸಿದ್ಧತೆಗಳ ಮಾಹಿತಿ ಪಡೆದುಕೊಂಡರು.

ಮಾಂಡವೀಯ ಮಂಗಳವಾರ ಸಚಿವರಾಗಿ ಅಧಿಕಾರ ಸ್ವೀಕರಿಸಿದ್ದರು. ಸುಮಾರು ಒಂದು ಗಂಟೆ ನಡೆದ ಸಭೆಯಲ್ಲಿ ಕ್ರೀಡಾ ಖಾತೆ ರಾಜ್ಯ ಸಚಿವೆ ರಕ್ಷಾ ಖಡ್ಸೆ, ಕ್ರೀಡಾ ಇಲಾಖೆ ಕಾರ್ಯದರ್ಶಿ ಸುಜಾತಾ ಚತುರ್ವೇದಿ, ಭಾರತ ಕ್ರೀಡಾ ಪ್ರಾಧಿಕಾರದ ಮಹಾ ನಿರ್ದೇಶಕ ಸಂದೀಪ್ ಪ್ರಧಾನ್ ಮತ್ತಿತರರು ಪಾಲ್ಗೊಂಡಿದ್ದರು.

‘ಐಒಎ ಅಧಿಕಾರಿಗಳ ಜೊತೆ ಮೊದಲ ಬಾರಿ ಮಾತುಕತೆ ನಡೆಸಿದೆ. ಪ್ಯಾರಿಸ್ ಕ್ರೀಡೆಗಳಿಗೆ ಭಾರತದ ಸಿದ್ಧತೆಗಳ ಬಗ್ಗೆ ನನಗೆ ಮಾಹಿತಿ ನೀಡಿದ್ದಾರೆ’ ಎಂದು ಮಾಂಡವೀಯ ಮಾಧ್ಯಮದವರಿಗೆ ತಿಳಿಸಿದರು.

ಯುರೋ ಕಪ್ ಫುಟ್‌ಬಾಲ್ ಇಂದಿನಿಂದ

ಜರ್ಮನಿಗೆ ಸ್ಕಾಟ್ಲೆಂಡ್ ಸವಾಲು

ಮ್ಯೂನಿಚ್ (ಎಎಫ್‌ಪಿ): ಯುರೋಪ್ ಖಂಡದ ದಿಗ್ಗಜರು ಮತ್ತು ಉದಯೋನ್ಮುಖ ಫುಟ್‌ಬಾಲ್ ಆಟಗಾರರ ಕಾಲ್ಚಳಕದ ಹಬ್ಬ ಯುರೋ ಕಪ್ –2024 ಆರಂಭಕ್ಕೆ ವೇದಿಕೆ ಸಿದ್ಧವಾಗಿದೆ.

ಭಾರತೀಯ ಕಾಲಮಾನದ ಪ್ರಕಾರ; ಶುಕ್ರವಾರ ತಡರಾತ್ರಿ ನಡೆಯಲಿರುವ ಟೂರ್ನಿಯ ಎ ಗುಂಪಿನ ಮೊದಲ ಪಂದ್ಯದಲ್ಲಿ ಆತಿಥೇಯ ಜರ್ಮನಿ ಮತ್ತು ಸ್ಕಾಟ್ಲೆಂಡ್ ಮುಖಾಮುಖಿಯಾಗಲಿವೆ.

ಯುರೋ ಕಪ್ 2024 ಜರ್ಮನಿ

2014ರ ವಿಶ್ವಕಪ್ ಜಯಿಸಿದ್ದ ಜರ್ಮನಿ ತಂಡಕ್ಕೆ ನಾಯಕರಾಗಿದ್ದ ಫಿಲಿಪ್ ಲಾಮ್ ಈಗ ಯುರೋ 2024 ಟೂರ್ನಿಯ ನಿರ್ದೇಶಕರಾಗಿದ್ದಾರೆ.

ಎ ಗುಂಪಿನ ಇನ್ನೊಂದು ಪಂದ್ಯದಲ್ಲಿ ಹಂಗರಿ ಹಾಗೂ ಸ್ವಿಟ್ಜರ್‌ಲೆಂಡ್ ಹಣಾಹಣಿ ನಡೆಸಲಿವೆ.



ಸ್ಕಾಟ್ಲೆಂಡ್ ತಂಡದ ಆಟಗಾರರ ಅಭ್ಯಾಸ —ಎಎಫ್‌ಪಿ ಚಿತ್ರ

ಇದೇ ದಿನ ನಡೆಯುವ ಬಿ ಗುಂಪಿನ ಪಂದ್ಯದಲ್ಲಿ ಸ್ಪೇನ್ ಮತ್ತು ಕ್ರೊವೇಷ್ಯಾ ಮುಖಾಮುಖಿಯಾಗಲಿವೆ.

ಐದು ಗುಂಪುಗಳು: ಈ ಟೂರ್ನಿಯಲ್ಲಿ ಒಟ್ಟು 20 ತಂಡಗಳು ಪೈಪೋಟಿ ನಡೆಸಲಿವೆ. ಐದು ಗುಂಪುಗಳಲ್ಲಿ ತಂಡಗಳನ್ನು ವಿಂಗಡಿಸಲಾಗಿದೆ.

ಪೋರ್ಚುಗಲ್‌ನ ಕ್ರಿಸ್ಟಿಯಾನೊ ರೊನಾಲ್ಡೊ, ಫ್ರಾನ್ಸ್‌ನ ಕೀಲಿಯನ್ ಎಂಬಾಪೆ ಅವರು ಪ್ರಮುಖ ಆಕರ್ಷಣೆಯಾಗಿದ್ದಾರೆ.

ಪಂದ್ಯ ಆರಂಭ: ರಾತ್ರಿ 12.30, ನೇರಪ್ರಸಾರ: ಸೋನಿ ಸ್ಪೋರ್ಟ್ಸ್ ನೆಟ್‌ವರ್ಕ್

ಬ್ಯಾಸ್ಕೆಟ್‌ಬಾಲ್: ಮಂಡ್ಯ ತಂಡಕ್ಕೆ ಜಯ

ಬೆಂಗಳೂರು: ಅಮರ್ತ್ಯ (22) ಮತ್ತು ಶಶಾಂಕ್ ರಾಜ್ (15) ಅವರ ಆಟದ ಬಲದಿಂದ ಮಂಡ್ಯ ಜಿಲ್ಲಾ ತಂಡವು ಎಸ್.ರಂಗರಾಜನ್ ಸ್ಮಾರಕ ಟ್ರೋಫಿ ಪುರುಷರ ರಾಜ್ಯ ‘ಸಿ’ ವಿಭಾಗದ ಬ್ಯಾಸ್ಕೆಟ್‌ಬಾಲ್ ಲೀಗ್ ಚಾಂಪಿಯನ್‌ಷಿಪ್‌ನ ಸೆಮಿಫೈನಲ್‌ನಲ್ಲಿ 67–49ರಿಂದ ಮೈಸೂರು ಜಿಲ್ಲಾ ‘ಎ’ ತಂಡವನ್ನು ಮಣಿಸಿ ಫೈನಲ್ ಪ್ರವೇಶಿಸಿತು.

ಕ್ವಾರ್ಟರ್ ಫೈನಲ್ ಪಂದ್ಯಗಳಲ್ಲಿ ಮೈಸೂರು ಜಿಲ್ಲಾ ‘ಎ’ ತಂಡವು 87–79ರಿಂದ ಚಿಕ್ಕಮಗಳೂರು ತಂಡವನ್ನು; ಬೆಂಗಳೂರು ಸ್ಪೋರ್ಟಿಂಗ್ ತಂಡವು 69–58ರಿಂದ ಚಿಕ್ಕಮಗಳೂರು ಜಿಲ್ಲಾ ತಂಡವನ್ನು ಸೋಲಿಸಿ ಸೆಮಿಫೈನಲ್ ಪ್ರವೇಶಿಸಿತು.



ಮಂಡಳಿ ಅಧ್ಯಕ್ಷರ ಇಲೆವನ್ ತಂಡದ ಆಟಗಾರ್ತಿಯರು ತಾಲೀಮು ನಡೆಸಿದರು —ಪ್ರಜಾವಾಣಿ ಚಿತ್ರ/ಎಸ್‌. ಕೆ. ದಿನೇಶ್

ಮಹಿಳೆಯರ ಕ್ರಿಕೆಟ್: ಮಳೆ ಅಡ್ಡಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗುರುವಾರ ಮಧ್ಯಾಹ್ನ ಮಳೆ ಸುರಿದಿದ್ದರಿಂದ ಮಂಡಳಿ ಅಧ್ಯಕ್ಷರ ಎಲೆವನ್ ಮತ್ತು ದಕ್ಷಿಣ ಆಫ್ರಿಕಾ ಮಹಿಳಾ ತಂಡಗಳ ನಡುವಣ ಅಭ್ಯಾಸ ಪಂದ್ಯವು ಅಪೂರ್ಣಗೊಂಡಿತು.

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಟಾಸ್ ಗೆದ್ದ ಅಧ್ಯಕ್ಷರ ಎಲೆವನ್ ನಾಯಕಿ ಜೆಮಿಮಾ ರಾಡ್ರಿಗಸ್ ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿತು. ತಂಡದ ಮೊತ್ತವು 1 ವಿಕೆಟ್‌ಗೆ 71 ರನ್‌ಗಳಾಗಿದ್ದಾಗ ಮಳೆ ಆರಂಭವಾಯಿತು. ಆರಂಭಿಕ ಬ್ಯಾಟರ್ ಪ್ರಿಯಾ ಪೂನಿಯಾ (25; 31ಎ) ಔಟಾದರು. ಪ್ರಿಯಾ ಪೂನಿಯಾ (ಔಟಾಗದೆ 24) ಹಾಗೂ ಶುಭಾ ಸತೀಶ್ (ಔಟಾಗದೆ 18, 20ಎ) ಅವರು ಕ್ರೀಸ್‌ನಲ್ಲಿದ್ದರು. ಸಂಜೆಯವರೆಗೂ ಸಣ್ಣಗೆ ಮಳೆ ಬಂದ ಕಾರಣ ಪಂದ್ಯವನ್ನು ಸ್ಥಗಿತಗೊಳಿಸಲಾಯಿತು.

ಈಕ್ವೆಸ್ಟ್ರಿಯನ್: ಶ್ರುತಿ ಚಾರಿತ್ರಿಕ ಸಾಧನೆ

ನವದೆಹಲಿ (ಪಿಟಿಐ): ಅನುಭವಿ ಈಕ್ವೆಸ್ಟ್ರಿಯನ್ ಕ್ರೀಡಾಪಟು ಶ್ರುತಿ ವೋರಾ ಅವರು ತ್ರೀಸ್ಟಾರ್ ಗ್ರ್ಯಾನ್ ಪ್ರಿ ರೇಸ್ ಗೆದ್ದರು. ಈ ಸಾಧನೆ ಮಾಡಿದ ಪ್ರಥಮ ಭಾರತೀಯ ಅಶ್ವಾರೋಹಿ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆಂದು ಭಾರತ ಈಕ್ವೆಸ್ಟ್ರಿಯನ್ ಫೆಡರೇಷನ್ (ಇಎಫ್‌ಐ) ತಿಳಿಸಿದೆ.

ಸ್ಲೋವಿನಿಯಾದ ಲಿಪಿಕಾದಲ್ಲಿ ಜೂನ್ 7 ರಿಂದ 9ರವರೆಗೆ ನಡೆದ ಸಿಡಿಐ –3 ಸ್ಪರ್ಧಾ ವಿಭಾಗದಲ್ಲಿ ಶ್ರುತಿ 67.761 ಪಾಯಿಂಟ್ಸ್ ಗಳಿಸಿದರು.

ಮಾಲ್ಡೋವಾದ ತತಿಯಾನಾ ಆ್ಯಂಟೋನೆಂಕೊ (ಆಚೆನ್) 66.522 ಪಾಯಿಂಟ್ಸ್, ಆಸ್ಟ್ರಿಯಾದ ಜೂಲಿಯನ್ ಜೆರಿಚ್ (ಕ್ವಾರ್ಟರ್ ಗರ್ಲ್) 66.087 ಅಂಕ ಗಳಿಸಿದರು.

ಗ್ರ್ಯಾನ್‌ಪ್ರಿ ಸ್ಪೆಷಲ್ ವಿಭಾಗದಲ್ಲಿಯೂ ಶ್ರುತಿ ಗಮನ ಸೆಳೆಯುವ ಸಾಮರ್ಥ್ಯ ಪ್ರದರ್ಶನ ನೀಡಿದರು. 66.085 ಅಂಕಗಳೊಂದಿಗೆ ಎರಡನೇ ಸ್ಥಾನ ಪಡೆದರು.

‘ಈ ಫಲಿತಾಂಶದಿಂದ ಅಪಾರ ಸಂತಸವಾಗಿದೆ. ಈ ಸಾಧನೆಗಾಗಿ ಹಲವು ದಿನಗಳಿಂದ ಬಹಳ ಕಠಿಣ ಪರಿಶ್ರಮಪಟ್ಟಿದ್ದೇನೆ. ಸಾಧನೆ ತೃಪ್ತಿ ತಂದಿದೆ. ಒಲಿಂಪಿಕ್ ವರ್ಷದಲ್ಲಿ ಈ ಸಾಧನೆ ಮಾಡಿರುವುದು ಹೊಸ ಭರವಸೆ ಮೂಡಿಸಿದೆ’ ಎಂದು ಶ್ರುತಿ ಇಎಫ್‌ಐ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಭಾರತದ ಶ್ರುತಿ ವೋರಾ —ಪಿಟಿಐ ಚಿತ್ರ

ಶ್ರುತಿ ಅವರು ಮೂಲತಃ ಕೋಲ್ಕತ್ತದವರು. ಡ್ರೆಸೆಜ್ ವಿಶ್ವ ಚಾಂಪಿಯನ್‌ಷಿಪ್ (2022)ಮತ್ತು ಏಷ್ಯನ್ ಗೇಮ್ಸ್ (2010, 2014) ಕೂಟಗಳಲ್ಲಿ ಭಾರತವನ್ನು ಪ್ರತಿನಿಧಿಸಿದ್ದರು.

ದಿವ್ಯಾಗೆ ವಿಶ್ವ ಜೂನಿಯರ್ ಚೆಸ್ ಪ್ರಶಸ್ತಿ

ಗಾಂಧಿನಗರ: ಅಗ್ರ ಶ್ರೇಯಾಂಕದ ಆಟಗಾರ್ತಿ ಐಎಂ ದಿವ್ಯಾ ದೇಶಮುಖ್, ಗುರುವಾರ ಇಲ್ಲಿ ಮುಕ್ತಾಯಗೊಂಡ ಫಿಡೆ ವಿಶ್ವ ಜೂನಿಯರ್ ಮಹಿಳಾ ಚೆಸ್ ಚಾಂಪಿಯನ್‌ಷಿಪ್‌ನಲ್ಲಿ ಪ್ರಶಸ್ತಿ ಗೆದ್ದುಕೊಂಡರು. ಅಂತಿಮ (11ನೇ) ಸುತ್ತಿನಲ್ಲಿ ಮಹಾರಾಷ್ಟ್ರದ ಆಟಗಾರ್ತಿ, ಬಲ್ಗೇರಿಯಾದ ಕ್ರಾತ್ಸೇವಾ ಬೆಲೊಸ್ಲಾವಾ ಅವರನ್ನು ಸೋಲಿಸಿ ಒಟ್ಟು 10 ಪಾಯಿಂಟ್ಸ್ ಸಂಗ್ರಹಿಸಿದರು.

ಇಲ್ಲಿನ ರ‍್ಯಾಡಿಸನ್ ಗಿಫ್ಟ್‌ಸಿಟಿಯಲ್ಲಿ ನಡೆದ ಟೂರ್ನಿಯಲ್ಲಿ ಭಾರತದ ಇನ್ನಿಬ್ಬರು ಆಟಗಾರ್ತಿಯರಾದ ಶುಭಿ ಗುಪ್ತಾ (8) ಮತ್ತು ರಕ್ಷಿತಾ ರವಿ (7.5) ಕ್ರಮವಾಗಿ ನಾಲ್ಕು ಮತ್ತು ಐದನೇ ಸ್ಥಾನ ಪಡೆದರು. ಅರ್ಮೇನಿಯಾದ ಎಂ.ಮರಿಯಂ (9.5) ಎರಡನೇ ಮತ್ತು ಅಜರ್‌ಬೈಜಾನ್ ಅಲ್ಲಾವೆರ್ದಿಯೇವಾ ಅಯಾನ್ (8.5) ಮೂರನೇ ಸ್ಥಾನ ಗಳಿಸಿದರು. ಎರಡನೇ ಬೋರ್ಡ್‌ನಲ್ಲಿ ಬಿಳಿ ಕಾಯಿಗಳಲ್ಲಿ ಆಡಿದ ಮರಿಯಂ, ರಕ್ಷಿತಾ ರವಿ ಅವರನ್ನು ಮಣಿಸಿದರು. ನಾಲ್ಕನೇ ಬೋರ್ಡ್‌ನಲ್ಲಿ ಸಾಚಿ ಜೈನ್ (7), ಶುಭಿ ಗುಪ್ತಾ ಅವರಿಗೆ ಮಣಿದರು.



ದಿವ್ಯಾ ದೇಶಮುಖ್ ಪಿಟಿಐ ಚಿತ್ರ

ಪುರುಷರ ವಿಭಾಗದಲ್ಲಿ ಕಜಕಸ್ತಾನದ ನೊಗರ್‌ಬೆಕ್ ಕಝಿಬೆಕ್ (8.5) ಮೊದಲ ಸ್ಥಾನ ಪಡೆದರು. ಭಾರತದ ಪ್ರಣವ್ ಆನಂದ್ (7.5) ಹತ್ತನೇ ಸ್ಥಾನ ಪಡೆದರು.

ಮಹಿಳಾ ವುಶು: ತಮಿಳುನಾಡಿಗೆ ಸಮಗ್ರ ಪ್ರಶಸ್ತಿ

ಬಾಗಲಕೋಟೆ: ರಾಷ್ಟ್ರೀಯ, ರಾಜ್ಯ ವುಶು ಸಂಸ್ಥೆ ವತಿಯಿಂದ ಇಲ್ಲಿನ ಬಿವಿವಿ ಸಂಘದಲ್ಲಿ ಹಮ್ಮಿಕೊಂಡಿದ್ದ ದಕ್ಷಿಣ ಭಾರತದ ಖೇಲೊ ಇಂಡಿಯಾ ಸಬ್ ಜೂನಿಯರ್, ಜೂನಿಯರ್ ಹಾಗೂ ಸೀನಿಯರ್ ಮಹಿಳಾ ವುಶು ಚಾಂಪಿಯನ್‌ಷಿಪ್‌ನಲ್ಲಿ ಗುರುವಾರ ತಮಿಳುನಾಡು ತಂಡ ಸಮಗ್ರ ಪ್ರಶಸ್ತಿ ಗೆದ್ದುಕೊಂಡಿತು.

ತಮಿಳುನಾಡು ತಂಡವು 16 ಚಿನ್ನ, 10 ಬೆಳ್ಳಿ, 13 ಕಂಚುಗಳೊಂದಿಗೆ 123 ಅಂಕಗಳನ್ನು ಗಳಿಸಿ ಚಾಂಪಿಯನ್ ತಂಡವಾಗಿ ಹೊರಹೊಮ್ಮಿತು. ಕೇರಳ ತಂಡವು 11 ಚಿನ್ನ, 16 ಬೆಳ್ಳಿ, 17 ಕಂಚು ಪದಕಗಳನ್ನು ಗೆದ್ದು 120 ಅಂಕಗಳನ್ನು ಗಳಿಸಿ ಎರಡೇ ಸ್ಥಾನ ಗಳಿಸಿತು.

ಓಡಿಶಾ 8 ಚಿನ್ನ, 3 ಬೆಳ್ಳಿ, 8 ಕಂಚಿನೊಂದಿಗೆ ಮೂರು, ಕರ್ನಾಟಕ ತಂಡವು 6 ಚಿನ್ನ, 8 ಬೆಳ್ಳಿ, 34 ಕಂಚುಗಳೊಂದಿಗೆ ನಾಲ್ಕನೇ ಸ್ಥಾನ ಪಡೆಯಿತು. ತೆಲಂಗಾಣ ತಂಡವು 3 ಚಿನ್ನ, 3 ಬೆಳ್ಳಿ, 15 ಕಂಚು, ಆಂಧ್ರಪ್ರದೇಶ ತಂಡವು 1 ಚಿನ್ನ,4 ಬೆಳ್ಳಿ, 3 ಕಂಚು ಗೆದ್ದುಕೊಂಡಿತು.

ಸಾಂಡಾ ವಿಭಾಗ: ಕೇರಳ 6 ಚಿನ್ನ, 9 ಬೆಳ್ಳಿ, 11 ಕಂಚು ಪಡೆದು ಪ್ರಥಮ ಸ್ಥಾನ ಪಡೆದರೆ, ಕರ್ನಾಟಕ 5 ಚಿನ್ನ, 1 ಬೆಳ್ಳಿ, 15 ಕಂಚು ಗೆದ್ದುಕೊಂಡು ಎರಡು, ಒಡಿಶಾ 6 ಚಿನ್ನ, 4 ಕಂಚು ಗೆದ್ದುಕೊಂಡು ಮೂರನೇ ಸ್ಥಾನ ಪಡೆಯಿತು. ತಾವೂಲ್ ವಿಭಾಗ: ತಮಿಳನಾಡು 14 ಚಿನ್ನ, 4ಬೆಳ್ಳಿ, 9ಕಂಚು ಗೆದ್ದು ಪ್ರಥಮ, ಕೇರಳ 5 ಚಿನ್ನ, 7 ಬೆಳ್ಳಿ, 6 ಕಂಚು ಗೆದ್ದು ದ್ವಿತೀಯ, ಕರ್ನಾಟಕ 7 ಬೆಳ್ಳಿ, 18 ಕಂಚು ಗೆದ್ದು ತೃತೀಯ ಸ್ಥಾನ ಗಳಿಸಿತು